# ನಮ್ಮ ಲೋಕಾರಣ್ಯದ ಅಲೆದಾಟಗಳು

ಆ್ಯಂಟನ್ ಫ್ರೇ

# ಮುನ್ನುಡಿ

ಇಸ್ರಾಯೇಲ್ಯರ ದೇವದರ್ಶನದ ಗುಡಾರದ ವಿಷಯದಲ್ಲಿ ಅವರ ಅಧ್ಯಯನದ ಹೆಚ್ಚಿನ ಭಾಗವನ್ನು ಕೇಂದ್ರೀಕರಿಸಿದ, ನ್ಯೂಯಾರ್ಕ್‌ನ ಸ್ಟ್ಯಾಟನ್ ದ್ವೀಪದ ಸಹೋದರರಾದ ಆ್ಯಂಟನ್ ಫ್ರೇರವರು, ದೇವದರ್ಶನ ಗುಡಾರವನ್ನು ಬಳಸುತ್ತಿದ್ದ ಸಮಯದಲ್ಲಿ ಇಸ್ರಾಯೇಲ್ಯರ ಸ್ಥಿತಿಗತಿಗಳನ್ನು ಕುರಿತು ಆಳವಾಗಿ ಅಧ್ಯಯನಕ್ಕಿಳಿದರು. ಇದು ಇಸ್ರಾಯೇಲ್ಯರ "ಲೋಕಾರಣ್ಯದ ಅಲೆದಾಟಗಳು" ಎಂಬ ಸುದೀರ್ಘವಾದ ವಾಕ್ಯ ಸಂದೇಶಗಳಿಗೆ ಕಾರಣವಾಯಿತು.

ಈ ಸಂಪುಟದ ಟಿಪ್ಪಣಿಗಳು ಆ ವಾಕ್ಯ ಸಂದೇಶಗಳ ಪ್ರತಿ ಲೇಖನವಲ್ಲ ಬದಲಿಗೆ ಅದು ಅದೇ ವಿಷಯವನ್ನು ಒಂದು ಸಂಕ್ಷಿಪ್ತ ರೂಪದಲ್ಲಿ ಒಳಗೊಂಡಿದೆ.

ಇಸ್ರಾಯೇಲ್ಯರ ಇತಿಹಾಸದ ಈ ಗಮನಾರ್ಹ ಅವಧಿಗಳಿಂದ ಪಡೆದ ಪಾಠಗಳು "ಒಂದೇ ಮನೆಯಂತಿರುವ ಕ್ರಿಸ್ತ ನಂಬಿಕೆಯುಳ್ಳವರಿಗೆ" ಆತ್ಮೀಕ ವಿಷಯಗಳಲ್ಲಿ ನೆರವು ನೀಡುವುದೆಂಬ ಬಯಕೆಯಿಂದ ಪ್ರಕಾಶಕರು ಈ ಪುಸ್ತಕವನ್ನು ಪ್ರಕಟಿಸಿದ್ದಾರೆ.

1ಕೊರಿಂಥ. 10:11 – "ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನರೂಪವಾಗಿವೆ; ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದವೆ."

— ಪ್ರಕಾಶಕರು

# ಕೃತಜ್ಞತೆಗಳು

"ನಮ್ಮ ಲೋಕಾರಣ್ಯದ ಅಲೆದಾಟಗಳು" ಎಂಬ ಪುಸ್ತಕವನ್ನು ಕನ್ನಡಕ್ಕೆ ಭಾಷಾಂತರಿಸಲು ಪ್ರೇರಣೆಯನ್ನು ನೀಡಿದ ನಮ್ಮ ಜ್ಞಾನ ನಿಧಿಯಾಗಿರುವ ತಂದೆಯಾದ ದೇವರಿಗೂ ಮತ್ತು ನಮ್ಮ ವಿಮೋಚಕನೂ, ರಕ್ಷಕನೂ, ಮೇಲಣಿಂದ ಬಂದ ಜ್ಞಾನವೂ ಆಗಿರುವ ನಮ್ಮ ಕ್ರಿಸ್ತ ಯೇಸುವಿಗೂ ಕೃತಜ್ಞತಾ ಸ್ತೋತ್ರಗಳು.

ಇದರ ಭಾಷಾಂತರಕ್ಕೆ ಪರಿಷ್ಕರಣೆಗೆ ಮತ್ತು ಮುದ್ರಣಕ್ಕೆ ಸಹಾಯ ಸಹಕಾರ ನೀಡಿದ ಎಲ್ಲಾ ಸಹೋದರ, ಸಹೋದರಿಯರಿಗೂ ಹಾಗೂ ಪ್ರಾರ್ಥನೆಯ ಮೂಲಕ ಬೆಂಬಲ ನೀಡಿದ ಎಲ್ಲರಿಗೂ ನಮ್ಮ ಹೃತ್ಪೂರ್ವಕವಾದ ಧನ್ಯವಾದಗಳು.

ಈ ಪುಸ್ತಕವನ್ನು ಓದಿ ಅದರಲ್ಲಿ ನಿಮಗೆ ಯಾವುದೇ ಪ್ರತಿಲೇಖನ ದೋಷಗಳು ಕಂಡುಬಂದಲ್ಲಿ ಅದನ್ನು ತಿಳಿಯಪಡಿಸಬೇಕೆಂದು ಕೋರುತ್ತೇವೆ.

ಈ ಪುಸ್ತಕವನ್ನು ಓದುವವರೆಲ್ಲರಿಗೂ ಮದಲಿಂಗನಾದ ಯೇಸುಕ್ರಿಸ್ತನನ್ನು ಎದುರುಗೊಳ್ಳಲು ತಮ್ಮನ್ನು ಮದಲಗಿತ್ತಿಯಾಗಿ ಸಿದ್ಧಪಡಿಸಿಕೊಳ್ಳುವಂತೆ ಸಹಾಯ ಮಾಡಲಿ ಎಂಬುದಾಗಿ ಹಾರೈಸುತ್ತೇವೆ.

**Our Wilderness Wanderings**
by Br. Anton Frey

Kannada Version

First Edition - 2017
500 Copies

Not for sale
Private circulation only

**Bible Students**
Bangalore, Karnataka. INDIA.

# ಪರಿವಿಡಿ

ಪುಟದ ಸಂಖ್ಯೆ


ಭಾಗ–1 : ಛಾಯೆ ನಿಜಸ್ವರೂಪ ........................................ 5

ಭಾಗ–2 : ಪಸ್ಕ ಯಜ್ಞಾಚರಣೆ ........................................ 9

ಭಾಗ–3 : ಐಗುಪ್ತದಿಂದ ಬಿಡುಗಡೆ ........................................15

ಭಾಗ–4 : ಕೆಂಪು ಸಮುದ್ರ ದಾಟುವಿಕೆ ........................................23

ಭಾಗ–5 : ಇಸ್ರಾಯೇಲ್ಯರ ಹಸಿವು ಬಾಯಾರಿಕೆಗಳು ........................32

ಭಾಗ–6 : ಸಬ್ಬತ್ ವಿಶ್ರಾಂತಿ ........................................42

ಭಾಗ–7 : ಸೀನಾಯಿ ಅರಣ್ಯಕ್ಕೆ ಇಸ್ರಾಯೇಲ್ಯರ ಪ್ರವೇಶ –
ಒಡಂಬಡಿಕೆಯ ಸ್ಥಾಪನೆ ........................................55

ಭಾಗ–8 : ಇಸ್ರಾಯೇಲ್ಯರೊಂದಿಗೆ ದೇವರ ವ್ಯವಹಾರಗಳು ..............67

ಭಾಗ–9 : ಮೋಶೆಯ ಮಧ್ಯಸ್ಥಿಕೆಯ ಫಲವಾಗಿ ಇಸ್ರಾಯೇಲ್ಯರು
ನಾಶನದಿಂದ ಪಾರಾದುದು ........................................80

ಭಾಗ–10 : ದೇವದರ್ಶನ ಗುಡಾರ ನಿರ್ಮಾಣದ ವಿವರಣೆಗಳು ...........90

ಭಾಗ–11 : ಯಾಜಕ ಪ್ರತಿಷ್ಠಾಕ್ರಮ ........................................109

ಭಾಗ–12 : ಪಾರಾನ್ ಅರಣ್ಯಕ್ಕೆ ಇಸ್ರಾಯೇಲ್ಯರ ಪ್ರಯಾಣ
ಅಲ್ಲಿನ ಘಟನೆಗಳು ........................................125

# ಭಾಗ–1
# ಛಾಯೆ ನಿಜಸ್ವರೂಪ

**1ಕೊರಿಂಥ 10:11**

ಅಪೋಸ್ತಲನಾದ ಪೌಲನು ನಮಗೆ ಹೇಳುವಂತೆ ಇಸ್ರಾಯೇಲ್ಯರಿಗೆ ಸಂಭವಿಸಿದ ಆ ಸಂಗತಿಗಳು ನಿದರ್ಶನಗಳಾಗಿವೆ. ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದವೆ. 1 ಕೊರಿಂಥ 10:11

ಆದುದರಿಂದ ಶಾರೀರಿಕ ಇಸ್ರಾಯೇಲ್ಯರಿಗಾದ ಯಾತ್ರಾನುಭವಗಳ ಪರಿಶೀಲನೆಯು ಕರೆಯಲ್ಪಟ್ಟ ಕರೆಯುವಿಕೆಗೆ ಯೋಗ್ಯವಾಗಿ ನಡೆಯುವವರಿಗೆ ಬುದ್ಧಿವಾದಗಳಾಗಿಯೂ ಮತ್ತು ಇಸ್ರಾಯೇಲ್ಯರು ಆಶಿಸಿದಂತೆ ಕೆಟ್ಟ ವಿಷಯಗಳನ್ನು ಇವರು ಆಶಿಸಿ ಅಪರಾಧಿಗಳಾಗದಂತೆಯೂ (1 ಕೊರಿಂಥ 10:6) ಮತ್ತು ಅಪನಂಬಿಕೆಯೆಂಬ ಅವಿಧೇಯತೆಯಿಂದ ದೇವರ ವಿಶ್ರಾಂತಿಯಲ್ಲಿ ಸೇರಲು ಇಸ್ರಾಯೇಲ್ಯರು ಅಪಾತ್ರರಾದಂತೆ ಇವರು ಅಪಾತ್ರರಾಗದಂತೆ ಋಜುವಾತುಪಡಿಸಲು –– ಅನುಕೂಲಕರವಾಗಿ ಪರಿಣಮಿಸಬೇಕು.

ಬರೆಯಲ್ಪಟ್ಟಿರುವ ಇಸ್ರಾಯೇಲ್ಯರ ಯಾತ್ರಾನುಭವಗಳ ಅಧ್ಯಯನದ ನಮ್ಮ ಉದ್ಧೇಶವೇನೆಂದರೆ ಇದರ ಬೆಳಕಿನಲ್ಲಿ ನಮ್ಮ ವಿಮೋಚಕನಾದ ದೇವರ ವಿಷಯವಾಗಿರುವ ನಮ್ಮ ನಂಬಿಗಸ್ತಿಕೆಯ ಪರಿಮಾಣವನ್ನು ನಾವು ಅಳೆಯಬಹುದು.

ಇಸ್ರಾಯೇಲ್ಯರು ಐಗುಪ್ತದ ದಾಸತ್ವದಲ್ಲಿ ಇರುವವರಾಗಿ ಕಂಡುಬಂದ ಸಂಗತಿಯಿಂದಲೇ ನಾವು ಪ್ರಾರಂಭಿಸೋಣ. ತಮ್ಮ ಪಿತೃಗಳ ಪಾಪದ ದೆಸೆಯಿಂದಲ್ಲದಿದ್ದರೆ ಅವರು ಅಲ್ಲಿ ಇರುತ್ತಿರಲಿಲ್ಲ. ಯೋಸೇಫನು ಅವನ ಸಹೋದರರು ತಮ್ಮ ತಂದೆಯಾದ ಯಾಕೋಬನೊಂದಿಗೆ ಕಾನಾನ್ ದೇಶದಲ್ಲಿ ವಾಸವಾಗಿದ್ದುದ್ದನ್ನು ನೆನಪಿಗೆ ತಂದುಕೊಳ್ಳಿರಿ (ಆದಿಕಾಂಡ 36:1, 2). ಅದು ವಾಗ್ದತ್ತ ದೇಶವಾಗಿತ್ತು. ಆದರೆ ಯೋಸೇಫನ ಸಹೋದರರು ಹೊಟ್ಟೆಕಿಚ್ಚಿನಿಂದ ಅವನನ್ನು ತೊಡೆದು ಹಾಕುವುದಕ್ಕಾಗಿ ಗುಲಾಮನಾಗುವುದಕ್ಕೆ ಮಾರಿಬಿಟ್ಟರು. ಆದರೆ ದೇವಾನುಗ್ರಹದಿಂದ ಈ ಕಾರ್ಯವು ಅವರನ್ನೂ ಐಗುಪ್ತಕ್ಕೆ ಬರುವಂತೆ ಮಾಡಿತು. ಐಗುಪ್ತದಲ್ಲಿ ಸಹ ಯೋಸೇಫನು ಜೀವದಿಂದ ಇರುವ ವರೆಗೆ ಅವರು ಉತ್ತಮ ಸ್ಥಿತಿಯಲ್ಲಿ ಇದ್ದರು. ಆದರೆ ಕಾನಾನ್ ದೇಶದ ಮೇಲಿನ ತಮ್ಮ ಹಕ್ಕನ್ನು ಕಳೆದುಕೊಂಡವರಾಗಿ ತಮ್ಮ ಮಕ್ಕಳು ಸಹ ಐಗುಪ್ತದಲ್ಲಿ ಯೋಸೇಫನಂತೆ ದಾಸರುಗಳಾದರು.

ಹೀಗೆಯೇ ದೇವರ ನಿಜವಾದ ಇಸ್ರಾಯೇಲ್ಯರಾದ ನಾವು ಸಹ ಐಗುಪ್ತವೆಂಬ ಈ ಲೋಕದಲ್ಲಿ ಹುಟ್ಟಿ ದಾಸತ್ವದಲ್ಲಿರುವುದು ನಮ್ಮ ಪಾಪಗಳ ನಿಮಿತ್ತವಾಗಿಯಲ್ಲ, ಆದರೆ ನಮ್ಮ ಪಿತೃಗಳು, ನಮ್ಮನ್ನು ದಾಸತ್ವಕ್ಕೆ ಮಾರಿರುವುದರಿಂದಲೇ. ಕೀರ್ತನಾಗಾರನು ಪೂರ್ವದಲ್ಲಿ

ಹೀಗೆ – "ಹುಟ್ಟಿದಂದಿನಿಂದ ನಾನು ಪಾಪಿಯೇ, ಮಾತೃಗರ್ಭವನ್ನು ಹೊಂದಿದ ದಿನದಿಂದ ದ್ರೋಹಿಯೇ" – ಎಂದು ಹೇಳಲಿಲ್ಲವೇ? (ಕೀರ್ತನೆ 51:5) –– "ತಂದೆಗಳು ಹುಳಿ ದ್ರಾಕ್ಷೆಯನ್ನು ತಿಂದರು ಮಕ್ಕಳ ಹಲ್ಲುಗಳು ಚಳಿತುಹೋಗಿವೆ" (ಯೆರೆ. 31:29) ಎಂದು ಹೇಳಿದ್ದು ಈ ಕಾರಣದಿಂದಲ್ಲೇ ಅಲ್ಲವೇ?

ತಂದೆ ಆದಾಮನು ಏದೇನಿನ ವಿಶ್ರಾಂತಿಯನ್ನು ಕಳಕೊಳ್ಳಲು ಮತ್ತು ಫರೋಹನನೆಂಬ ಈ ಲೋಕದ ಅಧಿಪತಿಗೆ ದಾಸನಾಗಿ ಬೆವರಿಡುತ್ತಾ ಶ್ರಮಿಸುತ್ತಿರುವುದು ಆತನ ಯಾವುದೇ ನಿರ್ಧಿಷ್ಟವಾದ ಪಾಪದ ನಿಮಿತ್ತದಿಂದಲ್ಲ ಆದರೆ ಅದು ಅವಿಧೇಯತೆಯಿಂದಲೇ ಆಗಿತ್ತು. ಲೋಕವೆಂಬ ಐಗುಪ್ತದಲ್ಲಿ ಹುಟ್ಟಿದ ಆತನ ಸಮಸ್ತ ಸಂತತಿಯು ಹುಟ್ಟು ಗುಲಾಮರಾಗಿ ಪಾಪ ಮರಣವೆಂಬ ಕಠಿಣ ಹಾಗೂ ಕ್ರೂರ ಯಜಮಾನರಿಗೆ ಒಳಪಟ್ಟಿದ್ದಾರೆ. "ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು." ರೋಮಾ. 5:12. ಎಂಬ ಪೌಲನ ಈ ಮಾತುಗಳು ಇದನ್ನು ಸೂಚಿಸುತ್ತದೆ.

ಯೋಸೇಫನನ್ನು ಅರಿಯದ ಫರೋಹನು ತನ್ನ ಅಧಿಪತ್ಯದಲ್ಲಿ ವಾಸಿಸುತ್ತಿದ್ದ ಇಸ್ರಾಯೇಲ್ಯರು ಅಧಿಕವಾಗಿರುವುದು ತನಗೆ ಹೊರೆಯಾಗಬಹುದೆಂದು ತಿಳಿದು ಅವರ ಅಭಿವೃದ್ಧಿಗೆ ಕಡಿವಾಣವನ್ನು ಹಾಕಿ ನಿರ್ಭಂಧಿಸಲು ಒಳಸಂಚುಗಳನ್ನು ಹೂಡಿದನು. ನಿಜವಾದ ಕ್ರೈಸ್ತಧರ್ಮವು ಹರಡುವುದನ್ನು ತಡೆದು ಕಡಿವಾಣ ಹಾಕದಿದ್ದರೆ ತಾನು ಬೇಗನೆ ತೊಂದರೆಗೊಳಗಾಗಿ ತನ್ನ ರಾಜ್ಯ ಪ್ರಭುತ್ವಗಳು ಬೇಗನೇ ಇಲ್ಲವಾಗುವುದೆಂದು ವಿರೋಧಿಯಾದ ಸೈತಾನನು ಚೆನ್ನಾಗಿ ತಿಳಿದಿದ್ದನು. ಐಗುಪ್ತದಲ್ಲಿದ್ದ ಶಾರೀರಿಕ ಇಸ್ರಾಯೇಲ್ಯರ ಮೇಲೆ ಕಠಿಣವಾದ ಬಿಟ್ಟೀ ಕೆಲಸ ಮಾಡಿಸುವವರನ್ನು ನೇಮಿಸಿದ್ದಲ್ಲದೆ ಅವರು ಪಿತೋಮ್ ಮತ್ತು ರಾಮ್ಸೇಸ್ ಎಂಬ ಎರಡು ದೊಡ್ಡ ಉಗ್ರಾಣ ಪಟ್ಟಣಗಳನ್ನು ಕಟ್ಟುವ ಹಾಗೆ ಮಾಡಿದನು. (ವಿಮೋ. 1:11) ಫರೋಹನನ್ನು ಪ್ರತಿಬಿಂಭಿಸುವ ಸೈತಾನನು ತನ್ನ ದೊಡ್ಡ ಉಗ್ರಾಣ ಪಟ್ಟಣದಂತಿರುವ ಕ್ಯಾಥೋಲಿಕ ಮತ್ತು ಪ್ರೋಟೆಸ್ಟಂಟ್ ಪಂಗಡಗಳನ್ನು ಕಟ್ಟಿಬೆಳೆಸುವ ಕಾರ್ಯದಲ್ಲಿ ಮಗ್ನರಾಗಿರುವಂತೆ ಕ್ರೈಸ್ತರನ್ನು ಮಾಡಿದ್ದಾನೆ. ಈ ಎರಡು ಮಹಾ ಸೌಧಗಳನ್ನು ಕಟ್ಟುವುದರಲ್ಲಿ ಕ್ರೈಸ್ತ ಸಮುದಾಯವು ಕಾರ್ಯ ಮಗ್ನರಾಗಿದ್ದಾರೆ.

ಐಗುಪ್ತರು ಇಸ್ರಾಯೇಲ್ಯರ ಕೈಯಿಂದ ಕ್ರೂರವಾಗಿ ಸೇವೆ ಮಾಡಿಸಿಕೊಂಡು ಮಣ್ಣಿನ ಕೆಲಸದಲ್ಲಿಯೂ ಇಟ್ಟಿಗೆ ಮಾಡುವ ಕೆಲಸದಲ್ಲಿಯೂ ವ್ಯವಸಾಯದ ಎಲ್ಲಾ ವಿಧವಾದ ಕೆಲಸಗಳಲ್ಲಿಯೂ ಕಠಿಣವಾಗಿ ದುಡಿಸಿಕೊಂಡು ಅವರ ಜೀವಗಳನ್ನು ಬೇಸರ ಪಡಿಸಿದರು. ಅವರು ಅವರಿಂದ ಮಾಡಿಸಿದ ಎಲ್ಲಾ ಸೇವೆಯು ಬಹು ಕಠೋರವಾಗಿತ್ತು ಎಂಬುದಾಗಿ

ಸತ್ಯವೇದದ ದಾಖಲೆಯು ತಿಳಿಸುತ್ತದೆ. (ವಿಮೋ. 1:13, 14) ಅದರೆ ಇಸ್ರಾಯೇಲ್ಯರು ಇಂತಹ ಪರಿಸ್ಥಿತಿಯಲ್ಲೂ ವೃದ್ಧಿಯಾದವರಂತೆ ಕಂಡುಬಂದರು. ಹಾಗೇ ದೇವರ ನಿಜವಾದ ಇಸ್ರಾಯೇಲ್ಯರು ಸಹ ಹಲವು ವೇಳೆ ದಾಸತ್ವಕ್ಕೆ ಒಳಪಟ್ಟವರಾಗಿ, ಅವರ ಉತ್ಸಾಹ ಸಾಮರ್ಥ್ಯಗಳನ್ನು ಕುಂದಿಸುವ ಕೆಲಸವನ್ನು ಅವರಿಂದ ಬಲವಂತವಾಗಿ ಮಾಡಿದರೂ ಅವರು ವೃದ್ಧಿಯಾದವರಂತೆ ಕಂಡುಬರುತ್ತಾರೆ. ಸೈತಾನನು ಇಂತಹ ಪರಿಸ್ಥಿತಿಯು ದೀರ್ಘಕಾಲ ಮುಂದುವರೆಸಲು ಆಗದೆ ಉಗ್ರಾಣ ಪಟ್ಟಣಗಳನ್ನು ಕಟ್ಟುವುದು ಮಾತ್ರವಲ್ಲದೆ ಅವರ ಬಲವನ್ನು ಕುಂದಿಸಲು ಇತರ ವಿಧಾನಗಳನ್ನು ಅನುಸರಿಸುತ್ತಾನೆ.

ಫರೋಹನು ಇದನ್ನು ಶಾರೀರಿಕ ಇಸ್ರಾಯೇಲ್ಯರ ವಿಷಯದಲ್ಲಿ ನೆರವೇರಿಸಿಕೊಳ್ಳುವು ದಕ್ಕಾಗಿ ಇಸ್ರಾಯೇಲ್ಯರ ಸೂಲಗಿತ್ತಿಯರ ಮೇಲೆ ನಿರ್ಭಂಧವನ್ನು ಹೇರಿದನು. ಆದರೆ ಅವರು ಮನುಷ್ಯರಿಗಿಂತಲೂ ದೇವರಿಗೆ ಭಯಪಟ್ಟರು. ಇದರ ಫಲವಾಗಿ ಇಸ್ರಾಯೇಲ್ಯರು ವೃದ್ಧಿಯಾದರು. (ವಿಮೋ. 1:15–19) ಹೀಗೆಯೇ ವಿರೋಧಿಯಾದ ಸೈತಾನನು ಸಹ ದೇವರ ನಿಜವಾದ ಇಸ್ರಾಯೇಲ್ಯರು ವೃದ್ಧಿಯಾಗುವುದನ್ನು ತಡೆಯಲು ರೂಪಿಸಿದ ಎಲ್ಲಾ ವಿಧಾನಗಳು ವಿಫಲವಾದವು. ಅವರು ಕ್ಲುಪ್ತಕಾಲದಲ್ಲಿ ಐಗುಪ್ತವೆಂಬ ಈ ಲೋಕವನ್ನು ಆವರಿಸಿಕೊಂಡು ಅದನ್ನು ದೇವರ ನೀತಿರಾಜ್ಯವನ್ನಾಗಿ ಮಾರ್ಪಡಿಸುವರು. ಆದರೆ ಈ ಇಸ್ರಾಯೇಲ್ಯರು ಐಗುಪ್ತದಲ್ಲಿ ವಾಸವಾಗಿರುವುದನ್ನು ಬಯಸದೆ ವಾಗ್ಧತ್ತ ದೇಶವಾದ ಕಾನಾನನ್ನು ವಶಪಡಿಸಿಕೊಳ್ಳಲು ಎದುರು ನೋಡುತ್ತಿರುವರು. ಅಲ್ಲದೆ ಐಗುಪ್ತದ ದಾಸತ್ವ ದೊಳಗಿಂದ ಬಿಡುಗಡೆಯಾಗಿ ಸ್ವತಂತ್ರರಾಗುವರು. ಆದರೆ ಸ್ವತಂತ್ರರನ್ನಾಗಿ ಮಾಡಿಕೊಳ್ಳುವ ಅವರ ಎಲ್ಲಾ ಪ್ರಯತ್ನಗಳು ವಿಫಲವಾಗುವುದರಿಂದ ಸೈತಾನನು ಸ್ವಲ್ಪ ಮಟ್ಟಿಗೆ ಇದರಲ್ಲಿ ಜಯ ಹೊಂದುವವನಂತೆ ಕಾಣಬರುವನು. ಹೌದು ಆದರೆ ಇದು ಸೈತಾನನಿಗೆ ತಾತ್ಕಾಲಿಕ ವಾದ ಜಯ ಮಾತ್ರವೇ. ಯಾಕೆಂದರೆ ದೇವಜನರು ತಮ್ಮ ವಿಮೋಚನೆಯನ್ನು ತಾವೇ ನೆರವೇರಿಸಿಕೊಳ್ಳುವುದಕ್ಕಾಗುವುದಿಲ್ಲ. ಬದಲಿಗೆ ದೇವರು ಒಬ್ಬ ನಿಜವಾದ ಇಸ್ರಾಯೇಲ್ಯನನ್ನು ಐಗುಪ್ತದಲ್ಲಿ ಎಬ್ಬಿಸುವನು ಅವನು ರಕ್ಷಕನಾಗಿ ತನ್ನ ಜನರನ್ನು ವಿಮೋಚಿಸುವನು.

ಫರೋಹನನು ಎಲ್ಲಾ ಗಂಡುಮಕ್ಕಳನ್ನು ಕೊಂದು ಹೆಣ್ಣುಮಕ್ಕಳನ್ನು ಮಾತ್ರ ಉಳಿಸುವ ಎಂತಹ ದೊಡ್ಡ ಪ್ರಯತ್ನ ಮಾಡಿದ್ದನೆಂಬುದನ್ನು ನೀವು ನಿಮ್ಮ ನೆನಪಿಗೆ ತಂದುಕೊಳ್ಳಬಹುದು. (ವಿಮೋ. 1:22) ಇದು ಇಸ್ರಾಯೇಲ್ಯರು ತಮ್ಮನ್ನು ದಾಸತ್ವ ದೊಳಗಿಂದ ಬಿಡಿಸಿಕೊಳ್ಳಲಾರದಂತೆಯೂ ಹಾಗೆ ಅವರ ಜನಾಂಗವು ನಶಿಸಿಹೋಗು ವಂತೆಯೂ ಮಾಡುತ್ತಿತ್ತು. ಆದಾಗ್ಯೂ ದೇವರು ಮಧ್ಯ ಪ್ರವೇಶಿಸಿ ಫರೋಹನನ ಮನೆಯಲ್ಲೇ ಮೋಶೆಯನ್ನು ಎಬ್ಬಿಸಿದನು.

ನಿಜರೂಪದಲ್ಲಿರುವ ದೇವಜನರ ವಿಮೋಚಕನಾದ ಯೇಸುವು ಇದೇರೀತಿಯಲ್ಲಿ ಸೈತಾನನಿಗೆ ಛಾಯೆಯಾಗಿರುವ ಫರೋಹನನ ಮನೆಯಲ್ಲೇ ಹುಟ್ಟಿದನು. ಸೈತಾನನು ಎಲ್ಲಾ

ಗಂಡುಮಕ್ಕಳನ್ನು ಹೆರೋದನ ಮುಖಾಂತರ ಕೊಲ್ಲಿಸುವುದರ ಮೂಲಕ ವಿಮೋಚಕನಾದ ಯೇಸುವಿನ ಜೀವ ತೆಗೆಯುವ ಸಾಹಸ ಯತ್ನವನ್ನು ಮಾಡಿದ್ದನು. ಆದರೆ ಎಲ್ಲವನ್ನೂ ಒಳ್ಳೆಯದನ್ನಾಗಿ ಪರಿವರ್ತಿಸುವ ದೇವರ ಅನುಗ್ರಹ ಸಾಮರ್ಥ್ಯವು ನಿಜಸ್ವರೂಪದ ವಿಮೋಚಕನಾದ ಯೇಸುವಿನ ಜೀವವನ್ನೂ ಛಾಯಾರೂಪವಾಗಿದ್ದ ಮೋಶೆಯ ಜೀವವನ್ನೂ ರಕ್ಷಿಸಿದಂತೆಯೇ ರಕ್ಷಿಸಿತು.

ಈಗ ಗಮನಿಸಬೇಕಾಗಿರುವುದೇನೆಂದರೆ ಬರೆಯಲ್ಪಟ್ಟ ಸಂಗತಿಗಳೆಲ್ಲವೂ ಛಾಯಾ ರೂಪಗಳಲ್ಲ, ಅಂತೆಯೇ ಛಾಯಾರೂಪಗಳೆಲ್ಲವೂ ಅವುಗಳ ನಿಜರೂಪದ ನೈಜತೆಗಿಂತಲೂ ಹೆಚ್ಚಿನದನ್ನು ಪ್ರತಿಬಿಂಬಿಸುವುದಿಲ್ಲ. ಇದು ದೊಡ್ಡದಾಗಿರಬಹುದು ಸಣ್ಣದಾಗಿರಬಹುದು ಪೂರ್ವಕ್ಕೆ ಬೀಳಬಹುದು ಇಲ್ಲವೇ ಪಶ್ಚಿಮದ ಕಡೆಗೆ ಬೀಳಬಹುದಾದರೂ ನಿರಂತರವಾಗಿ ಇವು ನಿಜರೂಪದ ಛಾಯೆಗಳೇ. ಆದರೆ ಇವುಗಳಲ್ಲಿ ನಿಜರೂಪಗಳ ಸೂಕ್ಷ್ಮ ವಿವರವಾಗಲಿ, ಲಕ್ಷಣಗಳಾಗಲೀ ಎಲ್ಲವೂ ಕಾಣಬರುವ ಅಗತ್ಯ ಇರುವುದಿಲ್ಲ. ಆದುದರಿಂದ ನಾವು ಛಾಯಾ ರೂಪಗಳಲ್ಲಿ ಪ್ರತಿಬಿಂಬಿಸುವ ನಿಜರೂಪದ ವಿವರಕ್ಕಿಂತಲೂ ಹೆಚ್ಚಿನದನ್ನು ಹುಡುಕುವ ಪ್ರಯತ್ನ ಮಾಡದಂತೆ ಎಚ್ಚರಿಕೆಯಾಗಿರಬೇಕು. ಹೀಗೆ ನಮ್ಮ ಈ ಅಧ್ಯಯನದಲ್ಲಿ ಕೆಲವು ಬಾರಿ ಛಾಯಾ ರೂಪಗಳು ಇತರ ಛಾಯಾರೂಪಗಳಿಗಿಂತ ಹೆಚ್ಚು ಸೂಕ್ಷ್ಮ ವಿವರಗಳನ್ನು ಒಳಗೊಂಡಿರುವುದನ್ನು ನಾವು ಗಮನಿಸಬೇಕಾಗುತ್ತದೆ; ಮತ್ತು ಕೆಲವು ಬಾರಿ ಛಾಯಾ ರೂಪಗಳನ್ನು ಉಂಟುಮಾಡುವ ಬೆಳಕು ಬೇರೆ ಬೇರೆ ದಿಕ್ಕಿನಿಂದ ಬಂದದ್ದಾಗಿರುತ್ತದೆ. ನಿಜರೂಪಗಳು ಯಾವಾಗಲೂ ಬದಲಾವಣೆಯಾಗದೆ ಒಂದೇ ರೀತಿಯದಾಗಿದ್ದರೂ ಅದರ ಛಾಯಾ ರೂಪಗಳು ಬಹು ಭಿನ್ನವಾಗಿ ಕಾಣಬರುವ ಸಾಮರ್ಥ್ಯವುಳ್ಳವುಗಳು. ಹಾಗೆಯೇ ಮೋಶೆಯು ಅನೇಕ ಸಾರಿ ಶ್ರೇಷ್ಠ ವಿಮೋಚಕನಾದ ಯೇಸುವನ್ನು ಬೇರೆ ಕೆಲವು ಸಾರಿ ದೇವರನ್ನು ಇನ್ನೂ ಕೆಲವು ಬಾರಿ ಎರಡನೇ ಮರಣಕ್ಕೆ ಹೋಗುವ ಗುಂಪನ್ನೂ ಸೂಚಿಸುವವನಾಗಿದ್ದಾನೆ. ಇದರಿಂದ ನಮಗೆ ವ್ಯಕ್ತವಾಗುವುದೇನೆಂದರೆ ಬರೆಯಲ್ಪಟ್ಟಿರುವ ಶಾರೀರಿಕ ಇಸ್ರಾಯೇಲ್ಯರ ಯಾತ್ರಾನುಭವಗಳೆಲ್ಲವೂ ಒಂದೇ ವಿಧವಾಗಿ ದೇವರ ನಿಜವಾದ ಇಸ್ರಾಯೇಲ್ಯರನ್ನು ನಿರಂತರ ಛಾಯಾರೂಪವಾಗಿ ಪ್ರತಿಬಿಂಬಿಸುವುದಿಲ್ಲ. ಹೌದು ಇದು ನಿಜವಾಗಿದ್ದಲ್ಲಿ ನಮ್ಮಲ್ಲಿ ಹಲವರಿಗೆ ಪರಮ ಕಾನಾನ್ ದೇಶದ ಪ್ರವೇಶವು ಸಂಪೂರ್ಣವಾಗಿ ಇಲ್ಲವಾಗುತ್ತಿತ್ತು. ಹಾಗಾಗಿ ಛಾಯಾ ರೂಪಗಳು ಕೇವಲ ಛಾಯೆಗಳೇ ಆಗಿದ್ದು. ಅವು ಮೂಲ ನಿಜರೂಪಗಳಲ್ಲವಾದ್ದರಿಂದ ಅವುಗಳನ್ನು ಕೇವಲ ಛಾಯಾರೂಪವಾಗಿಯೇ ಪರಿಗಣಿಸಬೇಕು ಎಂಬುದನ್ನು ಗಮನದಲ್ಲಿಟ್ಟುಕೊಳ್ಳೋಣ. ಅಂತೆಯೇ ಮೋಶೆಯೂ ಸಹ ಇಸ್ರಾಯೇಲ್ಯರ ಯಾತ್ರಾನುಭವಗಳ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಸಂಗತಿಗಳನ್ನು ಪ್ರತ್ಯೇಕವಾಗಿ ಸೂಚಿಸುವನಾಗಿದ್ದು, ಪ್ರತಿಯೊಂದು ಸಂದರ್ಭಗಳಲ್ಲೂ ನಾವು ಈ ಸಂಗತಿಗಳ ಛಾಯೆಗಳಿಂದ ಬೇರೆ ಬೇರೆ ಪ್ರತ್ಯೇಕವಾದ ಪಾಠಗಳನ್ನು ನೋಡುವವರಾಗಬೇಕು.

## ಭಾಗ–2

# ಪಸ್ಕ ಯಜ್ಞಾಚರಣೆ

**ವಿಮೋಚನಾಕಾಂಡ 12:1–42**

ದೇಶದ ಮೇಲೆ ಈಗಾಗಲೇ ಒಂಭತ್ತು ಬಾಧೆಗಳು ಉಂಟಾದಾಗ್ಯೂ ಛಾಯಾರೂಪವಾದ ದೇವರ ಇಸ್ರಾಯೇಲ್ಯರು ಇನ್ನೂ ಐಗುಪ್ತದಲ್ಲೇ ದಾಸತ್ವದಲ್ಲಿದ್ದರು. ನಿಜ, ಈ ಎಲ್ಲಾ ಭಾಧೆಗಳು ದೇವರಿಂದ ಕಳುಹಿಸಲ್ಪಟ್ಟವುಗಳು ಅವು ಪೂರ್ಣ ಪರಿಣಾಮಕಾರಿಯಾಗಿರಲಿಲ್ಲ. ಇದು ದೇವರು ಭಂಗಕ್ಕೆ ಒಳಗಾದರೆಂದು ಸೂಚಿಸುವುದಿಲ್ಲ. ಪ್ರತಿಯಾಗಿ ಈ ದೃಶ್ಯಾವಳಿಗಳು ಸಂಭವಿಸುವಾಗ ದೇವರು ತನ್ನ ಆತ್ಮೀಕ ಇಸ್ರಾಯೇಲ್ಯರನ್ನು ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಿದ್ದರು ಎಂಬುದನ್ನೂ ಅಲ್ಲದೆ ದೇವರು ತಾನೇ ಫರೋಹನನ ಮನಸ್ಸನ್ನು ಕಠಿಣಪಡಿಸಿದನೆಂಬ ಸತ್ಯವೇದದ ವಿವರಣೆಯು ನಿರ್ದಿಷ್ಟವಾಗಿ ಇದನ್ನು ಪ್ರತಿಪಾದಿಸಿ ಹೇಳುತ್ತದೆ (ವಿಮೋ. 9:12). ಇಸ್ರಾಯೇಲ್ಯರಿಗೆ ಸಂಭವಿಸಿದ ಅನುಭವಗಳು (ಛಾಯಾರೂಪ) ನಿದರ್ಶನಗಳಾಗಿ ಸಂಭವಿಸಿದ್ದು ಅವು ನಮಗೆ ಬುದ್ಧಿಪಾಠಗಳಾಗಿ ಬರೆಯಲ್ಪಟ್ಟಿವೆ (1ಕೊರಿಂಥ 10:11). ನಾವು ಇವುಗಳನ್ನು ಪರಿಶೋಧಿಸಿ ಇವುಗಳಲ್ಲಿ ಅಡಗಿರುವ ನಿಜಸ್ವರೂಪಗಳ ಮಹತ್ವಗಳೇನೆಂಬುದನ್ನು ತಿಳಿಯುವಂತೆ ಇವುಗಳು ನಮಗೆ ಬರೆಯಲ್ಪಟ್ಟಿವೆ.

ಹೇಗೂ ಮೊದಲನೆಯದಾಗಿ, ಇಸ್ರಾಯೇಲ್ಯರಿಗೆ ಉಪಶಮನ ದೊರಕಿಸಿದ್ದು ಹತ್ತನೇ ಬಾಧೆ ಎಂಬುದನ್ನು ಮತ್ತು ಅದು ಕೇವಲ "**ಪಸ್ಕದ ಕುರಿಮರಿ**"ಯ ರಕ್ತವನ್ನು ಇಸ್ರಾಯೇಲ್ಯರ ಮನೆಯ ನಿಲುವು ಕಂಬಗಳಿಗೂ ಹಾಗೂ ನಿಲುವು ಪಟ್ಟಿಗಳ ಮೇಲೆ ಪ್ರೋಕ್ಷಿಸುವುದರ ಮುಖಾಂತರ ಉಂಟಾಯಿತು ಎಂಬುದು ಗಮನದಲ್ಲಿರಲಿ. ಇದು ನಮಗೆ ದೇವರು ತನ್ನ ಚಿತ್ತಾನುಸಾರ ಅನುಗ್ರಹಪೂರ್ವಕವಾಗಿ ಸಂಕಲ್ಪಿಸಿರುವುದೆಲ್ಲವೂ ನಮಗೆ ಈ ಲೋಕದಲ್ಲಿರುವ ಪಾಪವೆಂಬ ದಾಸತ್ವದಿಂದ ಬಿಡಿಸುವ ಕಾರ್ಯದ ಸಮೀಪಕ್ಕೆ ತರುವುದಾದರೂ, ನಿಜವಾದ ಬಿಡುಗಡೆಯು ಬರುವುದು –– ನಾವು ಕೇವಲ ಯಜ್ಞದ ಕುರಿಯ ರಕ್ತದ ಕೆಳಗೆ ಬರುವುದರಿಂದ –– ಎಂಬುದನ್ನು ಹೇಳುವಂತಿದೆ. ಇಸ್ರಾಯೇಲ್ಯರು ಕೇವಲ ಕುರಿಯನ್ನು ವಧಿಸುವುದರಿಂದ ವಿಮೋಚನೆಯನ್ನು ಹೊಂದಿಕೊಳ್ಳಲು ಸಾಧ್ಯವಾಗು ತ್ತಿರಲಿಲ್ಲ. ಆದರೆ ಇಸ್ರಾಯೇಲ್ಯರೆಲ್ಲರೂ ಸ್ವತಃ ಅ ರಕ್ತದ ಕೆಳಗೆ ತಮ್ಮನ್ನು ಒಳಪಡಿಸಿ ಕೊಳ್ಳಬೇಕಿತ್ತು. ಅಂತೆಯೇ ಸಹ ನಿಜರೂಪದಲ್ಲಿರುವ ದೇವರ ಇಸ್ರಾಯೇಲ್ಯರು ಸಹ (ಕ್ರಿಸ್ತನ) ರಕ್ತದ ಕೆಳಗೆ ತಮ್ಮನ್ನು ಒಳಪಡಿಸಿಕೊಳ್ಳಬೇಕು. ಕೇವಲ ಯೇಸುವು ಲೋಕದ ಪಾಪಗಳಿಗೋಸ್ಕರ ಸತ್ತನೆಂಬ ಅಂಶವನ್ನು ನಂಬುವುದರಿಂದ ರಕ್ಷಣೆ ದೊರೆಯುವುದಿಲ್ಲ. ಬದಲಿಗೆ ಆತನು ನನಗಾಗಿ ಸತ್ತನು ಎಂದು ನಂಬುವುದರಿಂದ ನಮ್ಮಲ್ಲಿ ಪಾಪದ ಅರಿವನ್ನು ಉಂಟು ಮಾಡಿ, ನಂಬಿಕೆಯಿಂದ ನೀತಿವಂತರೆಂಬ ನಿರ್ಣಯವು, ಶಾಪದಿಂದ ವಿಮೋಚನೆ ಮಾಡುತ್ತದೆ. ಆದಾಗ್ಯೂ ಈ ವಿಮೋಚನೆಯು ಪೂರ್ಣ ಸ್ವರೂಪದ ವಿಮೋಚನೆಯಾಗಿರದೆ, ಇದು ಸಂಪೂರ್ಣವಾದ ವಿಮೋಚನೆಗೆ ಕೊಂಡೊಯ್ಯುವ ಸಾಧನವಾಗಿದೆ.

"ಅಪರಾಧಿಯೆಂದು ನಮ್ಮ ಮನಸ್ಸು ಸಾಕ್ಷಿಹೇಳದಂತೆ ಹೃದಯವನ್ನು ನಾವು ಪ್ರೋಕ್ಷಿಸಿಕೊಳ್ಳಬೇಕು." (ಇಬ್ರಿಯ 10:22) ಎಂಬುದನ್ನು ಅಪೋಸ್ತಲನು ಬಹು ಸ್ಪಷ್ಟಪಡಿಸಿ ಖಚಿತವಾಗಿ ಹೇಳಿದ್ದಾನೆ. ಇದು ನಮಗೆ ಯಜ್ಞದ ಕುರಿಮರಿಯ ರಕ್ತದ ವಿಷಯದ ಮೇಲಿನ ನಂಬಿಕೆಗಿಂತಲೂ ಹೆಚ್ಚಾಗಿ ಆ ರಕ್ತದಲ್ಲಿ ನಂಬಿಕೆ ಇಡುವುದರ ಫಲವಾಗಿ ಬರುವಂತದ್ದು. ಆ ವಿಷಯದ ಮೇಲಿನ ನಂಬಿಕೆಯು ನಮ್ಮನ್ನು ನೀತಿವಂತರನ್ನಾಗಿ ಪರಿಗಣಿಸುವ ದೇವದರ್ಶನ ಗುಡಾರದ ಅಂಗಳದಲ್ಲಿರುವ ಸ್ಥಿತಿಯಿಂದ ಇನ್ನೂ ಹೊರಗೆ ಇರುವವರಾಗ ಮಾಡುತ್ತದೆ. ಆದರೆ ಆ ರಕ್ತದಲ್ಲಿನ ನಂಬಿಕೆಯು ನಮ್ಮನ್ನು ದೇವದರ್ಶನ ಗುಡಾರದ ಬಾಗಿಲಿಗೆ ಸೂಚಿತನಾದ ಕ್ರಿಸ್ತ ಯೇಸುವಿನ ಮುಖಾಂತರ ಅಂಗಳದ ಒಳಗೆ ಬರುವಂತೆ ಮಾಡುತ್ತದೆ. ಯೇಸುವಿನ ರಕ್ತದಲ್ಲಿನ ಇಂತಹ ನಂಬಿಕೆಯು ನಮಗೆ ಒಂದು ಪ್ರಭಾವವುಳ್ಳ ನಿರೀಕ್ಷೆಯನ್ನು ಪ್ರೇರೇಪಿಸುತ್ತದೆ. "ನಂಬಿಕೆಯೋ ನಾವು ನಿರೀಕ್ಷಿಸುವುಗಳ ವಿಷಯದಲ್ಲಿ ಭರವಸೆಯಿಂದಿರುವುದು" (ಇಬ್ರಿಯ 11:1) ಎಂದು ಅಪೋಸ್ತಲನಾದ ಪೌಲನು ಸ್ಪಷ್ಟವಾಗಿ ಹೇಳಿದ್ದಾನೆ. ಹಾಗಾದರೆ ನಾವು ಏನನ್ನು ನಿರೀಕ್ಷಿಸುತ್ತಿದ್ದೇವೆ? ಆಹಾ! ಅದು ಈಗಿನ ದುಷ್ಟ ಪ್ರಪಂಚದಿಂದ ಸಂಪೂರ್ಣವಾದ ಬಿಡುಗಡೆ. ಗಲಾತ್ಯ 1:4 – "ಈತನು ನಮ್ಮನ್ನು ಕೆಟ್ಟದ್ದಾಗಿರುವ ಈಗಿನ ದುಷ್ಟ ಯುಗದೊಳಗಿಂದ ಬಿಡಿಸಬೇಕೆಂದು... ನಮ್ಮ ಪಾಪಗಳ ದೆಸೆಯಿಂದ ತನ್ನನ್ನು ಮರಣಕ್ಕೆ ಒಪ್ಪಿಸಿದನು" ಮಾತ್ರವಲ್ಲದೆ ಮರಣಕ್ಕೆ ಒಳಗಾಗುವ ಈ ದೇಹದಿಂದ ಸಹ ಬಿಡುಗಡೆ ಮಾಡುವನು.

ರೋಮಾ. 7:24 "ಅಯ್ಯೋ, ನಾನು ಎಂಥ ದುರವಸ್ಥೆಯಲ್ಲಿ ಬಿದ್ದ ಮನುಷ್ಯನು! ಇಂಥ ಮರಣಕ್ಕೆ ಒಳಗಾದ ಈ ದೇಹದಿಂದ ನನ್ನನ್ನು ಬಿಡಿಸುವವನು ಯಾರು?

ದೇವರ ಮಕ್ಕಳ ಮಹಿಮೆಯು ಹೌದು ಅತ್ಯಧಿಕವಾದ ಮಹಿಮೆಯ ಬಿಡುಗಡೆಯು ನಮ್ಮ ಈಗಿನ ಸ್ಥಿತಿ ಮತ್ತು ಮುಂದೆ ನಮಗೆ ದೊರೆಯುವ ಮಹಿಮಾ ಸ್ಥಿತಿಯ ಒಂದು ಪೂರ್ವಾನುಭವವಾಗಿದೆ. ಈ ಸ್ಥಿತಿಯ ವಿಷಯವಾಗಿ ದೇವರ ವಾಕ್ಯವು ಹೀಗೆ ತಿಳಿಯಪಡಿಸುತ್ತದೆ. 1ಕೊರಿಂಥ. 2:9 "ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂತದೆಲ್ಲ ವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಆಲೋಚನೆಯು ಮನುಷ್ಯರ ಹೃದಯದಲ್ಲಿ ಹುಟ್ಟಲಿಲ್ಲ".

ದೇವರು ನಮಗೆ ತನ್ನ ಆತ್ಮದ ಮೂಲಕ ಈಗಾಗಲೇ ಅವುಗಳನ್ನು ಪ್ರಕಟಿಸಿರುವುದು ನಿಜವಾಗಿದ್ದರೂ ಸಹ ನಾವು ನಮ್ಮ ವಿಮೋಚನೆಯ ಕಾರ್ಯವು ಸಂಪೂರ್ಣವಾಗುವವರೆಗೆ ಆ ವಿಷಯಗಳನ್ನು ಮೆಚ್ಚಿಕೊಳ್ಳಲು ಸಾಧ್ಯವಾಗುವುದಿಲ್ಲ. ಹಾಗೆಯೇ ಇಸ್ರಾಯೇಲ್ಯರೂ ಸಹ ನಂಬಿಕೆಯ ಮೂಲಕ "ವಾಗ್ದತ್ತ ದೇಶವನ್ನು" ದೂರದಿಂದ ನೋಡಿದರೂ, ಅದರಲ್ಲಿನ ಒಳ್ಳೆಯವುಗಳನ್ನು ಅನುಭವಿಸಿ ನೋಡಲು ಅವರಿಗೆ ಸಾಧ್ಯವಾದದು ಅಲ್ಲಿಗೆ ಸೇರಿದ ನಂತರವೇ.

ಯೇಸುವಿನ ರಕ್ತವು ಈ ಮೌಲ್ಯವನ್ನು ಹೊಂದಿದೆ. ಆದರೆ ಈ ಮೌಲ್ಯವನ್ನು ನಮ್ಮದಾಗಿಸಿಕೊಳ್ಳಬೇಕಾದರೆ ದೇವರು ಸ್ವತಃ ತಾನೇ ನಮಗಾಗಿ ಅನುಗ್ರಹಿಸಿರುವ ವಿಷಯಗಳ ಮೇಲೆ ನಂಬಿಕೆಯನ್ನು ಇಡುವುದರ ಮುಖಾಂತರ ಆಗುತ್ತದೆ ಎಂದು ನಾವು ನೋಡುತ್ತೇವೆ. ನಂಬಿಕೆಯು ನಮ್ಮ ರಕ್ಷಣೆಯ ಅಂತ್ಯವಲ್ಲ ಬದಲಿಗೆ ಅದು ಅಂತ್ಯವನ್ನು ತಲುಪುವ ಸಾಧನವಾಗಿದೆ ಮತ್ತು ನಂಬಿಕೆಯು ಮಹಿಮೆಯ ನಿರೀಕ್ಷೆಯನ್ನು ಉಂಟು ಮಾಡುವುದರ ಮೂಲಕ ಅದನ್ನು ನಮಗೆ ರುಜುವಾತು ಪಡಿಸುತ್ತದೆ ಮತ್ತು ನಂಬಿಕೆಯಿಂದುಂಟಾದ ಈ ನಿರೀಕ್ಷೆಯು ನಮ್ಮನ್ನು ಪ್ರೋತ್ಸಾಹಿಸಿ ಮಹಿಮೆಯ ಪರಿಪೂರ್ಣತೆಯ ಕಡೆಗೆ ನಮ್ಮನ್ನು ಸೆಳೆದೊಯ್ಯುತ್ತದೆ. ಇದರ ವಿವರವನ್ನು ನಾವು ಓದುವುದು – 1 ಯೋಹಾನ 3:3 "ಆತನ ಮೇಲೆ ಈ ನಿರೀಕ್ಷೆಯನ್ನು ಇಟ್ಟಿರುವ ಪ್ರತಿಯೊಬ್ಬನು ಕ್ರಿಸ್ತನು ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧ ಮಾಡಿಕೊಳ್ಳುತ್ತಾನೆ."

ನಮಗೆ ತೋರಿಬರುವಂತೆ ನಂಬಿಕೆಯು ಸ್ವತಃ ದೈವದತ್ತವಾದುದು. ದೇವರು ತಾನೇ ಅನುಗ್ರಹ ಮಾಡಿರುವ ಯೇಸುವಿನ ರಕ್ತದ ಮುಖಾಂತರವಲ್ಲದೆ ನಮಗೆ ನಂಬಿಕೆಯನ್ನು ಅಭ್ಯಾಸ ಮಾಡಲು  ಬೇರೆ ಮಾರ್ಗವೂ ಇರುತ್ತಿದ್ದಿಲ್ಲ. ಆದುದರಿಂದ ನಂಬಿಕೆಯೆಂಬುದು "ದೇವರ ವರ"  ಅಪೋಸ್ತಲನಾದ ಪೌಲನೂ ಸಹ ಇದನ್ನೇ ಹೇಳುತ್ತಾನೆ – ಎಫೆಸ 2:8 "ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದ ಉಂಟಾದುದ್ದಲ್ಲ. ಅದು ದೇವರ ವರವೇ"

ರಕ್ತದ ಅಧೀನಕ್ಕೆ ನಮ್ಮನ್ನು ನಾವು ಒಳಪಡಿಸಿಕೊಳ್ಳಲು ಅದು (ನಂಬಿಕೆಯು) ಒಂದು ಸಾಧನವಾಗಿದೆ. ಆದಾಗ್ಯೂ ನಂಬಿಕೆಗೆ ಇನ್ನೂ ಹಲವು ವಿಷಯಗಳನ್ನು ಕೂಡಿಸಿಕೊಳ್ಳಬೇಕು. ಮತ್ತು ಈ ಕೂಡಿಸಿಕೊಳ್ಳುವಿಕೆಯು ನಂಬಿಕೆಯಿಂದ ಪ್ರೇರಿತವಾದ ನಿರೀಕ್ಷೆಯ ಶುದ್ಧೀಕರಣ ಕಾರ್ಯವಾಗಿದೆ. ಮತ್ತು ಈ ಮೂಲಕವಾಗಿಯೇ ನಾವು ನಮಗಿರುವ ನಂಬಿಕೆಗೆ ಸದ್ಗುಣ, ಜ್ಞಾನ, ದಮೆ, ತಾಳ್ಮೆ, ಭಕ್ತಿ, ಸಹೋದರ ಸ್ನೇಹ, ಪ್ರೀತಿ ಈ ಮುಂತಾದ ಗುಣಗಳನ್ನು ಕೂಡಿಸಿ ಕೊಳ್ಳುತ್ತೇವೆ (2ಪೇತ್ರ 1:4–8). ಹೀಗೆ ಮಡುವುದರಿಂದ ಮಾತ್ರವೇ... ಒಬ್ಬನು ತನ್ನ (ಐಗುಪ್ತ ವೆಂಬ ಈ ಲೋಕದೊಳಗಿಂದ) ಕರೆಯನ್ನು ಮತ್ತು ಅಯ್ಕೆಯನ್ನು (ರಾಜ್ಯದ ಮಹಿಮೆ ಯಲ್ಲಿ ಕ್ರಿಸ್ತನೊಂದಿಗೆ ಒಂದಾಗುವುದನ್ನು) ದೃಢಪಡಿಸಿಕೊಳ್ಳಲು ಸಾಧ್ಯ. "ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ನಿತ್ಯರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸಲಿ". (2 ಪೇತ್ರ 1:11)

ದೇವರ ಯೋಜನೆಯ ಈ ಹಂತವನ್ನು ಇಷ್ಟು ಸವಿಸ್ತಾರವಾಗಿ ಹೇಳುತ್ತಿರುವುದರ ಉದ್ಧೇಶ 'ವೇನೆಂದರೆ ಕೇವಲ ರಕ್ತದಿಂದಲ್ಲ ಬದಲಿಗೆ ನಂಬಿಕೆಯ ಮುಖಾಂತರ ನಾವು ನಮ್ಮನ್ನು ಆ ರಕ್ತದ ಕೆಳಗೆ ಬರಮಾಡಿಕೊಳ್ಳುವುದರಿಂದ ಮಾತ್ರವೇ ನಮಗೆ ರಕ್ಷಣೆ ಇಲ್ಲವೆ ವಿಮೋಚನೆ ದೊರೆಯುವಂತದ್ದಾಗಿದೆ ಎಂಬ ಸತ್ಯಾಂಶವನ್ನು ಒತ್ತಿ ಹೇಳುವುದಾಗಿದೆ. ಮತ್ತು

ಈ ಕಾರ್ಯವು ನಮ್ಮಲ್ಲಿ ನೆರವೇರಿದರೆ ದೇವರ ಕಾನಾನಿನ ವಿಶ್ರಾಂತಿಯನ್ನು ಹೊಂದಿಕೊಳ್ಳುವ ನಮ್ಮ ಪ್ರಯಾಣವು ಈಗ ಮಾತ್ರವೇ ಆರಂಭವಾಗಿದೆ ಎಂದು ಮತ್ತು ಇನ್ನೂ ಐಗುಪ್ತದಲ್ಲಿ ಇದ್ದಾಗ್ಯೂ ರಕ್ತದ ಕೆಳಗೆ ಬಂದಿರುವಂತವರು ಯಾತ್ರಾಪರರಾಗಿ ಅನೇಕ ಅರಣ್ಯ ಮಾರ್ಗ ವನ್ನು ಸಂಚರಿಸಿ ವಾಗ್ಧತ್ತ ದೇಶವನ್ನು ಸಂಪೂರ್ಣವಾಗಿ ಪ್ರವೇಶಿಸು ವವರೆಗೂ ಅನೇಕ ಶೋಧನೆಗಳು, ಹಲವು ಶ್ರಮಸಂಕಟಗಳ ಅನುಭವಗಳು ಸಂಭವಿಸುವವು ಎಂಬುದನ್ನು ತಿಳಿಸುವುದಾಗಿದೆ.

ಇಸ್ರಾಯೇಲ್ಯರು ತಮ್ಮ ಅವಿಧೇಯತೆ ಮತ್ತು ಅಪನಂಬಿಕೆಯ ಕಾರಣದಿಂದ ಕಾನಾನ್ ವಿಶ್ರಾಂತಿಯಲ್ಲಿ ಸೇರಲಿಲ್ಲವೆಂದು ದೇವರ ವಾಕ್ಯ ಹೇಳುತ್ತದೆ (ಇಬ್ರಿಯ 3:10–19). ಇಸ್ರಾಯೇಲ್ಯರಿಗೆ ಸಂಭವಿಸಿದ ಈ ಸಂಗತಿಗಳು ನಮಗೆ ನಿದರ್ಶನಗಳಾಗಿಯೂ ಬುದ್ಧಿವಾದ ಗಳಾಗಿಯೂ ಇರುವುದರಿಂದ (1ಕೊರಿಂಥ 4:6–11) ಹಾಗೂ ಆ ವಿಶ್ರಾಂತಿಯಲ್ಲಿ ಸೇರುವ ಅವಕಾಶವು ಇನ್ನೂ ಇರುವುದರಿಂದಲೂ ನಾವು ಇದರಲ್ಲಿ ಸೇರುವುದಕ್ಕೆ ಪ್ರಯಾಸ ಪಡಬೇಕು.

ಆದರೂ ಐಗುಪ್ತದಿಂದ ಬಿಡುಗಡೆ ಮತ್ತು ಕಾನಾನ್ ದೇಶಕ್ಕೆ ಧಾರಾಳವಾದ ಪ್ರವೇಶವು ಪಸ್ಕದ ಕುರಿಮರಿಯ ರಕ್ತದ ಮೇಲೆ ಸಂಪೂರ್ಣವಾಗಿ ಆಧಾರಗೊಂಡಿತ್ತು. ಆದರೆ ತಾವು ತಮ್ಮ ಸ್ವಂತ ಸ್ವತ್ತಲ್ಲ ಕ್ರಯಕ್ಕೆ ಕೊಳ್ಳಲ್ಪಟ್ಟವರೆಂಬುದನ್ನು ಪರಿಗಣನೆಗೆ ತೆಗೆದುಕೊಂಡು ಆ ಮಾರ್ಗದಲ್ಲಿ ಮುಂದುವರಿದಲ್ಲಿ ಮಾತ್ರ ಆ ರಕ್ತವು ಅವರ ಬಿಡುಗಡೆ ಕಾರ್ಯವನ್ನು ಪೂರ್ಣ ಮಾಡಿ ಅವರನ್ನು ಆ ದೇಶಕ್ಕೆ ಸೇರಿಸುವುದಾಗಿತ್ತು. ನಮಗೆ ತಿಳಿದಿರುವಂತೆ ಇಸ್ರಾಯೇಲ್ಯರು ಇದನ್ನು ಮಾಡುವುದರಲ್ಲಿ ವಿಫಲರಾದರು. ಅಲ್ಲದೆ ಯೆಹೋಶುವ ಮತ್ತು ಕಾಲೇಬರನ್ನು ಹೊರತುಪಡಿಸಿ ಎಲ್ಲರೂ ಸತ್ತರು. ಇವರು ಐಗುಪ್ತದಲ್ಲಿಯಾಗಲೀ ಇಲ್ಲವೇ ಕಾನಾನಿನಲ್ಲಿ ಯಾಗಲೀ ಸಾಯಲಿಲ್ಲ, ಬದಲಿಗೆ ಅವುಗಳ ನಡುವೆ ಇದ್ದ ಅರಣ್ಯ ಪ್ರದೇಶದಲ್ಲಿ ಸತ್ತರು.

ನಾವು ಒಂದು ಸಾರಿ ಆ ರಕ್ತದ ಆಶ್ರಯಕ್ಕೆ ಬಂದವರಾಗಿ ಈ ಲೋಕದ ದಾಸತ್ವದೊಳಗಿಂದ ಬಿಡುಗಡೆಯಾಗಿರುವೆವೆಂಬ ಅಂಶವು ನಾವು ದೇವರ ವಾಗ್ದಾನದ ಬಾಧ್ಯತೆಯನ್ನು ಹೊಂದಿಕೊಳ್ಳುತ್ತೇವೆಂದು ಖಚಿತಪಡಿಸುವುದಿಲ್ಲ. ಪೂರ್ವದಲ್ಲಿ ಸಂಭವಿಸಿದ ಸಂಗತಿಯ ವಿವರಣೆಯು ಹೇಳುವುದೇನಂದರೆ ಅವರೊಳಗೆ ಬಹುಮಂದಿಯ ವಿಷಯದಲ್ಲಿ ದೇವರು ಸಂತೋಷಿಸದೆ ನೊಂದುಕೊಂಡನು (1ಕೊರಿಂಥ 10:5). ಹೀಗಿದ್ದಲ್ಲಿ ನಾವೂ ಸಹ ಅವರಂತೆ ಅವಿಧೇಯರಾಗಿ ಒಂದು ವೇಳೆ ಅರಣ್ಯ ಮಾರ್ಗದಲ್ಲಿ ಉಚ್ಚಾಟನೆಗೆ ಒಳಗಾಗದಂತೆ ಜಾಗರೂಕರಾಗಿರಬೇಕು. ದೇವರು ನಮ್ಮ ಬಲಹೀನತೆಯನ್ನು ಸಮರ್ಥಿಸಿ ಕೊಂಡು ಯಾವಾಗಲೂ ನಮ್ಮೊಂದಿಗೆ ತಾನು ಕಳಕಳಿಯಿಂದ ಇರುವನೆಂದು ಭಾವಿಸಿ, ಹೀಗೆ ದೇವರ ಮಾತನ್ನು ಗಂಭೀರವಾಗಿ ಎಣಿಸದೆ ಉಪೇಕ್ಷೆಯಿಂದ ನಾವು ಮುಂದುವರೆದರೆ ಅದು ಅಪನಂಬಿಕೆ ಹಾಗೂ ಅವಿಧೇಯತೆಯಾಗುತ್ತದೆ. ನಾವು ಭ್ರಮೆಯಲ್ಲಿಯೇ ಮುಂದುವರೆದರೆ

ಒಂದು ಕಾಲ ಬರುವುದು ಆಗ ದೇವರು ನಮ್ಮಲ್ಲಿ ಸಂತೋಷಿಸದೆ ನಮ್ಮ ಮನತಿರುಗಿಸುವ ತನ್ನ ಆತ್ಮವನ್ನು ನಮ್ಮಿಂದ ಹಿಂದೆಗೆಯುವನು (ಆದಿಕಾಂಡ 6:3). ದೇವರು ನಮಗೆ ಜಯದ ವಾಗ್ದಾನ ಮಾಡಿದ್ದಾರೆ; (ಧರ್ಮೋ. 7:2) ಆದರೆ ನಾವು ಇದನ್ನು ಸ್ವೀಕರಿಸಿಕೊಳ್ಳಬೇಕು. ಇಸ್ರಾಯೇಲ್ಯರು ಇದರಲ್ಲಿ ವಿಫಲರಾದರು. ಯಾಕಂದರೆ ಅವರು ವಾಗ್ದತ್ತ ದೇಶದ ಮೇರೆಗೆ ಬಂದಾಗ, ಅದನ್ನು ವಶಮಾಡಿಕೊಳ್ಳುವುದಕ್ಕೆ ಸಂಶಯಪಟ್ಟು, ದೇವರ ಸಕಾಲಿಕ ಸಹಾಯದ ಕೃಪಾ ವಾಗ್ದಾನವನ್ನು ಮರೆತು, ಆ ದೇಶವನ್ನು ಗೂಡಚರ್ಯೆ ಮಾಡುವುದಕ್ಕೆ ಕಳುಹಿಸಿದರು (ಧರ್ಮೋಪದೇಶಕಾಂಡ 1:19–26). ದೇವರನ್ನು ನಂಬಲು ಹೀಗೆ ವಿಫಲರಾದ ಕಾರಣ ಅವರು ಹಿಂದಿರುಗಿ ಐಗುಪ್ತಕ್ಕೆ ಅಲ್ಲ ಬದಲಿಗೆ ಅದಕ್ಕಿಂತಲೂ ಘೋರವಾದ ಅರಣ್ಯದ ಕಡೆಗೆ ನಡೆಸಲ್ಪಟ್ಟರು (ಅರಣ್ಯಕಾಂಡ 14:26–45).

ದೇವರ ಮಾತನ್ನು ಗಂಭೀರವಾಗಿ ಎಣಿಸಲು ವಿಫಲನಾಗುವ ನಿಜಸ್ವರೂಪದ ಇಸ್ರಾಯೇಲ್ಯನು ಇದೇ ಪ್ರಕಾರವಾಗಿ ವಾಗ್ದತ್ತ ದೇಶದಿಂದ ಹೊರಗೆ ಉಳಿಸಲ್ಪಡುವನು. ಇಸ್ರಾಯೇಲ್ಯರು ತಮಗಾದ ಶಿಕ್ಷಾನುಭವದಿಂದ ಕಲಿತದ್ದಕ್ಕೆ ಸರಿಯಾಗಿ ನಡೆದು, ದೇವರ ಹೇರಳವಾದ ಕೃಪೆಯನ್ನು ಮನಗಂಡವರಾಗಿ, ಇಂತಹ ಕೃಪಾನುಗ್ರಹಕ್ಕೆ ತಾವು ಅನರ್ಹರೆಂಬುದನ್ನು ಯಾವಾಗಲೂ ಮನಗೊಂಡವರಾಗಿರುತಿದ್ದಲ್ಲಿ, ಅವರು ತಮ್ಮಲ್ಲಿ ಮೊದಲು ಗುಪ್ತವಾಗಿ ಮೂಡಿ ಕ್ರಮೇಣ ಪ್ರಭಲವಾದ ಪಾಪವಾಗಿ ಬೆಳೆದು ದೊರೆತನವನ್ನು ಹೊಂದಿ ದೊಡ್ಡ ಅಪರಾಧವನ್ನು ಮಾಡುವಂತೆ ಮಾಡಿ, ದೇವರು ಅದರ ವಿಷಯವಾಗಿ ಪರಿಶ್ರಮಿಸುವುದನ್ನು ನಿಲ್ಲಿಸುವಂತೆ ಮಾಡಿ, "**ಭಯಂಕರವಾದ ಅರಣ್ಯದ**" (ಕೀರ್ತನೆ 19:12, 13 ಓದಿ) ಕಡೆಗೆ ಅವರನ್ನು ತಿರುಗಿ ಹೋಗುವಂತೆ ಮಾಡುವಂತವುಗಳಿಂದ ಅವರನ್ನು ಶುದ್ಧಮಾಡುವಂತೆ ದೇವರನ್ನು ಸಹಾಯಕ್ಕಾಗಿ ಬೇಡಿಕೊಳ್ಳುತ್ತಿದ್ದರು. ಮತ್ತು ಇಸ್ರಾಯೇಲ್ ತನ್ನ ಮೇಲೆ ಬಹಳ ಭರವಸ ವುಳ್ಳದ್ದಾಗಿತ್ತು. ಎಷ್ಟು ಭರವಸದಿಂದಿತ್ತೆಂದರೆ ಅದು ದೇವರ ಮುಂದೆ ನಿಂತು ಕೊಂಡಿತು. ಹೌದು ಸದಾಕಾಲ ಹಾಗೆಯೇ ನಿಲ್ಲುತ್ತೇನೆಂದು ಅಂದುಕೊಂಡು ಅದು ಅಜಾಗರೂಕವಾಗಿ, ಉದಾಸೀನವಾಗಿ ಮಿತಿಮೀರಿ ಮುಗ್ಗರಿಸಿಬಿತ್ತು. ರಕ್ಷಣೆ ಮತ್ತು ವಿಮೋಚನೆಯು ದೇವರ ಕೃಪಾವರವೇ ಹೊರತು ತನ್ನಿಂದಲ್ಲ ಎಂಬ ಅಂಶವನ್ನು ನೆನಪಿನಲ್ಲಿ ಇಡದ ಹೊರತು ರಕ್ತವು ಅವರನ್ನು ಕಾನಾನಿನೊಳಗೆ ಸೇರುವಂತೆ ರಕ್ಷಿಸಲು ಸಾಧ್ಯವಾಗುತ್ತಿರಲಿಲ್ಲ. ಈ ವಿಷಯ ವಾಗಿಯೇ ಅಪೋಸ್ತಲರು ಈ ವಾಕ್ಯಗಳ ಮುಖಾಂತರ ಬುದ್ಧಿವಾದ ನೀಡಿರುವುದು ಅಚ್ಚರಿಯೇನಲ್ಲ. 1ಕೊರಿಂಥ 10:12 "ಆದಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರವಾಗಿರಲಿ".

ಈ ರಕ್ಷಣೆಯು (ಕ್ರಿಸ್ತನ) ರಕ್ತದ ಮುಖಾಂತರವಾಗಿ (ದೇವರಿಂದ) ನೆರವೇರಿಸಲ್ಪಟ್ಟ ವಿಷಯವಾಗಿರುವಲ್ಲಿ, ನಾವು ಅದನ್ನು "ಮನೋಭೀತಿಯಿಂದಲೂ ನಡುಗುವವರಾಗಿಯೂ" ಸಾಧಿಸಿಕೊಳ್ಳುವವರಾಗಬೇಕು (ಫಿಲಿಪ್ಪ 2:12)

ಈ ಬುದ್ಧಿ ಪಾಠಗಳನ್ನು ಆತ್ಮೀಕ ರೀತಿಯಲ್ಲಿ ದೇವರ ಇಸ್ರಾಯೇಲ್ಯರಾಗಿರುವವರು ವಿಶೇಷವಾಗಿ ತಮ್ಮ ಹೃದಯಕ್ಕೆ ತೆಗೆದುಕೊಳ್ಳಬೇಕು. ಬಿಡುಗಡೆ ವಿಮೋಚನೆಗಳನ್ನು ಉಂಟುಮಾಡುವ ಯಜ್ಞಾರ್ಪಿತವಾದ ಪಸ್ಕದ ಕುರಿಮರಿಯ ರಕ್ತದಿಂದ ಪ್ರತಿನಿಧಿಸಲ್ಪಡುವ ದೇವರ ಕೃಪೆಯ ಪ್ರಭಾವ ಮತ್ತು ಅದರ ಕಾರ್ಯಸಾಧಕ ಸಾಮರ್ಥ್ಯದ ಅಡಿಯಲ್ಲಿ ಉಳಿದುಕೊಂಡಿರುವುದಕ್ಕೆ ಎಲ್ಲರೂ ಪರಿಶ್ರಮಿಸಬೇಕು.

ಇಸ್ರಾಯೇಲ್ ಜನಾಂಗವೆಲ್ಲವೂ ಪಸ್ಕ ಸಂಸ್ಕಾರವು ಆಚರಿಸಿದ ಮಾರನೆಯ ದಿನವೇ ಐಗುಪ್ತದ ದಾಸತ್ವದಿಂದ ಬಿಡುಗಡೆಯಾದರೂ ಆ ಕುರಿಮರಿಯು ಕೊಯ್ಯಲ್ಪಟ್ಟದ್ದು ವಿಶೇಷವಾಗಿ ಚೊಚ್ಚಲು ಮಕ್ಕಳಿಗೆ ಮಾತ್ರ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಸಂಹಾರಕ ದೂತನು ಇಸ್ರಾಯೇಲ್ಯರ ಮನೆಗಳನ್ನು ದಾಟಿ ಹೋಗುವಾಗ ಚೊಚ್ಚಲ ಮಕ್ಕಳು ರಕ್ಷಣೆಗೆ ಕಾರಣವಾದ ಆ ರಕ್ತವು ಮಾರನೆ ದಿನದಲ್ಲಿ ಇಸ್ರಾಯೇಲ್ಯರೆಲ್ಲರೂ ಬಿಡುಗಡೆ ಹೊಂದುವಂತೆ ಸಹ ಮಾಡಿತು. ಯೇಸುವು ಲೋಕದ ಪಾಪವನ್ನು ನಿವಾರಿಸಲು ದೇವರು ನೇಮಿಸಿದ ಯಜ್ಞದ ಕುರಿಮರಿ ಮಾತ್ರವಲ್ಲದೆ ಆತನು ನಮ್ಮ (ಚೊಚ್ಚಲು ಮಕ್ಕಳನ್ನು ರಕ್ಷಿಸುವ) ಪಸ್ಕದ ಕುರಿಮರಿಯಾಗಿ ವಧಿತನಾದನೆಂಬುದು ಎಷ್ಟು ನಿಜವಲ್ಲವೇ? ಇದು ಎಂತಹ ಚಿತ್ರಣ!

# ಭಾಗ–3
# ಐಗುಪ್ತದಿಂದ ಬಿಡುಗಡೆ

**ವಿಮೋಚನಾಕಾಂಡ 12:37–39, 13:17–22, 14:1–31, ಅರಣ್ಯಕಾಂಡ 33:5–8**

ಐಗುಪ್ತದಲ್ಲಿ (ಸಂಹಾರಕ ದೂತನು) ಚೊಚ್ಚಲ ಮಕ್ಕಳನ್ನು ದಾಟಿಹೋದ ಮಾರನೆಯ ದಿನದಂದು ಫರೋಹನು ಇಸ್ರಾಯೇಲ್ಯರನ್ನು ಕಳುಹಿಸಲು ತೀರ್ಮಾನಿಸಿದ ನಂತರ, ಇಸ್ರಾಯೇಲ್ಯರಿಗಿಂತ ಮೊದಲು ಅಬ್ರಹಾಮ, ಇಸಾಕ ಮತ್ತು ಯಾಕೋಬರಿಗೆ ದೇವರು ವಾಗ್ದಾನ ಮಾಡಿದ ಕಾನಾನ್ ದೇಶದ ಕಡೆಗೆ ತಮ್ಮ ಪ್ರಯಾಣವನ್ನು ಆರಂಭಿಸಲು ರಾಮ್ಸೇಸ್ (ಅಥವಾ ರಾಮಯೆಸ್) ಪಟ್ಟಣಕ್ಕೆ ಕೂಡಿಬಂದರು.

ರಾಮ್ಸೇಸ್ ಎಂಬುದು ಫರೋಹನು ತನಗಾಗಿ ಇಸ್ರಾಯೇಲ್ಯರಿಂದ ಕಟ್ಟಿಸಿಕೊಂಡ "ಉಗ್ರಾಣ ಪಟ್ಟಣಗಳಲ್ಲಿ" ಒಂದಾಗಿತ್ತು ಮಾತ್ರವಲ್ಲದೆ ಇಸ್ರಾಯೇಲ್ಯರನ್ನು ಬಾಧಿಸಿದ ಫರೋಹನು ಸಹ ರಾಮ್ಸೇಸ್ ಎಂಬ ಬಿರುದನ್ನು ಹೊಂದಿದ್ದನು. ಈ ಹೆಸರು ಬಹಳ ಸಮಂಜಸವಾದದ್ದು ಯಾಕೆಂದರೆ ಇಸ್ರಾಯೇಲ್ಯರು ಆ ಪಟ್ಟಣದಿಂದಲೇ ವಿಶ್ರಾಂತಿ ದೊರೆಯುವ ಕಾನಾನ್ ದೇಶದ ಕಡೆಗೆ ತಮ್ಮ ಪ್ರಯಾಣವನ್ನು ಪ್ರಾರಂಭಿಸಬೇಕಿತ್ತು. ಐಗುಪ್ತರು ಸೂರ್ಯನ ಆರಾಧಕರು. ಅವರ ಸೂರ್ಯದೇವರ ಹೆಸರು "ರಾ" ಎನ್ನುವುದಾಗಿತ್ತು. ಹೀಗಾಗಿ ಈ ಫರೋಹನು "ಸೂರ್ಯನ ಪುತ್ರ" ಎಂಬ ಅರ್ಥವುಳ್ಳ "ರಾಮ್ಸೇಸ್" ಎಂಬ ಹೆಸರನ್ನು ತಾನು ಇಟ್ಟುಕೊಂಡಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ ಮತ್ತು ಆತನು ಸ್ವತಃ ತಾನೇ ಎಂತಹ ಮಹಿಮೆಯುಳ್ಳ ಬೆಳಕಾಗಿದ್ದನು.

"ಸೂರ್ಯನ ಮಗು" ಎನಿಸಿಕೊಂಡಿದ್ದ ಈ 2ನೇ ರಾಮ್ಸೇಸನು ಇಸ್ರಾಯೇಲಿನ ಮಕ್ಕಳನ್ನು ಎಷ್ಟು ಕಠಿಣವಾದ ದಾಸತ್ವಕ್ಕೆ ಒಳಪಡಿಸಿದ್ದನೆಂದರೆ ಅವರು ಬಿಡುಗಡೆಗಾಗಿ ಕೂಗಿಕೊಂಡರು ಆಗ ಅಬ್ರಹಾಮ ಇಸಾಕ ಹಾಗೂ ಯಾಕೋಬ್ಯರ ದೇವರಾದ ಅವರ ದೇವರು ಅವರ ಕೂಗನ್ನು ಕೇಳಿ ಅವರನ್ನು ಬಿಡಿಸಿದನು. ಇದರಂತೆಯೇ ದಾಸತ್ವದ ಬಂಧನಕ್ಕೆ ನಮ್ಮನ್ನು ಒಳಪಡಿಸಿ ತನ್ನ ಎರಡೂ ದೊಡ್ಡ ಉಗ್ರಾಣ ಪಟ್ಟಣಗಳನ್ನು ಕಟ್ಟುವಂತೆ ಮಾಡಿ ನಮ್ಮನ್ನು ಬಾಧಿಸುತ್ತಿರುವ ನಮ್ಮ ಫರೋಹನು ಸಹ ಇದೇ ಅರ್ಥಕೊಡುವ ಹೆಸರನ್ನು ಹೊಂದಿರುವುದಾಗಿ ಕಾಣುತ್ತೇವೆ, ಅದಾವುದೆಂದರೆ "**ಲೂಸಿಫರ್**" ಅದರ ಅರ್ಥ "**ಬೆಳಕಿನ ದೂತ**" ಮತ್ತು ಆತನ ಸ್ವತಃ ಪ್ರಕಾಶವುಳ್ಳ ದೇವದೂತನಂತೆ ತನ್ನನ್ನು ತೋರ್ಪಡಿಸಿಕೊಂಡಿದ್ದಾನೆ.

ಬಹುಶಃ ದೇವರ ನಿಜವಾದ ಇಸ್ರಾಯೇಲ್ಯರಲ್ಲಿ ಅನೇಕರು ಪರಲೋಕದ ಕಾನಾನ್ ಕಡೆಗಿರುವ ತಮ್ಮ ಅರಣ್ಯಯಾತ್ರೆಯನ್ನು ಸೈತಾನನ ಈ ದೊಡ್ಡ ಉಗ್ರಾಣ ಪಟ್ಟಣಗಳಲ್ಲಿ ಯಾವುದಾದರೂ ಒಂದರಿಂದ ಪ್ರಾರಂಭಿಸುತ್ತಾರೆ. ನಾವು ಈಗಾಗಲೇ ಸೂಚಿಸಿರುವ ಪಟ್ಟಣವು ಬಹು ನಿರ್ದಿಷ್ಟವಾಗಿ ಪ್ರೊಟೆಸ್ಟೆಂಟ್ ತತ್ವವನ್ನು ಪ್ರತಿನಿಧಿಸುತ್ತದೆ ಮತ್ತು ಉಳಿದಿರುವ ಪೀತೋಮ್ ಪಟ್ಟಣವೂ ಕಥೋಲಿಕ್ ತತ್ವವನ್ನು ಸೂಚಿಸುತ್ತದೆ. ಪೀತೋಮ್

ಎಂಬುದು ಸಹ ಸೂರ್ಯನ ಹೆಸರಿನೊಂದಿಗೆ ಗುರುತಿಸಲಾಗಿದೆ. ಯಾಕೆಂದರೆ ಈ ಹೆಸರು "ತುಮ್ (ಮುಳುಗುವ ಸೂರ್ಯ) ದೇವರ ಪಟ್ಟಣ" ಎಂಬುದನ್ನು ಸೂಚಿಸುತ್ತದೆ. ಇಸ್ರಾಯೇಲ್ಯರ ಆ ಮಹತ್ವವಾದ ಅರಣ್ಯ ಯಾತ್ರೆಯ ಪ್ರಾರಂಭದ ಸ್ಥಳವಾಗಿ ರಾಮ್ಸೇಸ್ ಜೊತೆಗೆ ಪೀತೋಮ್ ಪಟ್ಟಣವನ್ನು ಉಲ್ಲೇಖಿಸಿಲ್ಲದಿರುವುದು, ಕೆಥೋಲಿಕತ್ವದ ದಾಸತ್ವಕ್ಕೆ ಒಳಪಟ್ಟಿದ್ದ ದೇವರ ನಿಜವಾದ ಇಸ್ರಾಯೇಲ್ಯರು ತಮ್ಮ ಪ್ರಯಾಣವನ್ನು ಆರಂಭಿಸುವ ಮೊದಲೇ ಪ್ರೊಟೆಸ್ಟೆಂಟ್‌ರಾಗಿದುದ್ದನ್ನು ಸೂಚಿಸುತ್ತದೆ. ಹೀಗೆ ರಾಮ್ಸೇಸ್‌ಗೆ ಬಂದರು.

ಹೇಗೂ ಗಮನದಲ್ಲಿರಬೇಕಾದ ವಿಷಯವೆಂದರೆ ರಾಮ್ಸೇಸ್ ಪಟ್ಟಣದ ಮೂಲಕ ಐಗುಪ್ತವನ್ನು ಬಿಟ್ಟು ಹೊರಟವರೆಲ್ಲರೂ ಐಗುಪ್ತದಲ್ಲಿರುವಾಗಲೇ ಪಸ್ಕದ ಕುರಿಮರಿಯ ಪ್ರಭಾವದ ಕೆಳಗೆ ಬಂದಿದ್ದರು ಮತ್ತು ಅವರಿಗೆ ಸಂಭವಿಸಿದ ಒಂಭತ್ತು ಬಾಧೆಗಳಿಗಿಂತ ಹತ್ತನೆಯ ಬಾಧೆಯು ಅವರಿಗೆ ಬಿಡುಗಡೆಯನ್ನು ಉಂಟುಮಾಡಿತ್ತು ಮತ್ತು ಇನ್ನೂ ಗಮನಿಸಬೇಕಾದ ಅಂಶವೆಂದರೆ ಹೇಗೆ ಈ ಎರಡು ಪಟ್ಟಣಗಳು ಪೂರ್ಣ ಐಗುಪ್ತ ದೇಶವನ್ನು ಸೂಚಿಸದೆ ಐಗುಪ್ತದಲ್ಲಿರುವ ಎರಡು ಪಟ್ಟಣವನ್ನು ಸೂಚಿಸುತ್ತದೋ ಅಂತೆಯೇ ಸಾಂಕೇತಿಕವಾದ ಐಗುಪ್ತವು ಸಹ ಈ ಎರಡು ಕ್ರೈಸ್ತ ಪಂಗಡಗಳನ್ನು ಸೂಚಿಸುವುದಿಲ್ಲ. ಐಗುಪ್ತವು ಬಹು ನಿರ್ಧಿಷ್ಟವಾಗಿ ಈ ಲೋಕವನ್ನು ಅಥವಾ ಮರಣ ಮತ್ತು ಅಂಧಕಾರದ ರಾಜ್ಯವನ್ನು ಸೂಚಿಸುತ್ತದೆ. ಇದರಲ್ಲಿ ಪಿತೋಮ್ ರಾಮ್ಸೇಸ್ ಪಟ್ಟಣಗಳು (ಕೆಥೋಲಿಕ್ ಮತ್ತು ಪ್ರೊಟೆಸ್ಟಂಟ್ ಪಂಗಡಗಳ ತತ್ವಗಳು) ಸಾಂಕೇತಿಕವಾಗಿ ನಿಜ ಇಸ್ರಾಯೇಲ್ಯರಾದ ನಮ್ಮನ್ನು ಕೆಲಕಾಲ ಬಹು ಅಮೂಲ್ಯ ವಿಷಯಗಳಾದ ಬಿಡುಗಡೆ (ರಕ್ಷಣೆ) ಮತ್ತು ಪ್ರತಿಷ್ಠೆ ಬಗೆಗೆ ಯೋಚಿಸುವುದಕ್ಕೂ ಸಮಯ ಸಿಗದ ಹಾಗೆ ಮಗ್ನವಾಗಿರುವಂತೆ ಮಾಡುವವುಗಳಿಗೆ ಇವು ಸೂಚನೆಯಾಗಿವೆ. ದಾಸತ್ವದಲ್ಲಿ ಇರುವವರಿಗೆ ಇದಕ್ಕಿಂತ ಹೆಚ್ಚೇನೂ ಮಾಡುವಂತಿರಲಿಲ್ಲ. ಐಗುಪ್ತದಿಂದ (ಇಸ್ರಾಯೇಲ್ಯರ) ವಿಮೋಚನೆಯು ದೇವರಿಂದ ನೆರವೇರಿತು. ಹಾಗೆಯೇ ನಿಜರೂಪದಲ್ಲಿ, ದೇವರು ಎಲ್ಲವನ್ನೂ ಒಳಿತನ್ನಾಗಿ ಪರಿವರ್ತಿಸುವ ತನ್ನ ಸಾಮರ್ಥ್ಯದ ಮೂಲಕ ಹಾಗೂ ಪಸ್ಕದ ಕುರಿಯ ರಕ್ತಧಾರೆಯ ಮೂಲಕ ನಮ್ಮ ಬಿಡುಗಡೆ, ನಮ್ಮ ವಿಮೋಚನೆಯನ್ನು ನೆರವೇರಿಸಿದರು. ಇನ್ನೊಮ್ಮೆ ನಾವು ಮತ್ತೂ ನೆನಪಿಗೆ ತಂದುಕೊಳ್ಳಬೇಕಿರುವ ವಿಷಯವೆಂದರೆ, (ಪಸ್ಕದ ಕುರಿಯ) ರಕ್ತದ ಅಶ್ರಯಕ್ಕೆ ಬಂದುದು ಇಸ್ರಾಯೇಲ್ಯರಿಗೆ ಕೇವಲ ಐಗುಪ್ತದಿಂದ ಬಿಡುಗಡೆಗೆ ಮಾತ್ರವಾಗಿದ್ದು ಅವರನ್ನು ವಾಗ್ಧತ್ತ ದೇಶಕ್ಕೆ ಸೇರಿಸುವಂತದ್ದಾಗಿರಲಿಲ್ಲ. ಇದರಂತೆಯೇ ನಿಜರೂಪವಾಗಿರುವ ಆತ್ಮೀಕ ಇಸ್ರಾಯೇಲ್ಯರ ಸಂಗತಿಯೂ ಸಹ. (ಪಸ್ಕದ ಕುರಿಯ) ರಕ್ತದ ಮೂಲಕವಾಗಿ ಬಿಡುಗಡೆಯ ಕಾರ್ಯವನ್ನು ನೆರವೇರಿಸಿದ ದೇವರ ಮೇಲಿನ ನಿರಂತರವಾದ ನಂಬಿಕೆಯು ಅವರು ಕಾನಾನ್ ದೇಶದೊಳಗೆ ಪ್ರವೇಶವನ್ನು ಪಡೆದಿದ್ದಾರೆಂಬುದಕ್ಕೆ ರುಜುವಾತಾಗಿತ್ತು. ಇಸ್ರಾಯೇಲ್ಯರು ರಕ್ತವನ್ನು ಮನೆ ಬಾಗಿಲಿನ ಕಂಬ ಹಾಗೂ ನಿಲುವು ಪಟ್ಟಿಗಳಿಗೆ ಹಚ್ಚಿದುದು ಪ್ರೋಕ್ಷಣ ರಕ್ತದ ಮೇಲಿನ ಅವರ ನಂಬಿಕೆಯನ್ನು ವ್ಯಕ್ತಪಡಿಸುತ್ತದೆ. ಇದು ಅವರ "ವಿಧೇಯತೆ" ಎಂದು ದೇವರಿಂದ ಪರಿಗಣಿಸಲ್ಪಟ್ಟಿತ್ತು. ಈ ರೀತಿಯಲ್ಲಿ ಅವರ ನಂಬಿಕೆಯು ವ್ಯಕ್ತವಾಗದಿದ್ದಲ್ಲಿ, ಇದು ಅವರ "ಅವಿಧೇಯತೆ" ಎಂದು ದೇವರಿಂದ ಪರಿಗಣಿಸಲ್ಪಡುತ್ತಿತ್ತು.

ಅವರು ಧೂಳಿಯಾಗಿದ್ದಾರೆಂಬ ಅವರ ಸ್ಥಿತಿಯನ್ನು ದೇವರು ನೆನಸಿ ಸ್ವಲ್ಪ ಕಾಲ ಅವರ ಮನವೊಲಿಕೆಗೆ ಪ್ರಯತ್ನಿಸಿದರೂ ಪದೇ ಪದೇ ಸಂಶಯಪಟ್ಟು ದೇವರನ್ನು ಹೌದು, ಅವರ ವಿಮೋಚಕನಾದ ದೇವರನ್ನು ಮರೆತದ್ದರಿಂದ ಆತನು ಕಾಲಕ್ರಮೇಣ ಅವರ ವಿಷಯವಾಗಿ ತನ್ನ ಕಡೆ ಮನತಿರುಗಿಸುವ ಪ್ರಯತ್ನವನ್ನು ನಿಲ್ಲಿಸಿಬಿಟ್ಟನು. ದೇವರ ಮೇಲಿನ ಅವರ ಸಂಶಯ ಅಪನಂಬಿಕೆ ಹಾಗೂ ದೇವರ ಮರೆಯುವಿಕೆ – ಇವುಗಳು ಅವರ "ಅವಿಧೇಯತೆ" ಎಂದು ಆಗ ದೇವರಿಂದ ಪರಿಗಣಿಸಲ್ಪಟ್ಟಿತ್ತು.

ಇದಾದ ನಂತರವೇ ದೇವರು ಅವರನ್ನು ಹಿಂದಿರುಗಿ ಐಗುಪ್ತಕ್ಕಲ್ಲ ಬದಲಾಗಿ ಘೋರ ಅರಣ್ಯಕ್ಕೆ ನಾಶವಾಗಲು ಕಳುಹಿಸಿದನು. ಆಹಾ! ಪ್ರಿಯ ಮಿತ್ರರೇ ಅಪೋಸ್ತಲ ಪೌಲನು ಸಾರಿ ಹೇಳಿರುವ ಈ ಮಾತನ್ನು ನಾವು ಚೆನ್ನಾಗಿ ನೆನಪಿನಲ್ಲಿಡೋಣ – "ಅವರಿಗೆ ಸಂಭವಿಸಿದ ಈ ಸಂಗತಿಗಳು (ಛಾಯಾರೂಪ) ನಿದರ್ಶನವಾಗಿವೆ, ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದವೆ" (1ಕೊರಿಂಥ 10:11) ದೇವರು ಹೇಗೂ ನಮ್ಮನ್ನು ಸಹಿಸುವನೆಂದೂ, ಆತನು ನಮಗಾಗಿ ಮಾಡಿದ ಕಾರ್ಯಗಳನ್ನು ಸಾಧಾರಣವೆಂದು ಮತ್ತು ಸಾಮಾನ್ಯವಾದವುಗಳೆಂದು ಎಣಿಸದೇ ಇರೋಣ. ನಾವು ಈ ಹಿಂದೆ ಪಾಪಿಗಳಾಗಿದ್ದಾಗಲೇ ದೇವರು ನಮ್ಮೊಂದಿಗೆ ವ್ಯವಹರಿಸಿದ್ದಾರೆಂದು ಮತ್ತು ಯೇಸು ಕ್ರಿಸ್ತನು ಸುರಿಸಿದ ರಕ್ತದ ಮೂಲಕ ನಮಗೆ ಬಿಡುಗಡೆಯನ್ನು ಕೊಡುತ್ತಿದ್ದಾರೆಂದೂ ಮತ್ತು ನಾವು ದೇವರ ಮೇಲಿನ ಗೌರವ ಮತ್ತು ನಂಬಿಕೆಯ ವಿಷಯದಲ್ಲಿ ಸಣ್ಣ ಪ್ರಮಾಣದಲ್ಲಿಯಾದರೂ ಅಭಿವೃದ್ಧಿಯನ್ನು ತೋರಿಸದಿದ್ದರೂ ಆತನು ನಮ್ಮ ವಿಷಯದಲ್ಲಿ ನಿರಂತರವಾಗಿ ಹಿಂದೆ ಇದ್ದಂತೆಯೇ ಮುಂದುವರಿಯುವರೆಂದು ಭಾವಿಸದೆ ಇರೋಣ. ಈ ವಿಷಯವನ್ನು ಬಹಳ ಸೂಕ್ಷ್ಮವಾಗಿ ಗಮನಿಸುವಾಗ ಪ್ರಕಟವಾಗುವ ಸಂಗತಿಯೇನೆಂದರೆ ದೇವರು ನಮಗೆ ಈಗಾಗಲೇ ಮಾಡಿರುವುದೆಲ್ಲವುಗಳಿಗೆ ನಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಲು ಇರುವ ಏಕೈಕ ಮಾರ್ಗವೆಂದರೆ ಅದು ನಮ್ಮ ನಂಬಿಕೆಯ ಅಭಿವ್ಯಕ್ತದಿಂದಲೇ ನಿಸ್ಸಂಶಯವಾಗಿ ಅಪೋಸ್ತಲನು – "ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ" (ಇಬ್ರಿಯ 11:6) ಎಂದು ಹೇಳಿರುವುದು ಈ ಅರ್ಥದಲ್ಲೇ. ದೇವರ ಮೇಲೆ ಹಾಗೂ ನಮ್ಮ ನಂಬಿಕೆಯನ್ನು ಬಲಪಡಿಸಿಕೊಳ್ಳಲು ನಮಗಿರುವ ಈ ಒಂದೇ ವಿಧಾನವನ್ನು ಅನುಸರಿಸದಿದ್ದರೂ ದೇವರು ತನ್ನ ಆಶೀರ್ವಾದವನ್ನು ದಯಪಾಲಿಸುವುದನ್ನು ಮುಂದುವರಿಸುತ್ತಾನೆಂದು ಭಾವಿಸುವುದು ನ್ಯಾಯಸಮ್ಮತವೇ?.

ಇಸ್ರಾಯೇಲ್ಯರೆಲ್ಲರೂ ವಾಗ್ದತ್ತ ದೇಶದ ಕಡೆಗೆ ತಮ್ಮ ಪ್ರಯಾಣವನ್ನು ಪ್ರಾರಂಭಿಸಲು ಮತ್ತು ದೇವರು ದಯಪಾಲಿಸುವ ವಿಮೋಚನೆಯನ್ನು ಅಂಗೀಕರಿಸಲು ಸಿದ್ಧರಾಗಿದ್ದರೆಂದು ನಮಗೆ ಕಂಡುಬರುತ್ತದೆ. ಅದರಂತೆ ಅವರು ರಾಮ್ಸೇಸ್ ಪಟ್ಟಣದಲ್ಲಿ ಸೇರಿ ಸುಕ್ಕೋತಿಗೆ ಪ್ರಯಾಣ ಮಾಡಿದರು. ಸುಕ್ಕೋತ್ ಎಂಬುದರ ಅರ್ಥ "ಗುಡಾರ". ಇದು ಕಾನಾನ್ ಕಡೆಗಿರುವ ಅವರ ಪ್ರಯಾಣವು ದಾಸತ್ವದಿಂದ ಬಿಡುಗಡೆ ಮತ್ತು ಸ್ವಾತಂತ್ರ್ಯವನ್ನು ನೀಡುತ್ತಿದ್ದರು ಮತ್ತೊಂದು ಕಡೆಯಿಂದ ಐಗುಪ್ತದಲ್ಲಿ ದೊರೆಯುತ್ತಿದ್ದ ಹಲವು ಬಗೆಯ

ಸೌಕರ್ಯಗಳು ಅಗತ್ಯ ವಸ್ತುಗಳನ್ನು ಅವರು ಸ್ವತಃ ತ್ಯಜಿಸುವುದಕ್ಕೆ ಕರೆ ನೀಡುತ್ತಿದೆ. ಅಂಶವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಅವರು ವಾಗ್ದತ್ತ ದೇಶಕ್ಕೆ ಬಂದು ಸೇರುವವರೆಗೂ ಛಾವಣಿಯುಳ್ಳ ಮನೆಗಳ ಆಶ್ರಯವನ್ನು ಅನುಭವಿಸುವಂತಿರಲಿಲ್ಲ. ಇದರಲ್ಲಿಯೂ ಸಹ ದೇವರ ನಿಜವಾದ ಇಸ್ರಾಯೇಲ್ಯನಿಗೆ ಸಲಹೆಯುಂಟು. ಏನೆಂದರೆ ಐಗುಪ್ತ ಮತ್ತು ಕಾನಾನ್ ನಡುವಿನ ಯಾತ್ರೆಯ ಅವನ ಪ್ರಯಾಣದ ಮಾರ್ಗದಲ್ಲಿನ ಕಠಿನ ಪರಿಸ್ಥಿತಿ ಹಾಗೂ ಪ್ರತಿಕೂಲ ಹವಾಮಾನಗಳಿಂದ ಆತನಿಗೆ ಪಟ್ಟಣದ ಅಥವಾ ಮನೆಯ ಯಾವ ರಕ್ಷಣೆ ದೊರೆಯುವಂತಿಲ್ಲ ಎಂಬುದೇ. ಅವನು ನಂಬಿಗಸ್ತನಾಗಿ ದೇವರು ತೋರಿಸಿದ ಮಾರ್ಗದಲ್ಲಿ ಪ್ರಯಾಣಿಸುವಾಗ ಆತನಿಗಿರುವ ಏಕೈಕ ರಕ್ಷಣೆಯೆಂದರೆ "ಆ ಚಿಕ್ಕ ಗುಡಾರವೇ" ಅದನ್ನು ಸದಾ ದೇವರು ಕಾಯುವನು (ಮತ್ತು ಆತನು, ದೇವರು ಎಂದೂ ನಿದ್ರಿಸುವುದಿಲ್ಲ ತೂಕಡಿಸುವುದಿಲ್ಲ) ಆಕಾಶವೇ ಆತನ ತಲೆಯ ಮೇಲಿನ ರಕ್ಷಣಾ ಮಂಟಪ. ಖಂಡಿತವಾಗಿ, ಯಾವಾತನು ಹೀಗೆ ತನ್ನ ಮನೆ ಅದರ ಸೂರಿನಡಿಯ ರಕ್ಷಣೆಯನ್ನು ನಿರಾಕರಿಸಿ ಅಡವಿಯ ಪ್ರತಿಕೂಲ ಪರಿಸ್ಥಿತಿಗಳಿಗೆ ತನ್ನನ್ನು ಒಡ್ಡುತ್ತಾನೋ ಅವನು ತನ್ನಲ್ಲಿ ದೇವರ ಕೃಪೆಯು ಅಪರಿಮಿತವಾದ ಕಾರ್ಯ ಮಾಡಲು ಅನುವು ಮಾಡಿಕೊಡುತ್ತಾನೆ. ಈ ಕೃಪೆಗೆ ಅಡ್ಡಿಯಾಗಲೀ ಅಥವಾ ಪ್ರತಿಬಂದವಾಗಲೀ ಮಾಡಬಾರದು. ಅದಕ್ಕೆ ಅಡ್ಡಿಯಾದಲ್ಲಿ ನಮಗೆ ತೊಂದರೆ! ಇಂತಹ ಪರಿಸ್ಥಿತಿಗಳಿಗೆ ಒಡ್ಡಿಕೊಳ್ಳುವುದು ದೇವರ ಕೃಪೆಗೆ ತಮ್ಮನ್ನು ಒಡ್ಡಿಕೊಂಡಂತಾಗುತ್ತದೆ.

ಒಂದೇ ಬಗೆಯ ಎರಡು ಸಸ್ಯಗಳನ್ನು ತೆಗೆದುಕೊಳ್ಳಿ, ಒಂದನ್ನು ಬೆಳಕು ಹಾಗೂ ಶುದ್ಧ ಗಾಳಿ ದೊರಕದ ನೆಲಮಾಳಿಗೆಯಲ್ಲೂ ಇನ್ನೊಂದನ್ನು ತೆರೆದ ಉದ್ಯಾನದಲ್ಲೂ ಬೆಳೆಯುವಂತೆ ಮಾಡಿ. ಕೆಲವು ವಾರಗಳ ನಂತರ ಇವೆರಡರ ನಡುವಿನ ವ್ಯತ್ಯಾಸವನ್ನು ಗಮನಿಸಿ, ಒಂದು ಆರೋಗ್ಯವಾಗಿಯೂ ದೃಢವಾಗಿಯೂ ಇರುವುದು. ಮತ್ತೊಂದು ಅಲ್ಪಾರೋಗ್ಯವಾಗಿಯೂ ದುರ್ಭಲವಾಗಿಯೂ ಇರುವುದಾಗಿ ಕಂಡುಬರುತ್ತದೆ. ನಿಜ ನೆಲಮಾಳಿಗೆಯಲ್ಲಿ ಬೆಳೆದ ಸಸ್ಯವು ಗಾಳಿ ಮಳೆ ಹಾಗೂ ಕೆಟ್ಟ ಚಂಡಮಾರುತಗಳಿಂದ ಸಂರಕ್ಷಿಸಲ್ಪಟ್ಟಿದ್ದಾದರೂ ಅದೇ ಕಾರಣಗಳಿಂದ ಅದು ದೃಢವಾಗಿ ಬೆಳೆಯಲಾಗಲಿಲ್ಲ ಎಂಬುದು ಸತ್ಯ. ಇನ್ನೊಂದೆಡೆ, ಅಸಹಜ ಸಂರಕ್ಷಣೆಯಿಲ್ಲದೆ ಸೂರ್ಯನ ಬೆಳಕಿನಲ್ಲಿ ಸಹಾಯ ಪಡೆದು ಬೆಳೆದು ಕಠಿಣ ಸ್ಥಿತಿಯನ್ನು ಎದುರಿಸುತ್ತಾ ಬಂದ ಸಸ್ಯವು ದೃಢವಾಗುತ್ತಾ ಬಂದಿತು.

ಕನಿಷ್ಠ ಪಕ್ಷ ನನಗೆ, ಸುಕ್ಕೋತ್ ಅದರ ಅರ್ಥ "ಗುಡಾರಗಳು" ಎಂಬುದು ಕಠಿಣಸ್ಥಿತಿಗಳಿಗೆ ಒಡ್ಡಿಕೊಳ್ಳುವುದು ಎಂಬ ಆಲೋಚನೆಯನ್ನು ಕೊಡುತ್ತದೆ. ಏಕೆಂದರೆ, ಪ್ರಕೃತಿಯ ವೈಪರೀತ್ಯಗಳಿಂದ ಸಹಜವಾದ ರಕ್ಷಣೆಯನ್ನು ಕಟ್ಟಡ ಮನೆ ಮುಂತಾದವುಗಳು ನೀಡುವಂತೆ ಗುಡಾರವು ದೊರಕಿಸಲಾರದು. ನಿಜ ಇಸ್ರಾಯೇಲ್ಯನಿಗೆ ಈ "ಗುಡಾರ ಜೀವಿತವು" – ಕಠಿಣ ಸ್ಥಿತಿಗೆ ಎದುರಾದ ಅಂದರೆ ಅಸಹಜ ರಕ್ಷಣೆ ದೊರಕದೆ ಬೆಳೆದ ಸಸ್ಯಕ್ಕೆ ಎದುರಾದ ಆ ಪರಿಸ್ಥಿತಿಯನ್ನು ಹೋಲುವ ಅರ್ಥವನ್ನೇ ಕೊಡಬೇಕು. ಈಗಾಗಲೇ ಸಲಹೆ

ಮಾಡಿರುವಂತೆ, ಈ ಎದುರಾಗುವಿಕೆಯು ಕೇವಲ ಪ್ರಕೃತಿಯ ವೈಪರೀತ್ಯಗಳಿಗೆ; ಮಾತ್ರವಲ್ಲದೆ ಅದೇ ಸಮಯದಲ್ಲಿ ಅದು ದೇವರ ಕೃಪಾನುಗ್ರಹಗಳಿಗೂ ಸಹ ಅನುವು ಮಾಡಿಕೊಡುವುದು ಮನೆಯ ಆಶ್ರಯವಿಲ್ಲದ ಮತ್ತು ಕಠಿಣ ಸ್ಥಿತಿಗೆ ಎದುರಾಗುವುದೇ ದೇವ ಭಕ್ತನನ್ನು ನಿಜವಾಗಿ ಧೃಡವಾಗುವಂತೆ ಮಾಡುವುದು. ತನ್ನ ಮೇಲೆ ಬೀಸುವ ಬಿರುಗಾಳಿಯಿಂದ ಮರವು ತನ್ನ ಬೇರುಗಳನ್ನು ನೆಲದಲ್ಲಿ ಮತ್ತಷ್ಟು ಆಳವಾಗಿ ಇಳಿಯುವಂತೆ ಮಾಡಿ ಅದು ಗಟ್ಟಿಮುಟ್ಟಾಗಿ ಬೆಳೆಯುವಂತೆ ಮಾಡುತ್ತದೆ. ಆದರೂ ನಾವು ಮನಸ್ಸಿನಲ್ಲಿ ಇಡಬೇಕಾದುದೇನೆಂದರೆ – ಸೂರ್ಯನ ಪ್ರಕಾಶವು ನಿಜವಾಗಿ ಬಿರುಗಾಳಿಯನ್ನು ಎದುರಿಸಿ ನಿಲ್ಲುವ ಸಾಮರ್ಥ್ಯವನ್ನು ಮರಕ್ಕೆ ದೊರಕಿಸುವುದು. ನಾವು ಸಹ ಧೃಡವಾಗುತ್ತಾ ಬೆಳೆಯುವುದು ಕೆಟ್ಟ ಸಂಗತಿಗಳನ್ನು ಪ್ರತಿರೋಧಿಸುವ ಮೂಲಕವೇ ಆದರೂ ಆ ಪ್ರತಿರೋಧಿಸುವ ಸಾಮರ್ಥ್ಯವನ್ನು ದೇವರು ನಮಗೆ ನೀಡುವುದು ಆತನ ಪವಿತ್ರಾತ್ಮದ ಮುಖಾಂತರವಾಗಿಯೇ.

ನಾವು ಯಾವ ಆಸಕ್ತಿಯಿಂದ ಈಗ ನಮ್ಮ ಯಾತ್ರೆಯನ್ನು ಪ್ರಾರಂಭಿಸಿದ್ದೇವೋ ಅದು ಬಹುಕಾಲ ಮುಂದುವರಿಯಲಾಗದು. ಅದು ಅನೇಕಸಾರಿ ನಮ್ಮನ್ನು ಅರಣ್ಯದ ಅಂಚಿಗೆ ಮಾತ್ರ ಕೊಂಡೊಯ್ಯುತ್ತದೆ. ಇದರಂತೆಯೇ ಶಾರೀರಿಕ ಇಸ್ರಾಯೇಲ್ಯರ ವಿಷಯದಲ್ಲಿಯೂ ಸಹ ಆಯಿತು – ಅವರು "ಸುಕ್ಕೋತಿನಿಂದ ಹೊರಟು ಅರಣ್ಯದ ಅಂಚಿನಲ್ಲಿರುವ ಎತಾಮಿನಲ್ಲಿ ಇಳುಕೊಂಡರು" (ಅರಣ್ಯಕಾಂಡ 33:6). ಇಸ್ರಾಯೇಲ್ಯರು ಮೊದಲು ಉತ್ತರ ದಿಕ್ಕಿನ ಕಡೆಗೆ ಹೊರಟು ನಂತರ ಪೂರ್ವದ ಕಡೆಗೆ ಮತ್ತು ಎತಾಮಿಗೆ ಬಂದರು. ಅಲ್ಲಿಂದ ಅವರು ಇದ್ದಕ್ಕಿದ್ದಂತೆಯೇ ದಕ್ಷಿಣದ ಕಡೆಗೆ ತಿರುಗುವಂತೆ ನಿರ್ದೇಶನವಾಯಿತು. ಬಹು ಸಹಜವಾಗಿ ಅವರು ಮಾಡಬಹುದಾಗಿದ್ದ ಕಾರ್ಯವೆಂದರೆ – ಅವರು ಪೂರ್ವಾಭಿಮುಖವಾಗಿ ಮುಂದುವರಿದು ಕೆಂಪು ಸಮುದ್ರದ ಉತ್ತರಕ್ಕಿರುವ ಸಣ್ಣ ತಗ್ಗನ್ನು ದಾಟಿದಲ್ಲಿ ನೇರವಾಗಿ ತಮ್ಮ ಗುರಿಯಾದ ಕಾನಾನ್ ದೇಶಕ್ಕೆ ಬಹು ಸರಾಗವಾಗಿ ಸೇರುವಂತೆ ಆಗಬಹುದಿತ್ತು. ಈ ದಾರಿಯನ್ನು ಅನುಸರಿಸುವುದು ಖಂಡಿತವಾಗಿ ಅವರಿಗೆ ಬಹು ಅಸಮಂಜಸವಾಗಿ ಕಂಡುಬರುತ್ತಿತ್ತು. ಯಾಕೆಂದರೆ ಅವರಿಗೆ ಇದು ಫರೋಹನನ ಆಧಿಪತ್ಯದಿಂದ ದೂರ ಕೊಂಡೊಯ್ಯುವ ಬದಲು ವಾಸ್ತವವಾಗಿ ಅದು ಅವರನ್ನು ಹತ್ತಿರಕ್ಕೆ ತರುತ್ತಿತ್ತು. ಮಾತ್ರವಲ್ಲದೆ ಅವರು ತಮಗೂ ಮತ್ತು ವಾಗ್ಧತ್ತ ದೇಶಕ್ಕೂ ನಡುವೆ ಇದ್ದ ಅಡೆತಡೆಗಳನ್ನು ಹೆಚ್ಚಾಗುವಂತೆ ಸಹ ಮಾಡಿಕೊಳ್ಳುತ್ತಿದ್ದರು. ಆದರೂ ಈ ತಿರುಗುವಿಕೆಯು ದೇವರ ನಿರ್ದೇಶನವಾಗಿತ್ತು. ಎಂಥಹ ಆಶ್ಚರ್ಯವಿದು! ವಾಕ್ಯವಿವರಣೆ ಹೇಳುವುದೇನೆಂದರೆ "ಅವರು ಸುಕ್ಕೋತಿನಿಂದ ಪ್ರಯಾಣ ಮಾಡಿ ಮರಳುಕಾಡಿನ ಅಂಚಿನಲ್ಲಿರುವ ಏತಾಮಿನಲ್ಲಿ ಇಳಿದುಕೊಂಡರು. ಯೆಹೋವನು... ದಾರಿ ತೋರಿಸುವುದಕ್ಕೆ ... ಅವರ ಮುಂಭಾಗದಲ್ಲಿ ಹೋದನು" (ವಿಮೋಚನಾಕಾಂಡ 13:20, 21)

ಆತ್ಮೀಕ ಇಸ್ರಾಯೇಲ್ಯರಿಗೆ ಏತಾಮ್ ಸ್ಥಳದಲ್ಲಿ ದೇವರು ನಿರ್ದೇಶಿಸುವ ರೀತಿಯಂತೆ ಹಲವು ತಿರುವಿನ ಸಂಗತಿಗಳು ಇರಬೇಕು. ಅವು ಶರೀರವು ಅಪೇಕ್ಷಿಸುವಂತಹ ಕನಿಷ್ಠ ಪ್ರತಿರೋಧದಿಂದ ಕೂಡಿ ಭಾರೀ ಮುನ್ನಡೆ ಸಾಧಿಸುವಂತಹ ದಿಕ್ಕಿನ ಕಡೆಗಲ್ಲದೆ, ಅವು ಬಹು

ವ್ಯತಿರಿಕ್ತವಾದ ಹಾಗೂ ದೇವರ ಕೃಪಾ ಸಾಮರ್ಥ್ಯಗಳು ವಿಶೇಷವಾಗಿ ಪ್ರದರ್ಶನವಾಗುವಂತಹ ದಿಕ್ಕಿಗೆ ತಿರುಗಿಸುವಂತ ಸಂಗತಿಗಳು ಆಗಿರಬೇಕು. ನಾವು ನಮ್ಮದೇ ಆದ ದಾರಿಯನ್ನು ನಾವು ಆರಿಸಿಕೊಳ್ಳದೆ ಕೆಲವು ಸಾರಿ ಅದು ಬಹು ಅಪಾಯಕಾರಿಯಾಗಿರುವಂತೆ ಕಂಡರೂ ಸಹ ದೇವರು ನಮ್ಮ ಮಾರ್ಗಗಳನ್ನು ನಿರ್ದೇಶಿಸಲು ಅನುವು ಮಾಡಿಕೊಡಬೇಕು. ಮನುಷ್ಯರ ದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು. ಅದು ಕಟ್ಟಕಡೆಗೆ (ಸಮಗ್ರ ಮತ್ತು ಪೂರ್ಣ ಬಿಡುಗಡೆಯನ್ನುಂಟು ಮಾಡದ) ಮರಣ ಮಾರ್ಗವೇ. (ಜ್ಞಾನೋಕ್ತಿ 14:12)

ಸಹಜವಾಗಿ ನಮ್ಮ ಶರೀರವು ಅನುಸರಿಸುವುದು ಕನಿಷ್ಠ ಪ್ರತಿರೋಧದ ಮಾರ್ಗ ಹಿಡಿಯುವ ಪ್ರವೃತ್ತಿಯನ್ನು ಎಂಬುದು ನಿಸ್ಸಂಶಯ. ಈ ಮಾರ್ಗದಿಂದ ದೇವರಿಗೆ ಮಹಿಮೆ ಉಂಟಾಗಲಾರದು. ಇಲ್ಲವೇ ನಮ್ಮ ನಂಬಿಕೆಯನ್ನು ಋಜುವಾತು ಪಡಿಸಲಾಗದು. ನಮಗೆ ಸಮುದ್ರದಾಚೆಯ ದಡ ಕಾಣುವಾಗ ನಂಬಿ ಭರವಸೆಯಿಂದಿರುವುದು ಸುಲಭ. ಆದರೆ ಮಂಜು ಮುಸುಕಿ ದಾರಿ ಕಾಣದಿರುವಂತಹ ಪರಿಸ್ಥಿತಿಯಲ್ಲಿ ಒಂದು ನಾವು ಹೆದರಿಕೊಳ್ಳಬೇಕು ಅಥವ ನಮ್ಮ ನಂಬಿಕೆಯನ್ನು ತೋರಿಸಬೇಕು. ಸೂರ್ಯ ಪ್ರಕಾಶಿಸುವ ದಿನದಲ್ಲಿ ಸುಮಾರು ನಾಲ್ಕುವರೆ ಮೈಲಿ ಅಗಲದ ನ್ಯೂಯಾರ್ಕ್ ಕೊಲ್ಲಿಯನ್ನು ಸ್ಟೇಟನ್ ದ್ವೀಪದ ಸಾಗು ದೋಣಿಯಲ್ಲಿ ದಾಟುವಾಗ ಒಬ್ಬನು ನಾವಿಕನ ಕೌಶಲ್ಯವಾಗಲೀ ಅತನ ಸಾಮರ್ಥ್ಯದ ಬಗ್ಗೆ ಯೋಚಿಸುವುದು ವಿರಳ. ಆದರೆ ಮುಂದೆ ಕಾಣದಷ್ಟು ದಟ್ಟ ಮಂಜು ಆವರಿಸಿ ಎದುರಿನಲ್ಲಿರುವ ಬಹಳ ಕಾಲದಿಂದಲೂ ಚಿರಪರಿಚಿತವಾದ ಭೂ ಗುರುತುಗಳು ಕಾಣದಂತಾದಾಗ ಬಹುಶಃ ಆಗಲೇ ಹೌದು ಇಂತಹ ಸಂದರ್ಭದಲ್ಲಿಯೇ ನಾವು ನಾವಿಕನನ್ನು ಮತ್ತು ಬಯಸಿದ ನೆಮ್ಮದಿಯ ರೇವಿಗೆ ಸುರಕ್ಷಿತವಾಗಿ ತಲುಪಿಸುವ ಆತನ ಶಕ್ತಿ ಸಾಮರ್ಥ್ಯವನ್ನು ಪ್ರಶಂಸಿಸುತ್ತೇವೆ. ಅಂತಹ ಸಂದರ್ಭದಲ್ಲಿ ನಾವು ಏನು ತಾನೇ ಮಾಡಲು ಸಾಧ್ಯ? ಖಂಡಿತವಾಗಿಯೂ ಏನೂ ಮಾಡಲು ಸಾಧ್ಯವಿಲ್ಲ! ನಮ್ಮ ಇರುಸು ಮುರಿಸುವಿಕೆಯಾಗಲೀ ಹೆದರಿಕೆಯಾಗಲೀ ಇಲ್ಲವೇ ನಮ್ಮ ಚಡಪಡಿಸುವಿಕೆಯಾಗಲೀ ನಮಗೆ ಕಿಂಚಿತ್ತೂ ಸಹಾಯ ಮಾಡಲಾರವು. ನಾವಿಕನು ನಮ್ಮನ್ನು ರೇವಿಗೆ ಮುಟ್ಟಿಸುವವರೆಗೂ ನಾವು ಸುಮ್ಮನೆ ನಿಂತಿರಬೇಕು. ನಮ್ಮ ಆತ್ಮೀಕ ಪ್ರಯಾಣದಲ್ಲಿಯೂ ಸಹ ಇದು ಎಷ್ಟು ಸತ್ಯವಲ್ಲವೇ? ದೇವರ ಕೃಪಾಪಾಲನೆಯಲ್ಲಿರುವಾಗ ನಾವು ಕಷ್ಟದ ಪರಿಸ್ಥಿತಿಗಳಿಂದ ನಮ್ಮನ್ನು ಬಿಡಿಸಿಕೊಳ್ಳಲು ಏನೂ ಮಾಡಲು ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭಗಳನ್ನು ನಾವು ಹಾಗೆಯೇ ಇರುವುದಕ್ಕೆ ಬಿಟ್ಟು ದೇವರು ಪ್ರವೇಶಿಸುವಂತೆ ಬಿಟ್ಟುಬಿಡಬೇಕು. ನಮ್ಮ ಅಸಹಾಯಕತೆಯ ಪರಮಾವದಿಯೇ ದೇವರಿಗೆ ಅವಕಾಶವು. ಇದರಂತೆ ದೇವರು ಇಸ್ರಾಯೇಲ್ಯರನ್ನು ಸಹ ಇಂತಹ ಒಂದು ಅಸಹಾಯಕ ಸ್ಥಿತಿಗೆ ಬರಮಾಡಿದನು. ಏತಾಮ್ ಸ್ಥಳದಲ್ಲಿ ಅವರ ಪ್ರಯಾಣ ಮಾರ್ಗವನ್ನು ಬದಲಿಸಿ ಇಳಿಮುಖವಾಗಿ ನಡೆಸುತ್ತಾ "ಜಂಬು ಹುಲ್ಲು ಬೆಳೆಯುವ ಸ್ಥಳ" ಎನಿಸಿಕೊಳ್ಳುವ ಪಿ–ಹಾ–ಹೀರೋತ್ ಸ್ಥಳಕ್ಕೆ ಅಂದರೆ ಶಾರೀರಿಕವಾಗಿ ಅವರು ನಿಜವಾಗಿಯೂ ಸಿಕ್ಕಿಹಾಕಿಕೊಳ್ಳುವ ಸ್ಥಳಕ್ಕೆ ಅವರನ್ನು ಬರಮಾಡಿದನು. ಆ ಸ್ಥಳವು ಅವರನ್ನು ಐಗುಪ್ತದ ದಾಸತ್ವದಿಂದ

ಸಂಪೂರ್ಣವಾದ ಬಿಡುಗಡೆ ದೊರಕಿಸುವ ಬದಲು ಅವರ ಪ್ರಯಾಣದ ಆರಂಭದಲ್ಲಿ ಇದ್ದುದಕ್ಕಿಂತಲೂ ಬಹು ಘೋರವಾದ ಇಕ್ಕಟ್ಟಿನಲ್ಲಿ ಸಿಕ್ಕಿಕೊಳ್ಳುವಂತೆ ಅವರನ್ನು ಮಾಡಿತು. ಇಂತಹ ಸ್ಥಿತಿಯಲ್ಲಿ ಅವರು ಈಗಾಗಲೇ ತಮಗಾಗಿ ಬಹು ವಿಶೇಷ ಕಾರ್ಯವನ್ನು ನಡೆಸಿದ ದೇವರನ್ನು ಅವರು ನೆನಸಿಕೊಂಡರೋ? ಇಲ್ಲ! ಬದಲಿಗೆ ಅವರು ಗುಣಗುಟ್ಟಿದರು ಮತ್ತು ಗೋಳಾಡಿದರು. ಅವರ ಮುಂದಿರುವ ಕೆಂಪು ಸಮುದ್ರವನ್ನು ಹಿಂದಿರುವ ಐಗುಪ್ತರು ಮಾತ್ರ ಕಂಡರು. ಆದರೆ ಪಾರಾಗುವ ಮಾರ್ಗವನ್ನು ಕಾಣಲಿಲ್ಲ.

ದೇವರು ಆತ್ಮೀಕ ಇಸ್ರಾಯೇಲ್ಯರಾದ ನಾವು ಅದೆಷ್ಟು ಸಾರಿ ಜಂಬು ಹುಲ್ಲುಗಳಿಂದ ಆವರಿತವಾದ ಒಂದು ಪಿ–ಹಾಹೀರೋತ್ ನಂತಹ ಸನ್ನಿವೇಶಗಳನ್ನು ತಲುಪಿ. ಮುಂದೆ ದಾಟಿ ಜಯಿಸಲಸಾಧ್ಯವಾದ ಕೆಂಪು ಸಮುದ್ರದಂತಹ ಅಡೆತಡೆಗಳು ಹಾಗೂ ಹಿಂದೆ ಉನ್ನತ ಪರ್ವತ ಶ್ರೇಣಿಯೋಪಾದಿಯಲ್ಲಿದ್ದು ತಪ್ಪಿಸಿಕೊಳ್ಳಲು ಕಾಣುವ ಎಲ್ಲಾ ಮಾರ್ಗಗಳೂ ಕಡಿದು ಹೋಗಿರುವಂತೆ ತೋರುವ ಬಿಕ್ಕಟ್ಟುಗಳಿಗೆ ಒಳಗಾಗುತ್ತಿದ್ದೆವು. ಮುಂದೆ ಸನ್ನಿಹಿತವಾಗುವ ವಿಪತ್ತಿಗೆ ಹೇಗೆ ಹೆದರಿ ನಡುಗಿದ್ದೆವು. ಆಹಾ ಆದರೆ ಅಲ್ಲಿ ದೇವರ ವಿಶೇಷ ಅವಕಾಶವೂ ಒದಗಿ ಬಂತು. ಇದರಿಂದ ಬಿಡುಗಡೆಯು ನಮ್ಮಿಂದ ಉಂಟಾದುದಲ್ಲ ಎಂಬ ಅತ್ಯಗತ್ಯವಾದ ಪಾಠವನ್ನು ನಾವು ಕಲಿಯುವಂತೆ ಹಿಂದೆ ಇಸ್ರಾಯೇಲ್ಯರಿಗೆ ಅಜ್ಞಾಪನೆಯಾದ ರೀತಿಯಲ್ಲಿ "...ಸುಮ್ಮನೆ ನಿಂತುಕೊಂಡಿದ್ದು ಯೆಹೋವನು ಈ ಹೊತ್ತು ನಿಮ್ಮನ್ನು ರಕ್ಷಿಸುವ ರೀತಿಯನ್ನು ನೋಡಿರಿ" (ವಿಮೋ. 14:13) ಎಂಬ ಆದೇಶವು ನಮಗೆ ಉಂಟಾಗುವುದು. ನಾವು ದೇವರಿಗೆ ಅವಕಾಶ ನೀಡಿದ್ದೇ ಆದರೆ ಆತನು ನಮಗೆ ಬಲವಾದ ಬುರುಜು ಆಶ್ರಯ ಗೋಪುರವೂ ಆಗಿ ತಕ್ಷಣವೇ ನಮ್ಮನ್ನು ಇಕ್ಕಟ್ಟುಗಳಿಂದ ಬಿಡಿಸಿ ನಡೆಸುವನು. ನಾವು ಅರಣ್ಯದಲ್ಲಿ ಕಳೆದು ಹೋಗಿ ಅಲ್ಲಿಂದ ಹೊರಗೆ ಬರುವ ಮಾರ್ಗವು ತಿಳಿಯದಿರುವಂತಹ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ನಮಗೆ ಚಿರಪರಿಚಿತವಾಗಿರುವ ಒಂದು ಗೋಪುರವನ್ನು ಪತ್ತೆಹಚ್ಚಿ ಅದನ್ನು ಗುರುತು ಮಾಡಿಕೊಂಡು ಅಲ್ಲಿಗೆ ತಲುಪಿದ್ದೇ ಆದರೆ ನಾವು ಸುರಕ್ಷಿತ ಎನ್ನುವಂತಾದರೆ ಅದು ನಿಜವಾಗಿಯೂ ಎಷ್ಟೋ ಒಳ್ಳೆಯದಲ್ಲವೇ. ಆಗ ನಾವು ನಿಜವಾಗಿಯೂ ಆ ಗೋಪುರವು ನಮ್ಮ ಸಂಕಷ್ಟದ ಪರಿಸ್ಥಿತಿಯಲ್ಲಿ ನಮಗಿದ್ದ ಏಕೈಕ ರಕ್ಷಣೆ ಎಂದು ಹೇಳಬಹುದು.

ದೇವರು ಇಸ್ರಾಯೇಲ್ಯರನ್ನು "ಮಿಗ್ದೋಲಿಗೂ ಸಮುದ್ರಕ್ಕೂ ನಡುವೆ ಇರುವ ಪಿ–ಹಾಹೀರೋತಿಗೆ ಹೋಗಲು ಅಪ್ಪಣೆ ಮಾಡಿದನು ಎಂದು ದೇವರ ವಾಕ್ಯ ವಿವರಣೆಯು ನಮಗೆ ಹೇಳುತ್ತದೆ. (ಅರಣ್ಯಕಾಂಡ 33:7, ವಿಮೋಚನಾಕಾಂಡ 14:2). ಮಿಗ್ದೋಲ್ ಎಂದರೆ "ಗೋಪುರ". ಇದು ಎಷ್ಟು ಮಹತ್ವವಾದದ್ದು ಇಲ್ಲೇ ದೇವರು ಆಶ್ರಯಗೋಪುರವಾಗಿ ತನ್ನನ್ನು ಅವರಿಗೆ ಪ್ರಕಟಪಡಿಸಿ, ಆತನು ಮೋಶೆಗೆ ಮಾಡಬೇಕಾದದ್ದು ಏನೆಂದು ಸೂಚಿಸಿದನು. ಮತ್ತು ಈ ಸೂಚನೆಗಳಿಗೆ ವಿಧೇಯರಾದುದು. ಅವರನ್ನು ಸ್ವಲ್ಪ ಸಮಯದ ಹಿಂದೆ ತಪ್ಪಿಸಿಕೊಳ್ಳಲು ಬಹು ಕಠಿಣವಾದ ಅಡ್ಡ ಗೋಡೆಯಂತಿದ್ದ ಸಮುದ್ರವನ್ನು ದಾಟುವ ಮೂಲಕ ಅವರಿಗೆ ವಿಮೋಚನೆ ತಂದು ಕೊಟ್ಟಿತು.

ಆತ್ಮೀಯ ಇಸ್ರಾಯೇಲ್ಯರ ಜೀವಿತಾನುಭವಗಳು ಸಹ ಹಲವು ಸಾರಿ ಹೀಗೆಯೇ, ಇಲ್ಲವಾದಲ್ಲಿ – "ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದುದಲ್ಲ. ಅದು ದೇವರ ವರವೇ. ಅದು ಪುಣ್ಯಕ್ರಿಯೆಗಳಿಂದ ಉಂಟಾದುದಲ್ಲ. ಅದುದರಿಂದ ಹೊಗಳಿಕೊಳ್ಳುವುದಕ್ಕೆ ಯಾರಿಗೂ ಆಸ್ಪದವಿಲ್ಲ" (ಎಫೆಸ 2:8,9) ಎಂಬುದನ್ನು ಹೇಗೆ ತಾನೇ ನಾವು ಕಲಿಯಬಲ್ಲೆವು. ನಮ್ಮ ಅಂತಿಮ ರಕ್ಷಣೆಗಾಗಿ ಯೆಹೋವನು ಮಾಡುವ ವಿಮೋಚನಾ ಕಾರ್ಯವನ್ನು ನಾವು ಸುಮ್ಮನೇ ನಿಂತು ನೋಡುವುದು ಎಷ್ಟು ಅವಶ್ಯ. ಆದಾಗ್ಯೂ, ಕರ್ತನಿಂದ ನಮಗೆ ಹೊರಡಬೇಕೆಂಬ ಆದೇಶ ಬಂದಾಗ ನಾವು ಹಾಗೆಯೇ ಸುಮ್ಮನೆ ನಿಲ್ಲುವಂತಿಲ್ಲ, ನಾವು ಆಗ ಹಾಗೇ ಸುಮ್ಮನೆ ನಿಂತರೆ ಖಂಡಿತವಾಗಿ ದೇವರು ನಮಗೆ ಸುಮ್ಮನೆ ನಿಲ್ಲುವಂತೆ ಹೇಳಿದಾಗ ನಾವು ಹೊರಡಲು ಅಸಮಧಾನವುಳ್ಳವರಾಗಿದ್ದೇವೆಂಬ ಅರ್ಥ ಬರುತ್ತದೆ.

"ಸಿ.ಹೆಚ್.ಎಮ್" ರವರ ನೋಟ್ಸ್ ಆನ್ ಎಕ್ಸೋಡಸ್ ಎಂಬ ಪುಸ್ತಕದಲ್ಲಿ ಉಲ್ಲೇಖಿಸಿರುವ ಈ ಮುಂದಿನ ವಾಕ್ಯಗಳನ್ನು ಪ್ರಾರ್ಥನಾ ಪೂರ್ವಕವಾಗಿ ಪರಿಗಣಿಸುವುದು ಒಳ್ಳೆಯದೆಂಬುದು ನಮ್ಮ ನಂಬಿಕೆ.

ಆದಾಗ್ಯೂ ದೇವರು ತನ್ನ ಮಹಾ ಕೃಪೆಯಿಂದ ಮಾರ್ಗವನ್ನು ತೆರೆದಾಗ ನಾವು ಅದರಲ್ಲಿ ನಂಬಿಕೆಯಿಂದ ನಡೆಯಬಹುದು. ಆದರೆ ಇದು ನೆರವೇರುವುದು ನಾವು ಮನುಷ್ಯರ ಮಾರ್ಗವನ್ನು ಬಿಟ್ಟು ದೇವರ ಮಾರ್ಗದಲ್ಲಿ ನಡೆದಾಗ ಮಾತ್ರವೇ (ಆಗ ಯೆಹೋವನು ಮೋಶೆಗೆ ಹೇಳಿದ್ದೇನಂದರೆ – ನೀನು ನನಗೆ ಮೊರೆಯಿಡುವುದೇನು? ಮುಂದಕ್ಕೆ ಹೊರಡಬೇಕೆಂದು ಇಸ್ರಾಯೇಲ್ಯರಿಗೆ ಹೇಳು) ನಾವು ಸುಮ್ಮನೆ ನಿಲ್ಲುವುದನ್ನು ಕಲಿತಾಗ ಮಾತ್ರವೇ ನಾವು ಸಮರ್ಥವಾಗಿ ಮುಂದೆ ಸಾಗಲು ಸಾಧ್ಯ. ಮೊದಲು ಹೇಳಿದ್ದನ್ನು ಮಾಡಲು ಕಲಿಯುವುದಕ್ಕೆ ಮುನ್ನ ಎರಡನೆಯದನ್ನು ಮಾಡಲು ಪ್ರಯತ್ನಿಸುವುದು ಖಂಡಿತವಾಗಿ ನಮ್ಮ ಅವಿವೇಕ ಅಸಮರ್ಥತೆಗಳನ್ನು ತೋರ್ಪಡಿಸಿದಂತಾಗುವುದು. ಆದುದರಿಂದ ನಾವು ಸಂಕಷ್ಟಗಳಿಂದ ಕಂಗಲಾದ ಎಲ್ಲಾ ಸಮಯಗಳಲ್ಲಿ ಸುಮ್ಮನೇ ನಿಂತು ಯೆಹೋವನಿಗಾಗಿ ಕಾಯುವುದೇ ನಿಜವಾದ ಜ್ಞಾನದ ಲಕ್ಷಣ. ಆಗ ಆತನು ಖಂಡಿತವಾಗಿಯೂ ನಮಗೆ ಮಾರ್ಗವನ್ನು ತೆರೆಯುವನು. ಮತ್ತು ನಾವು ಅಲ್ಲಿ ಸಮಾಧಾನದಿಂದಲೂ ಆನಂದಭರಿತರಾಗಿಯೂ ಮುಂದೆ ಸಾಗಬಹುದು. ದೇವರೇ ನಮಗೆ ಮಾರ್ಗವನ್ನು ತೆರೆದಾಗ ಅಲ್ಲಿ ಅನಿಶ್ಚಿತತೆ ಎಂಬುದು ಇರುವುದೇ ಇಲ್ಲ. ಆದರೆ ನಮ್ಮ ಸ್ವಕಲ್ಪಿತ ಮಾರ್ಗಗಳು ಸಂದೇಹಾಸ್ಪದವು ಅನಿಶ್ಚಯವಾದವುಗಳೆಂದು ಮೊದಲು ಋಜುವಾತಾಗಬೇಕು. ನಮ್ಮ ಕಣ್ಣುಗಳು ಯಾವಾಗ ದೇವರ ರಕ್ಷಣಾ ಮಾರ್ಗವನ್ನು ಕಾಣುವೆವೋ ಆಗ ಮಾತ್ರವೇ ಆತನ ಮಾರ್ಗದಲ್ಲಿ ನಾವು ನಡೆಯಲು ಸಾಧ್ಯ. ಆದರೆ ನಮ್ಮ ಅಸಮರ್ಥ ಕಾರ್ಯಗಳು ಕೊನೆಗೊಳ್ಳುವವರೆಗೂ ನಾವು ಇದನ್ನು ಸ್ಪಷ್ಟವಾಗಿ ಕಾಣುವುದಕ್ಕಾಗುವಿದಿಲ್ಲ (ಪುಟ 181, 182).

## ಭಾಗ–4

# ಕೆಂಪು ಸಮುದ್ರ ದಾಟುವಿಕೆ

ವಿಮೋಚನಾಕಾಂಡ 15:1–27; ಅರಣ್ಯಕಾಂಡ 33:8,9

ಇಸ್ರಾಯೇಲ್ಯರು ಕೆಂಪುಸಮುದ್ರದ ಪಶ್ಚಿಮ ತೀರದಲ್ಲಿದ್ದಾಗ ತಮ್ಮ ಪಕ್ಕಗಳಲ್ಲಿ ಪರ್ವತಗಳು ಹಿಂದೆ ತಮ್ಮನ್ನು ಬೆನ್ನಟ್ಟಿ ಬರುತ್ತಿದ್ದ ಐಗುಪ್ತರು ಮತ್ತು ಮುಂದೆ ಕೆಂಪುಸಮುದ್ರವನ್ನು ಕಂಡು ತಮ್ಮ ವಿಷಮ ಸ್ಥಿತಿಯನ್ನು ಸಂಪೂರ್ಣವಾಗಿ ಅರಿತು ಬಹು ಹತಾಶರಾಗಿದ್ದುದನ್ನು ನಮ್ಮ ಹಿಂದಿನ ಪಾಠದಲ್ಲಿ ಕಂಡೆವು. ಅವರನ್ನು ಅಲ್ಲಿಗೆ ಕರೆತಂದದ್ದು ದೇವರೇ ಎಂಬುದು ನೆನಪಿನಲ್ಲಿರಲಿ ಅವರು ಜಯಿಸಬೇಕಿದ್ದ ಅವರ ಮುಂದಿದ್ದ ಅಡತಡೆಗಳನ್ನು ಹೆಚ್ಚು ಮಾಡುಲೋ ಎಂಬಂತೆ ಮರಳುಗಾಡಿನ ಅಂಚಿನಲ್ಲಿರುವ ಏತಾಮಿನಿಂದ ದಕ್ಷಿಣ ದಿಕ್ಕಿಗೆ ಪಿಹಹಿರೋತಿನ ಕಡೆಗೆ ಅವರನ್ನು ತಿರುಗಿಸಿದನು. ಪಿಹಹಿರೋತ್‌ನಲ್ಲಿ ಮುಂದೆ ಸಾಗಲು ಅಸಾಧ್ಯವಾಗುವಂತೆ ಎದುರಾದ ಅಡೆತಡೆಗಳು ಖಂಡಿತವಗಿಯೂ, ಕೆಂಪು ಸಮುದ್ರದ ಉತ್ತರಕ್ಕಿರುವ ಆಳವಲ್ಲದ ಸಣ್ಣದಾದ ತಗ್ಗು ಪ್ರದೇಶಗಳಲ್ಲಿ ಇರಲಿಲ್ಲ. ಆದರೆ ಒಂದು ವೇಳೆ ದೇವರು ಅವರನ್ನು ಏತಾಮಿನಿಂದ ಪೂರ್ವದ ಕಡೆಗಿರುವ ದಾರಿಯಲ್ಲಿ ಹೋಗುವಂತೆ ಮಾಡಿದ್ದರೆ ಐಗುಪ್ತದಿಂದ ಅವರಿಗೆ ದೊರೆತ ಪೂರ್ಣ ಬಿಡುಗಡೆಯು ತಮ್ಮ ಪ್ರಯತ್ನ ಫಲವಲ, ಆದರೆ ಅದು ದೇವರಿಂದಾದುದು ಎಂಬುದನ್ನು ಅರಿತುಕೊಳ್ಳಲು ಆಗುತ್ತಿರಲಿಲ್ಲ. "ಯೆಹೋವನು ಮಾಡುವ ರಕ್ಷಣಾ ಕಾರ್ಯವನ್ನು ನಿಂತು ನೋಡುವುದು" ಅವಶ್ಯವೆನ್ನಿಸುವ ಸನ್ನಿವೇಶಗಳಿಗೆ ದೇವರು ನಮ್ಮನ್ನು ಅಗಾಗ್ಗೆ ನಡೆಸಬೇಕಿದೆ. ಇಂತಹ ಎಲ್ಲಾ ಸನ್ನಿವೇಶಗಳು ನಮ್ಮ ನಂಬಿಕೆಯನ್ನು ದೇವರು ಬಲಪಡಿಸಬೇಕೆಂಬ ಸ್ಪಷ್ಟ ಉದ್ದೇಶದಿಂದ ಬರಮಾಡಿದವುಗಳಾಗಿವೆ. ಇದರಂತೆಯೇ ಇಸ್ರಾಯೇಲ್ಯರಿಗೂ ಆಯಿತು. ಬಹುಶಃ ಉಕ್ಕುವ ಸಮುದ್ರವನ್ನು ಬಲವಾಗಿ ಬೀಸಿದ ಉತ್ತರ ದಿಕ್ಕಿನ ಗಾಳಿಯ ಸಹಜ ಪ್ರವೃತ್ತಿಯ ಕಾರಣದಿಂದ, ದೇವರು ಸಮುದ್ರದ ನೀರನ್ನು ವಿಭಾಗಿಸಿ ಸ್ವಲ್ಪ ಸಮಯ ಗೋಚರಿಸಿದ ಮರಳಿನ ಒಣಗಿದ ತಳದಲ್ಲಿ ಅವರು ಮುಂದಿನ ದಡಕ್ಕೆ ದಾಟಿಹೋಗುವಂತೆ ಮಾಡಿದನು. ಸಮುದ್ರದ ಮಧ್ಯದಲ್ಲಿ ಉಂಟಾದ ದಾರಿಯನ್ನು ಗಮನಿಸುವುದು ಮಾತ್ರವಲ್ಲದೆ ನೀರು ತಾತ್ಕಾಲಿಕವಾಗಿ ವಿಭಾಗವಾಗಿದೆ ಪುನಃ ಮೊದಲನೇ ಸ್ಥಿತಿಗೆ ಹಿಂದಿರುಗುತ್ತದೆ ಎಂಬುದನ್ನು ಸಹ ಗ್ರಹಿಸಿದ್ದರು. ಆದರೂ ದೇವರು ಇಸ್ರಾಯೇಲ್ಯರು ಐಗುಪ್ತದಲ್ಲಿದ್ದಾಗ ಫರೋಹನನ ಕೈಯಿಂದ ಹೇಗೆ ಬಿಡಿಸಿಕೊಂಡು ಬಂದನೆಂಬುದನ್ನು ನೆನಸಿ. ಅದೇ ದೇವರು ತಮ್ಮನ್ನು ನೀರು ಹಿಂದಿರುಗುವ ಮೊದಲೇ ಮುಂದಿನ ತೀರಕ್ಕೆ ಬರಮಾಡುವನೆಂಬ ನಂಬಿಕೆಯನ್ನು (ತಮಗೆ ದೇವರು ಹಿಂದೆ ತೋರಿದ ಕೃಪಾನುಗ್ರಹಗಳನ್ನು ಅರಿತವರಾಗಿ) ತಮಗೆ ಸಾದ್ಯವಾದ ರೀತಿಯಿಂದ ಸರಿಯಾಗಿ ತೋರ್ಪಡಿಸಿದರು. ಅವರು ಸಮುದ್ರ ಮಧ್ಯದಲ್ಲಿ ತೆರೆಯಲ್ಪಟ್ಟ

ದಾರಿಯಲ್ಲಿ ಕಾಲಿಟ್ಟು ದೇವರ ಹಸ್ತಪಾಲನೆಯಿಂದ ಕೆಂಪು ಸಮುದ್ರದ ಪೂರ್ವ ತೀರಕ್ಕೆ ನಡೆಸಲ್ಪಟ್ಟರು. ಆಗ ಈ ಸ್ಥಳದಲ್ಲಿ ಅವರು ಹಿಂದಿರುಗಿ ನೋಡಿ -- ಯೆಹೋವನು ಮಾಡುವ ರಕ್ಷಣಾ ಕಾರ್ಯವನ್ನು ನಿಂತು ನೋಡಿ -- ಅದನ್ನು ಗ್ರಹಿಸಲು ಅವರಿಗೆ ಅನುಮತಿಯಾಯಿತು. ಈ ರೀತಿಯಲ್ಲಿ ತಮ್ಮ ನಂಬಿಕೆಯ ಸರಿಯಾದ ಪ್ರಯೋಗದ ಫಲವಾಗಿ ಜಯ ಹೊಂದಿ, ಅವರು ಐಗುಪ್ತವನ್ನು ಆಶಿಸಿ ಅದನ್ನು ಪುನಃ ಹಿಂದಿರುಗಿ ನೋಡದೆ, ತಮ್ಮ ಜಯದಿಂದ ಉಂಟಾದ ಆನಂದದಿಂದ ವಿಶ್ವಾಸ ಮಾರ್ಗದಲ್ಲಿ ಅಯೋಗ್ಯವಾಗಿ ನಡೆಯಲು ಪ್ರಯತ್ನಿಸಿದವರ ಸಂಪೂರ್ಣ ನಾಶವನ್ನು ನೋಡುವುದಕ್ಕಾಗಿ ಮಾತ್ರ ಹಿಂದಿರುಗಿ ನೋಡಿದರು. ಐಗುಪ್ತರು ನಾಶವಾದರು. ನಂಬಿಕೆಯಿಂದ ಉಂಟಾದ ಈ ಜಯವು ಇಸ್ರಾಯೇಲ್ಯರಿಗೆ ತಮ್ಮನ್ನು ಬಾಧಿಸಿದ ಐಗುಪ್ತರಿಂದ ಇನ್ನೆಂದಿಗೂ ತಮಗೆ ತೊಂದರೆಯಾಗದು ಎಂಬ ಭರವಸೆ ನೀಡಿತು. ಹೀಗೆ ಅವರು ಮೋಶೆಯ ಹಾಡನ್ನು ಅದರ ಪೂರ್ಣ ಮಹಿಮೆ ಕಂಡವರಾಗಿ ಹಾಡಿದರು. ಅದೆಷ್ಟು ಪೂರ್ಣವಾಗಿ ಐಗುಪ್ತವನ್ನು ತ್ಯಜಿಸಿದವರಾಗಿ, ಎಷ್ಟು ಅಧಿಕವಾದ ಸಂತೋಷದಿಂದ ಅವರು ಅದನ್ನು ಹಾಡಿರಬೇಕು. ದೇವರ ಹಸ್ತದಿಂದ ನಡೆಸಲ್ಪಡುವ, ವಾಗ್ದತ್ತ ದೇಶವಾದ ಕಾನಾನ್ ಕಡೆಗಿನ ತಮ್ಮ ಪ್ರಯಾಣವನ್ನು ಮಾಡಲು ಎಂತಹ ಉತ್ಸಾಹ ಹುರುಪಿನಿಂದ ಅವರು ಕೂಡಿರಬೇಕು!

ಕನಿಷ್ಟಪಕ್ಷ, ಈ ಒಂದು ಸಾರಿಯಾದರೂ ಅವರು ದೇವರನ್ನು ಸ್ತುತಿಸಿದರು. ಆ ಕ್ಷಣಕ್ಕೆ ಅವರು ತಮ್ಮನ್ನು ತಾವು ಮರೆತಂತೆ ಕಂಡುಬರುತ್ತದೆ. ಅವರ ಹಾಡಿನಲ್ಲಿರುವ ಸೊಗಸನ್ನು ಗಮನಿಸಿ. ವಿಮೋ. 15:1, 2 "ಯೆಹೋವನ ಸ್ತೋತ್ರವನ್ನು ಗಾನ ಮಾಡೋಣ; ಆತನು ಮಹಾಜಯಶಾಲಿಯಾದನು, ಕುದುರೆಗಳನ್ನೂ ರಾಹುತರನ್ನೂ ಸಮುದ್ರದಲ್ಲಿ ಕೆಡವಿ ನಾಶಮಾಡಿದ್ದಾನೆ. ನನ್ನ ಬಲವೂ ಕೀರ್ತನೆಯೂ ಯಾಹುವೇ. ಆತನಿಂದ ನನಗೆ ರಕ್ಷಣೆಯುಂಟಾಯಿತು. ನಮ್ಮ ದೇವರು ಆತನೇ, ಆತನನ್ನು ವರ್ಣಿಸುವೆವು; ನಮ್ಮ ಪಿತೃಗಳ ದೇವರು ಆತನೇ, ಆತನ ಮಹಿಮೆಯನ್ನು ಪ್ರಖ್ಯಾತಿಪಡಿಸುವೆವು."

ಆದಾಗ್ಯೂ ನಾವು ಸ್ವಲ್ಪ ಸಮಯದಲ್ಲಿ ನೋಡವ ಹಾಗೆ, ಅವರು ಬೇಗನೆ ಮಹಿಮೆಯುಳ್ಳ ದೇವರನ್ನು ಮರೆತುಬಿಟ್ಟರು ಮತ್ತು ತಮ್ಮ ವಿಷಯವಾಗಿ ಬಹು ಗಾಢವಾಗಿ ಯೋಚಿಸಲಾರಂಭಿಸಿದರು. ಪರಿಣಾಮವಾಗಿ ಬಹುತೇಕ ಸಮಯಗಳಲ್ಲಿ ಅವರ ಸ್ತುತಿ ಗೀತೆಯ ಸಮಯಗಳನ್ನು ಗುಣಗುಟ್ಟುವಿಕೆಗಳು ಆಕ್ರಮಿಸಿದವು. ಅಲ್ಲಿ ಇದ್ದದ್ದು "ನೊಂದುಕೊಂಡ ದೇವರು" ಹಾಗೂ "ಕಳೆದುಹೋದ ಕಾನಾನ್" (ಇಬ್ರಿಯ 3:10, 17–19; 1ಕೊರಿಂಥ 10:5)

ಈ ಕಾಲದಲ್ಲಿ ಪ್ರಿಯ ಮಿತ್ರರೇ, ದೇವರ ಪರಿಪಾಲನೆಯಲ್ಲಿ, ಹಿಂದೆ ಇಸ್ರಾಯೇಲ್ಯರಿಗೆ ಸಂಭವಿಸಿದಂತೆ, ನಮಗೂ ಸಹ ಮನುಷ್ಯರ ದೃಷ್ಟಿಯಲ್ಲಿ ತಪ್ಪಿಸಿಕೊಳ್ಳಲು ಸಾಧ್ಯವಿರುವ ಯಾವ ಮಾರ್ಗವೂ ದೊರೆಯದ ಇಕ್ಕಟ್ಟಿನ ಸ್ಥಳಗಳಿಗೆ ಬರುವಂತಾಗುವ ಸಮಯಗಳು

ಉಂಟು. ಮತ್ತು ನಾವು ಅಲ್ಲಿಂದ ಹೊರಬರಲು ಏನಾದರೂ ವಿಶೇಷವಾಗಿ ಮಾಡಬಹುದೆಂದು ಬಯಸಿದರೂ ನಾವು ಖಂಡಿತವಾಗಿಯೂ ಏನೂ ಮಾಡಲಾರೆವು ರಕ್ಷಣೆ ಎಂಬುದು ಏನಾದರೂ ಬರುವುದಾದರೆ ಅದು ದೇವರಿಂದಲೇ ಬರಬೇಕು. ನಾವು ಆತನನ್ನು ನಮ್ಮ ಭದ್ರವಾದ ಬುರುಜಿನಂತೆಯೂ ರಕ್ಷಣಾ ಕರ್ತನಾದ ದೇವರನ್ನಾಗಿಯೂ ನೋಡಬೇಕು. ಅದು ಮಿಗ್ದೋಲಿಗೂ ಸಮುದ್ರಕ್ಕೂ ನಡುವೆ ಇರುವ ಪಿಹಾಹಿರೋತು. ಆದರೆ ನಾವು ಆತನ ಚಿತ್ತಕ್ಕೆ ವಿಧೇಯರಾಗಿ ಸುಮ್ಮನೆ ನಿಂತು ಮುನ್ನಡೆಯಬೇಕೆಂಬ ಆಜ್ಞೆ ಬರುವವರೆಗೂ ಕಾದುಕೊಂಡಿದ್ದರೆ ಬಹು ಬೇಗನೇ ಪ್ರಕೃತಿ ನಿಯಮಗಳು ಸಡಿಸಲ್ಪಟ್ಟು (ಇಸ್ರಾಯೇಲ್ಯರಿಗಾಗಿ ಕೆಂಪುಸಮುದ್ರದ ನೀರು ವಿಭಾಗವಾದಂತೆ) ನಾವು ನಂಬಿ ಭರವಸವುಳ್ಳವರಾಗಿ ಮುನ್ನಡೆಯಲು ಒಂದು ವಿಶ್ವಾಸ ಮಾರ್ಗವು. ನಮ್ಮ ಮುಂದೆ ಹಾಗೇ ತೆರೆಯಲ್ಪಡುವುದನ್ನು ಗಮನಿಸುತ್ತೇವೆ. ಮತ್ತೆ ಆ ಸಮಯದಲ್ಲೂ ಸ್ವಬಲವನ್ನು ಆಧರಿಸದೆ ಅಲ್ಲಿ ದೇವರಿಗೆ ಅದನ್ನು ಬಿಡಬೇಕು. ದೇವರ ಹಸ್ತಕ್ಕೆ ನಮ್ಮನ್ನು ಪೂರ್ಣವಾಗಿ ಒಪ್ಪಿಸಿದರೆ ದೊರಕುವ ನಂಬಿಕೆಯ ಫಲವಾದ ಜಯವು ನಮ್ಮದೇ. ಮತ್ತು ನಾವೂ ಕೂಡ ವಿಮೋಚನೆಯ ಗೀತೆಯನ್ನು ಹಾಡುವೆವು. ಆದರೆ ಅನೇಕ ವೇಳೆ ನಾವು ದೇವರನ್ನೂ ಆತನು ನಮಗಾಗಿ ಮಾಡಿದ ಮಹತ್ಕಾರ್ಯಗಳನ್ನು ಮರೆತು. ಸ್ವಾರ್ಥಚಿಂತರಾಗಿ, ಸ್ವಾನುಕಂಪವುಳ್ಳವರಾಗಿ ಪಾಪದ ಫಲವಾದ ದಾಸತ್ವದಲ್ಲಿದ್ದಾಗ ಉಂಟಾದ ಹಿಂದಿನ ಸಂತೋಷಗಳನ್ನು ನಾವು ಸಹಜ ಪ್ರವೃತ್ತಿಯಿಂದ ಆಶಿಸುತ್ತೇವೆ. ಪರಿಣಾಮವಾಗಿ ನಾವೂ ಸಹ ಇಸ್ರಾಯೇಲ್ಯರಂತೆ ಅಸಂತೃಪ್ತರಾಗಿ ಗುಣಗುಟ್ಟುವವರಾಗುತ್ತೇವೆ. ಇಸ್ರಾಯೇಲ್ಯರು ದೇವರನ್ನು ಮರೆತುಬಿಡುವ ಸ್ವಭಾವದವರಾದರೂ ದೇವರು ಅವರನ್ನು ಕ್ಷಮಿಸಿ ತನ್ನ ದೀರ್ಘಶಾಂತಿಯಿಂದ ಅವರಿಗೆ ದಯೆ ತೋರಿಸುವುದನ್ನು ಬಿಡಲಿಲ್ಲ. ಅದೇ ರೀತಿಯಾಗಿ ಆತನು ನಮಗೂ ಮಾಡುವನು. ಆದರೂ ಕಾದೇಶ್ ಬರ್ನಿಯ ಎಂಬ ಸ್ಥಳಕ್ಕೆ ಬಂದಾಗ ಆತನು ಇಸ್ರಾಯೇಲ್ಯರನ್ನು ಮನತಿರುಗುವಂತೆ ಮಾಡಿ ಕಾನಾನ್ ದೇಶಕ್ಕೆ ಅವರನ್ನು ಕೊಂಡೊಯ್ಯುವ ತನ್ನ ಪ್ರಯತ್ನವನ್ನು ನಿಲ್ಲಿಸಿದ ವಿಷಯವನ್ನು ನಾವು ಗಮನಿಸುವುದು ಒಳ್ಳೆಯದು. ಒಂದು ವೇಳೆ ನಾವೂ ಸಹ ನಿರಂತರವಾಗಿ ಅಪನಂಬಿಕೆ ಮತ್ತು ವಿಶ್ವಾಸದ್ರೋಹಿಗಳಾಗಿ ಮುಂದುವರಿದು ಆ (ಕಾನಾನ್) ವಿಶ್ರಾಂತಿಯಲ್ಲಿ ಸೇರುವ ಅವಕಾಶ ನಮಗೆ ಮುಚ್ಚಲ್ಪಡದ ಹಾಗೆ ಎಚ್ಚರವಹಿಸಬೇಕು. ಅಪೋಸ್ತಲನ ಈ ಮುಂದಿನ ಮಾತನ್ನು ನಾವು ಪ್ರಾರ್ಥನಾ ಪೂರ್ವಕವಾಗಿ ಲಕ್ಷಿಸೋಣ. ಇಬ್ರಿಯ 3:12 "ಸಹೋದರರೇ, ನೋಡಿಕೊಳ್ಳಿರಿ, ಜೀವಸ್ವರೂಪನಾದ ದೇವರನ್ನು ಬಿಟ್ಟುಹೋಗುವ ಅಪನಂಬಿಕೆಯುಳ್ಳ ಕೆಟ್ಟ ಹೃದಯವು ನಿಮ್ಮೊಳಗೆ ಯಾವನಲ್ಲಿಯೂ ಇರಬಾರದು" (ಇಬ್ರಿಯ 4:8 ವಚವನ್ನೂ ಸಹ ನೋಡಿರಿ).

ನಮಗೆ ತೆರೆಯಲ್ಪಟ್ಟಿರುವುದು ಎರಡೇ ಮಾರ್ಗಗಳು, ಒಂದು ಸ್ವಚಿಂತೆಯನ್ನು ಮರೆತುಬಿಟ್ಟು ದೇವರನ್ನು ನೆನೆಯುವುದು; ಇನ್ನೊಂದು ದೇವರನ್ನು ಮರೆತು ಸ್ವಚಿಂತೆ

ಮಾಡುವುದು ಒಂದು, ಮತ್ತೊಂದು ನಂಬಿಕೆಯ ವಿಷಯವಾದುದು ಮತ್ತು ಇದಕ್ಕೆ ದೇವರಿಂದ ಪ್ರತಿಫಲ ಉಂಟು. ಮುಂದಿನದು ಅಪನಂಬಿಕೆ ಅವಿಧೇಯತೆಗಳಿಗೆ ಸಂಬಂಧಪಟ್ಟುವುಗಳು ಮತ್ತು ಇವು ಆತನನ್ನು ಅಸಂತೋಷಪಡಿಸುವಂತವುಗಳು. ಕೆಂಪು ಸಮುದ್ರದ ಪೂರ್ವ ತೀರದಲ್ಲಿ ಇಸ್ರಾಯೇಲ್ಯರು ಹಾಡಿದುದು ಒಂದು ಸ್ತುತಿಗೀತೆ. ಯಾಕೆಂದರೆ ಅವರು ಸ್ವಚಿಂತೆಯನ್ನು ಬಿಟ್ಟು ದೇವರನ್ನು ನೆನೆದದ್ದರಿಂದ ಅದು ಅವರದ್ದಾಗಿತ್ತು. ಪ್ರಿಯ ಮಿತ್ರರೇ, ನಾವು ಇನ್ನೊಂದು ತೀರದಲ್ಲಿ ಮೋಶೆಯ ಮತ್ತು ಯಜ್ಞದ ಕುರಿಯ ಹಾಡನ್ನು ಸರಿಯಾದ ಸಮಯದಲ್ಲಿ ಹಾಡಬೇಕೆಂದಿದ್ದರೆ ನಾವು ಪ್ರತಿ ದಿನವೂ ಪ್ರತಿ ವಿಧದಲ್ಲೂ ಸ್ವಚಿಂತೆಯನ್ನು ತೊರೆದು ದೇವರನ್ನು ಜ್ಞಾಪಿಸಿಕೊಳ್ಳಬೇಕು.

ಅನಂತರದಲ್ಲಿ ಮೋಶೆಯು ಅವರನ್ನು ಕೆಂಪು ಸಮುದ್ರದ ಬಳಿಯಿಂದ ಶೂರಿನ ಅರಣ್ಯಕ್ಕೆ ನಡೆಸಿಕೊಂಡು ಹೋದನು ಹಾಗೂ ಈ ಅರಣ್ಯದಲ್ಲಿ ಅವರು ಮೂರು ದಿನ ಪ್ರಯಾಣ ಮಾಡಿದರು ಎಂದು ವಾಕ್ಯವಿವರಣೆ ನಮಗೆ ಹೇಳುತ್ತದೆ. (ವಿಮೋ. 15:22) ಐಗುಪ್ತದಿಂದ ಅವರು ತೆರಳಿದುದರ ಉದ್ದೇಶ. ಫರೋಹನನ ಕಿವಿಯಲ್ಲಿ ಪುನಃ ಪುನಃ ಹೇಳಿದಂತೆ – "ಮೂರು ದಿನಗಳಷ್ಟು ಪ್ರಯಾಣ ಮಾಡಿ ತಮ್ಮ ದೇವರಾದ ಯೆಹೋವನಿಗೆ ಯಜ್ಞ ಮಾಡಲು" ಎನ್ನುವುದನ್ನು ನೀವು ನೆನಪಿಗೆ ತಂದುಕೊಳ್ಳಿರಿ. (ವಿಮೋ. 3:18) ಬಹುಶಃ (ಏತಾಮಿನ ಅರಣ್ಯ ಪ್ರದೇಶವೆಂದು ಸಹ ಕರೆಯಲ್ಪಡುವ – (ಅರಣ್ಯಕಾಂಡ 33:8) ಈ ಶೂರಿನ ಅರಣ್ಯವನ್ನೇ ಮೋಶೆಯು ಫರೋಹನನಲ್ಲಿ ಬೇಡುವಾಗ ಬಹು ನಿರ್ದಿಷ್ಟವಾಗಿ ಸೂಚಿಸಿ ಹೇಳಿರುವುದು. "ಮೂರು ದಿನಗಳ ಪ್ರಯಾಣವನ್ನು" ಸೂಚಿಸಿ ಹೇಳಿರುವುದು ಇದು ಮೊದಲನೆಯ ಸಾರಿ. ಕೇವಲ ಅವರು ಕೆಂಪುಸಮುದ್ರದ ಆಚೆ ದಡವನ್ನು ತಲುಪಿದ ನಂತರವೇ ಅವರು ಐಗುಪ್ತರ ಕೈಯಿಂದ ನಿಜವಾಗಿ ತಪ್ಪಿಸಿಕೊಂಡದ್ದು ಎಂಬುದನ್ನು ಪರಿಗಣನೆಗೆ ತಂದುಕೊಂಡಾಗಲೇ, ಸೂಚಿತವಾಗಿರುವ ಅರಣ್ಯ ಇದೇ ಅರಣ್ಯವೆಂದು ನಮಗೆ ಖಚಿತವಾಗುವುದು. ಆದರೆ ಅಲ್ಲಿ ದೇವರಿಗೆ ಯಜ್ಞವನ್ನು ಅರ್ಪಿಸಿದರೇ? ನಾವು ನೋಡೋಣ. ಅವರಲ್ಲಿದ್ದ ನೀರು ಮುಗಿದು ಹೋಗಿ ಅವರಿಗೆ ಬಾಯಾರಿಕೆ ಉಂಟಾಯಿತು. ನಾವು ಓದುವುದು: ವಿಮೋಚನಾಕಾಂಡ 15:22,23 "ಬಳಿಕ ಮೋಶೆಯು ಇಸ್ರಾಯೇಲ್ಯರನ್ನು ಕೆಂಪು ಸಮುದ್ರದ ಬಳಿಯಿಂದ ಪ್ರಯಾಣ ಮಾಡಿಸಲು ಅವರು ಶೂರಿನ ಅರಣ್ಯದೊಳಗೆ ಮೂರು ದಿನ ನಡೆದುಹೋದರು. ಅಲ್ಲಿ ಅವರಿಗೆ ನೀರು ಸಿಕ್ಕಲೇ ಇಲ್ಲ ತರುವಾಯ ಮಾರಾ ಎಂಬ ಸ್ಥಳವನ್ನು ಸೇರಿದರು; ಆದರೆ ಆ ಸ್ಥಳದ ನೀರು ಕಹಿಯಾಗಿದ್ದರಿಂದ ಅವರಿಗೆ ಅದನ್ನು ಕುಡಿಯುವುದಕ್ಕಾಗದೆ ಹೋಯಿತು. ಆದ್ದರಿಂದಲೇ ಆ ಸ್ಥಳಕ್ಕೆ ಮಾರಾ ಎಂದು ಹೆಸರಾಯಿತು.

ಮಾನವ ಹೃದಯದ (ಸ್ವಭಾವಗಳ) ಎಂತಹ ಚಿತ್ರಣವು ನಮಗೆ ಇಲ್ಲಿದೆ! ದೇವರ ಮತ್ತು ತನ್ನ ಪರವಾಗಿ ನಡೆಸಿದ ಆತನ ಮಹತ್ಕಾರ್ಯಗಳನ್ನು ಎಷ್ಟು ಬೇಗನೇ ಅದು ಮರೆಯಬಲ್ಲದು. ನಂಬಿಕೆಯ ಶಿಖರದ ಮೇಲೆ ದೇವರ ಸಮ್ಮುಖದ ದಿವ್ಯ ಪ್ರಕಾಶದಲ್ಲಿ

ವಾಸಿಸುವುದರ ಬದಲು ಲೋಕದ ಸಂಗತಿ, ಶಾರೀರಿಕ ಅಭಿಲಾಷೆ ಮತ್ತು ಸೈತಾನನ ತಂತ್ರೋಪಾಯಗಳಿಗೆ ಅಧೀನವಾಗಿ ಮರಣದ ಛಾಯೆಯಿಂದ ಕೂಡಿರುವ ಖಿನ್ನತೆಯ ಕತ್ತಲ ಕಣಿವೆಗೆ ತಮ್ಮನು ತಾವೇ ನೂಕಿಸಿಕೊಂಡಿದೆ. ದೇವರಿಗೆ ಕೃತಜ್ಞತಾಯಜ್ಞಗಳನ್ನು ಅರ್ಪಿಸುವುದರ ಬದಲು ಅದು ಗುಣಗುಟ್ಟುತ್ತದೆ. ಏಕೆಂದರೆ ಯಾವ ಹೃದಯದಲ್ಲಿ ದೇವರು ಆಸೀನವಾಗಬೇಕೋ ಅಲ್ಲಿ ಸ್ವಾರ್ಥ ತುಂಬಿದೆ.

ಕೀರ್ತನೆಗಾರನು ಎಷ್ಟು ಚೆನ್ನಾಗಿ ಇದನ್ನು ಪ್ರಕಟಮಾಡಿ ಹೇಳಿದ್ದಾನೆ; "ಅವರು ಯೆಹೋವನ ಕೃಪೆಗೋಸ್ಕರವೂ ಆತನು ಮಾನವರಿಗಾಗಿ ನಡೆಸಿದ ಅದ್ಭುತಗಳಿಗೋಸ್ಕರವೂ ಆತನನ್ನು ಕೊಂಡಾಡಲಿ. ಕೃತಜ್ಞತಾ ಯಜ್ಞಗಳನ್ನು ಸಮರ್ಪಿಸಿ ಉತ್ಸಾಹ ಧ್ವನಿಮಾಡುತ್ತಾ ಅತನ ಮಹತ್ಕಾರ್ಯಗಳನ್ನು ವರ್ಣಿಸಲಿ" (ಕೀರ್ತನೆ 107:21, 22)

ಇಸ್ರಾಯೇಲ್ಯರು ದೇವರನ್ನು ಮರೆತು ತಮ್ಮ ಸ್ವಾರ್ಥವನ್ನು ನೆನೆದರು. ಇದು ಕೃತಜ್ಞತಾಸ್ತುತಿ ಯಜ್ಞಗಳ ಬದಲಾಗಿ ಶಾರೀರಿಕ ರೀತಿಯ ಗುಣಗುಟ್ಟುವಿಕೆಗೆ ಎಡೆಮಾಡಿಕೊಟ್ಟವು. ಆದರೂ ದೇವರು ತಾನು ಕೃಪಾಪೂರ್ಣನಾಗಿ ಅವರ ಮನತಿರುಗುವಿಕೆಗೆ ಯತ್ನಿಸುತ್ತಾ ಬಂದನು. ತನ್ನ ಕೃಪಾಪಾಲನೆಯಲ್ಲಿ ಅವರನ್ನು ಮಾರಾ ಎಂಬ ಸ್ಥಳಕ್ಕೆ ನಡೆಸಿದವನು ದೇವರೇ! ಆದರೆ ಇದು ಏಕೆ? ಕಹಿ ನೀರು ಹಾಗೂ ಅರಣ್ಯಮಾರ್ಗದ ಕಠಿಣ ಸಂಕಷ್ಟಗಳಿಂದ ಅವರನ್ನು ಬಿಡಿಸಿ ರಕ್ಷಿಸಲು ಆತನಿಗೆ ಸಾಧ್ಯವಿತ್ತಲ್ಲವೆ? ಹೌದು. ಆದರೆ ಇವೆಲ್ಲವೂ ದೇವರ ಮೇಲೆ ಕೇಂದ್ರೀಕೃತವಾದ ಹೃದಯ ಉಳ್ಳವರಿಗೆ, ಅತನಿಗೆ ಹತ್ತಿರಕ್ಕೆ ಏರಿಬರುವ ಮೆಟ್ಟಿಲುಗಳಾಗಿವೆ.

ದೇವರು ತನ್ನ ಜನರನ್ನು ಮರೆಯಲಿಲ್ಲ. ಆದರೆ ಅವರು ಆತನನ್ನು ಮರೆತರು. ಹಾಗೆ ಈಗಲೂ ಎರಡನೆಯ ಸಾರಿ ಕೇವಲ ಪ್ರಯಾಣದ ಆರಂಭದಲ್ಲೇ ಅವರು ಗುಣಗುಟ್ಟಿದರು. ನಿಜ, ಅವರು ಬಹು ಬಾಯಾರಿದ್ದರು ಮತ್ತು ಅಲ್ಲಿ ನೀರು ಇರಲಿಲ್ಲ, ಅಕಸ್ಮಾತಾಗಿ ಅವರಿಗೆ ಒಂದು ನೀರಿನ ಒರತೆ ಸಿಕ್ಕಲು ಅವರು ಬಾಯಾರಿಕೆ ನೀಗುವುದನ್ನು ಎದುರು ನೋಡಿದರು. ಆದರೆ ದೇವರು ಅವರನ್ನು ನೀರಿನ ಒರತೆಗೆ ನಡೆಸಿದಕ್ಕಾಗಿ ಅಲ್ಲೇ ಆತನನ್ನು ಸ್ತುತಿಸುವುದನ್ನು ಬಿಟ್ಟು ಸ್ವಾರ್ಥ ಪರರಾಗಿ ತಮ್ಮ ವಿಷಯದಲ್ಲಿ ಆಗಲೂ ಯೋಚಿಸಿದಂತೆ ಕಾಣುತ್ತದೆ. ಇಂತಹ ಆಲೋಚನೆಗಳು ಖಂಡಿತವಾಗಿ ಯಾತ್ರಾ ಮಾರ್ಗದಲ್ಲಿ ಮುಂದುವರಿಯಲು ಪ್ರೋತ್ಸಾಹಕರವಲ್ಲ. ಅವರು ಎಂದಾದರೂ ತಮ್ಮ ಹೃದಯದಲ್ಲಿ ನಂಬುವವರಾಗಿ ಮತ್ತು ನಂಬಿಕೆಯಿಂದ ವಾಗ್ಧತ್ತ ದೇಶವಾದ ಕಾನಾನಿನಲ್ಲಿ ಜೀವಿಸುವವರಾಗಿ ಇರುತ್ತಿದ್ದಲ್ಲಿ, ತಮ್ಮ ಶರೀರದಲ್ಲಿ ಅನುಭವಿಸಿದ ಕಷ್ಟಗಳು ಹಗುರವಾಗಿ ಕಂಡುಬಂದು ಸುಲಭವಾಗಿ ಅವುಗಳನ್ನು ಸಹಿಸಬಹುದಾಗಿತ್ತು. ಮಾರಾ ಎಂಬಲ್ಲಿ ದೊರೆತ ನೀರು ಕಹಿಯಾಗಿತ್ತು ಅವರು ಅದಕ್ಕಾಗಿ ಗುಣಗುಟ್ಟಿದರು. ನೋಡಲು ಅದು ಮೋಶೆಗೆ ವಿರೋಧವಾಗಿ ಗುಣಗುಟ್ಟಿದಂತೆ ಕಂಡರೂ ಸಹ ಅದು ದೇವರಿಗೆ ವಿರೋಧವಾಗಿ ಗುಣಗುಟ್ಟುವಿಕೆಯಾಗಿತ್ತು. ದೇವರು ಅದನ್ನು

ಕೇಳಿಯೂ ತನ್ನ ಪ್ರೀತಿಕೃಪೆಗಳಿಂದ ಕರುಣಾತಿಶಯವುಳ್ಳವನಾಗಿ ಅವರ ಬಾಯಾರಿಕೆ ನೀಗುವಂತೆ ಮಾಡಿ ಆಶೀರ್ವದಿಸಿದನು. ಆತನು ಮೋಶೆಗೆ ಒಂದು ಗಿಡವನ್ನು ತೋರಿಸಿದನು "ಅದನ್ನು ನೀರಿನಲ್ಲಿ ಹಾಕಿದಾಗ ಅದು ಸಿಹಿಯಾಯಿತು" (ವಿಮೋಚನಾಕಾಂಡ 15:25)

ಹಲವು ಸಾರಿ, ಪ್ರಿಯ ಮಿತ್ರರೇ, ದೇವರು ನಮಗೆ ಕೆಲವು ಕಹಿ ನೀರಿನಂತಹ ಅನುಭವಗಳನ್ನು ಬರಮಾಡಬೇಕಾಗುತ್ತದೆ. ಅದರೆ ದೇವರನ್ನು ನೆನೆಯುವುದರಿಂದ ಯೇಸುವಿನ ಶಿಲುಬೆಯ ಮುಖಾಂತರ ಅವುಗಳೂ ಸಹ ಸಿಹಿಯಾದುವುಗಳಾಗಿ ನಾವು ಕಂಡುಕೊಳ್ಳುತ್ತೇವೆ. ಹೌದು, ಆ ಶಿಲುಬೆಯೇ ಜೀವವೆಂಬ ಹೊಳೆಯಲ್ಲಿ (ಮೋಶೆಯು) ಹಾಕಿದ ಆ ಗಿಡವಾಗಿದ್ದು. ಆ ಹೊಳೆಯು ಹಲವು ಸಾರಿ ಕಹಿ ನೀರಿನಿಂದ ಕೂಡಿ ಹರಿಯುವುದು. ಆದರೆ ದಿನ, ದಿನವೂ, ಗಳಿಗೆ, ಗಳಿಗೆಯೂ ನಮ್ಮ ನಿತ್ಯ ಬಾಧ್ಯತೆಯಾಗಿರುವ ಕಾನಾನ್ ಎಂಬ ದೇವರ ವಿಶ್ರಾಂತಿಯ ಸಮೀಪಕ್ಕೆ ಸಾಗುತ್ತಿದ್ದೇವೆಂಬುದನ್ನು ನಾವು ಅವಲೋಕಿಸುವಾಗ ಇದರಲ್ಲಿರುವ ಕಹಿ ಅಂಶವು ಹಾಗೇ ನಮ್ಮಿಂದ ಕಸಿಯಲ್ಪಡುತ್ತದೆ. ಈ ಸಂದರ್ಭದಲ್ಲಿ ಕೃಪಾ ಶ್ರೇಷ್ಟನಾದ ದೇವರಿಗೆ ಇಸ್ರಾಯೇಲ್ಯರು ಕೃತಜ್ಞತಾ ಯಜ್ಞಗಳನ್ನು ಅರ್ಪಿಸಿದರು ಎಂಬ ಒಂದು ಮಾತೂ ಇಲ್ಲಿ ಹೇಳಲ್ಪಟ್ಟಿಲ್ಲ ಎಂಬುದು ಗಮನವಿರಲಿ. ಆತನ ಕೃಪೆಯನ್ನು ಒಂದು ಸಹಜವಾದ ಸಂಗತಿಯೆಂದು ಅವರು ತೆಗೆದುಕೊಂಡಂತೆ ಕಾಣುತ್ತದೆ.

ಹಿಂದಿನ ಕಾಲದಲ್ಲಿದ್ದ ಇಸ್ರಾಯೇಲ್ಯರಂತೆ ನಾವೂ ಸಹ ದೇವರ ಕರುಣೆಯನ್ನು ಮನವರಿಕೆ ಮಾಡಿಕೊಳ್ಳುವಲ್ಲಿ ವಿಫಲರಾಗುವೆವೆಂದು ನಾನು ಭಯಪಡುತ್ತೇನೆ. ನಮಗೆ ಹಾಗೆ ಮಾಡುವುದೇ ಆತನ ಕರ್ತವ್ಯವೆಂದು ನಾವು ತೆಗೆದುಕೊಳ್ಳುತ್ತೇವೆ. ಹಲವು ಸಾರಿ ನಾವು ದೇವರನ್ನು ಪೂರ್ಣವಾಗಿ ಮರೆತುಹೋಗುವವರಾಗಿ, ಇಲ್ಲವೇ ಕನಿಷ್ಟಪಕ್ಷ ಆತನಿಗೆ ತೋರಿಸಬೇಕಾದಷ್ಟು ಕೃತಜ್ಞತೆಯನ್ನು ತೋರದವರಾಗುತ್ತೇವೆ. ದೇವರು ನಮ್ಮ ಗುಣಗುಟ್ಟುವಿಕೆಗಳಿಗೆಲ್ಲಾ ಕೃಪಾಪೂರ್ಣನಾಗಿ ಸ್ಪಂದಿಸುತ್ತಾ ಬರುವ ಕಾರಣ ನಿರಂತರವೂ ಅದೇ ರೀತಿಯಲ್ಲಿ ಮುಂದುವರಿಯುವನೆಂದು ಭಾವಿಸದಿರೋಣ. ಒಂದು ಕಾಲ ಬರುತ್ತದೆ ಅಲ್ಲಿ ಆತನು ಹಿಂದಿನ ಕಾಲದಲ್ಲಿ ಇಸ್ರಾಯೇಲ್ಯರಿಗೆ ಮಾಡಿದಂತೆ, ನಮ್ಮನ್ನು ಕಾನಾನಿಗೆ ಸೇರಲು ನಮ್ಮ ಪರವಾಗಿ ಮಾಡುವ ಮನತಿರುಗುವಿಕೆಯ ತನ್ನ ಯತ್ನವನ್ನು ನಿಲ್ಲಿಸಬೇಕಾಗುತ್ತದೆ. ದೇವರ ನಿಜ ಇಸ್ರಾಯೇಲ್ಯರಾದ ನಮಗೆ ನಮ್ಮ ಪರೀಕ್ಷಾರ್ಥವಾಗಿ ಬರುವ ಅನುಭವಗಳೆಲ್ಲವೂ ದೇವರಿಂದ ನೇಮಿಸಲ್ಪಟ್ಟು, ನಾವು ಬೆಳಕಿನ ರಾಜ್ಯಕ್ಕೆ ಬಾಧ್ಯರಾಗುವುದಕ್ಕೆ ನಮ್ಮನ್ನು ಯೋಗ್ಯರನ್ನಾಗಿ ಮಾಡುವ ಒಂದೇ ಉದ್ಧೇಶವುಳ್ಳದ್ದು (ಕೊಲೊಸ್ಸೆ 1:12). ಆದುದರಿಂದ ನಾವು ಯಾವಾಗಲೂ ಆತನನ್ನು ಸ್ತುತಿಸುವವರಾಗೋಣ. ಏಕೆಂದರೆ ಇವುಗಳೇ ನಾವು ನಮ್ಮ ಲೋಕಾರಣ್ಯ ಯಾತ್ರೆಯಲ್ಲಿ ಸಮರ್ಪಿಸಬಹುದಾದ ಮೆಚ್ಚಿಕೆಯಾದ ಯಜ್ಞವಾಗಿವೆ.

ದೇವರು ಇಸ್ರಾಯೇಲ್ ಜನಾಂಗದವರನ್ನು ನಡೆಸಿಕೊಂಡು ಬಂದ ಮುಂದಿನ ಸ್ಥಳ ಏಲೀಮ್. "ಅಲ್ಲಿ ಹನ್ನೆರಡು ನೀರಿನ ಒರತೆಗಳೂ ಎಪ್ಪತ್ತು ಖರ್ಜೂರದ ಮರಗಳೂ" ಇದ್ದವು ಎಂದು ವಿಮೋಚನಾಕಾಂಡ 15:27ರಲ್ಲಿ ಕಾಣುತ್ತೇವೆ. " ಆ ನೀರಿನ ಬಳಿಯಲ್ಲಿ ಇಳುಕೊಂಡರು" ಇಲ್ಲಿ ಇಸ್ರಾಯೇಲ್ಯರ ಗುಣಗುಟ್ಟುವಿಕೆಯ ವಿಷಯದ ದಾಖಲೆ ಇಲ್ಲದಿರುವುದು ನಮಗೆ ಕಂಡುಬರುತ್ತದೆ. ಅವರ ಬೇಡಿಕೆಗಳು ಎಲ್ಲವೂ ಇಲ್ಲಿ ಪೂರೈಸಲ್ಪಟ್ಟಿದ್ದರೂ ಅವರು ದೇವರನ್ನು ಸ್ತುತಿಸಿದರೆಂಬ ಒಂದು ಮಾತೂ ಸಹ ಕಂಡುಬರುವುದಿಲ್ಲ. ನಮ್ಮ ಅಗತ್ಯಗಳೆಲ್ಲವೂ ಪೂರೈಸಲ್ಪಟ್ಟು ನಮ್ಮಲ್ಲಿ ಎಲ್ಲವೂ ಚೆನ್ನಾಗಿ ಸಾಗುತ್ತಿರುವಾಗ ನಾವು ದೇವರಾದ ಯೆಹೋವನ ಮುಂದೆ ಹೆಚ್ಚು ಮೆಚ್ಚಿಗೆಯಾಗಿ ನಡೆಯುವೆವೆಂಬ ಆಲೋಚನೆಯನ್ನು ನಾವು ಎಂದೂ ಮಾಡದಿರೋಣ. ಜೀವಿತಾನುಭವವು ಈ ಸಂಗತಿಯ ವಿರುದ್ಧವಾಗಿ ಬೋಧಿಸುತ್ತದೆ. ಚಿಕಾಗೋ ನಗರದಲ್ಲಿ ಪ್ರಾಧ್ಯಾಪಕರಾಗಿದ್ದ ವೀಮನ್ ಎಂಬುವರು ರಾತ್ರಿಯಲ್ಲಿ ಏಕಾಗ್ರತೆಯ ಪಾಠಾಭ್ಯಾಸದ ಮೂಲಕ ತನ್ನ ಜೀವನದಲ್ಲಿ ಬೌದ್ಧಿಕ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕೆಂದು ಬಯಸಿದರು ಹಾಸ್ಟೆಲಿನ ತನ್ನ ಕೊಠಡಿಯಲ್ಲಿ ಇದ್ದ ಒಬ್ಬ ಸಹಪಾಠಿಯ ಬಗ್ಗೆ ಒಂದು ಕಥೆಯನ್ನು ಹೇಳುತ್ತಾರೆ. ಆತನು ಅಧ್ಯಯನಕ್ಕೆ ಅನುಕೂಲವಾದ ಒಂದು ದೊಡ್ಡ ಆರಾಮ ಕುರ್ಚಿ, ಕಾಲಿನ ಮೆಟ್ಟು, ಹೊರ ಅಂಗಿಯನ್ನು ಕೊಂಡುಕೊಂಡನು. ಕುರ್ಚಿಗೆ ಹೊಂದಿಕೊಂಡಂತೆ ಪಕ್ಕದಲ್ಲಿ ಒಂದು ಕಪಾಟು ಓದಲು ಕಣ್ಣಿಗೆ ಅನುಕೂಲವಾಗುವಂತೆ ಜೋಡಿಸಿದನು. ಒಂದು ವಿಶೇಷ ದೀಪ, ಪೆನ್ಸಿಲು, ಹಾಳೆಗಳು ಅಲ್ಲದೆ ಒಂದು ತಿರುಗಬಲ್ಲ ಪುಸ್ತಕದ ಕಪಾಟು – ಇವುಗಳನ್ನು ಅಳವಡಿಸಿಕೊಂಡನು. ಪ್ರಾಧ್ಯಾಪಕರು ಹೇಳುತ್ತಾರೆ –– ಹೇಗೆ ಆ ಹುಡುಗನು ಸಂಜೆಯಲ್ಲಿ ಮನೆಗೆ ಬಂದು ತನ್ನ ಬಟ್ಟೆ ಹಾಗೂ ಬೂಟನ್ನು ತೆಗೆದು ಮನೆಯ ಜೋಡನ್ನು ಹಾಕಿಕೊಂಡು ತನ್ನ ಕುರ್ಚಿಯಲ್ಲಿ ಸುಖಕರವಾಗಿ ಕುಳಿತು ದೀಪವನ್ನು ತಿರುಗಿಸಿಕೊಂಡು ನಂತರದಲ್ಲಿ ಆತನು ನಿದ್ರೆಹೋಗುತ್ತಿದ್ದನೋ ನಮ್ಮಲ್ಲಿಯೂ ಸಹ ಹೀಗೆಯೇ ಆಗುತ್ತದೆ. ಜಡಭಾವದಿಂದ ಬಡಿದು ಎಬ್ಬಿಸಿ ನಮ್ಮನ್ನು ಹೊರತರಲು ಅನಾನುಕೂಲಕರ ಸನ್ನಿವೇಶದ ಅನುಭವಗಳು ನಮಗೆ ಉಂಟಾಗಬೇಕು. ಇಸ್ರಾಯೇಲ್ಯರು "ಹಾಲೂ ಜೇನೂ ಹರಿಯುವ ವಾಗ್ಧತ್ತ ದೇಶವನ್ನು" ಹೆಚ್ಚಾಗಿ ಬಯಸುವಂತಾಗಲು ದೇವರು ಅವರಿಗೆ ಮಾರ್ಗದಲ್ಲಿ ಕಠಿಣ ಪರಿಸ್ಥಿತಿಯನ್ನು ನೀಡಬೇಕಾಯಿತು. ಈ ಮುಂದಿನ ಮಾತನ್ನು ಹೇಳುವಾಗ ನಿಸ್ಸಂಶಯವಾಗಿ ಇದೇ ಮೋಶೆಯ ಆಲೋಚನೆಯಾಗಿತ್ತು.

ಧರ್ಮೋಪದೇಶಕಾಂಡ 32:10, 12 "ಆತನು ಅವರನ್ನು ಶೂನ್ಯವೂ ಭಯಂಕರವೂ ಆಗಿರುವ ಮರಳುಗಾಡಿನಲ್ಲಿ ಕಂಡು ಪರಾಮರಿಸಿ ಪ್ರೀತಿಯಿಂದ ಅವರಿಸಿಕೊಂಡು ಕಣ್ಣುಗುಡ್ಡಿನಂತೆ ಕಾಪಾಡಿದ್ದೂ; ಹದ್ದು ತನ್ನ ಮರಿಗಳನ್ನು ಗೂಡಿನೊಳಗಿಂದ ಹೊರಪಡಿಸಿ ಅವುಗಳ ಬಳಿಯಲ್ಲಿ ಹಾರಾಡುವಂತೆ ಯೆಹೋವನು ತನ್ನ ರೆಕ್ಕೆಗಳನ್ನು ಚಾಚಿ ಇಸ್ರಾಯೇಲ್ಯರನ್ನು ಆತುಕೊಂಡದ್ದು."

ಹೌದು, ಯಾವ ಮನುಷ್ಯನೂ ತಲುಪಲೂ ಸಾಧ್ಯವಿಲ್ಲದ ದೂರದ ಪರ್ವತದ ಉನ್ನತದಲ್ಲಿ ಕಡಿದಾದ ಬಂಡೆಯ ಗೂಡಿನ ಸುಖಕರ ವಾತಾವರಣದಲ್ಲಿ ಸುರಕ್ಷಿತವಾಗಿ ನೆಲೆಯೂರಿದ್ದೇವೆಂದು ಆ ಚಿಕ್ಕ ಹದ್ದಿನ ಮರಿಗಳು ಭಾವಿಸುತ್ತವೆ. ತಾಯಿ ಹದ್ದು ತಮಗೆ ಆಹಾರ ತಂದು ಕೊಡುತ್ತಿದ್ದು ಗೂಡಿನಲ್ಲಿನ ಅನುಕೂಲಕರ ಸನ್ನಿವೇಶದಲ್ಲಿ ತೃಪ್ತಿಯಿಂದ ಇರುವಾಗ ಅವುಗಳು ಎಲ್ಲಾ ಅನುಕೂಲಗಳಿರುವ ಆ ಗೂಡನ್ನಾದರೂ ಏಕೆ ತೊರೆಯಬೇಕು? ಆದರೆ ಆ ರೀತಿಯಲ್ಲಿ ಇದ್ದರೆ ಮರಿಗಳು ಎಂದೂ ಹಾರಾಡುವುದನ್ನು ಕಲಿಯಲಾರವೆಂದು ತಾಯಿ ಹದ್ದಿಗೆ ತನ್ನ ಹುಟ್ಟರಿವಿನಿಂದ ತಿಳಿದಿರುತ್ತದೆ. ಆದ್ದರಿಂದ ಅವುಗಳನ್ನು ಹೊರದೂಡಲು ಅದು ಗೂಡನ್ನು ಕದಲಿಸುತ್ತದೆ. ಬಹುಶಃ ಸಣ್ಣ ಸಣ್ಣ ಚೂಪಾದ ಕಡ್ಡಿಯನ್ನಾಗಲಿ ಒಂದು ವಿಧದ ಮುಳ್ಳನ್ನಾಗಲಿ ತಂದು ಗೂಡಿನಲ್ಲಿ ನೆಟ್ಟು ಮರಿಗಳಿಗೆ ಅಲ್ಲಿ ಅನುಕೂಲವಿಲ್ಲದ ಹಾಗೆ ಮಾಡುತ್ತದೆ. ಎಷ್ಟಾದರೂ ಆ ಗೂಡನ್ನು ಕದಲಿಸುತ್ತದೆ. ಆಗ ಆ ಚಿಕ್ಕ ಚಿಕ್ಕ ಹದ್ದಿನ ಮರಿಗಳು ಇನ್ನೂ ಗೂಡಿನಲ್ಲಿನ ಸುಖವನ್ನು ಹವಣಿಸುತ್ತಾ ಎದ್ದು ಗೂಡಿನ ಅಂಚಿಗೆ ಬರುವಾಗ ತಾಯಿಹದ್ದು ಇದ್ದಕ್ಕಿದ್ದಂತೆ ತನ್ನ ರೆಕ್ಕೆಯಿಂದ ಆ ಗೂಡಿನ ತುದಿಯನ್ನು ಬಡಿಯಲು ಅವು ಹೊರಗೆ ತಳವಿಲ್ಲದ ಗುಂಡಿಯಂತಿರುವ ಆಳದಲ್ಲಿ ಬಿದ್ದುಹೋಗುತ್ತವೆಯೋ ಎಂಬಂತೆ ಹೊರ ಹೋಗುತ್ತವೆ ಎಂದು ನಾವು ಊಹಿಸಬಹುದು. ಅವು ಆಗ ಹಾರಾಡಲು ಸ್ವಲ್ಪ ಪ್ರಯತ್ನವನ್ನೂ ಮಾಡುವವು. ಇದೇ ತಾಯಿ ಹದ್ದಿಗೆ ಬೇಕಿರುವುದು. ಆಗ ಅದು ತನ್ನ ರೆಕ್ಕೆಗಳನ್ನು ಚಾಚಿ, ಬಹುಶಃ ಆ ಮರಿಗಳ ಕೆಳಗೆ ಹಾರಿ ಅವುಗಳನ್ನು ಹೊತ್ತು ಸುರಕ್ಷಿತವಾಗಿ ವಿಶ್ರಾಂತಿಗೆ ಕೊಂಡೊಯ್ಯುವುದು. ಹೀಗೆ ಮಾಡುವುದರಿಂದ ಮಾತ್ರವೇ ಅವು ಹಾರಾಡಲು ಕಲಿಯುವವು. ಇದರಂತೆಯೇ ದೇವರು ಯಾಕೋಬನೊಂದಿಗೆ (ಅಂದರೆ ಇಸ್ರಾಯೇಲನ ಮಕ್ಕಳೊಂದಿಗೆ) ಅವರು ಅರಣ್ಯದಲ್ಲಿ ಅಲೆಯುವಾಗ ಅವರೊಂದಿಗೆ ತಾನು ನಡಕೊಂಡದ್ದು. ಈ ರೀತಿಯಲ್ಲಿಯೇ ನಮ್ಮೊಂದಿಗೂ ಆತನು ನಡೆದುಕೊಳ್ಳುವುದು.

ನಾವು ಕಾನಾನ್ ಸೇರುವ ಮೊದಲೇ ದೇವರು ನಮಗೆ ಶಾಂತಿ ವಿಶ್ರಾಂತಿ ನೆಮ್ಮದಿಗಳ ಹಲವು ಸಮಯಗಳನ್ನು ಅನುಗ್ರಹಿಸುವನೆಂಬುದು ನಿಜ. ಇದು ನಮಗೆ ಸಿಗುವ ಏಲೀಮ್ ಸ್ಥಳಗಳು. ಇದರ ಉದ್ದೇಶವು ನಾವು ಇಂತಹ ಸಮಯಗಳಲ್ಲಿ ಸಂತೃಪ್ತ ಭಾವದಿಂದ ಕಾಲವನ್ನು ವ್ಯರ್ಥವಾಗಿ ಕಳೆಯದೆ ಅಲ್ಲಿ ನಮ್ಮ ಪ್ರಯಾಣದ ದಣಿವಾರಿಸಿಕೊಂಡು ಮುಂದೆ ಹೋಗಲಿಕ್ಕಿರುವ ಅರಣ್ಯ ಮಾರ್ಗದ ಕಠಿಣತೆಯನ್ನು ಸಹಿಸಲು ಆತ್ಮೀಕಸ್ಥೈರ್ಯವನ್ನು ಕೂಡಿಸಿಕೊಂಡು ಅಧಿಕ ಶಕ್ತರಾಗುವುದಕ್ಕಾಗಿ ಎಂಬುದನ್ನು ಮರೆಯದಿರೋಣ. ಅಲ್ಲಿ ನಮ್ಮ ದೇವರಿಗೆ ಆತನ ಪ್ರೀತಿಪೂರ್ಣವಾದ ಕರುಣೆ ಹಾಗೂ ದಯೆ ಕನಿಕರಾತಿಶಯಗಳನ್ನು ನಾವು ಎಷ್ಟಾಗಿ ಪ್ರಶಂಶಿಸುತ್ತೇವೆಂಬುದನ್ನು ಆತನ ಚಿತ್ತಕ್ಕೆ ವಿಧೇಯರಾಗಿ, ನಂಬಿಕೆಯಿಂದ ನಡೆದು ಆತನನ್ನು ಜೀವಿತದ ಹಾಡಿನ ಮೂಲಕ ಸ್ತುತಿಸಿ ತೋರಿಸೋಣ. ಈ ಸುಖಕರ ಮರಳುಗಾಡಿನ ಬುಗ್ಗೆಗಳನ್ನು ಬಿಟ್ಟು ಕ್ರೂರ ಜಂತುಗಳಿರುವ ಅರಣ್ಯಕ್ಕೆ ಮುನ್ನಡೆಯುವ

ಸಮಯ ಬಂದಾಗ ಏಲೀಮ್ ಬಿಡಲು ಜಿಗುಪ್ಸೆಗೊಳ್ಳದೆ, ಅಲ್ಲಿ ದೊರೆತ ಹೊಸ ಹುರುಪಿನಿಂದ ಮಾರ್ಗದ ಕಾಠಿಣ್ಯವನ್ನು ಎದುರಿಸುವುದಕ್ಕೆ –– ನಮ್ಮನ್ನು ನಡಿಸುವಾತನು ದೇವರೆಂಬ ಅಂಶದಲ್ಲಿ ಭರವಸೆಯುಳ್ಳವರಾಗಿ ಮುನ್ನಡೆಯೋಣ. ಆತನ ಪವಿತ್ರನಾಮಕ್ಕೆ ಸ್ತೋತ್ರ!

ಸ್ವಚಿಂತೆಯನ್ನು ಮರೆತುಬಿಟ್ಟು ದೇವರನ್ನು ಸ್ಮರಿಸು; ಆಗ ಕಷ್ಟಪರೀಕ್ಷಾ ಸಮಯಗಳ ನಡುವೆಯೂ ಸಹ ಎಲ್ಲ ಗ್ರಹಿಕೆಯನ್ನು ಮೀರುವ ದೇವರ ಶಾಂತಿಯನ್ನು ನೀನು ಹೊಂದುವಿ, ಏಕೆಂದರೆ "ನಿನ್ನ ಧರ್ಮಶಾಸ್ತ್ರವನ್ನು ಪ್ರೀತಿಸುವವರಿಗೆ ಸಂಪೂರ್ಣ ಸಮಾಧಾನವಿರುತ್ತದೆ. ಅಂಥವರಿಗೆ ವಿಘ್ನಕರವಾದದ್ದೇನೂ ಇರುವುದಿಲ್ಲ" (ಫಿಲಿಪ್ಪಿ 4:7, ಕೀರ್ತನೆ 119:165) ಎಂದು ಬರೆದದೆ.

## ಭಾಗ–5

# ಇಸ್ರಾಯೇಲ್ಯರ ಹಸಿವು ಬಾಯಾರಿಕೆಗಳು

ವಿಮೋಚನಾಕಾಂಡ 16:1–35; ಅರಣ್ಯಕಾಂಡ 33:10–11

ನೀವು ನೆನಪಿಗೆ ತಂದುಕೊಳ್ಳುವುದೆಂದರೆ, ಏಲೀಮಿನಲ್ಲಿ ಇಸ್ರಾಯೇಲ್ಯರು 70 ಖರ್ಜೂರದ ಮರಗಳ ಅಡಿಯಲ್ಲಿ ವಿಶ್ರಮಿಸಿಕೊಂಡು 12 ಒರತೆಗಳ ನೀರಿನಿಂದ ದಣಿವಾರಿಸಿ ಕೊಂಡವರಾದರೂ ತಮಗೆ ದಯೆ ತೋರಿ ಈ ಅನುಕೂಲ ಮಾಡಿದ ದೇವರಿಗೆ ಕೃತಜ್ಞತೆಯ ಒಂದು ಮಾತನ್ನಾದರೂ ಅರ್ಪಿಸಲಿಲ್ಲವೆಂಬುದು ಕಾಣಬರುತ್ತದೆ. ಅವರು ಯಾತ್ರೆಯ ಪ್ರಾರಂಭದಲ್ಲಿ ಕೇವಲ ಒಂದು ಸಾರಿ ತಮ್ಮ ಸ್ವರಗಳನ್ನೆತ್ತಿ ದೇವರನ್ನು ಕೊಂಡಾಡಿದರು. ಹಾಗೂ ಪ್ರಾರಂಭದಲ್ಲಿ ಒಂದು ಸಾರಿ ಅವರು ಮಹಾ ತ್ಯಾಗಿಗಳಾಗಿ ಹಾಡುವಂತಾದರೂ ಮೋಶೆಯು ಮೊದಲು ಈ ಸ್ತುತಿಗೀತೆಯನ್ನು ಅವರ ಬಾಯಲ್ಲಿ ಇರಿಸಿದನೆಂದು ತೋರುತ್ತದೆ. "ಮೋಶೆಯು ಇಸ್ರಾಯೇಲ್ಯರು ಯೆಹೋವನ ಸ್ತೋತ್ರಕ್ಕಾಗಿ ಈ ಕೀರ್ತನೆ ಯನ್ನು ಹಾಡಿದರು" (ವಿಮೋ. 15:1) ಆದರೂ ಅವರು ಪಿ–ಹಾಹಿರೋತಿನಲ್ಲಿ (ವಿಮೋ. 14:10–12) ಮತ್ತು ಇನ್ನೊಂದು ಸಾರಿ ಮಾರಾ ( ವಿಮೋ. 15:24) ಎಂಬಲ್ಲಿ ಗುಣಗುಟ್ಟಿ ದರು. ಮಾನವ ಹೃದಯಾಂತರಂಗ ಭಾವದ ಎಂತಹ ವರ್ಣನೆ ಇದು! ಸುವಾಸನೆಯುಳ್ಳ ಸೊಗಸಾದ ಹೂವುಗಳನ್ನು ಒಂದು ತೋಟದಲ್ಲಿ ಬೆಳೆಯಬೇಕಾದರೆ ಅದಕ್ಕೆ ಬಹು ಜಾಗರೂಕತೆಯಿಂದ ಗಮನವಿಟ್ಟು ಬೇಸಾಯ ಮಾಡುವುದು ಅಗತ್ಯ (ಸ್ತುತಿಸುವ ಮನೋಭಾವ ಉಂಟಾಗಲು ವಿಶೇಷ ಪ್ರಚೋದನೆಯ ಅವಶ್ಯಕತೆ ಇರುವುದು ಕಾಣಬರುತ್ತದೆ) ಆದರೆ ಮತ್ತೊಂದೆಡೆ ಯಾವ ಪ್ರಯತ್ನವೂ ಇಲ್ಲದೆ ಕಳೆಗಳು ವಿಪುಲವಾಗಿ ಬೆಳೆದುಬಿಡುತ್ತವೆ (ಗುಣಗುಟ್ಟುವಿಕೆಯೂ ಸಹ ಮಾನವನ ಕೃಷಿ ಮಾಡದ ಹೃದಯವೆಂಬ ನೆಲದಿಂದ ಕೇವಲ ಸಹಜವಾಗಿ ಹೊರಹೊಮ್ಮುವ ಕಳೆ ಸಸ್ಯ).

ಈ ದಿನದ ಪಾಠದಲ್ಲಿ ನಾವು ಇಸ್ರಾಯೇಲ್ಯರು ಏಲೀಮ್ ಮತ್ತು ಸೀನಾಯ್ ನಡುವೆ ಇರುವ ಸೀನ್ ಅರಣ್ಯಕ್ಕೆ ಬಂದುದ್ದನ್ನು ಕಾಣುತ್ತೇವೆ. ಅವರು"ಐಗುಪ್ತ ದೇಶದಿಂದ ಹೊರಟು" ಕೇವಲ ಒಂದು ತಿಂಗಳ ಪ್ರಯಾಣ ಮಾಡಿದ್ದರು. (ವಿಮೋ. 16:1) ಆ ವಿವರಣೆ ಹೇಳುವುದೇನೆಂದರೆ "ಅರಣ್ಯದಲ್ಲಿ ಇಸ್ರಾಯೇಲ್ಯರ ಸಮೂಹವೆಲ್ಲಾ ಮೋಶೆ ಆರೋನರ ಮೇಲೆ ಗುಣಗುಟ್ಟಿ ಅವರಿಗೆ – ಈ ಸಮೂಹವನ್ನೆಲ್ಲಾ ಹಸಿವೆಯಿಂದ ಸಾಯಿಸಬೇಕೆಂದು ನೀವು ಈ ಅರಣ್ಯ ದೊಳಕ್ಕೆ ನಮ್ಮನ್ನು ಕರಕೊಂಡು ಬಂದಿರಷ್ಟೆ. ನಾವು ಐಗುಪ್ತ ದೇಶದಲ್ಲಿದ್ದಾಗ ಯೆಹೋವನ ಕೈಯಿಂದ ಸತ್ತಿದ್ದರೆ ಎಷ್ಟೋ ಮೇಲಾಗಿತ್ತು. ಆಗ ಮಾಂಸ ಪಾತ್ರೆಗಳ ಬಳಿಯಲ್ಲಿ ಕೂತು ಹೊಟ್ಟೇ ತುಂಬ ಊಟ ಮಾಡುತ್ತಿದ್ದೇವಲ್ಲಾ ಎಂದು ಹೇಳಿದರು" (ವಿಮೋ. 16:2, 3).

ಸಹಜವಾಗಿಯೇ ಅವರು ಹಸಿದಿದ್ದರು; ಆದರೆ ತಮ್ಮ ಅಗತ್ಯಗಳೆಲ್ಲವನ್ನು ಒದಗಿಸಿಕೊಡುವಂತೆ ಅವರು ವಿಮೋಚಕನಾದ ತಮ್ಮ ಮಹಾ ದೇವರಿಗೆ ಬೇಡಿಕೊಳ್ಳಬಹುದಿತ್ತಲ್ಲಾ? ತಮ್ಮ ದೇವರನ್ನು ಮರೆತು ಅದೆಷ್ಟು ಸುಲಭವಾಗಿ ಅಲ್ಲದೆ ಸತತವಾಗಿ ತಮ್ಮ ಹೃದಯದಲ್ಲಿ ತಪ್ಪು ಮಾಡಿದರು. "...ತಿರಿಗಿ ಐಗುಪ್ತ ದೇಶದ ಕಡೆಗೆ ಮನಸ್ಸಿಟ್ಟರು" (ಅಪೋ. ಕೃತ್ಯಗಳು 7:39) ಆಗ ದೇವರು ಅದಕ್ಕಾಗಿ ನೊಂದುಕೊಂಡದ್ದರಲ್ಲಿ ಏನೂ ಆಶ್ಚರ್ಯವಿಲ್ಲ. "ಆದುದರಿಂದ ನಾನು ಆ ಸಂತತಿಯವರ ಮೇಲೆ ಬಹಳವಾಗಿ ಕೋಪಿಸಿಕೊಂಡು – ಅವರು ಯಾವಾಗಲೂ ಹೃದಯದಲ್ಲಿ ತಪ್ಪಿ ಹೋಗುವವರು ಎಂದು ಹೇಳಿದೆನು. ಹೀಗಿರಲು ಇವರು ನನ್ನ ವಿಶ್ರಾಂತಿಯಲ್ಲಿ ಸೇರುವುದೇ ಇಲ್ಲವೆಂದು ಕೋಪಗೊಂಡು ಪ್ರಮಾಣ ಮಾಡಿದೆನು" (ಇಬ್ರಿಯ 3:10,11) ಹೀಗೆ ಅವರ ಪ್ರತಿಯೊಂದು ಗುಣಗುಟ್ಟುವಿಕೆಯೂ ಹೃದಯ ಪೂರ್ವಕವಾಗಿತ್ತು!!! ಐಗುಪ್ತದಲ್ಲಿ ತಾವು ಅನುಭವಿಸಿದ ಬಾಧೆಗಳನ್ನು ಇಲ್ಲವೇ ಬಿಟ್ಟೀ ಕೆಲಸ ಮಾಡಿಸುವವರು ಮಾಡಿದ ಕ್ರೂರತನಕ್ಕೆ ಅವರು ಕೂಗಿಕೊಂಡದ್ದನ್ನು ಅಥವಾ ಇವೆಲ್ಲವುಗ ಳಿಂದ ತಮ್ಮನ್ನು ತನ್ನ ಸ್ವಹಸ್ತದಿಂದ ವಿಶೇಷವಾಗಿ ವಿಮೋಚಿಸಿದ ತಮ್ಮ ದೇವರನ್ನು ಅವರು ಜ್ಞಾಪಿಸಿಕೊಂಡರೇ? (ವಿಮೋ. 3:7,8) ಪೀಹಾಹಿರೋತಿನಲ್ಲಿ ಕೆಂಪು ಸಮುದ್ರವನ್ನು ದಾಟಿಸಿ ತಮ್ಮನ್ನು ಆಶ್ಚರ್ಯವಾಗಿ ರಕ್ಷಿಸಿ, ನಂತರ ಐಗುಪ್ತದ ಸೈನ್ಯವು ಸಂಪೂರ್ಣವಾಗಿ ನಾಶವಾದದ್ದನ್ನು ತಾವು ಸಾಕ್ಷಿಯಾಗಿ ನೋಡು ವಂತೆ ಮಾಡಿದ ದೇವರನ್ನು ಅವರು ಮರೆಯಲಿಲ್ಲವೇ? (ವಿಮೋ. 14:29–30) ಮಾರಾ ಎಂಬಲ್ಲಿನ ಕಹಿ ನೀರನ್ನು ಹೇಗೆ ದೇವರು ತಮಗಾಗಿ ಸಿಹಿಯಾಗುವಂತೆ ಮಾಡಿದ್ದನ್ನು ಎಂಬುದನ್ನೂ ಸಹ ಅವರು ಮರೆಯಲಿಲ್ಲವೇ? (ವಿಮೋ. 15:23–25) ಹೌದು! ಈ ಎಲ್ಲಾ ಆಶ್ಚರ್ಯವಾದ ಸಂಗತಿಗಳು ಅವರಿಗೆ ಕೇವಲ ಒಂದು ತಿಂಗಳ ಅಲ್ಪಾವದಿಯಲ್ಲೇ ಸಂಭವಿಸಿದವು ತಾವು ಮರೆತದ್ದನ್ನು ಸಮರ್ಥಿಸಿಕೊಳ್ಳಲು ಖಂಡಿತವಾಗಿಯೂ ಅವರಿಗೆ ಇದು ಮರೆತು ಹೋಗುವಷ್ಟು ದೀರ್ಘಕಾಲದಲ್ಲಿ ಸಂಭವಿಸಿದ ಸಂಗತಿಗಳಾಗಿರಲಿಲ್ಲ !

ಆದರೆ ನಾವು ಈಗ ಮಾನವರ ಹೃದಯಗಳು ತೀರಾ ಎಷ್ಟು ವಿಕೃತವಾಗಬಹುದೆಂದು ನೋಡೋಣ. ಏನನ್ನಾದರೂ ಅವರು ನೆನೆದ್ದೇಯಾದರೆ, ಅದು ಯಾವುದನ್ನು? ಬಹಳ ವಿಚಿತ್ರವಾಗಿ ತಮ್ಮನ್ನು ಬಾಧಿಸಿದ ಅದೇ ಐಗುಪ್ತವನ್ನು, ಆದರೆ ಕೇವಲ "... ಮಾಂಸ ಪಾತ್ರೆಗಳ ಬಳಿಯಲ್ಲಿ ಕೂತು ಹೊಟ್ಟೇ ತುಂಬಾ ಊಟ ಮಾಡುತ್ತಿದ್ದುದ್ದನ್ನು" ಮಾತ್ರ ನೆನೆದರು (ವಿಮೋ. 16:3) ಒಬ್ಬರು ಇದನ್ನು ಬಹು ಸಮರ್ಥ ರೀತಿಯಲ್ಲಿ ಹೇಳಿದ್ದಾರೆ.

"ಅಲ್ಪವಾದ ಒಂದು ಕೊರತೆಯ ಎದುರಿನಲ್ಲಿ (ನಮಗೆ ದೊರೆತ) ಹತ್ತು ಸಾವಿರ ಕರುಣಾತಿಶಯಗಳು ಮರೆತು ಹೋಗುತ್ತವೆ. (ಹೇಗೆಂದರೆ) ನಾವು ನಮ್ಮ ಪಾಪಗಳಿಂದ ಸಂಪೂರ್ಣವಾಗಿ ಕ್ಷಮಿಸಲ್ಪಟ್ಟವರಾಗಿ ಆತನ ಪ್ರೀತಿಯಲ್ಲಿ ಅಂಗೀಕರಿಸಲ್ಪಟ್ಟು, ದೇವರಿಗೆ ಬಾಧ್ಯರು ಕ್ರಿಸ್ತನೊಂದಿಗೆ ಸಹ ಬಾಧ್ಯರು ನಿತ್ಯಭಾಗ್ಯದ ನಿರೀಕ್ಷೆಯುಳ್ಳವರಾಗಿ ಮಾಡಲ್ಪಟ್ಟಿ ದ್ದೇವೆ. ಇವುಗಳಿಗೂ ಮಿಗಿಲಾಗಿ ಅರಣ್ಯದೊಳಗಿನ ನಮ್ಮ ಮಾರ್ಗದಲ್ಲಿ ಎಣಿಸಲಾಗದ

ಕರುಣಾತಿಶಯಗಳನ್ನು ಹರಡಿದ್ದಾರೆ. ಇಷ್ಟೆಲ್ಲಾ ಇದ್ದಾಗ್ಯೂ ಸಹ, ಮನುಷ್ಯನ ಹಸ್ತದಷ್ಟು ಇರುವ ಒಂದು ಕಾರ್ಮೋಡವು ಏನಾದರೂ ದಿಗಂತದ ಅಂಚಿನಲ್ಲಿ ಕಂಡುಬಂದರೆ ಸಾಕು; ಕೇವಲ ಈ ಒಂದು ಕಾರ್ಮೋಡವು ಕಟ್ಟಕಡೆಗೆ ನಮ್ಮ ಮೇಲೆ ಇರುವ ಎಲ್ಲಾ ಆಶೀರ್ವಾದಗಳಿಗೆ ಅಡ್ಡಿಮಾಡಬಹುದು".

ಇಸ್ರಾಯೇಲ್ಯರಿಗೆ ಹಸಿವಾದದ್ದು ಇಲ್ಲವೇ ಅವರು ಆಹಾರ ಬಯಸಿದ್ದು ತಪ್ಪಾಗಿರಲಿಲ್ಲ; ಇದಕ್ಕಾಗಿ ದೇವರು ಅವರನ್ನು ಖಂಡಿಸಲೂ ಇಲ್ಲ. ಆದರೆ ಹಿಂದೆ ದೇವರು ಅವರಿಗೆ ತೋರಿದ ದಯೆ ಮಾಡಿದ ಮಹೋಪಕಾರಗಳನ್ನು ಪ್ರಶಂಶಿಸಲು ಹಾಗೂ ಅವುಗಳನ್ನು ಸ್ಮರಿಸುವು ದರಲ್ಲಿ ವಿಫಲರಾದುದು ಆತನಿಗೆ ದುಃಖಪಡಿಸಿತು. ಅಂತಿಮವಾಗಿ ಇದು ಅವರ ವೈಫಲ್ಯವನ್ನು ಸಾಭೀತುಪಡಿಸಿತು. ದೇವರ ಮಹೋಪಕಾರಗಳನ್ನು ಪ್ರಶಂಶಿಸಿ ಅದನ್ನು ಸ್ಮರಿಸುವುದರಲ್ಲಿ ನಿರಂತರವಾಗಿ ವಿಫಲರಾಗುವುದು ದೇವರ ದೃಷ್ಟಿಯಲ್ಲಿ ಅಪನಂಬಿಗಸ್ತಿಕೆ ಎಂದು ಎಣಿಸಲ್ಪಡುತ್ತದೆ. ಹೌದು, ಅಂತಿಮವಾಗಿ ಒಬ್ಬರಲ್ಲಿನ ಅಪನಂಬಿಕೆ ಅವಿಧೇಯತೆಗಳೇ ಅವರಿಗೆ ಇನ್ನು ಮುಂದೆ ಕೃಪೆ ದೊರಕದಂತೆ ಮತ್ತು ಆತನ "ಕಾನಾನ್ ವಿಶ್ರಾಂತಿಗೆ" ಸೇರದಂತೆ ಅವಕಾಶಗಳನ್ನು  ಮುಚ್ಚಿಹಾಕುತ್ತವೆ.

ಅವರ ಅಗತ್ಯತೆಗಳು ದೇವರಿಗೆ ಖಂಡಿತವಾಗಿಯೂ ತಿಳಿದಿತ್ತು. ಆದರೆ ಆತನು ಅವುಗಳನ್ನು ಏಕೆ ಪೂರೈಸಲಿಲ್ಲ? ಆಹಾ, ಏಕೆಂದರೆ ಆತನು ಅವರಲ್ಲಿ ಜಯವನ್ನು ಉಂಟುಮಾಡುವ ನಂಬಿಕೆಯನ್ನು ಅಭಿವೃದ್ಧಿ ಪಡಿಸಲು ಬಯಸುತ್ತಿದ್ದನು. ಇಂತಹ ಒಂದು ನಂಬಿಕೆ ಅಬ್ರಹಾಮನ ವಿಶೇಷ ಲಕ್ಷಣವಾಗಿತ್ತು. ಅಬ್ರಹಾಮನು ಮಾಡಿದ ಕಾರ್ಯಗಳನ್ನು ಮಾಡಿ ಅವನು ತೋರಿದ ನಂಬಿಕೆಯನ್ನು ತೋರಿಸಿದ್ದೇಯಾದರೆ ಅವರು ನಿಜವಾಗಿ ಆತನ ಮಕ್ಕಳಾಗುತ್ತಿ ದ್ದರು. (ಯೋಹಾನ 8:39) ತಾವು ಗುಣಗುಟ್ಟಿದ ಪ್ರತಿಯೊಂದು ಸಂದರ್ಭ ವನ್ನು ತಮ್ಮ ನಂಬಿಕೆಯನ್ನು ತೋರ್ಪಡಿಸುವ ಒಂದು ಸದಾವಕಾಶವನ್ನಾಗಿ ಅವರು ಉಪಯೋಗ ಮಾಡಿಕೊಳ್ಳಬಹುದಿತ್ತು. ಪ್ರಿಯ ಮಿತ್ರರೇ, ಈ ಸಂದರ್ಭಾವಕಾಶಗಳು ದೇವರು ಸಂಕಲ್ಪಿಸಿ ನೇಮಿಸಿದವುಗಳಾಗಿದ್ದವು. ಇಲ್ಲಿ ನಮಗೆ ಎಂಥಾ ಒಂದು ಪಾಠ ಇದೆ! ನಮಗೆ ಶೋಧನೆಗಳು ಮತ್ತು ನಿರಾಶೆಗಳು ಉಂಟಾದಾಗ, ದೇವರು ನಮಗೆ ನಂಬಿಕೆಯನ್ನು ತೋರ್ಪಡಿಸುವ ಒಂದು ಅವಕಾಶವನ್ನು ಈ ಮೂಲಕ ನೀಡುತ್ತಿದ್ದಾನೆಂದು ನಾವು ತಿಳಿಯೋಣ. ಆದರೆ ಈ ಸಂದರ್ಭಗಳಲ್ಲಿ ನಾವು ಮನುಷ್ಯ ಬಲವನ್ನು ಬಹುವಾಗಿ ಆತುಕೊಂಡದ್ದೇಯಾದಲ್ಲಿ ಹಿಂದೆ ಇಸ್ರಾಯೇಲ್ಯರು ಮಾಡಿದಂತೆ ನಾವೂ ಸಹ ಗುಣಗುಟ್ಟಿ ಚಡಪಡಿಸುವುದರಲ್ಲಿ ಈ ಅವಕಾಶಗಳನ್ನು ವಿನಿಯೋಗಿಸುವಂತಾಗಬಹುದು. ಅವರಿಗೆ ಸಂಭವಿಸಿದ ಆ ಸಂಗತಿಗಳು ಛಾಯಾ ರೂಪ ನಿದರ್ಶನಗಳಾಗಿ ಯುಗಾಂತ್ಯಕ್ಕೆ ಬಂದ ನಮಗೆ ಬುದ್ಧಿವಾದಗಳಾಗಿ ಬರೆದವೆ ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದು ಒಳ್ಳೆಯದು. (1ಕೊರಿಂಥ 10:11)

ವಿವರಣೆಯು ಅವರು "ಮೋಶೆ ಅರೋನರ ವಿರುದ್ಧ" ಗುಣಗುಟ್ಟಿದರೆಂದು ಪ್ರಕಟಿಸುತ್ತದೆ. ಅವರ ಆ ಬಿಕ್ಕಟ್ಟಿಗೆ ನಿಸ್ಸಂದೇಹವಾಗಿ ಮೋಶೆ ಆರೋನರು ಪರೋಕ್ಷವಾಗಿ ಕಾರಣರಾಗಿದ್ದರೂ ಸಹ ಸ್ವತಃ ದೇವರೇ ಆ ಬಿಕ್ಕಟ್ಟಿಗೆ ಪ್ರಧಾನ ಕಾರಣರಾಗಿದ್ದರು. ಆದ್ದರಿಂದ ದೇವರು ನೇಮಿಸಿದ ಸೇವಕರ ವಿರುದ್ಧ ಮಾಡುವ ಯಾವುದೇ ಆಪಾದನೆಗಳೂ ಮತ್ತು ಅವರಲ್ಲಿ ಏನಾದರೂ ತಪ್ಪು ಕಂಡುಹಿಡಿಯುವುದೂ ಸಹ, ಬಹು ನಿರ್ದಿಷ್ಟವಾಗಿ ದೇವರ ವಿರುದ್ಧ ಮಾಡಿದಂತಾಗುತ್ತದೆ.

ಅವರು ಕೆಲವು ವಿಶೇಷ ಪಾಠಗಳನ್ನು ಕಲಿಯುವ ಅಗತ್ಯವಿತ್ತೆಂಬುದು ಸ್ಪಷ್ಟವಾಗುತ್ತದೆ. ದೇವರು ಅವರ ಪರವಾಗಿ ಅದ್ಭುತಗಳನ್ನು ನಡಿಸಿ ಅನೇಕ ಆಶೀರ್ವಾದಗಳನ್ನು ನೀಡಿದಾಗ್ಯೂ ಅವರು ಇನ್ನೂ ಕಲಿಯುವುದರಲ್ಲಿ ವಿಫಲರಾಗಿದ್ದರು. ತಾವು ನಿಜವಾಗಿಯೂ ಎಷ್ಟು ಭಾಗ್ಯಶಾಲಿಗಳು ಎಂಬುದನ್ನು ಅವರು ಅರಿಯಲಿಲ್ಲವೆಂದು ಕಾಣುತ್ತದೆ. ಏಕೆಂದರೆ ಈ ಶೋಧನೆ ಮತ್ತು ಕಷ್ಟಗಳು ದೇವರು ಇನ್ನೂ ಅವರ ವಿಷಯದಲ್ಲಿ ಶ್ರಮಿಸುತ್ತಾ ಇದ್ದನೆಂಬುದನ್ನು ಸ್ಪಷ್ಟಪಡಿಸುತ್ತವೆ. ಎಂತಹಾ ಪಾಠ ಇಲ್ಲಿ ನಮಗಿರುವುದು. ಆತ್ಮೀಕ ಇಸ್ರಾಯೇಲ್ಯರಾಗಿ, ನಾವೂ ಸಹ ಸೀನ್ ಅರಣ್ಯದ ಸನ್ನಿವೇಶಗಳಿಗೆ ತಲುಪಿ, ಅಲ್ಲಿರುವಂತಹ ಪರಿಶೋಧನೆ ಶಿಕ್ಷಾನುಭವಗಳನ್ನು ಪಡೆಯಬೇಕು. ದೇವರೇ ಅವುಗಳನ್ನು ಬರಮಾಡಿದ್ದ ರಿಂದ ಆತನೇ ಅವುಗಳಿಗೆ ಮೊದಲನೇ ಕಾರಣನಲ್ಲವೇ? ಆದಾಗ್ಯೂ ಹೇಗೆ ನಾವು ಆತನ ಸಾಧನಗಳಾದ ಎರಡನೇ ಕಾರಣರಾದವರ ವಿರುದ್ಧ ಗುಣಗುಟ್ಟಿ ಅವರನ್ನು ದೂರುವವರಾಗಿ ಆ ಮೂಲಕ ದೇವರ ಅನುಗ್ರಹಗಳಿಗೆ ವಿರುದ್ಧವಾಗಿ ದ್ರೋಹಿಗಳಾದವೆಂಬ ಅರಿವಿಲ್ಲದವ ರಾಗಿ ಇದ್ದೇವಲ್ಲವೇ. ಓಹ್, ನಾವು ಅಂತಹ ಸಮಯಗಳಲ್ಲಿ ಕೇವಲ ನಂಬಿಕೆಯುಳ್ಳವರಾಗಿ, ನಮ್ಮ ಕಣ್ಣುಗಳನ್ನು ಕಾಣುವವುಗಳ ಮೇಲಿನಿಂದ ತೆಗೆದು ಕಾಣದಿರುವ ನಿತ್ಯವಾದವುಗಳ ಮೇಲೆ ಇರಿಸಿ, ಈ ಕಷ್ಟ ಪರಿಶೋಧನೆಗಳಲ್ಲಿ ದೇವರು ಇನ್ನೂ ನಮ್ಮೊಂದಿಗಿದ್ದು "ಬೆಳಕಿನ ರಾಜ್ಯದೊಳಗೆ ದೇವಜನರ ಭಾದ್ಯತೆಯಲ್ಲಿ" ಪಾಲುಗಾರರಾಗಲು ಯೋಗ್ಯರಾಗುವಂತೆ ದೇವರು ನಮ್ಮ ವಿಷಯದಲ್ಲಿ ಶ್ರಮಿಸುತ್ತಾ ಇದ್ದಾನೆಂಬುದನ್ನು ಕಂಡುಕೊಂಡವರೇ ಆದರೆ ಒಳ್ಳೆಯದು. ಇಂತಹ ಒಂದು ನಂಬಿಕೆಯು ನಿಶ್ಚಯವಾಗಿ ನಾವು ದೇವರಿಗೆ ಪ್ರತಿಯಾಗಿ **"ಕೃತಜ್ಞತಾ ಯಜ್ಞಗಳನ್ನು"** ಅರ್ಪಿಸುವ ಹಾಗೆ ನಮ್ಮನ್ನು ನಡೆಸುತ್ತದೆ (ಕೀರ್ತನೆ 107:22). ಏಕೆಂದರೆ ಕಟುವಾದ ಪರಿಶೋಧನೆಗಳು ಸಹ ನಮ್ಮನ್ನು ಕೇವಲ ದೇವರ ಬಳಿಗೆ ಕರೆತಂದು ನಮ್ಮ ಕಾನಾನ್ ವಿಶ್ರಾಂತಿಗೆ ಸೇರಿಸುವ ಉದ್ದೇಶವುಳ್ಳದ್ದಾಗಿದೆ.

" ನನ್ನನ್ನು ಮೇಲಕ್ಕೆತ್ತುವುದು ಒಂದು ಶಿಲುಬೆಯೇ ಆದರೂ
ಆಗಲೂ ನನ್ನ ಹಾಡೆಲ್ಲವೂ ... ನಿನ್ನ ಹತ್ರಕ್ಕೇ"

ಈ ದಿನದ ಪಾಠದಲ್ಲಿ ಮೋಶೆಯು ಅವರ ಪರವಾಗಿ ಮಧ್ಯಸ್ಥಿಕೆ ವಹಿಸಿ ವಿಜ್ಞಾಪಿಸಿದನೆಂದು ನಾವು ಓದುವುದಿಲ್ಲ. ಪ್ರತಿಯಾಗಿ ದೇವರು ಈ ಬಗೆಯ ಯಾವುದಾದರೂ ವಿಜ್ಞಾಪನೆಯನ್ನು ನಿರೀಕ್ಷಿಸಿದ್ದನೆಂದು ಕಾಣಬರುತ್ತದೆ. ಏಕೆಂದರೆ ವಾಕ್ಯವು ಹೇಳುವುದು:

ವಿಮೋ. 16:4, 12 – " ಆಗ ಯೆಹೋವನು ಮೋಶೆಗೆ – ಇಗೋ, ನಾನು ಆಕಾಶದಿಂದ ನಿಮಗೋಸ್ಕರ ಆಹಾರವನ್ನು ಸುರಿಸುವೆನು. ಈ ಜನರು ಪ್ರತಿದಿನವೂ ಹೊರಗೆ ಹೋಗಿ ಆಯಾ ದಿನಕ್ಕೆ ಬೇಕಾದಷ್ಟು ಮಾತ್ರ ಕೂಡಿಸಿಕೊಳ್ಳಬೇಕು. ಇದರಿಂದ ಇವರು ನನ್ನ ಬೋಧನೆಯನ್ನು ಅನುಸರಿಸಿ ನಡೆಯುವವರೋ ಅಲ್ಲವೋ ಎಂದು ಪರೀಕ್ಷಿಸಿ ತಿಳಿಯುತ್ತೇನೆ. ... ಇಸ್ರಾಯೇಲ್ಯರ ಗುಣಗುಟ್ಟುವಿಕೆಯು ನನಗೆ ಕೇಳಿಸಿತು. ನೀನು ಅವರಿಗೆ – ಸಾಯಂಕಾಲದಲ್ಲಿ ಮಾಂಸವನ್ನು ಹೊತ್ತಾರೆಯಲ್ಲಿ ರೊಟ್ಟಿಯನ್ನು ತಿನ್ನುವಿರಿ; ಇದರಿಂದ ನಾನು ನಿಮ್ಮ ದೇವರಾದ ಯೆಹೋವನೆಂಬುದು ನಿಮಗೆ ಗೊತ್ತಾಗುವುದೆಂದು ಹೇಳಬೇಕು ಎಂಬುದೇ"

ಇದು ಎಣಿಸಲಶಕ್ಯವಾದ ದೇವರ ಕೃಪಾನುಗ್ರಹವು ಹೊರಸೂಸುವುದರ ಒಂದು ಅದ್ಭುತ ಪ್ರದರ್ಶನವಾಗಿದೆ! ಮೋಶೆಯು ಇಸ್ರಾಯೇಲ್ಯರ ಅಗತ್ಯತೆಗಳ ವಿಷಯವಾಗಿ ದೇವರನ್ನು ಇನ್ನೂ ವಿಜ್ಞಾಪಿಸುವ ಮೊದಲೇ ಅವುಗಳ ಒದಗಿಸಲ್ಪಡುವದೆಂಬ ಭರವಸೆ ಯನ್ನು ದೇವರು ಅವರಿಗೆ ನೀಡಿದನು. ಅದೇ ರೀತಿಯಲ್ಲಿ ನಮ್ಮ ದೇವರೂ ಸಹ ಈಗ ನಮ್ಮೊಂದಿಗೆ ವ್ಯವಹರಿಸುವನು. "ಅವರು ಬೇಡುವುದರೊಳಗೆ ಸದುತ್ತರವನ್ನು ದಯ–ಪಾಲಿಸುವೆನು; ಅವರು ಹೇಳುತ್ತಿರುವಾಗಲೇ ಕೇಳುವೆನು" (ಯೆಶಾಯ 65:24) ಆದಾಗ್ಯೂ ದೇವರು ನಮ್ಮೊಂದಿಗೆ ಹೀಗೆ ನಡೆದುಕೊಳ್ಳುವುದು ನಾವು ಗುಣಗುಟ್ಟಿದ್ದರಿಂದಲ್ಲ. ಆದರೆ ನಾವು ಆತನು ಆರಿಸಿಕೊಂಡ ಜನರಾಗಿರುವುದರಿಂದಲೇ ಎಂಬುದನ್ನು ಗಮನದಲ್ಲಿಟ್ಟು–ಕೊಳ್ಳೋಣ ಹಾಗೂ ನಮ್ಮ ನಿರಂತರ ಬಲಹೀನತೆಗಳಲ್ಲಿಯೂ ಸಹ ಆತನು ನಮ್ಮೊಂದಿಗೆ ಶ್ರಮಿಸುತ್ತಿದ್ದಾನೆ. ಆತನು ನಮ್ಮ ಕರ್ತನೆಂದು ನಾವು ಹೀಗೆ ತಿಳಿಯಬಹುದು. ಏಕೆಂದರೆ ಬೇರೆ ಯಾರೂ ನಮ್ಮನ್ನು ಈ ರೀತಿಯಲ್ಲಿ ದೀರ್ಘಶಾಂತಿಯಿಂದ ಸಹಿಸುತ್ತಾ ಬರಲಾರರು.

ಶಾರೀರಿಕ ಇಸ್ರಾಯೇಲ್ಯರ ಆಸೆಗಳನ್ನು ದೇವರು ಎಷ್ಟು ನಿರ್ಧಿಷ್ಟವಾಗಿ ಪೂರೈಸಿದನು ಎಂಬುದನ್ನು ಗಮನಿಸಿ, ಐಗುಪ್ತದ ಮಾಂಸದ ಪಾತ್ರೆ ಹಾಗೂ ಹೊಟ್ಟೆತುಂಬುವ ಊಟಕ್ಕಾಗಿ ಅವರು ಗುಣಗುಟ್ಟಿದರು. ಆತನು ಅವರಿಗೆ ಮಾತುಕೊಟ್ಟಿದ್ದು ಮಾತ್ರವಲ್ಲದೆ ಸಂಜೆಯಲ್ಲಿ ಮಾಂಸವನ್ನು ಉದಯದಲ್ಲಿ ಮನ್ನವನ್ನು ಆಹಾರವಾಗಿ ಅವರಿಗೆ ದಯಪಾಲಿಸಿದನು. ದೇವರಿಗೆ ಆ ವಿಷಯವನ್ನು ಅವರು ಬಿಟ್ಟಿದ್ದೇ ಆಗಿದ್ದರೆ ಆತನು ಕೇವಲ ಮನ್ನವನ್ನು ಕೊಟ್ಟು ಅದರ ಮುಖಾಂತರವಾಗಿಯೇ ತಮ್ಮ ಎಲ್ಲಾ ಅಗತ್ಯಗಳು ಪೂರೈಸುವಂತೆ ಮಾಡುತ್ತಿದ್ದನು. ಆದರೆ ಅವರು ಮಾಂಸವನ್ನು ಅಪೇಕ್ಷಿಸಿದರು ಆ ಮಾಂಸವನ್ನು ಪಡೆದರು.

ಮಾಂಸವು ಶರೀರಭಾವಕ್ಕೆ ಒಂದು ಸಂಕೇತ ಹಾಗೂ ಶರೀರವು ಮಾಂಸವನ್ನು ಆಹಾರ ಮಾಡಿಕೊಂಡು ತನ್ನನ್ನೇ ವಿನಾಶ ಮಾಡಿಕೊಳ್ಳುತ್ತದೆ. ಮಾಂಸವು ಹೀಗೆ ಕೃಶವಾಗಿಸುವ ಆಹಾರವಾಗಿದ್ದು ಅರಣ್ಯ ಮಾರ್ಗದಲ್ಲಿನ ಕಠಿಣತೆಗಳನ್ನು ಜಯಿಸಲು ಬಲಸ್ಥೈರ್ಯದ ಅವಶ್ಯಕತೆ ಇರುವ ವಿಮೋಚಿಸಲ್ಪಟ್ಟ ಜನರಿಗೆ ಇದು ಯೋಗ್ಯವಲ್ಲ. ಜೀವವುಳ್ಳ ಆಹಾರ ಇಲ್ಲವೇ ಜೀವ ಸತ್ವವುಳ್ಳ ಆಹಾರ ಅವರಿಗೆ ಅವಶ್ಯ ಈ ಆಹಾರವನ್ನು ಐಗುಪ್ತವಾಗಲೀ, ಅರಣ್ಯವಾಗಲಿ ಒದಗಿಸಲು ಸಾಧ್ಯವಿಲ್ಲ. ಅದರಂತೆಯೇ ದೇವರು ತಾನೇ "ಸ್ವರ್ಗದಾನ್ಯವನ್ನು" ಆಹಾರವಾಗಿ ಒದಗಿಸಿದನು – ಅದುವೇ ಮನ್ನಾ!

ಮನ್ನದ ವಿಷಯವನ್ನು ಹೆಚ್ಚು ವಿಶೇಷವಾಗಿ ಪರಿಗಣಿಸುವ ಮುನ್ನ ನಾವು ಇಸ್ರಾಯೇಲ್ಯರಿಗೆ ಒದಗಿಸಲ್ಪಟ್ಟ ಮಾಂಸದ ಬಗ್ಗೆ ಕೆಲವು ಹೆಚ್ಚಿನ ವಿಷಯಗಳಿಗೆ ಗಮನ ನೀಡೋಣ. ಕೇವಲ ಎರಡು ಸಾರಿ ದೇವರು ಮಾರ್ಗ ಮಧ್ಯದಲ್ಲಿ ಅವರಿಗೆ (ಲಾವಕ್ಕಿಯ) "ಮಾಂಸ" ದೊರಕುವಂತೆ ಮಾಡಿದನು. ಈ ಸಂದರ್ಭದಲ್ಲಿ ಒಂದು ಸಾರಿ (ವಿಮೋ. 16:12–14) ಮೋಶೆಯ ಬಿನ್ನಹವಿಲ್ಲದೆ ದೇವರು ಅವರಿಗೆ ದಯಪಾಲಿಸಿದನು. ನಂತರದಲ್ಲಿ (ಅರಣ್ಯಕಾಂಡ 11:31) ಮೋಶೆಯ ಮಧ್ಯಸ್ಥಿಕೆಯಲ್ಲಿ ಕಿಬ್ರೋತ್–ಹತಾವ ಎಂಬ ಸ್ಥಳದಲ್ಲಿ ಮತ್ತೆ ಅದನ್ನು ಒದಗಿಸಲಾಯಿತು. ಇಲ್ಲಿ ಗಮನಿಸಬೇಕಾದ ಕುತೂಹಲಕಾರಿ ಸಂಗತಿ ಎಂದರೆ –– ಮೊದಲನೇ ಸಂದರ್ಭದಲ್ಲಿ ದೇವರು ಅವರ ಮೇಲೆ ಬಾಧೆಯನ್ನು ಬರಮಾಡಲಿಲ್ಲ. ಆದರೆ ಎರಡನೇ ಸಂದರ್ಭದಲ್ಲಿ ಬಹುಮಂದಿ ಭಾದೆಯಿಂದ ನಾಶವಾದರು. ಇಲ್ಲಿ ಕೆಲವು ಸಂಗತಿಗಳನ್ನು ಗಮನಿಸುವುದು ನಮಗೆ ಒಳ್ಳೆಯದು. ಏನೆಂದರೆ ದೇವರು ತನ್ನ ಜ್ಞಾನಾನುಸಾರ ಅಲ್ಲಿಯವರೆಗೆ ಮಾಂಸವನ್ನು ಕೊಡಲು ನಿರಾಕರಿಸಿದ್ದರಿಂದ ಅದನ್ನು ಬಿಟ್ಟುಬಿಡುವುದು ಅವರಿಗೆ ಒಳ್ಳೆಯದಾಗಿರುತ್ತಿತ್ತು. ಅವರು ಆಗಷ್ಟೇ ಐಗುಪ್ತವನ್ನು ಬಿಟ್ಟು ಬಂದಿರಲಾಗಿ ಅದರ ಪ್ರಭಾವ ಅವರಲ್ಲಿ ಇನ್ನೂ ಸಂಪೂರ್ಣವಾಗಿ ತೆಗೆಯಲ್ಪಡದೆ ಇದ್ದದ್ದರಿಂದ ದೇವರು ಅವರಿಗೆ ಮೊದಲನೇ ಸಂದರ್ಭದಲ್ಲಿ ರಿಯಾಯಿತಿ ನೀಡಿದನು. ಅವರು ಸೀನಾಯಿ ಪ್ರದೇಶವನ್ನು ತಲುಪಿ ಅಲ್ಲಿ ದೇವದರ್ಶನ ಗುಡಾರ ಸ್ಥಾಪಿಸಲ್ಪಟ್ಟ ನಂತರ ಸಂಗತಿ ಬೇರೆಯಾಗಿತ್ತು. ಆಗ ಅಲ್ಲಿ ದೇವರು ಅವರಿಂದ ಅಧಿಕವಾದ ನಂಬಿಕೆ ಹಾಗೂ ತನ್ನ ಚಿತ್ತಕ್ಕೆ ಅಧೀನರಾಗುವುದನ್ನು ಅಪೇಕ್ಷಿಸಿದ್ದುದು ಬಹು ಸಮಂಜಸ. ಎರಡನೇ ಸಂದರ್ಭದಲ್ಲಿ ಅವರ ಮಾಂಸದ ಕೋರಿಕೆಯನ್ನು ಈಡೇರಿಸುವುದರ ಜೊತೆಗೆ ಅವರಿಗೆ ತನ್ನ ಅಸಂತೋಷದ ಗುರುತಾಗಿ ಮರಣಕರ ವ್ಯಾಧಿಯನ್ನು ಬರಮಾಡುವುದರ ಮೂಲಕ ಒಂದು ಅಗತ್ಯವಾದ ಪಾಠವನ್ನು ಕಲಿಸಿದನು. ದೇವರು ಅಷ್ಟು ತೀವ್ರವಾಗಿ ಅವರೊಂದಿಗೆ ನಡೆದುಕೊಂಡದ್ದರಲ್ಲಿ ಆಶ್ಚರ್ಯವೇನೂ ಇಲ್ಲ (ಅರಣ್ಯಕಾಂಡ 11:33).

ಅಪೊಸ್ತಲನಾದ ಪೌಲನು ನಮಗೆ ಹೇಳುವುದೇನೆಂದರೆ – "ಎಲ್ಲ ಶರೀರಗಳು ಒಂದೇ ವಿಧವಾದವುಗಳಲ್ಲ; ಮನುಷ್ಯನ ಶರೀರ ಬೇರೆ, ಪಶುಗಳ ಶರೀರ ಬೇರೆ, ಪಕ್ಷಿಗಳ ಶರೀರ ಬೇರೆ, ಮೀನುಗಳದ್ದು ಬೇರೆ" (1ಕೊರಿಂಥ 15:39) ದೇವರು ಈ ಎರಡು

ಸಂದರ್ಭಗಳಲ್ಲೂ ಇಸ್ರಾಯೇಲ್ಯರಿಗೆ ಮಾಂಸವಾಗಿ ತೆಗೆದುಕೊಳ್ಳಲು ಅಪ್ಪಣೆಕೊಟ್ಟದ್ದು ಪಕ್ಷಿಗಳ (ಲಾವಕ್ಕಿ) ಮಾಂಸವನ್ನು ಎಂಬುದನ್ನು ಗಮನಿಸೋಣ. ಇಲ್ಲಿ ಒಂದು ವಿಶೇಷವಿದೆ ಎಂದು ನಮಗೆ ತೋರುತ್ತದೆ. "ಶರೀರಭಾವವು ಅಭಿಲಾಷಿಸುವುದೆಲ್ಲವೂ ಆತ್ಮನಿಗೆ ವಿರೋಧವಾದ್ದರಿಂದ" (ಗಲಾತ್ಯ 5:7) ಈ ನಿರೂಪಣೆಯಲ್ಲಿ ಪಶುಗಳ ಮತ್ತು ಪಕ್ಷಿಗಳ ಮಾಂಸಗಳು ನಶಿಸುವ ದೇಹಕ್ಕೆ ನೀಡುವ ಸತ್ವಶಕ್ತಿಯ ಪರಿಮಾಣಗಳಲ್ಲಿ ಒಂದು ವ್ಯತ್ಯಾಸವಿದೆ ಎಂದು ತೋರಿಬರುತ್ತದೆ. ಪಕ್ಷಿಗಳಿಗಿಂತ ಪಶುಗಳು ಭೂಮಿಗೆ ಹತ್ತಿರದಲ್ಲಿ ವಾಸಿಸುತ್ತವೆ. ಪಕ್ಷಿಗಳಿಗೆ ರೆಕ್ಕೆ ಇರುವುದರಿಂದ ಕನಿಷ್ಟ ಸ್ವಲ್ಪ ಕಾಲವಾದರೂ ಗುರುತ್ವಾಕರ್ಷಣದ ಒತ್ತಡವನ್ನು ಮೀರಿಹೋಗುವ ಸಾಮರ್ಥ್ಯವಿರುತ್ತದೆ. ಇದರಿಂದ ಶರೀರ ಭಾವದ ಇಚ್ಚೆಗಳೆಲ್ಲವೂ ಸಮಾನವಾಗಿ ಕೀಳಾದವುಗಳಲ್ಲ ಎಂದು ಹೇಳುವಂತಾಗುತ್ತದೆ. ಕೆಲವು ಇಚ್ಛೆಗಳು ಸಹಜವಾಗಿ ಇತರ ಇಚ್ಚೆಗಳಿಗಿಂತ ಕೀಳಾದವುಗಳು. ವಾಸ್ತವದಲ್ಲಿ ಕೆಲವು ಇಚ್ಚೆಗಳು ಸ್ವಲ್ಪಮಟ್ಟಿಗೆ ಮೇಲಾದವುಗಳಾಗಿ ತಿರುಗುವವು. ಇದನ್ನು ಲೋಕವು "ಮನರಂಜನಾ ಮೌಲ್ಯ" ಎಂದು ಹೇಳುತ್ತದೆ. ಇವುಗಳಲ್ಲಿ ಕೆಲವು – ಮುಗ್ಧ ವಿನೋದ ವಿಲಾಸಗಳು. ಸಾಮಾಜಿಕ ಕಟ್ಟುಪಾಡುಗಳು, ಸಾಹಿತ್ಯ ಸಂಶೋಧನೆ, ಕೆಲವು ವೈಯಕ್ತಿಕ ಹವ್ಯಾಸಗಳು, ಆತ್ಮೀಕ ಇಸ್ರಾಯೇಲ್ಯರಿಗೆ ಇವುಗಳು ಪಕ್ಷಿಯ ಮಾಂಸದಂತೆ ಇರುವುದು.

ಪರಿಪೂರ್ಣ ನ್ಯಾಯಸಮ್ಮತವಾದ ಆಹಾರಗಳು ಬಹುಶಃ ಮನುಷ್ಯರು ಶರೀರವನ್ನು ಪೋಷಿಸುವ ಇತರ ಆಹಾರಗಳಿಗಿಂತಲೂ ಉತ್ತಮವಾಗಿದ್ದರೂ, ಅದು ಭೂ ಸಂಬಂಧವಾಗಿದ್ದು ಲೌಕಿಕವಾಗಿರಲಾಗಿ, ವಿಮೋಚಿತರಾದ ದೇವರ ಇಸ್ರಾಯೇಲ್ಯರಿಗೆ ಇದು ಯೋಗ್ಯವಲ್ಲ. ಅರಣ್ಯ ಯಾತ್ರೆಯಲ್ಲಿ ನಾವು ಇನ್ನೂ ಬಾಲಕರಾಗಿದ್ದಾಗ ಈ ಕೆಲವು ಶಾರೀರಿಕ ಹವ್ಯಾಸಗಳು ನಮ್ಮ ಆತ್ಮೀಕ ಜೀವಿತವನ್ನು ಸರಿದೂಗಲು ಅವಶ್ಯವೆಂದು ಭಾವಿಸಿದ್ದೆವು. ಪರಲೋಕದಿಂದ ಇಳಿದುಬಂದ ರೊಟ್ಟಿಯಾಗಿರುವ ಕ್ರಿಸ್ತನ ವಿಷಯವಾದ ಕೃಪೆಯಲ್ಲಿಯೂ ಜ್ಞಾನದಲ್ಲಿಯೂ ನಾವು ಬೆಳೆದಂತೆ ಇವುಗಳು ನಿಶ್ಚೇತನಗೊಳಿಸುವವುಗಳೆಂದು ಗ್ರಹಿಸಿಕೊಳ್ಳುವ ಒಂದು ಹಂತ ತಲುಪುವೆವೆಂದು ದೇವರು ತನ್ನ ಕೃಪೆಯಿಂದ ಅವುಗಳನ್ನು ಅನುಭವಿಸಲು ಅನುಮತಿ ಮಾಡಿದ್ದಾನೆ. ಆದರೆ ಒಂದು ವೇಳೆ ಹಿಂದಿನ ಕಾಲದ ಇಸ್ರಾಯೇಲ್ಯರ ಹಾಗೆ ನಾವು "ಈ ಮಾರ್ಗದಲ್ಲಿ" ಬಂದು ಕೆಲವು ಕಾಲವಾದ ಮೇಲೆ ಈ ಸಂಗತಿಗಳಿಗಾಗಿ ಇನ್ನೂ ಹಾತೊರೆಯುತ್ತಿದ್ದರೆ ದೇವರು ಇವುಗಳನ್ನು ನಮಗೆ ದಯಪಾಲಿಸಲು ನಿರಾಕರಿಸುವನೆಂದು ಭಯಪಡಬಾರದು. ಬದಲಿಗೆ ಅದರೊಂದಿಗೆ ಮರಣಕರವಾದ ವ್ಯಾಧಿಯಾದ "ಎರಡನೇ ಮರಣವು" ಬರುವದೆಂಬುದಕ್ಕೆ ಭಯಪಡಬೇಕು. ಯಾರು ಆ ರಾತ್ರಿಯ ಕತ್ತಲಿಗೆ ಹೋಗುವುದರಲ್ಲಿ ಇರುವರೋ ಅವರಿಗೆ ಮೊದಲು ಸಂಜೆ ಬರುವುದು. ಆದರೆ ಯಾರು ಹಗಲಿನವರಾಗಿದ್ದಾರೋ ಅವರಿಗೆ ಕತ್ತಲು ಹೋಗಿ ಬೆಳಕಾಗುವದು. "ಸಾಯಂಕಾಲದಲ್ಲಿ ಮಾಂಸವನ್ನು ಹೊತ್ತಾರೆಯಲ್ಲಿ (ಹೊಟ್ಟೆ ತುಂಬಲು) ಬೇಕಾದಷ್ಟು ರೊಟ್ಟಿಯನ್ನು" (ವಿಮೋ. 16:8) ಹೀಗೆ ಅವರಿಗೆ ಕೊಡಲ್ಪಟ್ಟಿತ್ತು.

ಶಾರೀರಿಕ ಇಸ್ರಾಯೇಲ್ಯರಿಗೆ ಕೊಡಲ್ಪಟ್ಟ ಆಹಾರವು ಹಾಗೆಯೇ ಆಕಾಶದಿಂದ ಬೀಳುತ್ತಿತ್ತು. ಅರಣ್ಯಕಾಂಡ 11:19ರಲ್ಲಿ ಹೀಗೆ ಓದುತ್ತೇವೆ. "ರಾತ್ರಿ ಕಾಲದಲ್ಲಿ ಮಂಜು ಪಾಳೆಯದಲ್ಲಿ ಬೀಳುತ್ತಿದ್ದಾಗ ಅದರೊಂದಿಗೆ ಮನ್ನವೂ ಬೀಳುತ್ತಿತ್ತು" ಮತ್ತು ವಿಮೋಚನಾಕಾಂಡ 16:14, 16ರಲ್ಲಿ "ಆ ಮಂಜು ಆರಿಹೋದನಂತರ ಅರಣ್ಯದ ನೆಲದಲ್ಲಿ ಮಂಜಿನ ಹನಿಗಳಂತೆ ಏನೋ ಸಣ್ಣ ಸಣ್ಣ ರವೆಗಳು ಕಾಣಿಸಿದವು... ಮೋಶೆ ಅವರಿಗೆ ಇದು ಯೆಹೋವನು ನಿಮಗೋಸ್ಕರ ಕೊಟ್ಟ ಆಹಾರವು..." ಎಂದು ಹೇಳಿದನು.

ಈ ಮನ್ನ ವಿಷಯವಾದ ಅದ್ಭುತಕಾರ್ಯವನ್ನು ವಿವರಿಸುವುದು ಇಲ್ಲಿ ನಮ್ಮ ಉದ್ಧೇಶವಲ್ಲ; ಏಕೆಂದರೆ ಇದನ್ನು ಮಾಡಲು ಸಾಧ್ಯವಾಗದು. ಇಲ್ಲವೇ ಈ ಆಹಾರವನ್ನು ತಯಾರಿಸಲು ಯಾವ ರಾಸಾಯನಿಕ ಪ್ರಕ್ರಿಯೆಗಳು ನಡೆದಿರಬಹುದೆಂದು ಊಹಿಸುವ ಅಪಾಯಕ್ಕೆ ಸಹ ಹೋಗುವುದಿಲ್ಲ. ಹೇಳಿಕೆಗಳು ಹೇಗೆ ಕೊಡಲ್ಪಟ್ಟಿವೆಯೋ ಹಾಗೆಯೇ ಅಂಗೀಕರಿಸುವುದರಲ್ಲಿ ನಮಗೆ ತೃಪ್ತಿಯಿದೆ. ಸಾಧ್ಯವಾದಲ್ಲಿ ಅದರ ನಿಜರೂಪಗಳ ವಿಷಯವಾಗಿ ಕಲಿಯೋಣ.

ನಮ್ಮ ಸುತ್ತಲಿರುವ ವಾತಾವರಣದಲ್ಲಿ ಕೆಲವು ಪ್ರಮಾಣದಲ್ಲಿ ನೀರಿನ (ತೇವಾಂಶ) ಅಂಶಗಳು ಸಾಮಾನ್ಯವಾಗಿ ಕಣ್ಣಿಗೆ ಕಾಣದಂತೆ ತೇಲುತ್ತಿರುತ್ತವೆ. ವಾತಾವರಣ ಸಾಕಷ್ಟು ತಂಪಾದಾಗ ಈ ತೇವಾಂಶವು ಘನೀಕೃತಗೊಂಡು ಮಂಜಿನ ಹನಿಯಾಗಿ ಕಾಣಿಸಿಕೊಳ್ಳುತ್ತದೆ. ಸೂರ್ಯ ಉದಯವಾಗಿ ಕಾವೇರಿದಾಗ ಈ ಮಂಜಿನ ಹನಿಗಳು ಆವಿಯಾಗಿ ತೇವಾಂಶವು ಮತ್ತೆ ಕಾಣದಾಗುತ್ತದೆ. ಸತ್ಯವೆಂಬುದರ ಬಗ್ಗೆ ಒಂದು ಸಮರ್ಥವಾದ ಸಾಂಕೇತಿಕ ಅರ್ಥ ನೀರಿನಲ್ಲಿ ಸಿಗುತ್ತದೆ. ವಾತಾವರಣದಲ್ಲಿನ ತೇವಾಂಶತೆಯ ಸತ್ಯವು ಯಾವಾಗಲೂ ಇರುವುದಾದರೂ ಮನುಷ್ಯರ ದೃಷ್ಟಿಯ ಮಂದತೆಯಿಂದಾಗಿ ಹಲವು ಸಾರಿ ಅದು ಗ್ರಹಿಸಲಾರದೇ ಹೋಗುತ್ತದೆ. ಆದರೆ ಭೂಮಿಯ ಮೇಲೆ ಬರುವ ಶೀತಾವಿಯೋಪಾದಿಯಲ್ಲಿ ಈ ದೈವೀಕ ಸತ್ಯ ಎಂಬ ಆವಿ ರೂಪದ ನೀರನ್ನು, ಗ್ರಹಿಸಿಕೊಳ್ಳಲು ಸಾಧ್ಯವಾಗುವ ಸತ್ಯಾಂಶಗಳಾಗಿ ಘನೀಕೃತಗೊಳಿಸುವ ಕೆಲವು ಸಂದರ್ಭಗಳು ಬರುತ್ತವೆ.

ಕ್ರಿಸ್ತನ ಮೊದಲನೇ ಬರುವಿಕೆಯ ಹಿಂದಿನ ಕಾಲದಲ್ಲಿ (ವಾತಾವರಣದಲ್ಲಿ ಅಗೋಚರ ವಾಗಿ ತೇಲಾಡುವ ತೇವಾಂಶದಂತೆ) ಪ್ರವಾದನೆಯ ಸತ್ಯಾರ್ಥಗಳು ಮೆಸ್ಸೀಯನ ಆಗಮನವನ್ನು ಮುಂತಿಳಿಸಿದೆವು. ಆದಾಗ್ಯೂ ಆ ಪ್ರವಾದನಾ ಸತ್ಯಾರ್ಥಗಳು ಹಗುರವಾದ ನೀರಿನ ಆವಿಯಂತೆ ಇದ್ದುದರಿಂದ ಇದು ಸಾಮಾನ್ಯ ರೀತಿಯಲ್ಲಿ ಗುರುತಿಸಲ್ಪಡಲಿಲ್ಲ ಅದು ಮನನವಾಗಲೂ ಇಲ್ಲ. ಆದರೆ ಯುಗಾಂತ್ಯ ಬಂದು ರಾತ್ರಿಯಾಗಿ ನೂತನ ದಿನದ ಮುಂಜಾನೆಯ ತಂಪಿನಲ್ಲಿ ಈ ಪ್ರವಾದನಾ ಸತ್ಯಾರ್ಥಗಳು ಘನೀಕೃತಗೊಂಡು ಗೋಚರ ವಾದಂತೆ ನಜರೇತಿನ ಯೇಸುವಿನ ಬರುವಿಕೆಯಲ್ಲಿ ಇವು ನೆರವೇರಲ್ಪಟ್ಟದ್ದಾಗಿ ಗ್ರಹಿಸಲ್ಪಟ್ಟಿತ್ತು.

ಮೂಲದಲ್ಲಿ ಮಂಜಿನ ಹನಿಯೇ ಮನ್ನವಾಗಿರಲಿಲ್ಲ; ಮನ್ನವು ಮಂಜಿನ ಹನಿಗಳ ಮೇಲೆ ಬಿದ್ದಿರುವಂತಾಗಿ ಅಥವಾ ಕನಿಷ್ಠ ಮಂಜು ಮತ್ತೆ ಕಣ್ಮರೆಯಾದಾಗ ನೆಲದ ಮೇಲೆ ಬಿದ್ದದ್ದಾಗಿ ತೋರುತ್ತಿತ್ತು. ಇದರಂತೆ ಕ್ರಿಸ್ತನ ಬರುವಿಕೆಯ ವಿಷಯವಾದ ಪ್ರವಾದನಾ ವಾಕ್ಯದ ಸತ್ಯಾರ್ಥಗಳ ಗ್ರಹಿಕೆಯು ಸಹ ಇವುಗಳ ಗ್ರಹಿಕೆಯ ಕ್ರಿಸ್ತನು ಬಂದಿರುವಾಗ ಶಿಷ್ಯರಿಗೆ ಮನ್ನವಾಗಿರಲಿಲ್ಲ. ಅನಂತರದಲ್ಲಿ ಕಾನಾನ್ ವಿಶ್ರಾಂತಿಗೆ ಸೇರುವ ಪರ್ಯಂತರ ಶಿಷ್ಯರಿಗೆ ಇದು ಮನ್ನವಾಗಿತ್ತು. ಕ್ರಿಸ್ತನ ಶಿಲುಬೆಯ ಮರಣದೊಂದಿಗೆ ಮತ್ತು ಅದು ತೆಳುಗಾಳಿಯಲ್ಲಿ ಅವಿಯಾದಂತೆ ಕಂಡಿತು. ಆದರೆ ಅಲ್ಲಿ ಉಳಿದುಕೊಂಡದ್ದು ಮನ್ನವಾಗಿತ್ತು. "ನಾವಾದರೋ ಇಸ್ರಾಯೇಲ್ ಜನರನ್ನು ಬಿಡಿಸತಕ್ಕವನು ಆತನೇ ಎಂದು ನಿರೀಕ್ಷಿಸಿಕೊಂಡಿದ್ದೆವು" (ಲೂಕ 24:21) ಆದರೆ ಅಲ್ಲಿ ಉಳಿದಿದ್ದು ಏನು? ಆಹಾ, ಅದು ಕ್ರಿಸ್ತ ಯೇಸುವಿನ ಈಡುಬಲಿ, ಈತನು ಹೀಗೆ ಗಳಿಸಿದ ಜೀವ ಮತ್ತು ನೀತಿಯನ್ನು ಒಬ್ಬರೂ ತಮ್ಮ ಭಾಗವಾಗಿ ಅಂಗೀಕಾರ ಮಾಡಬಹುದು. ಇಲ್ಲಿತ್ತು ನಿಜವಾದ ಮನ್ನ – ಪರಲೋಕದಿಂದ ಇಳಿದು ಬಂದ ರೊಟ್ಟಿ (ಯೋಹಾನ 6:32, 33, 35, 38, 41, 48, 50) ಯೇಸು ಹೇಳಿದ್ದು – "ಪರಲೋಕದಿಂದ ಇಳಿದುಬಂದ ಜೀವವುಳ್ಳ ರೊಟ್ಟಿ ನಾನೇ; ನಾನು ಕೊಡುವ ರೊಟ್ಟಿ ನನ್ನ ಮಾಂಸವೇ... " (ಯೋಹಾನ 6:51) ಕ್ರಿಸ್ತ ಯೇಸುವಿನಲ್ಲಿ ದೇವರ ಕೃಪೆಯು ನಮ್ಮ ಕಡೆಗೆ ಹೀಗೆ ತೋರಿಬಂತು.

ಈ ಪರಲೋಕದ ಮನ್ನವನ್ನು ತಮಗಾಗಿ ವಿನಿಯೋಗಿಸುವುದು, ದಿನಕ್ಕೆ ಬೇಕಾಗುವಷ್ಟನ್ನು ನಾವು ಸ್ವತಃ ಕೂಡಿಸಿಕೊಳ್ಳುವುದರ ಮೂಲಕ ಸಾಧ್ಯವಾಗುವಂತೆ ಮಾಡಲಾಗಿದೆ. ಮುಂದೆ ಗಮನಿಸಲಿರುವುದು – ಇಸ್ರಾಯೇಲ್ಯರು ಪ್ರತಿದಿನ ಬೆಳಿಗ್ಗೆ ತಮಗೆ ಆ ದಿನಕ್ಕೆ ಬೇಕಾಗುವಷ್ಟನ್ನು ಕೂಡಿಸಿಕೊಳ್ಳಬೇಕಿತ್ತು. ಅದನ್ನು ಮುಂದಿನ ದಿನಕ್ಕೆ ಇಡುವಂತಿರಲಿಲ್ಲ. (ಒಂದೇ ರಿಯಾಯತಿ ಎಂದರೆ 6ನೇ ದಿನದಲ್ಲಿ 7ನೇ ದಿನಕ್ಕೆ ಬೇಕಾಗುವಷ್ಟು ಕೂಡಿಸಬಹುದಿತ್ತು – ಅದೇರೀತಿ ಈ ಸುವಾರ್ತಾ ಯುಗದ ನಿಜರೂಪದ (ಆತ್ಮೀಕ) ಇಸ್ರಾಯೇಲ್ಯರು ಏಳನೆಯ ದಿನಕ್ಕೆ ಕೂಡಿಸುವ ಅಗತ್ಯವಿಲ್ಲ). ಇದರ ಅರ್ಥವೇನು? ಅಂದರೆ ಅವರು ಕೂಡಿಸಿದ್ದನ್ನು ಅದೇ ದಿನದಲ್ಲಿ ಉಪಯೋಗಿಸಬೇಕು, ಅಂದರೆ ತಿಂದು ಬಿಡಬೇಕಿತ್ತು. ಇದರಲ್ಲಿರುವ ಪಾಠವೇನು? ನಾವು ಪ್ರತಿದಿನ ಯೇಸುವಿನಲ್ಲಿರುವ ಜೀವ ನೀತಿಗಳನ್ನು ಆ ದಿನದ ಆಹಾರವಾಗಿ ತೆಗೆದುಕೊಳ್ಳಬೇಕು. ನಿನ್ನೆಯ ದಿನ ನಾವು ಉಪಯೋಗಿಸಿದ್ದುದ್ದು ಈ ದಿನಕ್ಕೆ ಮತ್ತು ನಾಳೆಗೂ ಸಹ ಆಗುತ್ತದೆಂದು ನೀರೀಕ್ಷಿಸಬಾರದು. ಯೇಸುವಿನಲ್ಲಿ ಅಡಕವಾಗಿರುವ ದೈವೀಕ ಸತ್ಯಾರ್ಥಗಳನ್ನು ಒಬ್ಬರು ತಮಗೆ ಒಂದು ದಿನಕ್ಕೆ ಬೇಕಾದಷ್ಟನ್ನು ಪ್ರತಿದಿನ ತಾವೇ ಕೂಡಿಸಿಕೊಳ್ಳಬೇಕು. ಇಲ್ಲಿದೆ ಒಂದು ಪರೀಕ್ಷೆ – ದೇವರು ಆತನ ನಿಯಮವನ್ನು ನಾವು ಕೈಕೊಂಡು ನಡೆಯುವರೋ ಇಲ್ಲವೋ ಎಂದು ಪರೀಕ್ಷಿಸಿ ನೋಡುತ್ತಾನೆ.

ಹಲವರು ನಿಜದಲ್ಲಿ ಯೇಸುವಿಗೆ ಸಂಬಂಧವಿಲ್ಲದೆ ಹಲವಾರು ಸಂಗತಿಗಳನ್ನು ಸೇವಿಸುತ್ತಾ ತಾವು ಯೇಸುವಿನಲ್ಲಿ ಕ್ಷಮೆಯನ್ನು ಹೊಂದಿ ಸಮಾಧಾನದಲ್ಲಿ ಸೇರಿದ್ದೇವೆಂದು ಪ್ರತಿಪಾದಿಸುವವರಾಗಿ ಕಂಡು ಬರುತ್ತಾರೆ. ಅವರು ಈಗಿನ ಕಾಲದ ವೃತ್ತ ಪತ್ರಿಕೆಗಳ ಹಾಗೂ ಅಪ್ರಯೋಜಕದ ನೀರಸ ಸಾಹಿತ್ಯಗಳಿಂದ ತಮ್ಮ ಮನಸ್ಸುಗಳನ್ನು ಪೋಷಿಸಿಕೊಳ್ಳುತ್ತಾರೆ. ಅಲ್ಲಿ ಅವರು ಕ್ರಿಸ್ತನನ್ನು ಕಂಡುಕೊಳ್ಳುವರೋ? ಇಂತಹ ಸಾಧನಗಳ ಮೂಲಕ ಕ್ರಿಸ್ತನ ಪರವಾಗಿ ಪವಿತ್ರಾತ್ಮನ ಸೇವೆಯು ಆತ್ಮಗಳಿಗೆ ದೊರಕುತ್ತದೋ? ಅರಣ್ಯದಲ್ಲಿ ದೇವವಿಮೋಚಿತರನ್ನು ಪೋಷಿಸಲು ಪರಲೋಕದ ಮನ್ನ ಯಾವ ಪರಿಶುದ್ಧ ತಿಳಿಮಂಜಿನ ಮೇಲೆ ಬರುವುದೋ ಆ ತಿಳಿಮಂಜು ಇವುಗಳೋ? ಅಯ್ಯೋ! ಅಲ್ಲ; ಅವು ಶರೀರಬಾವವು ಅಭಿಲಾಷಿಸುವ ಭೂಸಂಬಂಧವಾದ ವಿಷಯಗಳು. ಹೀಗಾಗಿ ಸತ್ಯವೇದವನ್ನು ಅಲಕ್ಷಿಸಿ ತಮ್ಮ ಹೇರಳವಾದ ಅಮೂಲ್ಯ ಸಮಯಗಳನ್ನು ವೃತ್ತಪತ್ರಿಕೆ ಓದುವುದರಲ್ಲಿ ಕಳೆಯುವ ತೋರಿಕೆಯ ಕ್ರೈಸ್ತರ ನಿಜಸ್ಥಿತಿಯನ್ನು ನಿರ್ಧರಿಸಲು ನನಗೆ ಹೆಚ್ಚು ಸಮಯ ಬೇಕಾಗುವುದಿಲ್ಲ. ಅವನು ಆತ್ಮೀಕ ಭಾವದವನಲ್ಲ ನನಗೆ ನಿಶ್ಚಯ. ಕ್ರಿಸ್ತನಿಂದ ಘೋಷಿಸಲ್ಪಟ್ಟು ಆತನಿಗೆ ಜೀವಿಸುತ್ತಾ ಸಾಕ್ಷಿಯಾಗುವುದು ಅವನಿಗೆ ಸಾಧ್ಯವಾಗದು.

ಆಹಾ, ಪ್ರಿಯ ಮಿತ್ರರೇ, ನಮ್ಮ ಅರಣ್ಯ ಯಾತ್ರೆಯಲ್ಲಿ ಕಾನಾನ್ ದೇಶ ಸೇರುವ ಪರ್ಯಂತರ ನಮ್ಮನ್ನು ಹೊತ್ತು ಸಾಗಲು ಜೀವ ಕೊಡುವ ರೊಟ್ಟಿಯಾದ ಯೇಸುಕ್ರಿಸ್ತನು ಆತನಲ್ಲಿ ಅಡಕವಾಗಿರುವ ದೈವೀಕ ಸತ್ಯಾರ್ಥಗಳು ನಮಗೆ ಕೊಟ್ಟಿರುವಾಗ, ಮಾಂಸವನ್ನು ತಿನ್ನುವುದಕ್ಕಾಗಿ ನಾವು ಏಕೆ ಗುಣಗುಟ್ಟುವುದು? ಈ ಮನೋಭಾವವು ಹಿಂದೆ ಇಸ್ರಾಯೇಲ್ಯರು – "…. ಈ ನಿಸ್ಸಾರವಾದ ಆಹಾರವನ್ನು ತಿಂದು ತಿಂದು ನಮಗೆ ಬೇಸರವಾಯಿತು…" (ಅರಣ್ಯಕಾಂಡ 21:5) ಎಂದು ಹೇಳಿದ್ದರಲ್ಲಿ ತೋರಿದ ಮನೋಭಾವಗಳಿಗೆ ಸರಿ ಹೊಂದುತ್ತದೆಂದು ನಾವು ಗ್ರಹಿಸಲಾರೆವೋ? ಆದುದರಿಂದ ಕ್ರಿಸ್ತನಲ್ಲಿ ಒದಗಿಸಲ್ಪಟ್ಟದ್ದು ದೇವರ ಕೃಪೆಯಿಂದ ಪೋಷಿತರಾಗುವುದನ್ನು ಮರೆಯದೆಯೂ, ಹಾಗೂ ದೇವರಾದುಕೊಂಡ ಇಸ್ರಾಯೇಲ್ಯರಾಗು ಈ ನಮ್ಮ ಶ್ರೇಷ್ಠ ಭಾಗ್ಯವನ್ನು ಮನವರಿಕೆ ಮಾಡಿಕೊಳ್ಳುವುದರಲ್ಲಿ ವಿಫಲರಾಗದೆಯೂ ಇರೋಣ.

## ಭಾಗ–6

# ಸಬ್ಬತ್ ವಿಶ್ರಾಂತಿ

ವಿಮೋಚನಾಕಾಂಡ 17:1–16; ಅರಣ್ಯಕಾಂಡ 33:12–14

ಕಳೆದ ನಮ್ಮ ಪಾಠದಲ್ಲಿ ದೇವರು ಇಸ್ರಾಯೇಲ್ಯರನ್ನು "ಅವರು ನನ್ನ ಬೋಧನೆಯನ್ನು ಅನುಸರಿಸಿ ನಡೆಯುವರೋ ಇಲ್ಲವೋ" (ವಿಮೋ. 16:4) ಎನ್ನುವುದನ್ನು ಪರೀಕ್ಷಿಸಿದ ಅಂಶದ ಕಡೆಗೆ ಗಮನ ಸೆಳೆದಿದ್ದನ್ನು ನೆನಪಿಗೆ ತಂದುಕೊಳ್ಳಲಾಗುವುದು. ಈ ಪರೀಕ್ಷೆಯು "ಆಯಾ ದಿನಕ್ಕೆ ಬೇಕಾದಷ್ಟು" ಮನ್ನವನ್ನು ಕೂಡಿಸಿಕೊಳ್ಳುವುದರ ಸಂಬಂಧವಾಗಿತ್ತು.

ಆ ವಿವರಣೆಯಲ್ಲಿ ನಮಗೆ ಹೇಳುವುದು – ಪ್ರತಿಯೊಬ್ಬನು ಪ್ರತಿದಿನ ತನ್ನ ಕುಟುಂಬಕ್ಕೆ ಬೇಕಾದಷ್ಟು ಕೂಡಿಸಬೇಕು (ಅದಕ್ಕಿಂತ ಹೆಚ್ಚು ಇರಬಾರದು) ಮತ್ತು "ಮಾರನೇ ದಿನದ ತನಕ ಅದನ್ನು ಇಟ್ಟುಕೊಳ್ಳಬಾರದು" (ವಿಮೋ. 16:16,19) ಎಂಬ ಅಂಶವನ್ನು ತಿಳಿಸಲಾಗಿತ್ತು. "ಆದಾಗ್ಯೂ ಅವರಲ್ಲಿ ಕೆಲವರು ಮೋಶೆಯ ಮಾತನ್ನು ಕೇಳದೆ ಅದರಲ್ಲಿ ಸ್ವಲ್ಪವನ್ನು ಮರುದಿನದ ತನಕ ಇಟ್ಟುಕೊಂಡಾಗ ಅದು ಹುಳಬಿದ್ದು ನಾತಹಿಡಿದು ಕೆಟ್ಟುಹೋಯಿತು" (ವಿಮೋ. 16:20) ದೇವರ ನಿಯಮವನ್ನು ಅನುಸರಿಸಿ ನಡೆಯುವ ತಮ್ಮ ಬಯಕೆಯನ್ನು ಆತನ ಕೃಪಾನುಗ್ರಹದಲ್ಲಿ ಮುಂದುವರೆಯುವ ತಮ್ಮ ಯೋಗ್ಯತೆಯನ್ನು ಅವರು ಈ ರೀತಿಯಲ್ಲಿ ಸಾಬೀತು ಪಡಿಸಿದರು. ಮನ್ನವನ್ನು "ಮರುದಿನದವರೆಗೆ" ಇಟ್ಟುಕೊಳ್ಳುವುದು ಎರಡು ವಿಷಯಗಳನ್ನು ಸ್ಪಷ್ಟಪಡಿಸುತ್ತದೆ. ಮೊದಲನೆಯದು, ಅವರ ಅಗತ್ಯಕ್ಕಿಂತಲೂ ಹೆಚ್ಚನ್ನು ಕೂಡಿಸುವುದು, ಎರಡನೆಯದು ಮುಂದಿನ ದಿನ ಕೂಡಿಸ ಬಾರದೆಂಬ ನಿರ್ಧಾರ. ಆ ದಿನದಲ್ಲಿ ಹೆಚ್ಚಾಗಿ ಉಳಿಸಿಕೊಳ್ಳುವುದು ಮಾರನೆಯ ದಿನದಲ್ಲಿ ಸೋಮಾರಿಯಾಗಿರುವುದರ ಅಪೇಕ್ಷೆಯನ್ನಲ್ಲದೆ ಮತ್ತೇನೂ ಇಲ್ಲಿ ಅಡಕವಾಗಿದೆ? ಹೀಗಿರುವುದು ಖಂಡಿತವಾಗಿಯೂ ಇದು ದೇವರ ನಿಯಮಾನುಸಾರವಲ್ಲ. ನಿಜ, ದೇವರು ಆರನೆಯ ದಿನದಲ್ಲಿ ಏಳನೆಯ ದಿನಕ್ಕೆ ಬೇಕಾಗುವಷ್ಟು ಒದಗಿಸಿದನು. ಆದರೆ ಇದು ಯಾಕೆಂದರೆ ದೇವರು ತನ್ನ ಶ್ರೇಷ್ಠ ಜ್ಞಾನ ಪ್ರೀತಿಗಳಿಗನುಸಾರ ಅವರಿಗೆ ಸಬ್ಬತ್ ವಿಶ್ರಾಂತಿ ಯನ್ನು (ಬಳುವಳಿಯಾಗಿ) ನೀಡಿದನು. ಇಲ್ಲವೇ ಅವರು ಇದನ್ನು ಏಳನೆಯ ದಿನಕ್ಕೆ ಹೊರತುಪಡಿಸಿ, ಯಾವ ದಿನಕ್ಕಾದರೂ ಮುಂದಾಗಿ ಸಂಗ್ರಹಿಸುವುದಕ್ಕೆ ತಮಗೆ ಅನುಮತಿ ಯೆಂದು ಅರ್ಥೈಸಬಾರದು. ನಿಜರೂಪವಾದ ದೇವರ ಇಸ್ರಾಯೇಲ್ಯರಿಗೆ ಎಂತಹ ಭವ್ಯವಾದ ಚಿಂತನೆಯನ್ನು ಇಲ್ಲಿ ಸೂಚಿಸಲಾಗಿದೆ! ನಾವು ಕ್ರಿಸ್ತನಲ್ಲಿ ಹೊಂದುವ ನೀತಿ ಹಾಗೂ ನೀತಿನಿರ್ಣಯದ ಅಂಶವನ್ನು ಅಳತೆಯಾಗಿ ಆಯಾ ದಿನಕ್ಕೆ ಬೇಕಾಗುವಷ್ಟು ಮಾತ್ರ ಪ್ರತಿದಿನ ಸಂಗ್ರಹ ಮಾಡಿ ಅದನ್ನು ವಿನಿಯೋಗಿಸಬೇಕು. ಆದರೂ ಒಂದು ವಿಶಾಲ ಅರ್ಥದಲ್ಲಿ, ನಾವು ಆರನೆಯ ದಿನದಲ್ಲಿ ಏಳನೆಯ ದಿನ ಪೂರ್ಣ ಸಾಗಿಸುವುದಕ್ಕೆ

ಬೇಕಾಗುವಷ್ಟನ್ನು ಸಂಗ್ರಹಿಸುತ್ತಿದ್ದೇವೆ. ಆ ಏಳನೆಯ ದಿನದಲ್ಲಿ ಅದರ ಅಗತ್ಯವೂ ಇರುವುದಿಲ್ಲ. ಹೌದು ಪ್ರತಿಯಾಗಿ ಮನ್ನವನ್ನು ಕೂಡಿಸುವುದು ಅಲ್ಲಿ ಅಸಾಧ್ಯ. ಏಳನೆಯ ದಿನವು ದೇವರು ದಯಪಾಲಿಸಿರುವ "ಸಬ್ಬತ್ ವಿಶ್ರಾಂತಿ" ದಿನವಾಗಿರುವುದು. ಆದಾಗ್ಯೂ ಅಲ್ಲಿ ಇನ್ನೂ ಬೇರೆ ಅಂಶವಿದೆ; ಅದನ್ನು ಧ್ಯಾನಿಸುವುದು ನಮಗೆ ಒಳ್ಳೆಯದು. ಅದು ಈಗಾಗಲೇ ನಮಗಿರುವ ಸಬ್ಬತ್ ವಿಶ್ರಾಂತಿಯ ಸಂಬಂಧದಲ್ಲಿ ನಾವು ದೇವರ ನಿಯಮಾನುಸಾರ ನಡೆಯುವವರು ಅಥವಾ ಅಲ್ಲವೋ ಎಂಬುದನ್ನು ಸಾಭೀತು ಪಡಿಸುವುದರ ವಿಷಯವಾಗಿರುತ್ತದೆ.

ಸಬ್ಬತ್ ಎಂಬುದು ಏದೇನಿನಲ್ಲಿ ಸ್ಥಾಪನೆಯಾದ ವಿಷಯ ಎನ್ನುವುದನ್ನು ನೀವು ನೆನಪಿಗೆ ತಂದುಕೊಳ್ಳಿರಿ. "ದೇವರು ತನ್ನ ಸೃಷ್ಟಿ ಕಾರ್ಯವನ್ನು ಮುಗಿಸಿ ಬಿಟ್ಟು ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು. ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿ ಆ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡಿದ್ದರಿಂದ ಆ ದಿನವನ್ನು ಪರಿಶುದ್ಧ ದಿನವಾಗಿರಲಿ ಎಂದು ಆಶೀರ್ವದಿಸಿದನು". (ಆದಿ. 2:2,3) ಮನುಷ್ಯನ ಸಂಬಂಧದಲ್ಲಿ ಅದು ಏದೇನಿನಲ್ಲೇ ಇಲ್ಲದಾಗಿ ಹೋಯಿತು. ದೇವರ ಕೊಡುಗೆಯಾದ ಸಬ್ಬತ್ ವಿಶ್ರಾಂತಿಯನ್ನು ಅವನು ಬಹು ಕಾಲ ಅನುಭವಿಸಲು ಆಗಲಿಲ್ಲ. "ನಿನ್ನ ನಿಮಿತ್ತ ಭೂಮಿಗೆ ಶಾಪ ಬಂತು... ಆ ಭೂಮಿಯಲ್ಲಿ ಮುಳ್ಳುಗಿಡಗಳು ಕಳೆಗಳು ಬಹಳವಾಗಿ ಹುಟ್ಟುವವು... ನೀನು ಮಣ್ಣಿಗೆ ಸೇರುವ ತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸಬೇಕು... ನೀನು ಮಣ್ಣಿನಿಂದ ತೆಗೆಯಲ್ಪಟ್ಟ ವನಲ್ಲವೋ; ನೀನು ಮಣ್ಣೇ; ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದೀ." ( ಆದಿಕಾಂಡ 3:17, 19)

ಈ ಸಬ್ಬತ್ ವಿಶ್ರಾಂತಿಯನ್ನು ಅರಣ್ಯದಲ್ಲಿ ದೇವರು ವಿಮೋಚಿಸಿದವರಾದ ಇಸ್ರಾಯೇಲ್ಯರೊಡನೆ ಆಚರಣೆಯಾಗಿ ಸ್ಥಾಪಿಸುವವರೆಗೂ ಮತ್ತೆ ಎಲ್ಲೂ ಇದನ್ನು ಸೂಚಿಸಲಿಲ್ಲವೆಂದು ನಮಗೆ ಕಂಡುಬಂರುತ್ತದೆ. ಆದಾಗ್ಯೂ ಅವರು ಮನಸ್ಸಿಲ್ಲದೆ ಇದರಲ್ಲಿ ಸೇರಿದವರೆಂದು ತೋರುತ್ತದೆ. ಅವರು ಇನ್ನೂ ಸೀನಾಯಿ ತಲುಪಲಿಲ್ಲ. ಕಾಲಾನಂತರದಲ್ಲಿ ಅವರು ಅಲ್ಲಿ ದಶಾಜ್ಞೆಯನ್ನು ಹೊಂದುವವರಾಗಿದ್ದರು. ಸಬ್ಬತ್ತೆಂಬುದು ಆವರೆಗೂ ಅವರಿಗೆ ದೇವರ ಬಳುವಳಿಯಾಗಿತ್ತು ಆದರೆ ಸೀನಾಯಿಯಲ್ಲಿ ಅದು ಧರ್ಮಶಾಸ್ತ್ರದ ಒಡಂಬಡಿಕೆಯ ಒಂದು ಭಾಗವಾಯಿತು. ಅಲ್ಲಿ ಅದು ನಿಬಂಧನೆಯಾಯಿತು. ಕೃಪೆಯು ಅಂತ್ಯವಾಗಿ ಕ್ರಿಯೆಗಳು ಆರಂಭವಾದವು.

ದೇವರ ನಿಜವಾದ ಇಸ್ರಾಯೇಲ್ಯರಿಗೆ ಒಂದು ಕ್ರಿಸ್ತೀಯ "ಸಬ್ಬತ್" ಇದೆ. ಅದು ಏಳು ದಿನದಲ್ಲಿ ಒಂದರಂತೆ ಅಲ್ಲ. ಆದರೆ ಅದು ಯೇಸು ಕ್ರಿಸ್ತನ ಈಡುಬಲಿಯ ಮುಖಾಂತರ ಉಂಟಾದ ವಿಮೋಚನೆಯಲ್ಲಿ ಪ್ರತಿದಿನವೂ ಅನುಭವಿಸುವ ದೇವರಿಂದ ದೊರೆತ ವಿಶ್ರಾಂತಿ. ಯಾವಾತನು ನಂಬಿಕೆಯ ಮೂಲಕ ನೀತಿವಂತನೆಂದು ನಿರ್ಣಯಿಸಲ್ಪಡುವನೋ ಅವನು ದೇವರ ವಿಶ್ರಾಂತಿಯಲ್ಲಿ ಸೇರಿರುವನು; ಅವನು ತನ್ನ ಕೆಲಸಗಳನ್ನೆಲ್ಲಾ ಮುಗಿಸಿ

ವಿಶ್ರಮಿಸಿಕೊಂಡಿದ್ದಾನೆ. "ಆದರೆ ಅದು ಅವನ ಲೆಕ್ಕಕ್ಕೆ ನೀತಿವಂತನೆಂದು ಎಣಿಸಲ್ಪಟ್ಟಿತ್ತೆಂದು ಅವನಿಗೋಸ್ಕರ ಮಾತ್ರವಲ್ಲದೆ ನಮಗೋಸ್ಕರವೂ ಬರೆದಿರುವುದು. ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರನ್ನು ನಂಬುವ ನಮಗೂ ನಂಬಿಕೆಯು ನೀತಿಯೆಂದು ಎಣಿಸಲ್ಪಡುವುದು. ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ." (ರೋಮಾ 4:23, 24; 5:1) "ಅವರು ಸೇರಲಾರದೇ ಹೋದುದು ಅಪನಂಬಿಕೆಯಿಂದಲೇ ಎಂದು ತಿಳಿದುಕೊಳ್ಳುತ್ತೇವೆ. ನಂಬಿರುವ ನಾವಾದರೋ ಆ ವಿಶ್ರಾಂತಿಯಲ್ಲಿ ಸೇರುತ್ತಲೇ ಇದ್ದೇವೆ.. ಒಂದು ಸ್ಥಳದಲ್ಲಿ ಏಳನೆಯ ದಿನವನ್ನು ಕುರಿತು – ದೇವರು ತನ್ನ ಸೃಷ್ಟಿಕಾರ್ಯಗಳನ್ನೆಲ್ಲಾ ಮುಗಿಸಿ ಬಿಟ್ಟು ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನೆಂದು ಬರೆದದೆ... ಆದುದರಿಂದ ದೇವರ ಜನರು ಅನುಭವಿಸುವುದಕ್ಕಿರುವ ಸಬ್ಬತ್ತೆಂಬ ವಿಶ್ರಾಂತಿ ಇನ್ನೂ ಉಂಟು. ಹೇಗೆಂದರೆ, ದೇವರು ತನ್ನ ಕೆಲಸಗಳನ್ನು ಮುಗಿಸಿ ಹೇಗೆ ವಿಶ್ರಮಿಸಿಕೊಂಡನೋ ಹಾಗೆಯೇ ಆತನ ವಿಶ್ರಾಂತಿಯಲ್ಲಿ ಸೇರಿರುವವನು ಸಹ ತಮ್ಮ ಕೆಲಸಗಳನ್ನು ಮುಗಿಸಿ ವಿಶ್ರಮಿಸಿಕೊಳ್ಳುವರು" (ಇಬ್ರಿಯ 3:19; 4:3–4, 9, 10).

ನಮಗೆ ಕ್ರಿಸ್ತನಲ್ಲಿ ನೀತಿವಂತರೆಂದು ನಿರ್ಣಯಿಸಲ್ಪಟ್ಟಿರುವುದು "ಕ್ರಿಯೆಗಳ" ಮುಖಾಂತರವಾಗಿ ಅಲ್ಲ, ಆದರೆ ನಂಬಿಕೆಯ ಮೂಲಕವೇ. ಹೀಗೆ ಆದಾಮನಿಗೆ ಬಂದ ದಂಡನೆಯಿಂದ ವಿಮೋಚನೆ ಹೊಂದುವುದರ ಮೂಲಕ ದೊರಕುವ ಈ ಸಬ್ಬತ್ ವಿಶ್ರಾಂತಿಯು ದೇವರ ವರ. ಅಪೋಸ್ತಲನು ಸ್ಪಷ್ಟವಾಗಿ ಹೇಳುವುದು " ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದುದಲ್ಲ. ಅದು ದೇವರ ವರವೇ. ಅದು ಪುಣ್ಯಕ್ರಿಯೆಗಳಿಂದುಂಟಾದುದಲ್ಲ. ಆದುದರಿಂದಿ ಹೊಗಳಿಕೊಳ್ಳುವುದಕ್ಕೆ ಯಾರಿಗೂ ಅಸ್ಪದವಿಲ್ಲ. (ಎಫೆಸ 2:8, 9)

ದೇವರ ಕೃಪೆಯಿಂದ ಕ್ರಿಸ್ತ ಯೇಸುವಿನಲ್ಲಿ ಒದಗಿಸಿರುವ ಈ "ವಿಶ್ರಾಂತಿ" ಸೇರಲು ಅನೇಕ ನಿಜರೂಪದ ಇಸ್ರಾಯೇಲ್ಯರು ನಿರಾಕರಿಸುವರು. ದೇವರ ದೃಷ್ಟಿಯಲ್ಲಿ ತಾವು ನೀತಿವಂತರೆನಿಸಿಕೊಳ್ಳಲು ವಿಶೇಷ ಕೃತ್ಯಗಳಾಗಿ ಮಹತ್ಕಾರ್ಯಗಳನ್ನು ಮಾಡಬೇಕೆಂಬುದು ಅವರ ಅನಿಸಿಕೆ. ಆದರೆ ದೇವರು ವಿಶ್ರಾಂತಿಯ ದಿನವಾಗಿರಲೆಂದು ಆಶೀರ್ವದಿಸಿರುವ ದಿನದಲ್ಲಿ ಕೆಲಸ ನಡಿಸುವುದು ಅಪನಂಬಿಕೆ. ಇಲ್ಲವೇ ಅವಿಧೇಯತೆಗಳ ಸೂಚನೆ. ಹಾಗೆ "ಕ್ರಿಯೆಗಳ" ಮೂಲಕ ಕೂಡಿಸಿಕೊಳ್ಳಲಿರುವವರಿಗೆ ಪರಲೋಕದಿಂದ ಇಳಿದುಬರುವ ರೊಟ್ಟಿಯು ಸಿಗಲಾರದು. ತನ್ನ ಜನರು ಆಜ್ಞೆಯನ್ನು ಕೈಗೊಂಡು ನಡೆಯವವರೋ ಅಲ್ಲವೋ ಎಂಬುದನ್ನು ದೇವರು ಈ ರೀತಿಯಲ್ಲಿ ಪರೀಕ್ಷಿಸುತ್ತಾನೆ. ಆಹಾ, ಪ್ರಿಯ ಮಿತ್ರರೇ, ನಮ್ಮ ಕೆಲಸಗಳಿಂದ ವಿಶ್ರಮಿಸಿಕೊಂಡು ಕ್ರಿಸ್ತ ಯೇಸುವಿನಲ್ಲಿರುವ ಸಬ್ಬತ್ ಎಂಬ ವಿಶ್ರಾಂತಿಯನ್ನು" ನಾವು ಆಚರಿಸಿ ಆನಂದಿಸೋಣ.

ಆದರೆ ಈ "ವಿಶ್ರಾಂತಿಯು" ನಿಷ್ಕ್ರಯತೆಯನ್ನು ವ್ಯಕ್ತಪಡಿಸುತ್ತದೆ ಎಂಬ ನಿರ್ಣಯಕ್ಕೆ ನಾವು ಬಾರದಿರೋಣ. ಏದೇನಿನಲ್ಲಿ ಆದಾಮನು ದೇವರು ಪರಿಶುದ್ಧವಾಗಿರಲೆಂದು ಆಶೀರ್ವದಿಸಿದ ಸಬ್ಬತ್ತನ್ನು ಆಚರಿಸುತ್ತಿದ್ದಾಗ್ಯೂ ಅವನು ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿ ಕೊಳ್ಳಬೇಕಿತ್ತು. (ಆದಿಕಾಂಡ 1:28) ಹಾಗೆಯೇ ಪ್ರತಿಯೊಬ್ಬ ಪ್ರತಿಷ್ಠಿತನಾದ ದೇವರ ಮಗನು ಸಹ ದೇವರ ಸಬ್ಬತ್ತೆಂಬ ವಿಶ್ರಾಂತಿಯನ್ನು ಆಚರಿಸುತ್ತಿದ್ದರೂ ನಿಷ್ಕ್ರಿಯನಾಗಿರುವಂತಿಲ್ಲ. ಅವನು ಕ್ರಿಯಾಶೀಲನಾಗಿ ತನ್ನ ಶರೀರವನ್ನು ಕ್ರಿಸ್ತನಲ್ಲಿರುವ ನೂತನ ಮನಸ್ಸಿಗೆ ನಿರಂತರವಾಗಿ ಅಧೀನ ಮಾಡುತ್ತಿರಬೇಕು. (1 ಕೊರಿಂಥ 1:29) ಇದು ಒಂದು "ಕ್ರಿಯೆ" ಅದರೆ ಇದರಿಂದ ನಾವು ಆದಾಮನ ಶಾಪದಿಂದ ವಿಮೋಚನೆ ಹೊಂದಿ ನೀತಿವಂತರಾಗುವುದಿಲ್ಲ. ಏಕೆಂದರೆ ಹಾಗೆ ಆಗುವುದು ಕೇವಲ ನಂಬಿಕೆಯ ಮೂಲಕವೇ. ಶರೀರವನ್ನು ನಮ್ಮ ವಶದಲ್ಲಿಟ್ಟುಕೊಂಡು ಕ್ರಿಸ್ತನಲ್ಲಿರುವ ನೂತನ ಮನಸ್ಸಿಗೆ ಅಧೀನ ಮಾಡುವ ಕಾರ್ಯವು ನಮ್ಮ ನಂಬಿಕೆಯು ಜೀವಂತವೆಂದು ಸಾಬೀತು ಪಡಿಸುತ್ತದೆ. ಯಾಕೆಂದರೆ ಅದು ನಿರೀಕ್ಷೆಯಿಂದ ಪ್ರೇರಿತವಾದದ್ದು. 1ಯೋಹಾನ 3:3 ರಲ್ಲಿ ಅಪೋಸ್ತಲನು ಹೇಳುವಂತೆ – " ಆತನಲ್ಲಿ ಈ ನಿರೀಕ್ಷೆ ಇಟ್ಟಿರುವ ಪ್ರತಿಯೊಬ್ಬನೂ ಕ್ರಿಸ್ತನು ಶುದ್ಧನಾಗಿರುವಂತೆ ತನ್ನನ್ನು ಶುದ್ಧ ಮಾಡಿಕೊಳ್ಳುವನು"

ನಂಬಿಕೆಯನ್ನು ತೋರ್ಪಡಿಸುವ "ಕ್ರಿಯೆಗಳನ್ನು" ಮಾಡುವುದು ದೇವರ ಸಬ್ಬತ್ ಆಚರಣೆಯ ಉಲ್ಲಂಘನೆಯಲ್ಲ. ಆದರೆ ನಿಜದಲ್ಲಿ ಅದು ಏಳನೆಯ ದಿನದಲ್ಲಿ ಪರಲೋಕದ ಮನ್ನದ ಮುಖಾಂತರ ಪೋಷಿಸಿಕೊಳ್ಳುವುದು ಎಂಬುದನ್ನು ವಿಶ್ಲೇಷಣೆಯು ತೋರಿಸುತ್ತದೆ. ನಿಜದಲ್ಲಿ ಶರೀರವನ್ನು ವಶಮಾಡಿಕೊಂಡು ಅದನ್ನು ನೂತನ ಮನಸ್ಸಿಗೆ ಅಧೀನ ಮಾಡುವುದನ್ನು ಒಳಗೊಂಡ ಪರಿಶ್ರಮವು ಕ್ರಿಸ್ತಯೇಸುವಿನ ಜೀವಾಶೀರ್ವಾದಗಳನ್ನು ನಮಗಾಗಿ ವಿನಿಯೋಗಿಸಿಕೊಳ್ಳುವುದನ್ನು ಸ್ಪಷ್ಟಪಡಿಸುತ್ತದೆ. ಏಕೆಂದರೆ ಇದು – ಯೇಸುವಿನ ಜೀವವು ನಮ್ಮ ದೇಹದಲ್ಲಿ ಉಂಟೆಂದು ತೋರಿಸುವುದಕ್ಕಾಗಿ ಯೇಸುವಿನ ಮರಣಾವಸ್ಥೆಯನ್ನು ನಾವು ಯಾವಾಗಲೂ ದೇಹದಲ್ಲಿ ಅನುಭವಿಸುತ್ತಾ ತಿರುಗಾಡುತ್ತೇವೆ. (2 ಕೊರಿಂಥ 4:10) ಎಂಬುದನ್ನು ತೋರಿಸುತ್ತದಲ್ಲವೆ.

ಆಹಾರ ಶಾಸ್ತ್ರದ ನಿಯಮಗಳ ಪ್ರಕಾರ ನಾವು ಎಂಥವರೆಂಬುದು ಹೆಚ್ಚು ಕಡಿಮೆ ಏನನ್ನು ತಿನ್ನುತ್ತೇವೆ ಎನ್ನುವುದನ್ನು ಅವಲಂಭಿಸಿರುತ್ತದೆ. ಈ ನಿಯಮವನ್ನು ಆತ್ಮೀಕ ವಿಷಯಗಳಿಗೆ ಅನ್ವಯ ಮಾಡಿದರೆ, ತದನುಸರವಾಗಿ – ಕ್ರಿಸ್ತನ ಜೀವವನ್ನು ನಮಗಾಗಿ ಹೆಚ್ಚು ವಿನಿಯೋಗಿಸಿದ ಹಾಗೆಲ್ಲಾ ಅಷ್ಟು ಹೆಚ್ಚು ಕ್ರಿಸ್ತನ ಹೋಲಿಕೆ ಉಂಟಾಗುತ್ತದೆ ಎಂಬುದು ತೋರಿಬರುತ್ತದೆ. ಹೀಗೆ ಪರಲೋಕದ ಮನ್ನವನ್ನು ತಿನ್ನುವುದು ಹಳೆ ಮನುಷ್ಯನ ನಾಶವಾಗುವುದನ್ನು ಹೊಸ ಮನುಷ್ಯ ಜೀವ ಪಡೆಯುವ ಅರ್ಥವನ್ನು ಸೂಚಿಸುತ್ತದೆ. ಏಕೆಂದರೆ "ನಮ್ಮ ದೇಹವು ನಾಶವಾಗುತ್ತಾ ಇದ್ದರೂ ನಮ್ಮ ಆಂತರ್ಯವು ದಿನೇ ದಿನೇ ಹೊಸದಾಗುತ್ತಾ ಬರುತ್ತದೆ" (2 ಕೊರಿಂಥ 4:16).

ಅದರಂತೆಯೇ ನಾವು ಶ್ರಮಿಸುವುದು ಅದಾಮನಿಗೆ ಬಂದ ದಂಡನೆಯಿಂದ ವಿಮೋಚಿತರಾಗಿ ಇದರ ಫಲವಾಗಿ ನೀತಿವಂತರಾಗುವುದಕ್ಕೆ ಅಲ್ಲ ಏಕೆಂದರೆ ಅದು ಈಗಾಗಲೇ ಕ್ರಿಸ್ತನ ಈಡುಬಲಿಯ ಫಲವಾಗಿ ದೊರೆತಿರುವುದು. ನಾವು ನಂಬಿಕೆಯ ಮೂಲಕ ದೇವರ ಸಬ್ಬತ್ ವಿಶ್ರಾಂತಿಯಲ್ಲಿ ವಿಶ್ರಮಿಸಬೇಕು. ನಾವು ವಿಶ್ರಾಂತಿಯಲ್ಲಿ ಪೂರ್ಣವಾಗಿ ಸೇರಲು ನಮ್ಮ ಪರಿಶ್ರಮವನ್ನು ತೋರ್ಪಡಿಸುವ ನಂಬಿಕೆಯ ಕ್ರಿಯೆಗಳನ್ನು ಬಿಟ್ಟು ಬೇರೆ ಯಾವ ಇತರ ಕ್ರಿಯೆಗಳನ್ನು ಮಾಡುವುದು ದೇವರ ನಿಯಮದ ಉಲ್ಲಂಘನೆಯಾಗುತ್ತದೆ. ಪರಲೋಕದ ಮನ್ನವನ್ನು ಕೂಡಿಸಿಕೊಂಡು ತನ್ನ ವರವಾದ ಸಬ್ಬತ್ ವಿಶ್ರಾಂತಿಯನ್ನು ಪಾಲಿಸಿಕೊಂಡು ಬರುವ ವಿಷಯದಲ್ಲಿ ನಿಜರೂಪದ ಇಸ್ರಾಯೇಲ್ಯರನ್ನು ದೇವರು ಹೇಗೆ ಪರೀಕ್ಷಿಸುವನೆಂದು ಇಲ್ಲಿ ನಮಗೆ ಕಾಣುವುದಿಲ್ಲವೇ. "ಇಗೋ ನಾನು ಆಕಾಶದಿಂದ ನಿಮಗೋಸ್ಕರ ಆಹಾರವನ್ನು ಸುರಿಸುವೆನು. ಈ ಜನರು ಪ್ರತಿ ದಿನವೂ ಹೊರಗೆ ಹೋಗಿ ಆಯಾ ದಿನಕ್ಕೆ ಬೇಕಾದಷ್ಟು ಮಾತ್ರ ಕೂಡಿಸಿಕೊಳ್ಳಬೇಕು. ಇದರಿಂದ ಇವರು ನನ್ನ ಬೋಧನೆಯನ್ನು ಅನುಸರಿಸಿ ನಡೆಯುವವರು ಅಲ್ಲವೋ ಎಂಬುದನ್ನು ಪರೀಕ್ಷಿಸಿ ತಿಳಿಯುತ್ತೇನೆ. ಆರು ದಿವಸ ಅದನ್ನು ಕೂಡಿಸಬಹುದು. ಏಳನೆಯ ದಿನ ಸಬ್ಬತ್ತಾದ್ದರಿಂದ ಅದು ದೊರೆಯುವುದೇ ಇಲ್ಲ." (ವಿಮೋ. 16:4, 26).

## ಇಸ್ರಾಯೇಲ್ಯರ ಅಪನಂಬಿಕೆ ಅವಿಧೇಯತೆಗಳು

ಅರಣ್ಯಕಾಂಡ 33:12–14 ರಲ್ಲಿ ಕೊಟ್ಟಿರುವ ಪ್ರಯಾಣದ ವಿವರಗಳ ಪ್ರಕಾರ, ಇಸ್ರಾಯೇಲ್ ಮಕ್ಕಳು ಸೀನ್ ಅರಣ್ಯವನ್ನು ಬಿಟ್ಟ ನಂತರ ರೆಫೀಧಿಮ್ ಸೇರುವ ಮೊದಲು ಆಲೂಷ್ ಮತ್ತು ದೊಪ್ಕ ಎಂಬ ಸ್ಥಳಗಳಲ್ಲಿ ಇಳುಕೊಂಡಿದ್ದರು. ಅವರ ಪ್ರಯಾಣದ ಮುಂದಿನ ಸ್ಥಳವಾದ ರೆಫಿಧೀಮ್ ಎಂಬುದು ನಮ್ಮ ವಿಶೇಷ ಗಮನವನ್ನು ತೆಗೆದುಕೊಳ್ಳುತ್ತದೆ. ಆಲೂಷ್ ಇಲ್ಲವೇ ದೊಪ್ಕ ಸ್ಥಳಗಳಲ್ಲಿ ಅವರಿಗಾದ ಅನುಭವಗಳ ಬಗ್ಗೆ ಏನೂ ಬರೆಯಲ್ಪಟ್ಟಿಲ್ಲ. ಈ ಪಾಳೆಯಗಳ ವಿಷಯದಲ್ಲಿ ಯಾವ ಅಭಿಪ್ರಾಯವನ್ನು ಹೇಳದೆ ನಾವು ಮುಂದೆ ದಾಟಿ ಹೋಗಬೇಕಿತ್ತು. ಆದಾಗ್ಯೂ ಈ ಸ್ಥಳಗಳ ಹೆಸರುಗಳು ಬರೆಯಲ್ಪಟ್ಟಿವೆ ಎಂಬ ಅಂಶದಿಂದ ನಮಗೆ ಒಂದು ಪಾಠವಿರುವುದು ಪವಿತ್ರಾತ್ಮನ ಉದ್ದೇಶವೆಂದು ನಾವು ಇದನ್ನು ಆದುಕೊಂಡಿದ್ದೇವೆ. ಈ ಪಾಠ ಯಾವುದಾಗಿರಬಹುದು? ಈ ಸ್ಥಳಗಳಲ್ಲಿ ಇಸ್ರಾಯೇಲ್ಯರು ತ್ವರಿತವಾಗಿ ಸಂಚರಿಸಿರುವುದರ ಉದ್ದೇಶ ಬಹುಶಃ ಅವರ ವಿಶ್ರಾಂತಿ ಇಲ್ಲದ ಸ್ಥಿತಿಯನ್ನು ಸೂಚಿಸಬಹುದು. ಸೈರಸ್ ಎ ಪಾಟ್ಟರ್ ಎಂಬುವವರ "ಡಿಕ್ಷನರಿ ಆಫ್ ಬೈಬಲ್ ಪ್ರಾಪರ್ ನೇಮ್ಸ್" ಎಂಬ ತಮ್ಮ ಸಂಗ್ರಹ ಗ್ರಂಥದ ಮೂಲಕ ನಾವು ತಿಳಿಯುವುದು "ಆಲೂಷ್" ಅಂದರೆ ಜನಸಮೂಹ ಅಥವಾ ಒಟ್ಟುಗೂಡುವುದು ಎಂದೂ. "ದೊಪ್ಕ" ಅಂದರೆ ನೀರಿನ ಒತ್ತಡ ಅಥವಾ ಪಶುಸಾಗಿಸುವುದು ಎಂದು ಅರ್ಥ. ಈ ಅರ್ಥಗಳಲ್ಲಿ ಬಹುಶಃ ಇಸ್ರಾಯೇಲ್ಯರ ಅವಿಶ್ರಾಂತಿ ಸ್ಥಿತಿಯ ರಹಸ್ಯ ಕಾರಣಗಳು ನಮಗೆ ಸಿಗುತ್ತವೆ. ಅಲ್ಲಿ

ಜನರ ಮತ್ತು ಪಶುಗಳ ಸಂದಣಿ ದಟ್ಟವಾಗಿದ್ದು ಕುಡಿಯುವ ನೀರು ಕಡಿಮೆ ದೊರಕುತ್ತಿತ್ತು. ಕುಡಿಯುವ ನೀರಿನ ಬಯಕೆ ಮಾತ್ರವಲ್ಲದೆ ಅವುಗಳನ್ನು ಜೀವಂತವಾಗಿ ಇರಿಸುವ ಅಗತ್ಯತೆಗಳು ಅವರು ನೀರನ್ನು ಹುಡುಕುತ್ತಾ ಸಂಚರಿಸುವ ಒತ್ತಡಕ್ಕೆ ಸಿಲುಕಿಸಿತು. ಹೀಗೆ ಅವರು ರೆಫಿದೀಮಿಗೆ ಬಂದರು. ಅಲ್ಲಿ ಅವರಿಗೆ ಕುಡಿಯುವುದಕ್ಕೆ ನೀರು ಇರಲಿಲ್ಲ (ವಿಮೋ. 17:1). ಆ ವಿವರದಲ್ಲಿ ಓದುವುದು – "ಕುಡಿಯುವುದಕ್ಕೆ ನೀರಿಲ್ಲದ ಕಾರಣ ಜನರು ಮೋಶೆಯ ಸಂಗಡ ವಾದಿಸುತ್ತಾ ... ಮೋಶೆಯ ಮೇಲೆ ಗುಣಗುಟ್ಟುತ್ತಾ – ನೀನು ನಮ್ಮನ್ನೂ ನಮ್ಮ ಮಕ್ಕಳನ್ನೂ ದನಗಳನ್ನೂ ಐಗುಪ್ತದೇಶದಿಂದ ಕರತಂದು ಈಗ ನೀರಿಲ್ಲದೆ ಸಾಯುವ ಹಾಗೆ ಮಾಡಿದ್ದೇಕೆ ಎಂದರು" (ವಿಮೋ 17:2,3) ನಿಸ್ಸಹಾಯಕ ಮೋಶೆಯನ್ನು ಅವರು ಕಲ್ಲು ಹೊಡೆದು ಸಾಯಿಸಲು ಸಿದ್ಧವಾಗಿದ್ದರು! (ವಿಮೋ. 17:4).

ಈಗ ನಾವು ನಿಮಗೆ ಮತ್ತೆ ಜ್ಞಾಪಿಸುವುದೇನೆಂದರೆ, ಜೀವನದ ಅವಶ್ಯಕತೆಗಳನ್ನು ಬಯಸುವುದು ಪಾಪವಲ್ಲ. ಆದರೆ ದೇವರ ಅನುಗ್ರಹಕ್ಕೆ ವಿರೋಧವಾಗಿ ಗುಣಗುಟ್ಟುವುದು ಪಾಪ. ಅದು ನಂಬಿಕೆ ಇಲ್ಲದಿರುವಿಕೆಯನ್ನು ದಾಖಲಿಸುತ್ತದೆ ಮತ್ತು ಇದರ ಪರಿಣಾಮವಾಗಿ "ನಮ್ಮ ತಂದೆ ಆಗಿರುವಾತನಿಗೆ" (ಮತ್ತಾಯ 6:9) ನಮಗೆ "ಏನೇನು ಅಗತ್ಯವೆಂಬುದು ಆತನಿಗೆ ತಿಳಿದದೆ" (ಮತ್ತಾಯ 6:8). ಈ ಲೋಕದ ಒಬ್ಬ ತಂದೆ ತನ್ನ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡುವುದಕ್ಕಿಂತ ತನ್ನನ್ನು ಬೇಡುವವರಿಗೆ ಎಷ್ಟೋ ಹೆಚ್ಚು ಒಳ್ಳೆಯ ವರಗಳನ್ನು ಕೊಡುವನಲ್ಲವೇ? ಎಂಬ ಅಂಶವನ್ನು ಮನನ ಮಾಡಿಕೊಳ್ಳಲು ವಿಫಲ ಮಾಡುತ್ತದೆ. (ಮತ್ತಾಯ 7:11) ಅರಣ್ಯ ಮಾರ್ಗಗಳಲ್ಲಿ ನಮಗೆ ಬರುವ ಪರಿಶೋಧನೆ ಉಂಟಾಗುವ ಅನುಭವಗಳೆಲ್ಲವೂ ಈ ತಂದೆ ಮಕ್ಕಳ ಸಂಬಂಧವನ್ನು ಬೆಳೆಸಲು ದೇವರಿಂದ ನೇಮಕವಾಗಿ ರೂಪಗೊಂಡಿರುತ್ತವೆ. ಅಲ್ಲಿ ಉಂಟಾದ ಆತನ ಮೇಲಿನ ನಮ್ಮ ಗಾಢವಾದ ಅವಲಂಬನೆಯು ನಾವು ಆತನನ್ನು ಬೇಡುವಂತೆ ಮಾಡುತ್ತವೆ. ಆದರೆ ಅತನನ್ನು ಬೇಡುವುದೆಂದರೆ ಆತನನ್ನು ನೆನಸಿಕೊಳ್ಳುವುದು! ಇಸ್ರಾಯೇಲ್ಯರು ಇದನ್ನು ಮಾಡುವುದರಲ್ಲಿ ಸತತವಾಗಿ ವಿಫಲರಾದರು. ಆದಾಗ್ಯೂ ತಮ್ಮ ಬಗ್ಗೆ ತಾವು ನೆನೆಯುವುದನ್ನು ಎಂದೂ ಬಿಡಲಿಲ್ಲವೆಂದು ತೋರುತ್ತದೆ. ತಮ್ಮ ಬಗ್ಗೆ ತಾವು ನೆನೆಯುವುದರಲ್ಲಿ ದೇವರನ್ನು ಹೇಗೇ ಪೂರ್ಣವಾಗಿ ಮರೆತು ಹೋದರೆಂಬ ಪಾಠ ಈಗ ನಮ್ಮ ಮುಂದಿರುವುದನ್ನು ಗಮನಿಸಿ. "ನೀನು ನಮ್ಮನ್ನೂ ನಮ್ಮ ಮಕ್ಕಳನ್ನೂ, ದನಗಳನ್ನೂ ಐಗುಪ್ತದಿಂದ ಕರತಂದು ಈಗ ನೀರಿಲ್ಲದೆ ಸಾಯುವ ಹಾಗೆ ಮಾಡಿದ್ದೇಕೆ?" (ವಿಮೋ. 17:3)

ಆದರೆ ದೇವರು ಪ್ರೀತಿಸ್ವರೂಪನು (1ಯೋಹಾನ 4:16) ಮತ್ತು ದೀರ್ಘಶಾಂತಿ ಕರುಣೆಗಳಿಂದ (1ಕೊರಿಂಥ 13:4) ಇಸ್ರಾಯೇಲ್ಯರೊಂದಿಗೆ (ಮನದಿರುಗಿಸಲು) ಶ್ರಮಿಸುವುದನ್ನು ಮುಂದುವರಿಸಿದನು. ತಮ್ಮ ಅನರ್ಹವಾದ ದೇವರ ಕೃಪೆಗೆ ಇಸ್ರಾಯೇಲ್ಯರು ತೋರಿದ ಪ್ರತಿಕ್ರಿಯೆಗಳನ್ನು ಅರ್ಥಮಾಡಿಕೊಳ್ಳಲು ನಮ್ಮ ಹೃದಯದಲ್ಲಿರುವ ಅತಿ ದುಷ್ಟತನ, ಉದಾಸೀನತೆ ಹಾಗೂ ನಂಬಿಕೆಯ ಕೊರತೆಗಳು,

ನಮ್ಮನ್ನು ವಿಫಲರನ್ನಾಗಿ ಮಾಡುತ್ತವೆ ಎಂಬುದನ್ನು ನಾವು ತಿಳಿದಿಲ್ಲವೋ. ದೇವರು ಅವರೊಂದಿಗೆ (ಮನದಿರುಗಿಸಲು) ಶ್ರಮಿಸುವುದನ್ನು ನಿಲ್ಲಿಸಿ ಅವರನ್ನು ಘೋರ ಅರಣ್ಯಕ್ಕೆ ಹಿಂದೆ ತಿರುಗಿಕೊಂಡು ಹೋಗುವಂತೆ ಮಾಡುವ ಸಮಯ ಬಂತೆಂಬುದನ್ನು ನಾವು ನೆನಸಿಕೊಳ್ಳೋಣ. ಇದು ಆದದ್ದು ಅವರು ವಾಗ್ಧತ್ತ ದೇಶದ ಅಂಚಿನಲ್ಲಿರುವ ಕಾದೇಶ್–ಬರ್ನೇಯಕ್ಕೆ ಬಂದಾಗ "ಇದನ್ನು ಕೇಳಿ ಜನಸಮೂಹ ದವರೆಲ್ಲಾ ಗುಲ್ಲು ಮಾಡಿ ಬಹಳ ಕೂಗಿಕೊಂಡರು. ಆ ರಾತ್ರಿಯೆಲ್ಲಾ ಜನರು ಅಳುತ್ತಿದ್ದರು" ಗೂಢಾಚಾರರು ಕೆಟ್ಟ ಸುದ್ಧಿಯನ್ನು ತಂದದ್ದರಿಂದ "ಇಸ್ರಾಯೇಲ್ಯರೆಲ್ಲರೂ ಮೋಶೆ ಆರೋನರಿಗೆ ವಿರೋಧವಾಗಿ ಗುಣಗುಟ್ಟಿ – ನಾವು ಐಗುಪ್ತದಲ್ಲೇ ಸತ್ತಿದ್ದರೆ ಎಷ್ಟೋ ಮೇಲಾಗಿತ್ತು. ಈ ಅರಣ್ಯದಲ್ಲಿಯಾದರೂ ಸತ್ತಿದ್ದರೆ ಮೇಲಾಗಿತ್ತು. ಯೆಹೋವನು ನಮ್ಮನ್ನು ಯಾಕೆ ಕತ್ತಿಯ ಬಾಯಿಂದ ಸಾಯಿಸುವುದಕ್ಕೆ ಈ ದೇಶಕ್ಕೆ ಬರಮಾಡುತ್ತಾನೆ. ನಮ್ಮ ಹೆಂಡರೂ ಮಕ್ಕಳೂ ಪರರ ಪಾಲಾಗುತ್ತಾರಲ್ಲ. ನಾವು ಐಗುಪ್ತ ದೇಶಕ್ಕೆ ತಿರುಗಿ ಹೋಗುವುದು ಒಳ್ಳೇದಲ್ಲವೇ" (ಅರಣ್ಯ. 14:1–3) ಅವರ ಹೃದಯ ಇನ್ನೂ ಕೆಟ್ಟದಾಗಿತ್ತು. ಅದು ಅಪನಂಬಿಕೆಯಿಂದ ಕೂಡಿತ್ತು. ಆ ದೇಶಕ್ಕೆ ದೇವರೊಡನೆ ಹೋಗುವ ಬದಲು ಆತನನ್ನು ಬಿಟ್ಟು ಐಗುಪ್ತಕ್ಕೆ ಹಿಂದಿರುಗುವುದರಲ್ಲಿದ್ದರು. (ಅರಣ್ಯ. 14:4) ದೇವರ ಮಾತನ್ನು ಗಮನಿಸಿ – "ನಿಮ್ಮಲ್ಲಿ ಯಾರೂ ನಿವಾಸಕ್ಕಾಗಿ ನಾನು ಪ್ರಮಾಣಪೂರ್ವಕವಾಗಿ ವಾಗ್ದಾನ ಮಾಡಿದ ದೇಶವನ್ನು ಸೇರುವುದಿಲ್ಲ... ನಿಮ್ಮೆಲ್ಲರ ಶವಗಳು ಈ ಅರಣ್ಯದಲ್ಲಿ ಬೀಳುವವು.." (ಅರಣ್ಯ. 14:30,32) ಸ್ನೇಹಿತರೇ, ಜೀವಸ್ವರೂಪನಾದ ದೇವರನ್ನು ಬಿಟ್ಟುಹೋಗುವ ಅಪನಂಬಿಕೆಯುಳ್ಳ ಕೆಟ್ಟ ಹೃದಯವು ನಿಮ್ಮೊಳಗೆ ಯಾವನಲ್ಲಿಯೂ ಇರದಂತೆ ಎಚ್ಚರಿಕೆಯಾಗಿರೋಣ (ಇಬ್ರಿಯ 3:12).

## ದೇವರು ಇಸ್ರಾಯೇಲ್ಯರಿಗೆ ಬಂಡೆಯೊಳಗಿಂದ ನೀರು ಬರಮಾಡಿದ್ದು, ಆಗ ಅಮಾಲೇಕ್ಯರು ಯುದ್ಧಕ್ಕೆ ಬಂದದ್ದು.

"ಅದಕ್ಕೆ ಯೆಹೋವನು (ಮೋಶೆಗೆ) – ನೀನು ... ಕೋಲನ್ನು ಕೈಯಲ್ಲಿ ಹಿಡಿದು ... ಮುಂದೆ ಹೋಗು, ಅಲ್ಲಿ ಹೋರೇಬಿನಲ್ಲಿರುವ ಬಂಡೆಯ ಮೇಲೆ ನಾನೇ ನಿನ್ನೆದುರಾಗಿ ನಿಲ್ಲುವೆನು. ನೀನು ಆ ಬಂಡೆಯನ್ನು ಹೊಡೆದಾಗ ನೀರು ಹೊರಡುವುದು. ಜನರು ಕುಡಿಯುವರು (ವಿಮೋ. 17:5, 6).

1ಕೊರಿಂಥ 10:4ರಲ್ಲಿ ಅಪೋಸ್ತಲನಾದ ಪೌಲನು ಪೂರ್ವದಲ್ಲಿದ್ದ ಇಸ್ರಾಯೇಲ್ಯರ ಬಗ್ಗೆ ಮಾತನಾಡುತ್ತಾ ಹೇಳುವುದೇನೆಂದರೆ – ಅವರೆಲ್ಲರೂ "ದೈವಿಕವಾದ ಒಂದೇ ನೀರನ್ನು ಕುಡಿದರು. ಹೇಗೆಂದರೆ, ಅವರ ಹಿಂದೆ ಹೋಗುತ್ತಿದ್ದ ದೈವಿಕವಾದ ಬಂಡೆಯೊಳಗಿಂದ ಬಂದ ನೀರನ್ನು ಕುಡಿಯುತ್ತಿದ್ದರು. ಆ ಬಂಡೆಯು ಕ್ರಿಸ್ತನೇ" ಪವಿತ್ರಾತ್ಮನು ಆ ವಿಷಯದ ಬಗ್ಗೆ ಬಹು ನಿರ್ಧಿಷ್ಟವಾಗಿ ಹೇಳಿರುವಾಗ, ಮೋಶೆಯು ಹೊಡೆದ ಬಂಡೆಯು ಕ್ರಿಸ್ತನಿಗೆ ಛಾಯೆ

ಎನ್ನುವದರಲ್ಲಿ ಸಂಶಯಪಟ್ಟರೆ, ಅದಕ್ಕೆ ಏನಾದರೂ ಸಮರ್ಥನೆ ಉಂಟೋ? ಅಪರಿಮಿತ ವಾದ ದೇವರ ಕೃಪೆಗೆ ಇದು ಎಂತಹ ಒಂದು ಭವ್ಯವಾದ ವರ್ಣನೆ! ಸಹೋದರ ರಸೆಲ್ಲರು ಹೇಳುವುದು; "ಕರ್ತನ ಏರ್ಪಾಡಿನಿಂದಲೇ ಈ ದೈವೀಕವಾದ ಬಂಡೆಯು ಹೊಡೆಯ ಲ್ಪಟ್ಟಿತು. ಜೀವ ಜಲವು ಯೇಸುವಿನಿಂದ ಹೊರಟು ನಿಜವಾದ ಇಸ್ರಾಯೇಲ್ಯರಾಗುವವರಿಗೆ ಅಂದರೆ ಐಗುಪ್ತ ದಿಂದ ಹೊರಬರುವ – ಈ ಲೋಕದಿಂದ ಹೊರಬರುವ – ಪಾಪದಿಂದ ಹೊರಬರುವ–ಸೈತಾನನ ರಾಜ್ಯದಿಂದ ಹೊರಬರುವ ಕರ್ತನಿಗೆ ವಿಧೇಯರಾಗಿ ಅನ್ಯೋನ್ಯ–ತೆಗೆ ಸೇರಲಿರುವ ಆದಾಮನ ಸಂತತಿಯವರೆಲ್ಲರಿಗಾಗಿ ಇರುವುದು. (R5957:3)

ಇಸ್ರಾಯೇಲ್ಯರು ರೆಫಿದೀಮನ್ನು ತಲುಪಿದಾಗ "ಜನರಿಗೆ ಕುಡಿಯುವುದಕ್ಕೆ ನೀರು ಇರಲಿಲ್ಲ" (ವಿಮೋ. 17:1) ಎಂಬುದು ಗಮನಕ್ಕೆ ಬರುವುದು. ಮತ್ತು ಸ್ವಲ್ಪ ಕಾಲ ಅವರು ನೀರಿಲ್ಲದೆ ಇದ್ದರು ಎಂಬುದು ಸ್ಪಷ್ಟವಾಗಿ ತೋರುತ್ತದೆ. ಆದುದರಿಂದ ನಾವು ತಿಳಿಯುವುದು ಅವರು "ಸಾವಿಗೆ ಸಮೀಪ" ಬಂದಿರಬೇಕು ಎಂದು. ಮತ್ತು ದೇವರು ಬಂಡೆಯೊಳಗಿಂದ ಅವರಿಗೆ ನೀರನ್ನು ಬರಮಾಡಿದಿದ್ದಲ್ಲಿ ಅವರು ನಿಜವಾಗಿ ಸತ್ತೇ ಹೋಗುತ್ತಿದ್ದರು. ಇಲ್ಲಿ ತಾರತಮ್ಯವಿರಲು ಅವಕಾಶವಿಲ್ಲ. ಯಾರೊಬ್ಬರೂ ಬದುಕಲು ಬಯಸುವರೋ ಅವರು ಹೊಡೆಯಲ್ಪಟ್ಟ ಬಂಡೆಯೊಳಗಿಂದ ಹರಿದುಬಂದ ನೀರನ್ನು ಕುಡಿಯಬೇಕಿತ್ತು. ಮಾನವ ಲೋಕದವರೆಲ್ಲರ ವಿಷಯದಲ್ಲಿಯೂ ಹಾಗೆಯೇ ಇರುವುದು ಆದಾಮನು ದೇವರ ಪ್ರಸನ್ನತೆಯಿದ್ದ ಪರದೈಸಿನಿಂದ ಹೊರಬಂದು ಪಾಪಮಯವಾದ ಲೋಕಾರಣ್ಯಕ್ಕೆ ಪ್ರವೇಶಿಸಿದನೋ ಆಗ ಎಲ್ಲರೂ ಜೀವಜಲ ಮೂಲದ ಸುಳಿವನ್ನು ಕಳೆದುಕೊಂಡರು. ಅಲ್ಲಿಂದ ಈವರೆಗೆ ಆದಾಮನ ಸಂತತಿಯು ಜೀವಜಲಕ್ಕೆ ಬಾಯಾರಿ ಸಾಯುತ್ತಲಿದೆ. ಮರಣ–ಅದರಿಂದಾಗುವ ನಿರ್ನಾಮ ಖಚಿತವಾಗಿತ್ತು! ಆದರೆ ದೇವರು (ದೈವೀಕ) ಬಂಡೆಯಾದ ತನ್ನ ಒಬ್ಬನೇ ಕುಮಾರನಾದ ಕ್ರಿಸ್ತ ಯೇಸುವನ್ನು ಕಲ್ವಾರಿಯ ಶಿಲುಬೆಯ ಮೇಲೆ ಹೊಡೆಯುವ ಸಮಯ ಬಂದಿತು. ಅಂದಿನಿಂದೀಚೆಗೆ ಜೀವಜಲವು ಹರಿದು ಬರುತ್ತಿದೆ. ನಿಜ, ಆದಾಮನ ಸಂತತಿಯವರೆಲ್ಲರಿಗೂ ಜೀವಜಲದ ಹೊಳೆಯಲ್ಲಿ ಕುಡಿಯುವ ಸೌಭಾಗ್ಯ ದೊರೆತಿಲ್ಲ. ಆದರೆ ಕ್ರಿಸ್ತನು ತಾನೇ ಒಂದು ಕಾಲದ ವಿಷಯದಲ್ಲಿ ನಮಗೆ ಆಶ್ವಾಸನೆ ನೀಡಿಲ್ಲವೇ. "... ಸಮಾಧಿಗಳಲ್ಲಿರುವವರೆಲ್ಲರೂ ಆತನ ಧ್ವನಿಯನ್ನು ಕೇಳಿ ಎದ್ದು ಹೊರ ಬರುವ ಕಾಲ..." (ಯೋಹಾನ 5:28, 29) ಇದನ್ನು ಅಲ್ಲಿ ಹಾಗೆ ಕೇಳಲು – "ಆತ್ಮನು ಮದಲಗಿತ್ತಿಯೂ – ಬಾ ಅನ್ನುತ್ತಾನೆ. ಬಾಯಾರಿದವನು ಬರಲಿ, ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ" (ಪ್ರಕಟನೆ 22:17).

ಅದರೆ ಸುವಾರ್ತಾ ಯುಗದಲ್ಲಿರುವ ದೇವರ ಇಸ್ರಾಯೇಲ್ಯರಿಗಾಗಿ ಇಲ್ಲಿ ಅಪೋಸ್ತಲನಾದ ಪೌಲನ ಈ ಆಲೋಚನೆ ಇದೆ – ಹಿಂದೆ ಬಂಡೆಯೊಳಗಿಂದ ಬಂದ ನೀರನ್ನು ಕುಡಿದವರ ವಿಷಯವನ್ನು ನಮ್ಮ ಗಮನಕ್ಕೆ ತಂದು ಆತನು ಹೇಳಿರುವುದು – "... ಅವರೊಳಗೆ ಬಹು ಮಂದಿಯ ವಿಷಯದಲ್ಲಿ ದೇವರು ಸಂತೋಷಿಸಲಿಲ್ಲ. ಅವರು

ಅರಣ್ಯದಲ್ಲಿ ಸಂಹರಿಸಲ್ಪಟ್ಟರಷ್ಟೆ" (1 ಕೊರಿಂಥ 10:5) ಅವರು ಏಕೆ ಸಂಹರಿಸಲ್ಪಟ್ಟರು? ಅವರು ಇಸ್ರಾಯೇಲ್ಯರ ಸದಮಲ ಸ್ವಾಮಿಯ ಕೃಪೆಯನ್ನು ಹೊಂದಿ ಅಯೋಗ್ಯವಾಗಿ ನಡೆದರು ಎಂಬ ಕಾರಣಕ್ಕಾಗಿ ಅಲ್ಲವಷ್ಟೆ! " ಈ ಸಂಗತಿಗಳು ನಮಗೆ ನಿದರ್ಶನಗಳಾಗಿವೆ. ಕೆಟ್ಟ ವಿಷಯಗಳನ್ನು ನಾವು ಆಶಿಸುವವರಾಗದೆ ಇರುವುದಕ್ಕಾಗಿ... ವಿಗ್ರಹಾರಾಧಕರಾಗದೆ ಇರುವುದಕ್ಕಾಗಿ ... ಜಾರತ್ವ ಮಾಡದೆ ಇರುವುದಕ್ಕಾಗಿ... ಕ್ರಿಸ್ತನನ್ನು ಪರೀಕ್ಷಿಸದೆ ಇರುವುದಕ್ಕಾಗಿ... ಗುಣಗುಟ್ಟದೆ ಇರುವುದಕ್ಕಾಗಿ" (1ಕೊರಿಂಥ 10:6–10) ಹಿಂದಿನ ಕಾಲದಲ್ಲಿ ನಮಗೆ ದೊರೆತ ದೇವರ ಕೃಪಾನುಗ್ರಹಗಳ ವಿಷಯದಲ್ಲಿರುವ ನಮ್ಮ ಗ್ರಹಿಕೆಯ ಕುರುಹು ಸಿಗುವುದು – ನಾವು ಈಗಿನ ಮತ್ತು ಮುಂದಿನ ಕಾಲದಲ್ಲಿ ಆತನೆದುರಿನಲ್ಲಿ ಹೇಗೆ ನಡೆಯುವೆವೆಂಬ ಅಂಶದಲ್ಲಿ. ಹೀಗಿರುವಲ್ಲಿ ನಾವು "ಯಾವ ಕಾರಣಕ್ಕಾಗಿ ಕರೆಯಲ್ಪಟ್ಟಿರುವೆವೋ ಆ ಕರೆಗೆ ಯೋಗ್ಯರಾಗಿ ನಡೆದು ಕೊಳ್ಳೋಣ" (ಎಫೆಸ 4:1 – ಅಮೇರಿಕನ್ ರೆವೈಸ್ಡ್ ವರ್ಷನ್)

ಸೀಳಲ್ಪಟ್ಟ ಬಂಡೆಯೊಳಗಿಂದ ಹರಿದುಬಂದ ನೀರಿನಿಂದ ಇಸ್ರಾಯೇಲ್ಯರು ದಣಿವಾರಿಸಿಕೊಂಡ ನಂತರ ಅಮಾಲೇಕ್ಯರು... ಇಸ್ರಾಯೇಲ್ಯರ ಮೇಲೆ ಯುದ್ಧ ಮಾಡುವುದಕ್ಕೆ ಬರಲು..." (ವಿಮೋ. 17:8) ಪ್ರಿಯ ಮಿತ್ರರೇ, ಅಮಾಲೇಕ್ಯರು ಮೊದಲೇ ಬಂದು ಇಸ್ರಾಯೇಲ್ಯರನ್ನು ತಮಗೆ ಒಂದು ಸುಲಭವಾದ ಬಲಿಪಶುವಾಗುವರೆಂದು ಕಂಡುಕೊಳ್ಳಬಹುದಿತ್ತು ಎಂಬುದನ್ನು ಗಮನಿಸಿ ನೋಡಿ. ಇಲ್ಲಿ ಇಸ್ರಾಯೇಲ್ಯರ ಮೇಲಿನ ದೇವರ ಕೃಪಾನುಗ್ರಹಪೂರ್ವಕವಾದ ಪರಾಮರಿಕೆಯು ಕಾಣಬರುತ್ತದೆ. ಆದರೆ ದೇವರು ಅಮಾಲೇಕ್ಯರನ್ನು ಇಸ್ರಾಯೇಲ್ಯರ ಮೇಲೆ ಬರಮಾಡಿದ್ದಾದರೂ ಏಕೆ ಎಂದು ನೀವು ಕೇಳುವಿರಿ. ಇದು ಖಂಡಿತವಾಗಿ ಇಸ್ರಾಯೇಲ್ಯರನ್ನು ನಾಶಮಾಡಲು ದೇವರು ಬಯಸಿದ್ದರು ಎಂಬ ಕಾರಣಕ್ಕಾಗಿ ಅಲ್ಲ; ಆದರೆ ನಿಜವಾಗಿ ತಾನು ಇಸ್ರಾಯೇಲ್ಯರ ಶೂರನು ಎಂದು ಅವರಿಗೆ ತನ್ನನ್ನು ಪ್ರಕಟಿಸಿಕೊಂಡು ಮತ್ತು ಅವರು ತನ್ನ ಶಕ್ತಿಯನ್ನು ಆಶ್ರಯಿಸಿ ಬಲಗೊಂಡು (ಯುದ್ಧಕ್ಕೆ) ಸಮರ್ಥರಾಗುವ ಸದಾವಕಾಶವನ್ನು ಅವರಿಗೆ ಒದಗಿಸುವುದಕ್ಕಾಗಿ ಹೀಗೆ ಮಾಡಿದನು.

ಶಕ್ತಿಸಾಮರ್ಥ್ಯಗಳು ಅಭಿವೃದ್ಧಿಯಾಗುವುದು ಕಷ್ಟ ಇಕ್ಕಟ್ಟಿನ ಪರಿಸ್ಥಿತಿಗಳನ್ನು ಎದುರಿಸುವಾಗಲೇ. ಆದರೆ ಎಫೆಸ. 6:10 ರಲ್ಲಿ ಅಪೋಸ್ತಲನ ಬುದ್ಧಿವಾದವು ಹೀಗಿದೆ – "ನೀವು ಕರ್ತನನ್ನು ಆತನ ಅತ್ಯಧಿಕವಾದ ಶಕ್ತಿಯನ್ನು ಆಶ್ರಯಿಸಿಕೊಂಡವರಾಗಿ ಬಲಗೊಳ್ಳಿರಿ". ವಿಚಿತ್ರವೆಂದರೆ, ಈ ರೀತಿಯಲ್ಲಿ ಬೆಳೆಯಲು ನಮಗೆ ಮೊದಲು ಅವಶ್ಯವಿರುವುದು ನಮ್ಮ ಸ್ವಂತ ಬಲಹೀನತೆಗಳ ಅರಿವು. ಅಪೋಸ್ತಲನಾದ ಪೌಲನು ಕರ್ತನ ಶಕ್ತಿ ಸಾಮರ್ಥ್ಯಗಳನ್ನು ತನ್ನ ಸೇವೆಯಲ್ಲಿ ಹೆಚ್ಚು ಬಳಸಲು ಬಯಸಿ ಮೂರು ಸಾರಿ ತನ್ನ ಶರೀರದಲ್ಲಿರುವ ಶೂಲವು ತೆಗೆಯಲ್ಪಡಬೇಕೆಂದು ಬೇಡಿಕೊಂಡಾಗ, ಅವನು ಪಡೆದ ಉತ್ತರ; "ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲೇ ಬಲವು

ಪೂರ್ಣಸಾಧಕವಾಗುತ್ತದೆ" (2ಕೊರಿಂಥ 12:9, 10). ಅನಂತರದಲ್ಲಿ ಪೌಲನು ದೇವರ ಚಿತ್ತವನ್ನು ಒಪ್ಪಿಕೊಂಡಿರುವುದನ್ನು ನೋಡಿ – "ಹೀಗಿರಲಾಗಿ ಕ್ರಿಸ್ತನ ಬಲವು ನನ್ನಲ್ಲಿ ನೆಲಸಿಕೊಂಡಿರಬೇಕೆಂದು ನನಗುಂಟಾಗುವ ನಿರ್ಬಲಾವಸ್ಥೆಗಳ ವಿಷಯದಲ್ಲೇ ಬಹು ಸಂತೋಷಪಟ್ಟು ಹೆಚ್ಚಳಪಡುವೆನು. ಆದುದರಿಂದ ಕ್ರಿಸ್ತನ ನಿಮಿತ್ತ ನನಗೆ ನಿರ್ಬಲಾವಸ್ಥೆಯೂ ತಿರಸ್ಕಾರವೂ ಕೊರತೆಯೂ ಹಿಂಸೆಯೂ ಇಕ್ಕಟ್ಟೂ ಸಂಭವಿಸಿದಾಗ ಸಂತುಷ್ಟನಗಿದ್ದೇನೆ. ನಾನು ಯಾವಾಗ ನಿರ್ಬಲವಾಗಿದ್ದೆನೋ ಆವಾಗಲೇ ಬಲವುಳ್ಳವನಾಗಿದ್ದೇನೆ" (2 ಕೊರಿಂಥ 12:10).

ಇಸ್ರಾಯೇಲ್ಯರು ಜೀವದಾಯಕ ಜಲವನ್ನು ಕುಡಿದ ನಂತರ ಅಮಾಲೇಕ್ಯರು ಬಂದರೆಂಬುದನ್ನು ಇಲ್ಲಿ ಮತ್ತೆ ಗಮನಿಸಿ. ಇಲ್ಲಿ ನಮಗೆ ಒಂದು ವಿಶೇಷ ಪಾಠವಿದೆ. ಎಲ್ಲಾ ಮನುಷ್ಯರಲ್ಲಿ ಈ ವರೆಗೆ ನಾವು ಮಾತ್ರವೇ ಸೀಳಲ್ಪಟ್ಟ ಯೇಸುವಿನಿಂದ ಹೊರಡುವ ಜೀವ ಜಲವನ್ನು ಕುಡಿದಿರುವುದು. ಈ ನೀರನ್ನು ಕುಡಿಯುವುದು ಇಲ್ಲವೇ ನಮಗಾಗಿ ವಿನಿಯೋಗಿಸಿಕೊಳ್ಳುವುದು ನಮ್ಮನ್ನು ಆತನ ಯಜ್ಞದ ರಕ್ತದ ಮೇಲಿನ ನಂಬಿಕೆಯಿಂದ ಜೀವ ಹೊಂದಲು ಯೋಗ್ಯರನ್ನಾಗಿ ಮಾಡುವುದಲ್ಲದೆ ಸೀಳಲ್ಪಟ್ಟ ಬಂಡೆಯ ಮೂಲಕ ನಮ್ಮನ್ನು ಮರಣದಿಂದ ವಿಮೋಚಿಸಿದ ಆತನಿಗಾಗಿ (ತಂದೆ ದೇವರಿಗಾಗಿ) ಪ್ರತಿಷ್ಠಿತರಾಗಿ ಜೀವಿಸುವಂತೆ ಮಾಡುತ್ತದೆ. ಇದರ ನಂತರವೇ ನಮ್ಮ ಶರೀರಭಾವಕ್ಕೆ ಉತ್ತಮವಾದ ಛಾಯೆಯಾಗಿರುವ ಅಮಾಲೇಕ್ಯರು ನಮ್ಮೊಂದಿಗೆ ಯುದ್ಧ ಮಾಡುವುದಕ್ಕೆ ಕಾಣಿಸಿಕೊಳ್ಳುವುದು. ಅಮಾಲೇಕ್ಯರು, ತನ್ನ ಚೊಚ್ಚಲತನಕ್ಕೆ ಬದಲಾಗಿ ಒಂದು ಬಟ್ಟಲು ಆಹಾರವನ್ನು ಆರಿಸಿಕೊಂಡ, ಏಸಾವನ ಮೊಮ್ಮಗನು. (ಆದಿಕಾಂಡ 36:12 ನೋಡಿ) ಐಗುಪ್ತದ ದಾಸತ್ವದಿಂದ ಇಸ್ರಾಯೇಲ್ಯರು ವಿಮೋಚಿಸಲ್ಪಟ್ಟ ನಂತರ ಅವರೊಡನೆ ಯುದ್ಧಕ್ಕೆ ಬಂದವರಲ್ಲಿ ಅಮಾಲೇಕ್ಯರು ಮೊದಲಿಗರು. ಧರ್ಮೋ. 26:17–19ರಲ್ಲಿ ನಾವು ಇಸ್ರಾಯೇಲ್ಯರಿಗೆ ಕೊಟ್ಟಿರುವ ಬುದ್ಧಿಪಾಠವನ್ನು ಓದುತ್ತೇವೆ. ಅದು ಹೀಗಿರುತ್ತದೆ:

"ನೀವು ಐಗುಪ್ತದೇಶದಿಂದ ಬರುವಾಗ ದಾರಿಯಲ್ಲಿ ಅಮಾಲೇಕ್ಯರು ನಿಮ್ಮನ್ನು ಎದುರಿಸಿದ್ದನ್ನು ಜ್ಞಾಪಿಸಿಕೊಳ್ಳಿರಿ. ಅವರು ದೇವರಲ್ಲಿ ಸ್ವಲ್ಪವೂ ಭಯಭಕ್ತಿಯಿಲ್ಲದವರಾಗಿ ನೀವು ದಣಿದು ಬಳಲಿದ್ದಾಗ ನಿಮ್ಮವರಲ್ಲಿ ಹಿಂದೆಬಿದ್ದ ಬಲಹೀನರನ್ನು ಸಂಹಾರ ಮಾಡಿದರಲ್ಲಾ. ಆದಕಾರಣ ನಿಮ್ಮ ದೇವರಾದ ಯೆಹೋವನು ನಿಮಗೆ ಸ್ವದೇಶವಾಗುವುದಕ್ಕೆ ಕೊಡುವ ದೇಶದಲ್ಲಿ ನಿಮ್ಮನ್ನು ಸೇರಿಸಿ ಸುತ್ತಲೂ ಯಾವ ಶತ್ರುಗಳೂ ಇಲ್ಲದಂತೆ ಮಾಡಿದಾಗ ಭೂಮಿಯ ಮೇಲೆ ಅಮಾಲೇಕ್ಯರ ಹೆಸರೇ ಉಳಿಯದಂತೆ ಮಾಡಬೇಕು. ಇದನ್ನು ಮರೆಯಬಾರದು.

ಅನಂತರದಲ್ಲಿ ಅಮಾಲೇಕ್ಯರನ್ನು ಸಂಹಾರ ಮಾಡುವುದರಲ್ಲಿ ತಾನು ವಿಫಲನಾದುದರ ಪರಿಣಾಮವಾಗಿ ಸೌಲನು ಇಸ್ರಾಯೇಲ್ ರಾಜ್ಯದಿಂದ ತೆಗೆದು ಹಾಕಲ್ಪಟ್ಟನೆಂಬುದನ್ನು ಸಹ ನೀವು ನೆನೆಯುವಿರಿ. 1 ಸಮುವೇಲ 15ನೇ ಅಧ್ಯಾಯ

ಶರೀರಭಾವವು ನಿಜರೂಪದ ಅಮಾಲೇಕ್ಯರೆಂದು ಗುರುತು ಹಿಡಿದು ಪ್ರತಿಪಾದಿಸುವುದರಲ್ಲಿ ನಮಗೆ ಇದಕ್ಕಿಂತಲೂ ಹೆಚ್ಚಿಗೆ ಏನಾದರೂ ಬೇಕೆ? ನಮ್ಮನ್ನು ಕುಂಟಿತರನ್ನಾಗಿ ಇಲ್ಲವೇ ಕಾನಾನ್ ಕಡೆಗಿರುವ ನಮ್ಮ ಅರಣ್ಯ ಪ್ರಯಾಣದಲ್ಲಿ ಮುಂದುವರಿಯುವುದನ್ನು ಪೂರ್ಣವಾಗಿ ಹಾಳು ಮಾಡುವಂಥ ಶತ್ರುವಿನೊಂದಿಗೆ ನಾವು ಸತತವಾಗಿ ಹೋರಾಡುತ್ತಿದ್ದೇವಲ್ಲವೇ? ಅಲ್ಲದೆ ಈ ಕುಯುಕ್ತಿಯುಳ್ಳ ಶತ್ರುವಿನೊಡನೆ ಯುದ್ಧ ಮಾಡಲು ಬೇಕಾದಷ್ಟು ಶಕ್ತಿಯು ಸ್ವತಃ ನಮಗುಂಟು ಎಂದು ನಾವು ಯೋಚಿಸುವ ಅಗತ್ಯವಿಲ್ಲ. ಏಕೆಂದರೆ ಮೋಶೆಯು ತಮ್ಮ ಪರವಾಗಿ ಬಿನ್ನವಿಸಿಕೊಳ್ಳದಿದ್ದಲ್ಲಿ ಇಸ್ರಾಯೇಲ್ಯರು ನಿರ್ನಾಮವಾಗುತ್ತಿದ್ದರು. ನಮ್ಮ ವಿಷಯವೂ ಹೀಗೆಯೇ ಇರುವುದು. ಕ್ರಿಸ್ತ ಯೇಸುವಿನ ಮೂಲಕವಾಗಿ ನಮಗೆ ಜಯವನ್ನು ನೀಡುತ್ತಿರುವುದು ದೇವರು. ಉನ್ನತ ಸ್ಥಾನವೆಂಬ "ಬೆಟ್ಟದ ಮೇಲಿರುವ" ಕ್ರಿಸ್ತನ ಸಹಾಯವಿಲ್ಲದಿದ್ದರೆ ನಮ್ಮ ಹೋರಾಟಗಳೆಲ್ಲವೂ ವ್ಯರ್ಥ. ಎಷ್ಟು ಸೊಗಸಾಗಿ ಈ ಚಿತ್ರಣವು ನಮ್ಮ ಕಣ್ಣಿನ ಮುಂದೆ ಹರವಿಕೊಳ್ಳುತ್ತದೆ. ಛಾಯಾ ರೂಪವನ್ನು ನೋಡಿ. ಮೋಶೆಯು ಕೈಗಳನ್ನು ಎತ್ತಿಕೊಂಡಿದ್ದಾಗ ಇಸ್ರಾಯೇಲ್ಯರು ಪ್ರಭಲವಾಗುತ್ತಿದ್ದರು; ಮತ್ತು ಆತನು ಕೈಗಳನ್ನು ಇಳಿಸಿದಾಗ ಅಮಾಲೇಕ್ಯರು ಪ್ರಬಲವಾಗುತ್ತಿದ್ದರು. (ವಿಮೋ. 17:11) ದೇವರ ಶಕ್ತಿಯಿಲ್ಲದೆ ಇಸ್ರಾಯೇಲ್ಯರು ತೀರಾ ಅಶಕ್ತರು ಅಸಮರ್ಥರು ಎನ್ನುವುದನ್ನು ಇದು ಪ್ರತಿಪಾದಿಸುತ್ತದೆ. ಅವರ ಬಲವು ಇರುತ್ತಿದ್ದುದ್ದು ಕೇವಲ ದೇವರ ಶಕ್ತಿಸಾಮರ್ಥ್ಯಗಳಲ್ಲಿ (ಅದನ್ನು ಆತುಕೊಳ್ಳುವಲ್ಲಿ). ಮೋಶೆಯು ಬಿನ್ನವಿಸದಿದ್ದಲ್ಲಿ ಇದೂ ಅವರಿಗೆ ಇರುತ್ತಿದ್ದಿಲ್ಲ. ಇದು ನಮಗೆ ಎಂತಹ ಪಾಠವಾಗಿರಬೇಕು! ಆದರೂ ನಾವು ಪದೇ ಪದೇ ಎಷ್ಟು ಸಾರಿ ನಮ್ಮ ಸ್ವಂತ ಶಕ್ತಿಯಿಂದ ಶರೀರಕ್ಕೆ ವಿರುದ್ಧವಾಗಿ ಯುದ್ಧ ಮಾಡ ಹೊರಟು ಅದರ ಪರಿಣಾಮವಾಗಿ ಎಷ್ಟು ಹೀನವಾಗಿ ನಮಗೆ ಭಗ್ನವಾಗಿದೆ. ಎಂಬ ಯೇಸುವಿನ ಮಾತು ಎಷ್ಟು ಸತ್ಯವಾಗಿದೆ; "ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ". (ಯೋಹಾನ 15:5)

ಮೋಶೆಯ ಕೈಗಳು ಸೋತುಹೋಗುತ್ತಾ ಬಂತು ಹಾಗೂ ಅವುಗಳಿಗೆ ಆಧಾರ ಬೇಕಿತ್ತು. ಇಲ್ಲವಾದಲ್ಲಿ ಬೆಟ್ಟದ ಮೇಲೆ ಮೋಶೆ ಇರುತ್ತಿದ್ದಾಗ್ಯೂ ಸಹ ಇಸ್ರಾಯೇಲ್ಯರು ಅಮಾಲೇಕ್ಯರಿಂದ ಪರಾಭವಗೊಳ್ಳುತ್ತಿದ್ದರು. ನಮ್ಮ ಕರ್ತನ ಬಾಹುಗಳು ಸೋತು ಹೋಗಲಾರವೆಂಬುದು ನಿಜ. ಆದರೆ ನಾವು ಸಹ ಆಧಾರವಾಗದಿದ್ದಲ್ಲಿ ಅವು ನಮ್ಮ ಪರವಾಗಿ ಎತ್ತಲ್ಪಡುವುದಿಲ್ಲ. ಇದರ ಅರ್ಥವೇನು? ಆಹಾ, ಪ್ರಿಯ ಮಿತ್ರರೇ, ಇದರ ಅರ್ಥ ನಮ್ಮ ಹೃದಯಗಳಲ್ಲಿ ನಾವು " ನೀತಿಯನ್ನು ಪ್ರೀತಿಸಿ ಅನೀತಿಯನ್ನು ಹಗೆಮಾಡಬೇಕು" (ಇಬ್ರಿಯ 1:9). ನಮ್ಮ ಕರ್ತನ ಒಂದು ಬಾಹುವು ನೀತಿಯ ಬಗ್ಗೆ ಆತನಿಗಿರುವ ಪ್ರೀತಿ ಮತ್ತು ಇನ್ನೊಂದು ಬಾಹು ಅನೀತಿಯ ಬಗ್ಗೆ ಆತನಿಗಿರುವ ಹಗೆತನವನ್ನು ಪ್ರತಿನಿಧಿಸುತ್ತದೆ ಎಂಬುದಾಗಿ ನಾವು ಇಲ್ಲಿ ಸೂಚಿಸಬಹುದು. ಎರಡು ಬಾಹುಗಳು ಸಹ ಎತ್ತಲ್ಪಡಬೇಕು. ನಾವು ನೀತಿಯನ್ನು ಪ್ರೀತಿಸಿದರೆ ಸಾಕಾಗದು, ಆದರೆ ನಾವೂ ಅನೀತಿಯನ್ನು ಸಹ ಹಗೆ

ಮಾಡಬೇಕು. ಹೀಗೆ ನಾವು ಯೇಸುವಿನ ಗುಣಲಕ್ಷಣಗಳನ್ನು ನಮ್ಮ ಹೃದಯಗಳಲ್ಲಿ ಪ್ರತಿಪಾದಿಸುವುದು, ಅಂದರೆ ನಮ್ಮ ಪೂರ್ಣ ಶಕ್ತಿ ಸಾಮರ್ಥ್ಯಾನುಸಾರ ಆತನನ್ನು ಉದಾಹರಣೆಯಾಗಿ ಅನುಕರಣೆ ಮಾಡುವುದು. ಇದು ದೇವರ ಸಮ್ಮುಖದಲ್ಲಿ ಅತನು ನಮ್ಮ ಸಹಾಯಕನಾಗಿ ನಮಗೋಸ್ಕರ ಬಿನ್ನವಿಸುವುದನ್ನು ಖಚಿತಪಡಿಸುತ್ತದೆ. ಶರೀರದ ವಿಷಯಗಳ ಮೇಲಿನ ಗೆಲುವು ಆಗ ನಮ್ಮದಾಗುತ್ತದೆ. ಆದರೆ ಅದು ಕೇವಲ ಕ್ರಿಸ್ತ ಯೇಸುವಿನಲ್ಲಿ ತೋರಿಬಂದ ದೇವರ ಕೃಪೆಯ ಮೂಲಕವಾಗಿರುವುದು.

ಅಮಾಲೇಕ್ಯನು ಸೋಲಿಸಲ್ಪಟ್ಟನು, ಆದರೆ ನಾಶವಾಗಲಿಲ್ಲ ಎಂಬುದನ್ನು ನಾವು ಗಮನಿಸುವುದು ಮುಖ್ಯ. ಹಾಗಾಗಿ ಆತನು ಇಸ್ರಾಯೇಲ್ಯರ ಚರಿತ್ರೆಯಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಲೇ ಇರುವನು. ನಮ್ಮ ವಿಷಯದಲ್ಲಿಯೂ ಹೀಗೆಯೇ ಆಗುವುದು, ಶರೀರದವುಗಳ ಮೇಲಿನ ಇಂದಿನ ಗೆಲುವು ಅದರ ಸಂಪೂರ್ಣ ನಾಶವಲ್ಲ ಆದರೆ ಕೇವಲ ಅದನ್ನು ಸ್ವಾಧೀನ ಮಾಡಿಕೊಳ್ಳುವುದಾಗಿದೆ. ನಾವು ಅಮಾಲೇಕ್ಯನೊಂದಿಗೆ ಪದೇ ಪದೇ ಹೋರಾಡಬೇಕಿರುವುದು. ದೇವರ ಕೃಪೆಯಿಂದ ಪರಿಪೂರ್ಣ ಜಯಶಾಲಿಗಳಾಗುವುದು ನಮ್ಮ ಮರಣದಲ್ಲಿಯೇ. ಅಲ್ಲಿಯವರೆಗೆ ನಿರಂತರ ಹೋರಾಟವಿರುತ್ತದೆ. ವಿಮೋಚನಾಕಾಂಡ 17:16 ರಲ್ಲಿ ನಾವು ಓದುವಂತೆ. "ಯಾಹುವಿನ ಸಿಂಹಾಸನದ ಆಣೆ ಅಮಾಲೇಕ್ಯರ ಮೇಲೆ ಯೆಹೋವನಿಗೆ ತಲತಲಾಂತರಕ್ಕೂ ಯುದ್ಧವಿರುವುದು". ಎಷ್ಟು ಮಹತ್ವವುಳ್ಳದ್ದಾಗಿದೆ! ಆತನ ನಾಮಕ್ಕೆ ಸ್ತೋತ್ರವಾಗಲಿ, ಆತನು ದೇವರ ನಿಜವಾದ ಇಸ್ರಾಯೇಲ್ಯರಿಗೆ ಅಂತಿಮ ವಿಜಯದ ಭರವಸೆ ನೀಡಿದ್ದಾನೆ. ನಾವು "ಎಚ್ಚರವಾಗಿದ್ದು ಪ್ರಾರ್ಥಿಸೋಣ!"

ಮೇಲೆ ನಿರೂಪಿಸಲ್ಪಟ್ಟಿರುವುದಕ್ಕೆ ಅನುಗುಣವಾಗಿ ಶರೀರವೆಂಬ ನಿಜರೂಪದ ಅಮಾಲೇಕ್ಯನ ಮೇಲಿನ ಗೆಲುವು ನಮ್ಮದಾಗಬೇಕಿದ್ದರೆ, ಇಸ್ರಾಯೇಲ್ಯರ ಪರವಾಗಿ ಮೋಶೆಯ ಕೈಗಳು ಎತ್ತಲ್ಪಡಬೇಕಿದ್ದ ಹಾಗೆ ಕ್ರಿಸ್ತನ ಕೈಗಳು ನಮ್ಮ ಪರವಾಗಿ ಎತ್ತಲ್ಪಡುವುದು ಅವಶ್ಯ. ಛಾಯೆಗಳಾಗಿರುವ ಅರೋನ ಮತ್ತು ಹೂರ ಇವರಲ್ಲಿದ್ದ "ಉತ್ಕೃಷ್ಟವಾದ" ಮತ್ತು "ಕೀರ್ತಿ ಘನವುಳ್ಳ" ಗುಣಗಳು ಎಲ್ಲವು ನಮ್ಮಲ್ಲಿರುವುದನ್ನು ನಾವು ಗುರುತಿಸಿಟ್ಟುಕೊಳ್ಳಬೇಕು ಎಂಬುದು ನಮ್ಮ ಸಲಹೆ. ಅರೋನ ಮತ್ತು ಹೂರ ಇವರಿಬ್ಬರೂ ಮೋಶೆಯ ಸಂಬಂಧಿಗಳು. ಮುಂಚಿನವನು ಮೋಶೆಯ ಅಣ್ಣನು; ನಂತರದವನು ಮೋಶೆಯ ಭಾವ ಮೈದುನ ಅಂದರೆ ಮಿರಿಯಾಮಳ ಗಂಡನು.

ಸೈರಸ್ ಎ ಪಾಟ್ಟರ್ ಎಂಬುವವರ "ಡಿಕ್ಷನರಿ ಆಫ್ ಬೈಬಲ್ ಪ್ರಾಪರ್ ನೇಮ್ಸ್" ಎಂಬ ಸಂಗ್ರಹ ಗ್ರಂಥದ ಪ್ರಕಾರ ಆರೋನ್ ಎಂದರೆ "ಬಹು ಉನ್ನತಕ್ಕೇರಿಸಲ್ಪಟ್ಟವನು" ಮತ್ತು ಹೂರ್ ಎಂದರೆ "ಕೀರ್ತಿ ಘನತೆಯುಳ್ಳವನು" ಎಂದು ಅರ್ಥೈಸುತ್ತಾರೆ. ಖಂಡಿತ ವಾಗಿಯೂ ನಮ್ಮಲ್ಲಿ ಅಡಕವಾಗಿರುವ ಉತ್ಕೃಷ್ಟ ಹಾಗೂ ಕೀರ್ತಿ ಘನತೆಯುಳ್ಳ ಸ್ವಭಾವಗಳು

ಕ್ರಿಸ್ತ ಯೇಸುವಿಗೆ ನಾವು ಸಂಬಂಧಿಗಳೆಂದು ಸಾಕ್ಷಿ ಕೊಡುತ್ತವೆ. ಮತ್ತು ಕೇವಲ ಇವುಗಳಿಂದಲೇ ನಮ್ಮ ಹೃದಯವು ಯೇಸುವಿನ ಗುಣಲಕ್ಷಣಗಳನ್ನು ಸಮರ್ಥನೆ ಮಾಡಿ ಅವುಗಳನ್ನು ಅನುಮೋದಿಸುತ್ತದೆ. ಹೀಗೆ ಮಾಡುವುದರಿಂದ ನಾವು ದೇವರ ಬಲವನ್ನು ನಮಗೆ ಬೆಂಬಲವಾಗಿ ಪಡಕೊಳ್ಳುತ್ತೇವೆ. ಹೀಗಾದಲ್ಲಿ ಅಮಾಲೇಕ್ಯನ ಮೇಲಿನ ಗೆಲುವು ನಮ್ಮದಾಗುತ್ತದೆ. ನಾವು ಮೋಶೆಗೆ ನಿಜರೂಪದ ಕ್ರಿಸ್ತನ ತೋಳುಗಳನ್ನು ಈ ರೀತಿಯಲ್ಲಿ ಎತ್ತಿ ಹಿಡಿಯುತ್ತೇವೆ. ಈತನು ಸತ್ಯವೇದದಲ್ಲಿ "ಯೆಹೋವನ ಬಾಹುವು" (ಯೆಶಾಯ 53:1) ಅಂದರೆ ರಕ್ಷಣೆಯನ್ನು ಉಂಟುಮಾಡುವ ದೇವರ ಶಕ್ತಿ ಎಂದು ಪ್ರಸ್ತಾಪ ಮಾಡಲ್ಪಟ್ಟಿದ್ದಾನೆ. (ಯೋಹಾನ 12:38; ಯೆಶಾಯ 51:5, 9. ಯೆಶಾಯ 52:10, 59:15–20 ಇವುಗಳನ್ನು ನೋಡಿ.)

## ಭಾಗ–7

# ಸೀನಾಯಿ ಅರಣ್ಯಕ್ಕೆ ಇಸ್ರಾಯೇಲ್ಯರ ಪ್ರವೇಶ – ಒಡಂಬಡಿಕೆಯ ಸ್ಥಾಪನೆ

ವಿಮೋಚನಾಕಾಂಡ 18:2–12; 19:1–8; ಅರಣ್ಯಕಾಂಡ 33:15

ನಮ್ಮ ಅರಣ್ಯ ಪ್ರಯಾಣದ ಮುಂದಿನ ಸ್ವಲ್ಪ ಸಮಯದ ನಿಲುಗಡೆಯ ಸ್ಥಳವು ಸೀನಾಯಿ. ಇದಕ್ಕೆ ಮೊದಲು ನಡೆದ ಒಂದು ಸಾಂದರ್ಭಿಕ ಘಟನೆಯಿದೆ. ಸೀನಾಯಿ ಪ್ರದೇಶದಲ್ಲಿ ಇಸ್ರಾಯೇಲ್ಯರಿಗಾದ ಅನುಭವಗಳನ್ನು ಪರಿಗಣಿಸಲು ನಾವು ಹೋಗುವುದಕ್ಕೆ ಮೊದಲು ದೇವ ನಿರೂಪಣಾ ಗ್ರಂಥದಲ್ಲಿ ನಡುವೆ ಸೇರಿರುವ ಈ ಘಟನೆಯ ಬಗ್ಗೆ ಸ್ವಲ್ಪ ಆಲೋಚಿಸುವುದು ಅಪೇಕ್ಷಣೀಯ. ಐಗುಪ್ತ ದೇಶದಲ್ಲಿ ಮೋಶೆಯು ಇನ್ನೂ ಫರೋಹನನ ಮನೆಯಲ್ಲಿದ್ದಾಗ ತನ್ನ ಸಹೋದರರಿಗೆ ಒಬ್ಬ ರಕ್ಷಕನನ್ನಾಗಿ ತನ್ನನ್ನು ತೋರ್ಪಡಿಸಿಕೊಂಡದ್ದನ್ನು ಜ್ಞಾಪಿಸಿಕೊಳ್ಳಿರಿ. ಎಂಬ ಸಂಗತಿಯನ್ನು ನಾವು ಓದಬಹುದು.

"ಮೋಶೆ ದೊಡ್ಡವನಾದ ಮೇಲೆ ಸ್ವಜನರ ಬಳಿಗೆ ಹೋಗಿ ಇವರ ಬಿಟ್ಟೀ ಕೆಲಸಗಳನ್ನು ನೋಡುತ್ತಿದ್ದನು. ಒಂದು ದಿವಸ ಅವನು ತನ್ನ ಜನರಾದ ಇಬ್ರಿಯರೊಳಗೆ ಒಬ್ಬನನ್ನು ಐಗುಪ್ತದವನೊಬ್ಬನು ಹೊಡೆಯುವುದನ್ನು ಕಂಡು ಮೋಶೆ ಅತ್ತಿತ್ತ ನೋಡಿ ಯಾರೂ ಇಲ್ಲವೆಂದು ತಿಳಿದು ಆ ಐಗುಪ್ತನನ್ನು ಹೊಡೆದು ಹಾಕಿ ಅವನ ಶವವನ್ನು ಮರಳಿನಲ್ಲಿ ಮುಚ್ಚಿಟ್ಟನು" (ವಿಮೋಚನಾಕಾಂಡ 2:11–12)

ಇದಾದ ನಂತರ ಇಸ್ರಾಯೇಲ್ಯರು – ಇದು ಅವರ ಅನೀತಿಯ ನ್ಯಾಯತೀರ್ವಿಕೆಯಾದರೂ – ಮೋಶೆಯ ಬಳಿಗೆ ಹೋಗಿ ತಮಗೆ ಇನ್ನು ಮುಂದೆಯೂ ಆತನ ಕೃಪೆ ಇಲ್ಲವೇ ಅನುಗ್ರಹ ದೊರೆಯಬೇಕೆಂದು ಬೇಡುವರು ಎಂಬುದಾಗಿ ಒಬ್ಬರು ನ್ಯಾಯವಾಗಿ ನಿರೀಕ್ಷಿಸಬಹುದು. ಈ ಸಂಗತಿ ಹಾಗಿರಲಿಲ್ಲವೆಂಬುದು ಸ್ಪಷ್ಟ. ಯಾಕೆಂದರೆ ನಾವು ಓದುವುದೇನೆಂದರೆ: "ಮರುದಿವಸ ಅವನು ಹೊರಟುಹೋಗಿ ನೋಡಿದಾಗ ಇಬ್ಬರು ಇಬ್ರಿಯರೇ ಜಗಳ ಮಾಡುತ್ತಿದ್ದರು. ಅನ್ಯಾಯ ಮಾಡುತ್ತಿದ್ದವನಿಗೆ ಅವನು – ಏನಯ್ಯಾ, ನೀನು ಯಾಕೆ ಸ್ವಕುಲದವನನ್ನು ಹೊಡೆಯುತ್ತೀ ಎಂದು ಕೇಳಿದಾಗ ಆ ಮನುಷ್ಯನು – ನಿನ್ನನ್ನು ನಮ್ಮ ಮೇಲೆ ಅಧಿಕಾರಿಯನ್ನಾಗಿಯೂ ನ್ಯಾಯಾಧಿಪತಿಯನ್ನಾಗಿಯೂ ಇಟ್ಟವರು ಯಾರು? ಆ ಐಗುಪ್ತನನ್ನು ಕೊಂದುಹಾಕಿದಂತೆ ನನ್ನನ್ನೂ ಕೊಂದು ಹಾಕಬೇಕೆಂದಿದ್ದೀಯೋ ಅಂದನು. (ವಿಮೋಚನಾಕಾಂಡ 2:13–14)

ಮೋಶೆಯ ಔದಾರ್ಯದಿಂದ ಪ್ರಯೋಜನ ಪಡೆದ ಸಾವಿರ ಇಸ್ರಾಯೇಲ್ಯರು ಅನಾಯಾಸವಾಗಿ ಈ ವಿಷಯವನ್ನು ಫರೋಹನನಿಂದ ಗುಟ್ಟಾಗಿ ಇಟ್ಟುಕೊಂಡಾಗ್ಯೂ, ಕೇವಲ ಒಬ್ಬ ಇಸ್ರಾಯೇಲ್ಯನು ತನ್ನ ಅನೀತಿಯ ಗರ್ವದಿಂದ ಮೋಶೆಯ ಜೀವನವನ್ನು

ಗಂಡಾಂತರಕ್ಕೆ ತಂದದ್ದರಿಂದ ಆತನು ತಪ್ಪಿಸಿಕೊಂಡು ಓಡಿಹೋಗಬೇಕಾಯಿತು. ಮತ್ತು ಫರೋಹನನು ಇದನ್ನು ಕೇಳಿದಾಗ ಮೋಶೆಯನ್ನು ಕೊಲ್ಲಬೇಕೆಂದಿದ್ದನು. ನಾವು ಅದನ್ನು ಹೀಗೆ ಓದುತ್ತೇವೆ: "ನಡೆದ ಸಂಗತಿಯು ಫರೋಹನನಿಗೆ ತಿಳಿದುಬಂದಾಗ ಅವನು ಮೋಶೆಯನ್ನು ಕೊಲ್ಲಬೇಕೆಂದು ಆಲೋಚಿಸಿದ್ದರಿಂದ ಮೋಶೆ ಫರೋಹನನ ಬಳಿಯಿಂದ ಓಡಿ ಹೋಗಿ ಮಿದ್ಯಾನ್ ದೇಶವನ್ನು ಸೇರಿದನು" (ವಿಮೋ. 2:15).

ತಾನು ತಿರಸ್ಕೃತನಾಗಿ ಮಿದ್ಯಾನ್ ದೇಶದಲ್ಲಿ ಇರುವ ಸಮಯದಲ್ಲಿ ಮೋಶೆಯು ಚಿಪ್ಪೋರಳನ್ನು ತನಗೆ ಹೆಂಡತಿಯನ್ನಾಗಿ ತೆಗೆದುಕೊಂಡನು. ಮತ್ತು ಈಕೆಯು ಇಸ್ರಾಯೇಲ್ಯಳಾಗಿರಲಿಲ್ಲ. ಇದರಂತೆಯೇ ಯೇಸು ತನ್ನ ಮೊದಲನೇ ಬರುವಿಕೆಯಲ್ಲಿ "ತನ್ನ ಸ್ವಾಸ್ತ್ಯಕ್ಕೆ " (ಯೋಹಾನ 1:11) ಬಂದನು. ಆತನವರು ಅವನನ್ನು ಅಂಗೀಕರಿಸಲಿಲ್ಲ. ಅವರು ಆತನನ್ನು ತಿರಸ್ಕರಿಸಿದರು. ಅದು ಆತನು ಮಾಡಿದ ಉಪಕಾರಗಳಿಗಾಗಿ ಅಲ್ಲ; ಆದರೆ ತಮ್ಮ ಅನೀತಿಯನ್ನು ಆತನು ಖಂಡಿಸಿದ್ದಕ್ಕಾಗಿ. ಇಸ್ರಾಯೇಲ್ಯರು ತಮ್ಮ ಮೆಸ್ಸೀಯನನ್ನು ತಿರಸ್ಕರಿಸಿದ ಸಮಯದಲ್ಲಿ, ಆತನೂ ಸಹ ತನಗಾಗಿ ಒಂದು (ಮದಲಗಿತ್ತಿಯನ್ನು) ವಧುವನ್ನು ತೆಗೆದುಕೊಂಡಿದ್ದಾನೆ. ಮತ್ತು ಅವಳು ಅನ್ಯಜನಾಂಗದವಳು. ಹೇಗೆ ಇಸ್ರಾಯೇಲ್ಯರು ತಮ್ಮ ಬಳಿಗೆ ಎರಡನೆಯ ಸಾರಿ ಬಂದ ಮೋಶೆಯನ್ನು ತಮ್ಮ ವಿಮೋಚಕನನ್ನಾಗಿ ಅಂಗೀಕಾರ ಮಾಡಿಕೊಂಡರೋ, ಹಾಗೆಯೇ ಕ್ರಿಸ್ತನನ್ನು ಆತನ ಮೊದಲನೆಯ ಬರೋಣದಲ್ಲಿ ತಿರಸ್ಕರಿಸಿದ ಇಸ್ರಾಯೇಲ್ಯರು ಆತನ ಎರಡನೆಯ ಬರೋಣದಲ್ಲಿ ಆತನನ್ನು ತಮ್ಮ ವಿಮೋಚಕನಾದ ಮೆಸ್ಸೀಯನನ್ನಾಗಿ ಅಂಗೀಕಾರ ಮಾಡುವರು. ಇದು ನಮ್ಮನ್ನು ವಿಮೋಚನಾಕಾಂಡದ 18ನೇ ಅಧ್ಯಾಯದಲ್ಲಿ ವರ್ಣಿಸಿರುವ ಆ ವೈಭವವುಳ್ಳ ಸಾವಿರ ವರುಷದ ದೃಶ್ಯಕ್ಕೆ ಕೊಂಡೊಯ್ಯು ತ್ತದೆ. ಅಲ್ಲಿ ಇಸ್ರಾಯೇಲ್ಯರೂ, ಮೋಶೆ ಹಾಗೂ ಆತನ ಪತ್ನಿ ಇವರೆಲ್ಲರನ್ನೂ ಒಟ್ಟಾಗಿ ಒಂದೇ ಕೇಂದ್ರಸ್ಥಾನಕ್ಕೆ ತರಲಾಗಿದೆ.

"ಇದು ಬಹಳ ಆಸಕ್ತಿದಾಯಕ ದೃಶ್ಯವಾಗಿದೆ. ಕರ್ತನ ಮುಂದೆ ಸರ್ವ ಸಮೂಹವು ವಿಜಯೋತ್ಸಾಹದಿಂದ ಕೂಡಿ ಬಂದಿರುವಲ್ಲಿ ಅನ್ಯಜನಾಂಗದವರು ಯಜ್ಞಾರ್ಪಣೆ ಮಾಡುತ್ತಿರಲು, ಮಿಗಿಲಾಗಿ ಆ ದೃಶ್ಯ ಪೂರ್ಣವಾಗುವಂತೆ, ವಿಮೋಚಕನ ಮದಲಗಿತ್ತಿಯು ಮತ್ತು ದೇವರು ಆತನಿಗೆ ಅನುಗ್ರಹಿಸಿದ ಮಕ್ಕಳೂ ಇವರೆಲ್ಲರೂ ಒಟ್ಟಾಗಿ ಸೇರಿ ಪರಿಚಯಿಸಲ್ಪಡುವರು. ಸಂಕ್ಷಿಪ್ತವಾಗಿ ಹೇಳುವುದಾದರೆ, ಅದು ಮುಂದೆ ಬರುವ ದೇವರ ರಾಜ್ಯದ ಒಂದು ಮನಸೆಳೆಯುವ ಅಪೂರ್ವ ಛಾಯಾ ಮುನ್ನೋಟ.

"ಇಸ್ರಾಯೇಲ್ಯರು ಐಗುಪ್ತದೇಶದಿಂದ ಹೊರಟ ಮೂರನೇ ತಿಂಗಳಿನ ಅದೇ ದಿವಸದಲ್ಲಿ ಸೀನಾಯಿ ಅರಣ್ಯಕ್ಕೆ ಬಂದರು. ರೆಫಿದೀಮನ್ನು ಬಿಟ್ಟು ಆ ಅರಣ್ಯಕ್ಕೆ ಬಂದಾಗ ಅಲ್ಲಿ ಬೆಟ್ಟಕ್ಕೆ ಎದುರಾಗಿ ಇಳುಕೊಂಡರು" (ವಿಮೋಚನಾಕಾಂಡ 19:1,2).

ಅವರು ಐಗುಪ್ತದಿಂದ ಹೊರಟು ಎರಡು ತಿಂಗಳುಗಳು ಕಳೆದಿದ್ದವು. ಮತ್ತು ಅವರು

"ದೇವ ಗಿರಿಗೆ" ಬಂದರು. ಅಲ್ಲಿ ದೇವರು ಅವರಿಗೆ ತನ್ನ ಚಿತ್ತವನ್ನು ಅಂದರೆ ಅವರು ತನಗೆ ಪ್ರತಿಷ್ಠಿತರಾಗಿ ನಡೆಯಬೇಕಿರುವುದನ್ನು ಪ್ರಕಟ ಮಾಡಿದನು. "... ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯ ಜನರಾಗುವಿರಿ... ನೀವು ನನಗೆ ಯಾಜಕರಾಜ್ಯವೂ ಪರಿಶುದ್ಧ ಜನವೂ ಆಗಿರುವಿರಿ..." (ವಿಮೋ. 19:5, 6) ಎಂದು ಹೇಳಿದನು.

ಐಗುಪ್ತದಲ್ಲಿ ಅವರು ಏನೂ ಪ್ರಭಾವವಿಲ್ಲದ ಒಂದು ಸತ್ತ ಜನಾಂಗವಾಗಿದ್ದರು. ತಮ್ಮನ್ನು ವಿಮೋಚಿಸಿಕೊಳ್ಳಲು ಅವರು ಮಾಡಬಹುದಾದ್ದದ್ದು ಏನೂ ಇರಲಿಲ್ಲ. ಅಲ್ಲಿ ದೇವರು ಮಧ್ಯ ಪ್ರವೇಶಿಸಿ ಅವರನ್ನು ಫರೋಹನನ ದಬ್ಬಾಳಿಕೆಯಿಂದ ಬಿಡಿಸಿ ಹೊರತಂದನು. ನಿಜ ಆತನು ಅವರನ್ನು ತಕ್ಷಣವೇ ಬಿಡಿಸಿ ಅಬ್ರಹಾಮನಿಗೂ ಆತನ ಸಂತತಿಗೂ ವಾಗ್ದಾನ ಮಾಡಿದ ಕಾನಾನಿಗೆ ಸೇರಿಸಲಿಲ್ಲ. ಆದರೂ ಆವರೆಗೆ ಅವರ ಅರಣ್ಯ ಪ್ರಯಾಣದ ತಮ್ಮ ಎಲ್ಲಾ ಅನುಭವಗಳಲ್ಲಿಯೂ ಆತನು ತನ್ನ ಸ್ವಜನರಂತೆ, ವಿಮೋಚಿಸಲ್ಪಟ್ಟ ಜನರಾದ ತನ್ನ ನಂಬಿಗಸ್ತ ಸ್ನೇಹಿತನಾದ ಅಬ್ರಹಾಮನ ಮಕ್ಕಳಂತೆ ಅವರೊಂದಿಗೆ ನಡಕೊಂಡಿದ್ದನು. R5285:3 ರಲ್ಲಿ ಪಾಸ್ಟರ್ ರಸಲ್ಲರು ಹೀಗೆ ಹೇಳಿದ್ದಾರೆ: "... ದೇವರು ಇಸ್ರಾಯೇಲ್ಯರೊಂದಿಗೆ ನಡಕೊಂಡ ಬಗೆಯೆಲ್ಲವೂ ತನ್ನಾಣೆಯಿಟ್ಟು ಪ್ರಮಾಣೀಕರಿಸಿ ಅಬ್ರಹಾಮನೊಂದಿಗೆ ಮಾಡಿಕೊಂಡ – "ನಿನ್ನ ಮತ್ತು ನಿನ್ನ ಸಂತತಿಯ ಮೂಲಕ ಭೂಲೋಕದ ಎಲ್ಲಾ ಕುಲಗಳಿಗೆ ಆಶೀರ್ವಾದ ಉಂಟಾಗುವುದು ಎಂಬ – ಶ್ರೇಷ್ಠ ಒಡಂಬಡಿಕೆಯ ಅನುಸಾರವಾಗಿತ್ತು".

ಆದರೆ ಇಸ್ರಾಯೇಲ್ಯರು ಈ ಅಂಶವನ್ನು ಮನವರಿಕೆ ಮಾಡಿಕೊಳ್ಳುವುದರಲ್ಲಿ ವಿಫಲರಾದರು. ಅವರು ಅಬ್ರಹಾಮನೊಂದಿಗೆ ಇದ್ದ ಆತ್ಮೀಕ ಬಾಂಧವ್ಯವನ್ನು ಶೀಘ್ರವಾಗಿ ಕಳಕೊಳ್ಳುತ್ತಿದ್ದರು. ಒಬ್ಬನು ಅಬ್ರಹಾಮನಿಗಿದ್ದ ನಂಬಿಕೆಯನ್ನು ವ್ಯಕ್ತಪಡಿಸದಿದ್ದಲ್ಲಿ ಅವನನ್ನು ಅಬ್ರಹಾಮನ ಸಂತತಿಯೆಂದು ಆ ವರೆಗೂ ಪ್ರಾಮಾಣಿಕವಾಗಿ ಹೇಳಲಾಗುತ್ತಿರಲಿಲ್ಲ. (ಯೋಹಾನ 8:37–40) ದೇವರಲ್ಲಿ ಆಸಕ್ತರಾಗಿ ನಂಬಿಗಸ್ತಿಕೆಯಿಂದಿರುವಂತೆ, ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯು ಅವರನ್ನು ಪ್ರೇರೇಪಿಸಲು ಆಗಲಿಲ್ಲವೆಂಬುದು ಬಹು ಸ್ಪಷ್ಟ. ಅತಿ ಸಲಿಗೆಯು ತಾತ್ಸಾರ ಭಾವವನ್ನು ಹುಟ್ಟು ಹಾಕುತ್ತದೆ. ವಾಸ್ತವದಲ್ಲಿ ಅವರಲ್ಲಿದ್ದ ಗುಪ್ತವಾದ ಪಾಪಗಳು ಆ ವೇಳೆಗಾಗಲೇ ಉದ್ದೇಶ ಪೂರಿತ ಪಾಪದ ರೂಪ ತಾಳಿದ್ದವು. ಸ್ವಲ್ಪ ಕಾಲದ ನಂತರ ಈ ಉದ್ಧೇಶಪೂರಿತ ಪಾಪಗಳು ಇಸ್ರಾಯೇಲ್ಯರಲ್ಲಿ ಪ್ರಭಲವಾಗಿ ಅವರು "ಆಶೀರ್ವಾದದ ಸಂತತಿಯ" ಅಂಗಗಳಾಗಲು ಎಂದಿಗೂ ಯೋಗ್ಯರಾಗದಂತೆ ಕಂಡುಬರುವುದು ಅಲ್ಲಿ ಖಚಿತವಾಗಿತ್ತು. ಸೀನಾಯಿ ಪ್ರದೇಶದಲ್ಲಿ ಪ್ರತಿಫಲಿತವಾದದ್ದು ಇದೇ ಎಂದು ನಾವು ಸ್ಪಷ್ಟವಾಗಿ ನೋಡುತ್ತೇವೆ. ವಾಗ್ದಾನದಲ್ಲಿ ಸೂಚಿತನಾದ ಸಂತತಿಯು ಬರುವವರೆಗೆ ಅವರ ಅಪರಾಧಗಳ ನಿಮಿತ್ತ ಧರ್ಮಶಾಸ್ತ್ರವು ಅಲ್ಲಿ ಅವರಿಗೆ ಕೊಡೋಣವಾಯಿತು ಗಲಾತ್ಯ. 3:19.

ಅಲ್ಲಿ ಧರ್ಮಶಾಸ್ತ್ರದ ಆಜ್ಞಾವಿಧಿಗಳು ಕೊಡಲ್ಪಟ್ಟದ್ದು ಇಸ್ರಾಯೇಲ್ಯರನ್ನು ಪರಿಪೂರ್ಣರಾಗುವಂತೆ ಮಾಡುವುದಕ್ಕಲ್ಲ. ಬದಲಾಗಿ ಅವರಿಗೆ ಪಾಪದ ಅರುಹು ಉಂಟಾಗಿ ತಮಗೆ ದೇವರ ಕೃಪೆಯು ಅತ್ಯಗತ್ಯವಾಗಿ ಬೇಕಿರುವುದನ್ನು ಕಂಡುಕೊಂಡು ಆತನು ತಮಗೆ ಮಾಡಿರುವ ಮಹೋಪಕಾರಗಳನ್ನು ಅರಿತುಕೊಳ್ಳುವ ಸಲುವಾಗಿ ಅದು ಕೊಡಲ್ಪಟ್ಟಿತ್ತು. ನಂಬಿಕೆಯ ರೂಪದಲ್ಲಿ ವ್ಯಕ್ತವಾಗುವ ಈ ಒಂದು ಅರಿವು "ಯೆಹೋವನ ಮಹೋಪಕಾರ ಗಳಿಗೆ ಬದಲೇನು ಮಾಡಲಿ?... ಆತನಿಗೆ ಹೊತ್ತ ಹರಕೆಗಳನ್ನು ಆತನ ಜನರ ಮುಂದೆಯೇ ಸಲ್ಲಿಸುವೆನು". (ಕೀರ್ತನೆ 116:12–14) ಎಂದು ಮೊರೆಯಿಡಲು ಪ್ರೇರೇಪಿಸುತ್ತದೆ. ಇದಕ್ಕನುಸಾರವಾಗಿ, ಆಜ್ಞಾವಿಧಿಗಳು ಕೊಡಲ್ಪಟ್ಟದ್ದು ಮೊದಲು ಪಾಪವನ್ನು ತೋರಿಬರುವ ಹಾಗೆ ಮಾಡಿ ನಂತರ ಪಾಪಿಗೆ ದೇವರ ಕೃಪಾನುಗ್ರಹದ ಬಯಕೆಯ ಜಾಗೃತಿ ಆತನಲ್ಲಿ ಉಂಟು ಮಾಡುವುದಕ್ಕಾಗಿ ಎಂದು ನೋಡುತ್ತೇವೆ. ಧರ್ಮಶಾಸ್ತ್ರದ ಆಜ್ಞಾವಿಧಿಗಳು ಪಾಪವನ್ನುಹೊರಗೆಡಹುತ್ತದೆ ಹೊರತು ಪಾಪವನ್ನು ಸೃಷ್ಟಿಸುವುದಾಗಲಿ ಇಲ್ಲವೇ ಅದನ್ನು ತೆಗೆದು ಹಾಕುವುದಾಗಲಿ ಮಾಡುವುದಿಲ್ಲ ಎಂಬುದನ್ನು ನಾವು ಗಮನಿಸುವುದು ಮುಖ್ಯ. ಅಪೋಸ್ತಲನಾನದ ಪೌಲನು ಹೇಳುವುದನ್ನು ಕೇಳಿ:

"ಹಾಗಾದರೆ ಏನು ಹೇಳೋಣ? ಧರ್ಮಶಾಸ್ತ್ರವು ಪಾಪ ಸ್ವರೂಪವೋ? ಎಂದಿಗೂ ಅಲ್ಲ. ಧರ್ಮಶಾಸ್ತ್ರದಿಂದಲೇ ಹೊರತು ಪಾಪವೆಂಬುದು ಏನೋ ನನಗೆ ಗೊತ್ತಾಗುತ್ತಿರಲಿಲ್ಲ. ದೃಷ್ಟಾಂತವಾಗಿ, ಆಶಿಸಬಾರದೆಂದು ಧರ್ಮಶಾಸ್ತ್ರವು ಹೇಳದಿದ್ದರೆ ದುರಾಶೆಯೆಂದರೆ ಏನೋ ನನಗೆ ತಿಳಿಯುತ್ತಿದ್ದಿಲ್ಲ. ಆದರೆ ಪಾಪವು ಈ ಆಜ್ಞೆಯಿಂದ ಅನುಕೂಲ ಹೊಂದಿ ಸಕಲವಿಧವಾದ ದುರಾಶೆಗಳನ್ನು ನನ್ನಲ್ಲಿ ಹುಟ್ಟಿಸಿತು. ಧರ್ಮಶಾಸ್ತ್ರವು ಇಲ್ಲದಿರುವಾಗ ಪಾಪವು ಅಚೇತನವಾಗಿದೆ. ಮೊದಲು ನಾನು ಧರ್ಮಶಾಸ್ತ್ರವಿಲ್ಲದವನಾಗಿದ್ದು ಜೀವದಿಂದಿ ದ್ದೆನು. ಆಜ್ಞೆಯು ಬಂದಾಗ ಪಾಪಕ್ಕೆ ಜೀವ ಬಂತು. ನಾನು ಸತ್ತೆನು ಜೀವಿಸುವುದ ಕ್ಕಾಗಿ ಕೊಟ್ಟ ಆಜ್ಞೆಯೇ ಮರಣಕ್ಕೆ ಕಾರಣವಾಯಿತೆಂದು ನನಗೆ ಕಂಡುಬಂತು. ಹೇಗೆಂದರೆ ಪಾಪವು ಆಜ್ಞೆಯಿಂದ ಅನುಕೂಲ ಹೊಂದಿ ನನ್ನನ್ನು ವಂಚಿಸಿ ಆ ಆಜ್ಞೆಯ ಮೂಲಕವೇ ನನ್ನನ್ನು ಕೊಂದಿತು. ಹೀಗಿರಲಾಗಿ ಧರ್ಮಶಾಸ್ತ್ರವು ಪರಿಶುದ್ಧವಾದದ್ದು, ಮತ್ತು ಆಜ್ಞೆಯು ಪರಿಶುದ್ಧವೂ ನ್ಯಾಯವೂ ಹಿತವೂ ಆಗಿರುವಂಥದು ಸರಿ. ಹಾಗಾದರೆ ಹಿತವಾದದ್ದು ನನಗೆ ಮರಣಕ್ಕೆ ಕಾರಣವಾಯಿತೋ? ಹಾಗೆ ಎಂದಿಗೂ ಹೇಳಬಾರದು. ಪಾಪವೇ ಮರಣಕ್ಕೆ ಕಾರಣವಾದದ್ದು; ಅದು ಹಿತವಾದುದರ ಮೂಲಕ ನನಗೆ ಮರಣವನ್ನು ಉಂಟು ಮಾಡಿ ದ್ದರಿಂದ ಪಾಪವೇ ಎಂದು ನನಗೆ ಕಾಣಿಸಿಕೊಂಡಿತು; ಮತ್ತು ಆಜ್ಞೆಯ ಮೂಲಕ ಪಾಪವು ಕೇವಲ ಪಾಪ ಸ್ವರೂಪವೇ ಎಂದು ನನಗೆ ಕಾಣಬಂತು" (ರೋಮಾ 7:7–13) ಅಲ್ಲದೆ ಅಪೋಸ್ತಲನು ಹಿಂದೆಯೇ ಪ್ರಕಟಿಸಿರುವಂತೆ "ಅಪರಾಧಗಳು ಹೆಚ್ಚಾಗಿ ಕಂಡುಬರುವ ಹಾಗೆ ಧರ್ಮಶಾಸ್ತ್ರವು ಮಧ್ಯಬಂತು". (ರೋಮಾ. 5:20) ಒಬ್ಬರು ಬಹು ಸಮರ್ಥವಾಗಿ ಹೇಳಿದ್ದಾರೆ:

"ಪಾಪದ ಘೋರ ಸ್ವರೂಪವನ್ನು ತೋರ್ಪಡಿಸುವ ಹಾಗೆ ಅದು (ಧರ್ಮಶಾಸ್ತ್ರ) ಮಧ್ಯೆ ಬಂತು. (ರೋಮಾ. 7:13) ಅದು ಒಂದು ವಿಧದಲ್ಲಿ ಪರಲೋಕದಿಂದ ಇಳಿದುಬಂದು ಮನುಷ್ಯನ ಅಸ್ತವ್ಯಸ್ತ ಸ್ಥಿತಿಯನ್ನು ಹೊರಗೆಡವುವಂತೆ ಮಾಡುವ ಕನ್ನಡಿಯಂತಿದೆ. ಅಸ್ತವ್ಯಸ್ತ ನಡವಳಿಕೆಗಳ ಸಹಿತವಾಗಿ ನಾನು ಕನ್ನಡಿಯ ಮುಂದೆ ಕಾಣಿಸಿಕೊಂಡಾಗ ಅದು ನನ್ನಲ್ಲಿರುವ ಅಸ್ತವ್ಯಸ್ತತೆಯನ್ನು ತೋರಿಸುವುದೇ ಹೊರತು ಅದನ್ನು ಸರಿಪಡಿಸುವುದಿಲ್ಲ. ಸೊಟ್ಟದಾದ ಗೋಡೆಯನ್ನು ನಾನು ದೋಷವಿಲ್ಲದ ತೂಕದ ಗುಂಡಿನಿಂದ ಅಳೆದರೆ ಅದು ಗೋಡೆಯ ಸೊಟ್ಟತನವನ್ನು ತೋರಿಸುವುದೇ ಹೊರತು ಅದನ್ನು ತೆಗೆದುಹಾಕುವುದಿಲ್ಲ. ಒಂದು ದೀಪವನ್ನು ರಾತ್ರಿಯ ಕತ್ತಲಲ್ಲಿ ತೆಗೆದುಕೊಂಡು ನಾನು ಹೊರಬಂದರೆ ಅದು ದಾರಿಯಲ್ಲಿನ ಅಡತಡೆ ಏರುಪೇರುಗಳನ್ನು ತೋರಿಸುವುದೇ ಹೊರತು ಅವುಗಳನ್ನು ತೆಗೆದು ಹಾಕುವುದಿಲ್ಲ ಮೇಲಾಗಿ ಕನ್ನಡಿ ತೂಕದ ಗುಂಡು ದೀಪಗಳು ಇರುವ ಕೆಡಕು ತೊಡಕುಗಳನ್ನು ವಿವಿಧ ರೀತಿಯಲ್ಲಿ ತೋರಿಸುವುದೇ ಹೊರತು ಅವುಗಳನ್ನು ಉಂಟು ಮಾಡುವುದಾಗಲೀ ಇಲ್ಲವೇ ತೆಗೆದು ಹಾಕುವುದಾಗಲೀ ಮಾಡುವುದಿಲ್ಲ. ಧರ್ಮಶಾಸ್ತ್ರವು ಸಹ ಹೀಗೆಯೇ. ಅದು ಮನುಷ್ಯನ ಹೃದಯದಲ್ಲಿ ಕೆಟ್ಟದ್ದನ್ನು ಕಲ್ಪಿಸುವುದಿಲ್ಲ, ಬದಲಾಗಿ ಅವುಗಳ ಇರುವಿಕೆಯನ್ನು ತಪ್ಪಿಲ್ಲದ ರೀತಿಯಲ್ಲಿ ನಿಖರವಾಗಿ ತೆರೆದು ತೋರಿಸುತ್ತದೆ.

ಹೀಗೆ ಧರ್ಮಶಾಸ್ತ್ರವು ಪಾಪವನ್ನು ಪ್ರಕಟಪಡಿಸುವುದಕ್ಕೆ ಮಾತ್ರವಲ್ಲದೆ ನೀತಿ ಹಾಗೂ ಜೀವವನ್ನು ಸಹ ಬಯಸಲು ಪ್ರೇರೇಪಿಸುವುದಕ್ಕಾಗಿ ನೇಮಕವಾಗಿತ್ತು. ಆದಾಗ್ಯೂ, (ಪರಿಪೂರ್ಣತೆ ಯಿಂದ) ಬಿದ್ದುಹೋದ ಯಾವ ಮನುಷ್ಯನಿಗೂ ತಾನು ಬಯಸಿದ ಜೀವವನ್ನು ನೀಡಲು ಅದಕ್ಕೆ ಸಾಧ್ಯವಿಲ್ಲದ್ದಾಗಿತ್ತು. ಯಾವ ಜೀವವನ್ನು ಧರ್ಮಶಾಸ್ತ್ರ ಕೈಗೊಂಡು ನಡೆಯುವ ಮನುಷ್ಯನಿಗೆ ಕಡೆಯಲ್ಲಿ ದೊರೆಯುವುದೆಂದು ವಾಗ್ದಾನ ಮಾಡಲ್ಪಟ್ಟಿತ್ತೋ ಆಜೀವವೇ, ಅದನ್ನು ಕೈಗೊಳ್ಳುವುದಕ್ಕೆ ಆರಂಭದಲ್ಲಿಯೇ ಅಗತ್ಯವಾಗಿದೆ. ಇಬ್ರಿಯ 7:19ರಲ್ಲಿ ನಾವು ಓದುವುದೇನೆಂದರೆ "ಧರ್ಮಶಾಸ್ತ್ರವು ಯಾವುದನ್ನೂ ಸಿದ್ಧಿಗೆ ತರಲಾರದೇ ಇತ್ತು." ಆದರೆ ಅದು ಒಬ್ಬ ಮನುಷ್ಯನನ್ನು ಗುರಿಮಾಡಿ ತೋರಿಸಿತ್ತು. ಆ ಮನುಷ್ಯನು ತಾನು ಪರಿಪೂರ್ಣನಾಗಿಯೂ ನೀತಿವಂತನಾಗಿಯೂ ಪಾಪದಿಂದ ಪ್ರತ್ಯೇಕವಾಗಿಯೂ ಇರುವ ಕಾರಣಗಳ ದೆಸೆಯಿಂದ ಧರ್ಮಶಾಸ್ತ್ರವನ್ನು ಅದರ ಅಕ್ಷರಸಹ ಕೈಗೊಂಡು ನಡೆದು ಅದರ ಒಳತತ್ವಗಳಲ್ಲಿನ ಉದ್ಧೇಶವನ್ನು ನೆರವೇರಿಸಿದನು. ಈ ಕಾರಣದಿಂದಾಗಿ ಆತನು ಜೀವದಲ್ಲಿ ಮುಂದುವರಿಯುವ ಹಕ್ಕನ್ನು ಪಡೆದಿದ್ದನು. ಆ ಮನುಷ್ಯನೇ ಕ್ರಿಸ್ತ ಯೇಸುವು. ಲೋಕದ ಮೇಲಿರುವ ತಂದೆಯ ದಿವ್ಯ ಪ್ರೀತಿಯನ್ನು ಪ್ರಕಟಪಡಿಸುವುದಕ್ಕಾಗಿ, ಇತರರು ಬದುಕುವುದಕ್ಕಾಗಿ, ಆತನು ಆ ಜೀವವನ್ನು ಯಜ್ಞವನ್ನಾಗಿ ಅರ್ಪಿಸಿದನು. ಆತನ ಪರಿಶುದ್ಧ ನಾಮಕ್ಕೆ ಸ್ತೋತ್ರ.

# ಧರ್ಮಶಾಸ್ತ್ರದ ಉದ್ದೇಶ – ಇಸ್ರಾಯೇಲ್ಯರಿಗೆ ಅದರ ಪರಿಣಾಮ

ಇಸ್ರಾಯೇಲ್ಯರೊಂದಿಗೆ ನಡೆದುಕೊಳ್ಳುವಾಗ ದೇವರು ತೋರಿದ ಕರುಣೆ ದೀರ್ಘ ಶಾಂತಿಯನ್ನು ಈಗ ಗಮನಿಸಿ. ಎಂತಹ ತಾಳ್ಮೆ ಎಂತಹ ಸಹನೆ ಆತನು ಅವರ ಕಡೆಗೆ ತೋರ್ಪಡಿಸಿದನು. ಯಾರ ನೆನಪಿಗೂ ಬಾರದ ಲೋಕವನ್ನು ಸೇರಿದ ಬೇರೆ ಜನಾಂಗಗಳ ಗತಿ ಇಸ್ರಾಯೇಲ್ಯರಿಗೆ ಬಾರದಂತೆ ತಡೆಯುವುದಕ್ಕಾಗಿ ಧರ್ಮಶಾಸ್ತ್ರದ ಒಡಂಬಡಿಕೆಯನ್ನು ಒಂದು ಸ್ಫೂರ್ತಿಯನ್ನಾಗಿ ದೇವರು ಅವರಿಗೆ ನೀಡಿದನು. ಕನಿಷ್ಠಪಕ್ಷ ಅದು ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯಲ್ಲಿ ಅಡಕವಾಗಿರುವ ಹಾಗೂ ಅವರು ನಿರೀಕ್ಷೆಯನ್ನು ನಿರಂತರವಾಗಿ ತ್ಯಜಿಸಿದಾಗ್ಯೂ ಸಜೀವವಾಗಿರಿಸುವ ಕಾರ್ಯವನ್ನು ಅದು ನಿರ್ವಹಿಸುತ್ತದೆ. ತನ್ನ ಬಗ್ಗೆ ಅವರಿಗೆ ಜ್ಞಾಪಿಸುವುದು ಅಗತ್ಯವಾಗಿದೆ ಎಂದು ದೇವರಿಗೂ ಕಂಡುಬಂತು. ಯಾಕೆಂದರೆ, ಅವರು ಆಗಲೇ ಅತನನ್ನು ಮರೆಯುತ್ತಾ ಬರುತ್ತಿದ್ದರು. ಅತನು ಹೇಳಿದ್ದು "ನಾನು ಐಗುಪ್ತರಿಗೆ ಏನು ಮಾಡಿದೆನೋ, ಹದ್ದು ತನ್ನ ಮರಿಗಳನ್ನು ರೆಕ್ಕೆಗಳ ಮೇಲೆ ಹೊತ್ತುಕೊಳ್ಳುವಂತೆ ನಾನು ನಿಮ್ಮನ್ನು ಹೊತ್ತುಕೊಂಡು ನನ್ನ ಸ್ಥಳಕ್ಕೆ ಹೇಗೆ ಸೇರಿಸಿದೆನೋ ಇದನ್ನೆಲ್ಲಾ ನೀವು ನೋಡಿದ್ದೀರಷ್ಟೆ" (ವಿಮೋ. 19:4) ಅವರು ದೇವರ ಕೃಪಾನುಗ್ರಹದಲ್ಲಿ ಮುಂದುವರೆಯ ಬೇಕಿದ್ದಲ್ಲಿ ಆತನನ್ನು ಮರೆಯದಿರುವುದು ಅವರಿಗೆ ಬಹು ಮುಖ್ಯವಾಗಿತ್ತು. ಇದನ್ನು ದೇವರು ತಾನೇ ದಶಾಜ್ಞೆಯ ಪೀಠಿಕೆಯಲ್ಲಿ ಹೀಗೆ ಹೇಳಿದ್ದಾನೆ. "ನೀನು ದಾಸತ್ವದಲ್ಲಿದ್ದ ಐಗುಪ್ತ ದೇಶದೊಳಗಿಂದ ನಿನ್ನನ್ನು ಬಿಡುಗಡೆ ಮಾಡಿದ ಯೆಹೋವನು ಎಂಬ ನಿನ್ನ ದೇವರು ನಾನೇ" (ವಿಮೋ. 20:2, ಧರ್ಮೋ. 5:6)

ಆಹಾ, ಪ್ರಿಯ ಮಿತ್ರರೇ, ದೇವರ ಕೃಪಾನುಗ್ರಹದಲ್ಲಿ ನಾವು ಮುಂದುವರೆಯಬೇಕಾದರೆ ನಾವು ಸಹ ದೇವರನ್ನು ಮರೆಯ ಬಾರದು. ನಾವು ದೇವರನ್ನು ಯಾವಾಗಲೂ ನಮ್ಮೆದುರಿನಲ್ಲಿ ಇಟ್ಟುಕೊಂಡಿರಬೇಕು. ಇಲ್ಲದಿದ್ದಲ್ಲಿ – "ನಿನ್ನ ದೇವರನ್ನು ನಿನ್ನ ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು" – ಇದನ್ನು ನೆರವೇರಿಸಲು ಹೇಗೆ ಸಾಧ್ಯ ( ಮತ್ತಾಯ 22:37 ನೋಡಿ)

ಪೂರ್ವದಲ್ಲಿದ್ದ ಇಸ್ರಾಯೇಲ್ಯರು ಎಷ್ಟು ಕಾತುರದಿಂದ ದೇವರ ಕೃಪಾನುಗ್ರಹವನ್ನು ಬಯಸಿದ್ದರೆಂದು ಗಮನವಿಟ್ಟು ನೋಡಿ. "...ಯೆಹೋವನು ಹೇಳಿದಂತೆಯೇ ಮಾಡುವೆವು.." (ವಿಮೋ. 19:8) ಸಹಜವಾಗಿಯೇ ಅವರು ದೇವರ ಸ್ವಕೀಯ ಪ್ರಜೆಯಾಗಿಯೂ, ಎಲ್ಲಾ ಜನಗಳ ಮೇಲೆ ಹಾಗೂ ಅವರಿಗಾಗಿ ಯಾಜಕ ರಾಜ್ಯವಾಗಿಯೂ, ಪರಿಶುದ್ಧ ಜನಾಂಗವಾಗಿಯೂ ಇರಬೇಕೆಂದು ಬಯಸಿದ್ದರು. ದೇವರ ಚಿತ್ತವನ್ನು ಕೈಗೊಳ್ಳುವುದರ ಬದಲಾಗಿ ಅವರಿಗೆ ಅಂತಿಮವಾಗಿ ದೊರಕುವ ಸ್ಥಾನಮಾನಗಳ ಆಶೆಯು ಅವರನ್ನು ಕ್ರಿಯೆಗಳಿಂದ ಕೂಡಿದ ಒಡಂಬಡಿಕೆಯಲ್ಲಿ ಸೇರಲು ಪ್ರೇರಣೆ ಮಾಡಿತು. ಹಿಂದೆ

ತಮಗಿದ್ದ ಸದಾವಕಾಶಗಳು ಅದರ ಕೂಡ ದೊರೆತ ವಿಶೇಷ ಸೌಲಭ್ಯಗಳು, ಇದಕ್ಕನುಸಾರ ನಡೆಯಲಾಗದ ತಮ್ಮ ವೈಫಲ್ಯ, ಇವುಗಳನ್ನು ಅವರು ಒಂದು ಕ್ಷಣ ಅವಲೋಕಿಸಿದ್ದರೆ ತಮ್ಮ ನಿಷ್ಪ್ರಯೋಜಕತೆಯನ್ನೆಲ್ಲಾ ಕಾಣಲು ಅದು ಸಾಧ್ಯವಾಗಿಸುತ್ತಿತ್ತು. ಆದರೆ ಅವರು ಒಂದು ಕ್ಷಣ ನಿಂತು ಇವುಗಳನ್ನು ಕೈಗೊಂಡು ನಡೆಯುವುದಕ್ಕೆ ತಮಗೆ ಉಂಟಾಗುವ ಕಷ್ಟ ನಷ್ಟಗಳ ಲೆಕ್ಕಾಚಾರ ಹಾಕಲಿಲ್ಲ. ಇದರ ಫಲಿತಾಂಶವೇನಾಯಿತು? ಎರಡರಷ್ಟು ಶಾಪ, ಆದಾಮನ ಅವಿಧೆಯತೆಯ ದೆಸೆಯಿಂದ ಬಂದಿದ್ದ ಶಾಪವೂ ಅಲ್ಲದೆ ಈ ಶಾಪದಿಂದ ಬಿಡುಗಡೆಯನ್ನು ವಾಗ್ದಾನ ಮಾಡಿದ್ದ ಧರ್ಮಶಾಸ್ತ್ರವನ್ನು ಕೈಗೊಳ್ಳಲಾಗದ ಕಾರಣದಿಂದ ಹೆಚ್ಚಿಗೆ ಶಾಪವಾಗಿ ಬಂದ ದಂಡನೆ ಮತ್ತು ಇದನ್ನು ಪೌಲನು ಹೀಗೆ ಹೇಳಿದ್ದಾನೆ "ಜೀವಿಸುವುದಕ್ಕಾಗಿ ಕೊಟ್ಟ ಆಜ್ಞೆಯೇ ಮರಣಕ್ಕೆ ಕಾರಣವಾಯಿತೆಂದು ನನಗೆ ಕಂಡುಬಂತು." (ರೋಮಾ. 7:10) ಸೀನಾಯಿ ಪರ್ವತದ ಬಳಿ ಇಸ್ರಾಯೇಲ್ಯರು ಮಾಡಿಕೊಂಡಂತಹ ಒಡಂಬಡಿಕೆಯಲ್ಲಿ ದೇವರ ಚಿತ್ತಕ್ಕೆ ಸ್ವಲ್ಪವೂ ಸಂದೇಹ ಪಡದೆ ಸಂಪೂರ್ಣ ಅಧೀನರಾಗುವುದು ಅನ್ವಯವಾಗುತ್ತದೆ. ಹಾಗೂ ಇದನ್ನು ಮಾಡುವುದಕ್ಕೆ ವಿಫಲರಾದಲ್ಲಿ ಮರಣವೆಂಬ ಶಾಪಕ್ಕೆ ಒಳಗಾಗುತ್ತಾರೆ.

ಪ್ರಿಯ ಮಿತ್ರರೇ, ಇದರಲ್ಲೇನಾದರೂ ನಮಗೆ ಒಂದು ಅತಿ ವಿಶೇಷ ಪಾಠವಿಲ್ಲದಿದ್ದಲ್ಲಿ ನಮಗೆ ಆಶ್ಚರ್ಯವಾಗುತ್ತದೆ. ಕಲ್ವಾರಿಯಲ್ಲಿ ನೆರವೇರಲ್ಪಟ್ಟ ವಿಮೋಚನೆಯಲ್ಲಿಟ್ಟ ನಂಬಿಕೆಯನ್ನು ಅನುಸರಿಸಿ ತಾತ್ಕಾಲಿಕವಾಗಿ ನೀತಿವಂತರೆಂಬ ನಿರ್ಣಯ ಹೊಂದಿದ ಕಾಲ ನಮಗೆ ಒಂದಿತ್ತು. ಆದರೆ ಕ್ರಿಸ್ತನನ್ನು ತಮ್ಮ ರಕ್ಷಕನೆಂದು ಅಂಗೀಕಾರ (?) ಮಾಡಿದ ಇತರ ಅನೇಕರಂತೆ ನಮ್ಮ ಕಡೆಗಿನ ದೇವರ ಕೃಪಾತಿಶಯವನ್ನು ಸಂಪೂರ್ಣವಾಗಿ ಗ್ರಹಿಸುವಲ್ಲಿ ಆಗ ವಿಫಲರಾಗಿದ್ದೆವು. ಹೆಚ್ಚುಕಡಿಮೆ ನಾವೂ ಸಹ ಇದನ್ನು ಒಂದು ಸಾಮಾನ್ಯ ಸಂಗತಿಯಾಗಿ ತೆಗೆದುಕೊಂಡವರಾಗಿ ಲೋಕದಲ್ಲಿ ಇತರರಿಗಿಂತ ಹೆಚ್ಚು ಭಿನ್ನವಾಗಿ ಏನೂ ಜೀವಿಸುತ್ತಿರಲಿಲ್ಲ. ಆಗ ದೇವರು ನಮಗೆ ಬಗೆಬಗೆಯ ನಾನಾ ಜೀವಿತಾನುಭವಗಳ ಮೂಲಕ ಈ ಲೋಕವೆಂಬ ಐಗುಪ್ತದಿಂದ ಹೆಚ್ಚು ಹೆಚ್ಚಾಗಿ ಪ್ರತ್ಯೇಕಿಸುತ್ತಾ ಬಂದನಲ್ಲವೇ. ಇಷ್ಟೆಲ್ಲಾ ಆದರೂ ದೇವರು ಎಲ್ಲಾ ಜನರಲ್ಲಿ ನಮ್ಮನ್ನೇ ತನ್ನ ಸ್ವಕೀಯ ಜನರನ್ನಾಗಿಯೂ ಮತ್ತು ತನಗಾಗಿ ಒಂದು ಯಾಜಕರನ್ನಾಗಿಯೂ, ಪರಿಶುದ್ಧ ಜನಾಂಗವನ್ನಾಗಿಯೂ ಮಾಡಲು ಉತ್ಸುಕನಾಗಿ ನಮ್ಮ ಕೂಡ (ಮನತಿರುಗುವಿಕೆಗಾಗಿ) ಶ್ರಮಿಸುತ್ತಿರುವುದನ್ನು ನಾವು ಅರಿಯಲೂ ಇಲ್ಲ ಗ್ರಹಿಸಲೂ ಇಲ್ಲ. ನಮ್ಮ ಹೃದಯಗಳಲ್ಲಿ ಹಾಗೂ ಮನಸ್ಸಿನಲ್ಲಿ ನಮಗಾಗಿ ಆತನು ಮಾಡಿದ ಮಹತ್ಕಾರ್ಯಗಳನ್ನು ಮತ್ತು ಅದ್ಭುತಗಳನ್ನು ಮನನ ಮಾಡಿಸಲು ಆತನು ನಮ್ಮನ್ನು ಅನುಭವಗಳ ಮೂಲಕ ಸೀನಾಯಿ ಪರ್ವತದ ಬಳಿಗೆ ನಮ್ಮನ್ನು ಕರೆತರುವ ದಿನದವರೆಗೂ ಅಂದರೆ – "... ಹದ್ದು ತನ್ನ ಮರಿಗಳನ್ನು ರೆಕ್ಕೆಗಳ ಮೇಲೆ ಹೊತ್ತುಕೊಳ್ಳುವಂತೆ ನಾನು ನಿಮ್ಮನ್ನು ಹೊತ್ತುಕೊಂಡು ನನ್ನ ಸ್ಥಳಕ್ಕೆ ಹೇಗೆ ಸೇರಿಸಿದೆನೋ" (ವಿಮೋ. 19:4) ಎಂಬ ಅರಿವು ಮೂಡಿಸುವವರೆಗೆ ಆತನ ಕೃಪಾಕಾರ್ಯಗಳ ವಿರುದ್ಧ ಕೇವಲ ಗುಣುಗುಟ್ಟುತ್ತಿದ್ದೆವು.

ಅಲ್ಲಿ ದೇವರು ನಮ್ಮ ವಿಷಯವಾಗಿರುವ ತನ್ನ ಚಿತ್ತವನ್ನು ಅಂದರೆ "ನನ್ನ ಮಾತಿಗೆ ವಿಧೇಯರಾಗಿ" "ಆತನ ಒಡಂಬಡಿಕೆಯನ್ನು ಅನುಸರಿಸಿ" ತನಗೆ ಪೂರ್ಣ ಅಧೀನರಾಗಿ ನಾವು ಪರಿಶುದ್ಧರಾಗಿರಬೇಕೆಂಬುದನ್ನು ತಿಳಿಯಪಡಿಸಿದನು. ಹಿಂದೆ ಶಾರೀರಿಕ ಇಸ್ರಾಯೇಲ್ಯರು ಮೊದಲು ಕುಳಿತು ಇದನ್ನು ಅನುಸರಿಸುವುದರಿಂದ ತಮಗಾಗುವ ಕಷ್ಟ ನಷ್ಟಗಳ ಲೆಕ್ಕಾಚಾರ ಹಾಕಲಿಲ್ಲ. ಆತ್ಮೀಕ ಇಸ್ರಾಯೇಲ್ಯರಲ್ಲಿ ಹಲವರು (ಕಷ್ಟನಷ್ಟಗಳ) ಲೆಕ್ಕಾಚಾರ ಮಾಡುವುದರಲ್ಲಿ ವಿಫಲರಾಗದಿದ್ದರೆ ನಮಗೆ ಆಶ್ಚರ್ಯವಾಗುತ್ತದೆ. ಅವರು ದೇವರ ಚಿತ್ತವನ್ನು ನೆರವೇರಿಸುವುದಕ್ಕೆ ತಮಗೆ ದೊರೆತ ಸೌಭಾಗ್ಯದಲ್ಲಿ ಸಂತೋಷಿಸುವುದಕ್ಕೆ ಬದಲಾಗಿ ಅಂತಿಮವಾಗಿ ದೊರಕುವ ಸ್ಥಾನ ಮಾನಗಳ ಬಯಕೆಯಿಂದಾಗಿ ತಮ್ಮನ್ನು ಪ್ರತಿಷ್ಠಿಸಿಕೊಳ್ಳುತ್ತಾರೆ. ನಮ್ಮ ಬುದ್ಧಿಗೆ ತೋರುವಂತೆ, ಹಾಗೂ ಕ್ರಿಸ್ತನಿಗೆ ಇದ್ದಂತೆ, ದೇವರ ಚಿತ್ತವನ್ನು ಸಂಪೂರ್ಣವಾಗಿ ಅನುಸರಿಸುವುದು ಯಾವಾಗಲೂ ನಮ್ಮ ಮೊದಲನೆಯ ಹಾಗೂ ಮುಖ್ಯ ಧ್ಯೇಯವಾಗಿರಬೇಕು. ತನ್ನ ಮುಂದೆ ಇಟ್ಟಿದ್ದ ಸಂತೋಷವು (ಇಬ್ರಿಯ 12:2) ನಿಸ್ಸಂಶಯವಾಗಿ ದೈವಸ್ವಭಾವ ಮತ್ತು ಅದರ ಮಹಿಮಾ ವೈಭವಗಳನ್ನು ಒಳಗೊಂಡಿದ್ದಾಗ್ಯೂ ಕ್ರಿಸ್ತನ ಮುಖ್ಯ ಧ್ಯೇಯ ಆನಂದಗಳು ತನ್ನ ತಂದೆಯ ಚಿತ್ತವನ್ನು ನೆರವೇರಿಸುವುದರಲ್ಲಿ ಹೊರತು ಮುಂದೆ ದೊರಕುವ ಸ್ಥಾನಮಾನಗಳ ವಿಷಯದಲ್ಲಿ ಇರಲಿಲ್ಲ. ಆತನು ತನ್ನನ್ನು ದೇವರಿಗೆ ಪ್ರತಿಷ್ಠಿಸಿಕೊಳ್ಳುವಾಗ ಮುಂದೆ ದೊರಕುವ ಸ್ಥಾನ ಮಾನಗಳ ಬಗ್ಗೆ ಪ್ರಸ್ತಾಪಿಸದೆ ತನ್ನಲ್ಲಿದ್ದ ಮನೋಭಾವವನ್ನು "ಇಗೋ ನಿನ್ನ ಚಿತ್ತವನ್ನು ಅನುಸರಿಸುವುದೇ ನನ್ನ ಸಂತೋಷವು" (ಇಬ್ರಿಯ 10:7, 9) ಎಂದು ಪ್ರಕಟಿಸಿದ್ದಾನೆ. ಹೀಗೆ ಯೇಸುವು ದೇವರೊಂದಿಗೆ ಒಡಂಬಡಿಕೆಯ ಸಂಬಂಧದಲ್ಲಿ ಸೇರುವ ಮೊದಲೇ ತನಗಾಗುವ ಕಷ್ಟ ನಷ್ಟತ್ಯಾಗಗಳ ಲೆಕ್ಕಾಚಾರ ಹಾಕಿದ್ದನು. ಈ ರೀತಿಯ ತ್ಯಾಗಗಳನ್ನು ಒಳಗೊಂಡ ದೇವರ ಆ ಮಹಾ ಒಡಂಬಡಿಕೆಗೆ ಸೇರಲು ಆಲೋಚಿಸುತ್ತಿರುವ ಇಸ್ರಾಯೇಲ್ಯರಿಗೆ ಆತನು ನೀಡುವ ಬುದ್ಧಿ ಮಾತು – ಅವರು ಮೊದಲು ಕುಳಿತು (ಕಷ್ಟನಷ್ಟಗಳ) ಲೆಕ್ಕಾಚಾರ ಹಾಕಬೇಕು ಎಂಬುದು. (ಲೂಕ 14:16–23) ಏಕೆಂದರೆ ಈ ಒಡಂಬಡಿಕೆಯಲ್ಲಿ ಸೇರುವುದು ಒಬ್ಬರನ್ನು ದುಪ್ಪಟ್ಟು ಗಂಡಾಂತರಗಳಿಗೆ ಗುರಿಮಾಡುತ್ತದೆ. ಅದು ಎರಡನೇ ಮರಣಕ್ಕೆ ಹೋಗುವ ಅಪಾಯ.

ಶಾರೀರಿಕ ಇಸ್ರಾಯೇಲ್ಯರು ಮೊದಲೇ ಕುಳಿತು ತಮಗೊದಗುವ ಕಷ್ಟ ನಷ್ಟಗಳ ಲೆಕ್ಕಾಚಾರ ಹಾಕಿದ್ದಲ್ಲಿ ಅವರು ದೇವರ ಪರಿಪೂರ್ಣವಾದ ಆಜ್ಞಾವಿಧಿಗಳನ್ನು ತಪ್ಪದೇ ಕೈಗೊಂಡು ನಡೆಯಲು ತಾವು ತೀರಾ ಅಸಮರ್ಥರೆಂಬುದನ್ನು ಆ ಕ್ಷಣವೇ ತಿಳಿದುಕೊಳ್ಳುತ್ತಿದ್ದರು. ಕ್ರಿಯೆಗಳ ಮೂಲಕ ವಿಧೇಯರಾಗುವುದಕ್ಕೆ ಮಾತುಕೊಡುವ ಬದಲು ನಿಜವಾಗ್ಯೂ ಅವರು ತನ್ನನ್ನು ನೀತಿವಂತನನ್ನಾಗಿ ಮಾಡಿದ ಅಬ್ರಹಾಮನ ನಂಬಿಕೆಯನ್ನು ದೇವರಿಗೆ ತೋರಿಸುವುದಾಗಿ ಕೇಳಿಕೊಳ್ಳುತ್ತಿದ್ದರು. "ಆ ನಂಬಿಕೆಯು ಅವನ ಲೆಕ್ಕಕ್ಕೆ ನೀತಿವಂತನೆಂದು ಎಣಿಸಲ್ಪಟ್ಟಿತ್ತು". (ಗಲಾತ್ಯ 3:6) ಇಸ್ರಾಯೇಲ್ಯರು ಈ ಸಂಬಂಧದಲ್ಲಿ

ಆವರೆಗೂ ಹೀನಾಯವಾಗಿ ಸೋತಿದ್ದರು. ತಮ್ಮ ಅಪನಂಬಿಕೆ ಅವಿಧೇಯತೆಗಳಿಂದಾಗಿ ಅವರು ಯಾವಾಗಲೂ ಆಜ್ಞೆ ಮೀರುತ್ತಿದ್ದರು. ಈ ಕಾರಣದಿಂದಾಗಿ ದೇವರಿಗೆ ಧರ್ಮಶಾಸ್ತ್ರದ ಆಜ್ಞಾವಿಧಿಗಳನ್ನು ಅವರ ಮೇಲೆ ಹೇರಬೇಕಾಗಿ ಬಂತು. ಹೀಗಿರಲಾಗಿ ಅವರು "ಶಾಲಾ ಗುರುವಿನಂತಿದ್ದ" ಧರ್ಮಶಾಸ್ತ್ರದ ಮಾರ್ಗದರ್ಶನವನ್ನು ಅವರು ಸರಿಯಾದ ರೀತಿಯಲ್ಲಿ ಅನುಸರಿಸಿದ್ದಲ್ಲಿ ಅವರಿಗೆ ಮೊದಲು ತಮ್ಮಲ್ಲಿರುವ ಪಾಪದ ಘೋರ ಸ್ವರೂಪದ ಅರಿವು ಉಂಟಾಗಿ ಅದರಿಂದ ಬಿಡುಗಡೆಗಾಗಿ ಯತ್ನಿಸುತ್ತಿದ್ದರು. ತಮ್ಮ ಈ ಹುಡುಕಾಟದ ಯತ್ನಗಳು ಅವರನ್ನು ಅಲ್ಲಿಂದ ತಮ್ಮ ಮೆಸ್ಸೀಯನಾದ ಯೇಸುವಿನ ಬಳಿಗೆ ನಡೆಸುತ್ತಿತ್ತು. ಆಗ ಆತನನ್ನು ನಿರಾಕರಿಸುವುದಕ್ಕೆ ಬದಲಾಗಿ ಅವರು ಆತನನ್ನು ಸ್ವೀಕಾರ ಮಾಡಿ ಅಂಗೀಕರಿಸುತ್ತಿದ್ದರು.

ಹೀಗಿದ್ದರೂ ಈ ಒಡಂಬಡಿಕೆಯ ಮತ್ತು ಅದರ ಆಜ್ಞಾವಿಧಿಗಳನ್ನು ಕೈಗೊಳ್ಳಲು ಅವರು ಅಸಮರ್ಥರಾಗಿದ್ದಾಗ್ಯೂ, ಅವರನ್ನು ಲೋಕದ ಇತರ ಎಲ್ಲಾ ಜನಾಂಗಗಳಿಂದ ಬೇರ್ಪಡಿಸುವ ಕಾರ್ಯ ನೆರವೇರುವ ಹಾಗೆ ಮಾಡಿತು. ಇದರಂತೆಯೇ ಸಹ ಯಜ್ಞದ ಮೂಲಕವಾಗಿರುವ ನಮ್ಮ ಒಡಂಬಡಿಕೆಯು ಭೂಮಿಯ ಎಲ್ಲಾ ಕುಲಗಳಿಂದ ನಮ್ಮನ್ನು ಬೇರ್ಪಡಿಸುವ ಕಾರ್ಯವನ್ನು ನೆರವೇರಿಸುತ್ತದೆ. ಈ ಒಡಂಬಡಿಕೆಯಲ್ಲಿ ಸೂಚಿತವಾಗಿರುವ ಅತ್ಯಂತ ಸಂಪೂರ್ಣ ಆಜ್ಞಾವಿಧಿ ಪ್ರೀತಿಯನ್ನು ಕೈಗೊಳ್ಳಲು ನಾವು ಅಸಮರ್ಥರಾದಾಗ್ಯೂ ಸಹ ಇದು ತನ್ನ ಕಾರ್ಯವನ್ನು ಪೂರೈಸುತ್ತದೆ. ಶಾರೀರಿಕ ಇಸ್ರಾಯೇಲ್ಯರಲ್ಲಿ ಅತ್ಯಂತ ಕಡಿಮೆ ಸಂಖ್ಯೆಯ ಕೆಲವರು ವಿಧಿರೂಪದ ಈ ಒಡಂಬಡಿಕೆಯ ಅಧೀನರಾಗಿ ಹುಟ್ಟಿದವರಾದರೂ, ಒಡಂಬಡಿಕೆಯ ವಿಧಿಸಿದ ಕ್ರಿಯೆಗಳಿಂದಲ್ಲದೆ ದೇವರ ಮತ್ತು ಆತನ ಆಜ್ಞೆಗಳ ಮೇಲಣ ತಮ್ಮ ನಂಬಿಕೆಯಿಂದಲೇ ಅವುಗಳನ್ನು ನೆರವೇರಿಸಿದವರೆಂದು ದೇವರಿಂದ ಪರಿಗಣಿಸಲ್ಪಟ್ಟವರಾಗಿ ಕಂಡು ಬಂದರು. ಅವರು ಯಾರೆಂದರೆ ಪಿತೃಗಳೇ ಅಪೋಸ್ತಲನಾದ ಪೌಲನು ಇಬ್ರಿಯ 11ನೇ ಅಧ್ಯಾಯದಲ್ಲಿ "ಇವರೆಲ್ಲರೂ... ನಂಬಿಕೆಯ ಮೂಲಕ ಒಳ್ಳೇ ಹೆಸರನ್ನು ಸಂಪಾದಿಸಿದರು." (ಇಬ್ರಿಯ 11:39) ಎಂದು ಹೇಳಿ ನಮ್ಮ ಗಮನಕ್ಕೆ ತಂದಿರುವ (ತಮ್ಮ ನಂಬಿಕೆಯ ಮೂಲಕ) ಪೂರ್ವದಲ್ಲಿ ಒಳ್ಳೆಯ ಹೆಸರು ಪಡೆದವರು. ನಮ್ಮ ಅಸಹನೆ ಬಲಹೀನತೆಯ ದೆಸೆಯಿಂದ ಒಡಂಬಡಿಕೆಯ ವಿಧಿಗಳನ್ನು ಕೈಗೊಂಡು ನಡೆಯಲು ನಮ್ಮಲ್ಲಿರುವ ಅಸಮರ್ಥತೆಯ ನಿಮಿತ್ತ ನಾವು ಹಿಂಜರಿಯ ಬಾರದೆಂಬುದಕ್ಕಾಗಿ ಪವಿತ್ರಾತ್ಮನು ಪೌಲನ ಮೂಲಕವಾಗಿ (ತಮ್ಮ ನಂಬಿಕೆಯ ಮೂಲಕ) ಒಳ್ಳೇ ಹೆಸರು ಸಂಪಾದಿಸಿದ ಇವರನ್ನು ನಾವು ಯಾವಾಗಲೂ ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕೆಂದು ಸೂಚಿಸುತ್ತಾನೆ. ಅವರಲ್ಲಿದ್ದ ನಂಬಿಕೆ ಅವರಿಗಾದ ಪರಿಶೋಧನೆಗಳು ಅವರ ಧೈರ್ಯ ಸ್ಥೈರ್ಯಗಳು ಇವುಗಳನ್ನು ನಾವು ಗಮನಿಸಬೇಕೆಂದು ಆತನು ನಮ್ಮನ್ನು ಪ್ರಭೋದಿಸುತ್ತಾನೆ. ಅವರು ನಂಬಿಕೆಗೆ ಸಾಕ್ಷಿಯಾಗಿದ್ದರು. "ಇಂಥವರಿಗೆ ಈ ಲೋಕವು ಯೋಗ್ಯ ಸ್ಥಳವಲ್ಲ" (ಇಬ್ರಿಯ 11:38) ದೇವರಲ್ಲಿನ ನಂಬಿಕೆಯಿಂದ ಪ್ರೇರಿತವಾದ ಅವರ ನಿರೀಕ್ಷೆಯು. ತಮಗೆ

ಬಂದ ಹಲವು ವಿಧವಾದ ಪರಿಶೋಧನೆಗಳು ಹಾಗೂ ಅಪಜಯಗಳಲ್ಲಿ ತಮ್ಮನ್ನು ಕಾಪಾಡಿಕೊಳ್ಳುವಂತೆ ಮಾಡಿ, ಅಬ್ರಹಾಮನ ಸಂತತಿಯೂ ದಿವ್ಯ ವಿಮೋಚಕನೂ ಆದ ವಾಗ್ಧತ್ತ ಮೆಸ್ಸೀಯನನ್ನು ಯಾವಾಗಲೂ ಎದುರು ನೋಡುವವರನ್ನಾಗ ಮಾಡಿತು. ಈ ಮೆಸ್ಸೀಯನು ಅವರ ನಂಬಿಕೆಗೆ ಆಧಾರನಾಗಿಯೂ, ಅದರ ಆದಿಯೂ ಅಂತ್ಯವೂ ಆಗಿದ್ದು, ಕಲ್ವಾರಿಯಲ್ಲಿ ತಾನು ಸತ್ತಾಗ, ಅವರು ನೀತಿವಂತರಾಗಿ ಜೀವ ಹೊಂದಲು ಮೂಲ ಕಾರಣನೂ ಸಹ ಆದನು. ಪಾಸ್ಟರ್ ರಸಲ್ಲರು R4320:1ರಲ್ಲಿ ಹೇಳಿರುವುದೇನೆಂದರೆ;

"... ಅಬ್ರಹಾಮ, ಇಸಾಕ, ಯಾಕೋಬ ಮತ್ತು ಇತರರು ಧರ್ಮಶಾಸ್ತ್ರದ ಒಡಂಬಡಿಕೆಗೆ ಬರುವುದಕ್ಕೆ ಮೊದಲು ಇದ್ದವರಾಗಿ ಅದಕ್ಕೆ ಬದ್ಧರಾಗಿರಲಿಲ್ಲವಾದರೂ ಕಲ್ವಾರಿಯಲ್ಲಿ ಅಬ್ರಹಾಮನ ಒಡಂಬಡಿಕೆಯು ಸ್ಥಾಪಿತವಾಗುವವರೆಗೂ ಅವರಿಗೆ ಜೀವ ಹೊಂದಲು ಪೂರ್ಣಾರ್ಥದಲ್ಲಿ ನ್ಯಾಯಸಮ್ಮತವಾದ ಅರ್ಹತೆ ಇರಲಿಲ್ಲ. ಅವರ ನಂಬಿಕೆಯು ಅನಂತರದಲ್ಲಿ ಅವರನ್ನು ಆ ಯಜ್ಞದ ಫಲವಾದ ಜೀವಾಶೀರ್ವಾದಗಳಲ್ಲಿ ಪಾಲನ್ನು ಹೊಂದುವುದಕ್ಕೆ ಹಕ್ಕನ್ನು ಅವರಿಗೆ ನೀಡಿತು. ಇದೇ ರೀತಿ ಧರ್ಮಶಾಸ್ತ್ರದ ಒಡಂಬಡಿಕೆಯು ಪ್ರಚಲಿತವಾಗಿದ್ದ ಕಾಲದಲ್ಲಿ ಅದು ಶಿಲುಬೆಯಲ್ಲಿ ರದ್ದಾಗುವವರೆಗೆ (ತಮ್ಮ ನಂಬಿಕೆಯ ಮೂಲಕ) ಒಳ್ಳೆಯ ಹೆಸರು ಪಡೆದವರು ಇದ್ದರು. ಇವರು ಧರ್ಮಶಾಸ್ತ್ರಾಧೀನರಾಗಿದ್ದರೂ ತಮ್ಮ ಕಾಲದವರಿಗಿಂತ ಉನ್ನತವಾದ ಜೀವಿತ ನಡೆಸಿ, ಇದಕ್ಕೂ ಮಿಗಿಲಾಗಿ ವಾಗ್ದಾನ ಸಹಿತವಾದ ಕೃಪಾಧಾರದ ಒಡಂಬಡಿಕೆಯಲ್ಲಿ ತಮ್ಮ ನಂಬಿಕೆಯನ್ನು ಜೀವಂತವಾಗಿ ಇರಿಸಿಕೊಂಡಿದ್ದರು. ದೇವಶಾಸ್ತ್ರದ ಲಿಖಿತ ವಿವರಗಳ ಪ್ರಕಾರ ಕಲ್ವಾರಿಯಲ್ಲಿ ಅರ್ಪಣೆಯಾದ ಯಜ್ಞದ ಫಲವಾದ ಜೀವಾಶೀರ್ವಾದಗಳು ನಂಬುವವರ ಪರವಾಗಿ ಸಮರ್ಪಿಸಲ್ಪಟ್ಟಾಗ ಇವರೂ ಆ ಕೃಪಾವರದಲ್ಲಿ ಪಾಲನ್ನು ಹೊಂದುವರು. ಧರ್ಮಶಾಸ್ತ್ರದ ಒಡಂಬಡಿಕೆಯು ಜೀವಂತವಾಗಿದ್ದ ಕಾಲದಲ್ಲಿ ಇವರು ಇದ್ದರೂ, ಅದು ಅಂತ್ಯವಾಗುವುದನ್ನು ಮುಂದಾಗಿ ನೋಡಿ ಅದರಲ್ಲಿ ವಿಶ್ವಾಸಿಸದೆ, ಉತ್ತಮವಾದ ಕೃಪಾಧಾರದ ಒಡಂಬಡಿಕೆಯಲ್ಲಿ ತಾವು ಭರವಸೆಯುಳ್ಳವರಾಗಿದ್ದರು.

ಹೀಗಿರುವಲ್ಲಿ ಅಪೋಸ್ತಲನಾದ ಪೌಲನು ಇಬ್ರಿಯ 12:1, 2 ರಲ್ಲಿ ಹೇಳಿರುವುದು ಆಶ್ಚರ್ಯವೇನಿಲ್ಲ. "ಆದ ಕಾರಣ ಇಷ್ಟುಮಂದಿ ಸಾಕ್ಷಿಯವರು ಮೇಘದೋಪಾದಿಯಲ್ಲಿ ನಮ್ಮ ಸುತ್ತಲೂ ಇರುವುದರಿಂದ ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನು ಹತ್ತಿಕೊಳ್ಳುವ ಪಾಪವನ್ನೂ ನಾವೂ ಸಹ ತೆಗೆದಿಟ್ಟು ನಂಬಿಕೆಯನ್ನೂ ಹುಟ್ಟಿಸುವವನೂ ಪೂರೈಸುವವನೂ ಆದ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ."

ಈ ಪ್ರಕಾರವಾಗಿ ಗಮನಿಸಬೇಕಾಗಿರುವುದೇನೆಂದರೆ, ನಾವು ಒಡಂಬಡಿಕೆಯನ್ನು ಭಂಗಪಡಿಸದೆ ಕಾಪಾಡಿಕೊಂಡು ಬರಲು ವಿಫಲರಾದರೂ, ನಂಬಿಕೆಯು

(ಜೀವಾಶೀರ್ವಾದಗಳಿಗೆ) ಅರ್ಹತೆ ನೀಡುವುದು. ಆದರೆ ಹೀಗಾಗುವುದು – ನಾವು ದೇವರ ಕೃಪೆಗೆ ನಾವು ಸ್ವತಃ ಅಯೋಗ್ಯರೆಂಬುದನ್ನೂ, ಹಾಗೂ ದೇವರ ಪರಿಪೂರ್ಣತೆಯುಳ್ಳ ಚಿತ್ತವನ್ನು ನೆರವೇರಿಸಲು (ಆತನ ಮಾತಿಗೆ ವಿಧೇಯರಾಗಿ ಆತನ ಒಡಂಬಡಿಕೆಯನ್ನು ಕಾಪಾಡಿಕೊಳ್ಳಲು) ನಾವು ಅಸಮರ್ಥರೆಂಬುದನ್ನು ಕೇವಲ ಎಲ್ಲಿಯವರೆಗೆ ತಿಳಿದಿರುತ್ತೇವೋ, ಅಲ್ಲಿಯವರೆಗೆ ಯೇಸುವನ್ನು ನಾವು ನಮ್ಮ ನಂಬಿಕೆಯ ದುರ್ಗವನ್ನಾಗಿ ಮಾಡಿಕೊಂಡಿರುತ್ತೇವೆ. ಪೂರ್ವದಲ್ಲಿ (ತಮ್ಮ ನಂಬಿಕೆಯ ಮೂಲಕ) ಒಳ್ಳೇ ಹೆಸರು ಸಂಪಾದಿಸಿದವರು ಧರ್ಮಶಾಸ್ತ್ರದ ಆಜ್ಞಾವಿಧಿಗಳನ್ನು ಕೈಗೊಂಡು ನಡೆಯಲು ಆಶಕ್ತರಾದರೂ ತಮ್ಮ ನಂಬಿಕೆಯ ಕಾರಣದಿಂದ ಧರ್ಮಪ್ರಮಾಣವನ್ನು ನೆರವೇರಿಸಿದವರೆಂದು ಪರಿಗಣಿಸಲ್ಪಟ್ಟರು. ಅಂದರೆ ಅವರು ನಂಬಿಕೆಯಿಂದ ನೀತಿವಂತರಾದರು. ನಾವು ಸಹ ನಮ್ಮ ಒಡಂಬಡಿಕೆಯನ್ನು ಭಂಗಪಡಿಸದೆ ಕಾಪಾಡಿಕೊಂಡು ಬರಲು ಅಶಕ್ತರಾದರೂ ಧರ್ಮಶಾಸ್ತದ ನೀತಿಯನ್ನು ನೆರವೇರಿಸಿದವರೆಂದು ಪರಿಗಣಿಸಲ್ಪಡುತ್ತೇವೆ. (ರೋಮಾ 8:4) ದೇವರ ಆಜ್ಞೆಯೇ ಪ್ರೀತಿ "ಇದನ್ನು ಮಾಡಬಾರದು" ಎಂದು ನಕಾರಾತ್ಮಕವಾಗಿಯೂ ಇಲ್ಲವೇ "ಇದನ್ನು ಮಾಡಬೇಕು" ಎಂದು ಸಕಾರಾತ್ಮಕವಾಗಿ ಹೇಳಿದರೂ ಅಥವಾ ಮತ್ತೆ ಯಾವ ವಿಧದಲ್ಲಿ ಹೇಳಿದರೂ, ಅದನ್ನು (ಭಂಗಪಡಿಸದೆ) ಕಾಪಾಡಿಕೊಂಡು ಬರಲು ನಮಗೆ ಸಾಧ್ಯವಾಗದು. ಆದರೆ ಆತನ ಪವಿತ್ರ ನಾಮಕ್ಕೆ ಸ್ತೋತ್ರ. ಏಕೆಂದರೆ ಕ್ರಿಸ್ತ ಯೇಸುವಿನಲ್ಲಿ ನಮ್ಮ ಕಡೆಗೆ ತೋರಿಬಂದ ದೇವರ ಕೃಪೆಯ ಮೂಲಕವಾಗಿ (ರೋಮಾ 13:10) ನಾವು ಅದನ್ನು ನೆರವೇರಿಸಬಹುದು.

ಈ ವಿಚಾರವಾಗಿ ಪಾಸ್ಟರ್ ರಸಲ್ಲರು R4442:5ರಲ್ಲಿ ಬರೆದಿರುವುದೇನೆಂದರೆ;

"(ಅಬ್ರಹಾಮನ) ಮೂಲ ಒಡಂಬಡಿಕೆಯು ಧರ್ಮಶಾಸ್ತ್ರಕ್ಕೆ ಸೇರಿಸಲ್ಪಟ್ಟದ್ದಾಗಿ" ಕ್ರಿಸ್ತನಿಗೆ ಬಂದಿತು ಮತ್ತು ಆತನು ಧರ್ಮಶಾಸ್ತ್ರಕ್ಕೆ ವಿಧೇಯನಾಗುವುದರ ಮೂಲಕ ಅದರ ಆಶೀರ್ವಾದಗಳೀಗೂ ಬಾಧ್ಯನಾದನು. ಈಗ ಆತನು ನಮ್ಮನ್ನು ಧರ್ಮಶಾಸ್ತ್ರದ ಹೊರತಾಗಿ ನಮ್ಮ ಸಾಮರ್ಥ್ಯಾನುಸಾರ ತೋರಿಸುವ ನಂಬಿಕೆ ಮತ್ತು ವಿಧೇಯತೆಗಳೆಂಬ ಷರತ್ತಿಗನುಸಾರ ಪ್ರತ್ಯೇಕವಾಗಿ ಅಂಗೀಕರಿಸುತ್ತಿದ್ದಾನೆ. ನಾವು ಶರೀರ ಭಾವಕ್ಕೆ ಅನುಸಾರವಾಗಿ ನಡೆಯದೆ ಧರ್ಮಶಾಸ್ತ್ರದ ಒಳಾರ್ಥಕ್ಕನುಸಾರ ನಡೆದರೆ ಧರ್ಮಶಾಸ್ತ್ರದ ನೀತಿಯು ನಮ್ಮಲ್ಲಿ ನೆರವೇರಿತೆಂದು ಎಣಿಸಲ್ಪಡುತ್ತದೆ. ಹೇಗೆಂದರೆ, ನಮಗೆ ಪರಿಪೂರ್ಣ ಸಾಮರ್ಥ್ಯವಿದ್ದಿದ್ದರೆ ನಾವು ದೇವರ ಆಜ್ಞಾವಿಧಿಗಳನ್ನು ಪರಿಪೂರ್ಣವಾಗಿ ಕೈಗೊಳ್ಳುತ್ತಿದ್ದೇವೆಂಬುದನ್ನು ಹೀಗೆ ನಾವು ರುಜುವಾತು ಪಡಿಸುತ್ತೇವೆ. ಕ್ರಿಸ್ತನ ದೇಹದ ಅಂಗಗಳಾಗಿ ಅಂಗೀಕರಿಸಲ್ಪಟ್ಟು, ನಮ್ಮ ಸಾಮರ್ಥ್ಯಾನುಸಾರ ಹೃದಯಗಳಲ್ಲಿ ಚಿತ್ತೋದ್ಧೇಶಗಳಲ್ಲಿ ಅಲ್ಲದೆ ಸಾಧ್ಯವಾದಷ್ಟೂ ಕ್ರಿಯೆಗಳಲ್ಲಿಯೂ ನಮ್ಮ ವಿಮೋಚಕನ ಪ್ರತಿರೂಪಿಗಳಾಗುವುದಕ್ಕಾಗಿ, ನಾವುಗಳು ಲೌಕಿಕ ವಿಷಯಗಳನ್ನು ತ್ಯಾಗ ಮಾಡುವ ಯಜ್ಞದ ಮೂಲಕವಾದ ಒಡಂಬಡಿಕೆಗೆ ಸೇರುತ್ತೇವೆ.

ನಮ್ಮನ್ನು ಹೀಗೆ ಪರೀಕ್ಷಿಸಿದ ನಂತರ, ನಂಬಿಗಸ್ತರಾಗಿ ಕಂಡುಬಂದಲ್ಲಿ, ದೇವರು ನಮ್ಮನ್ನು ಪರಿಪೂರ್ಣವಾಗಿ ಅಂಗೀಕರಿಸಿ ನಮ್ಮ ವಿಮೋಚಕನ ಸಾರೂಪ್ಯದ ಆತ್ಮೀಕ ದೇಹಗಳನ್ನು ನಮಗೆ ಅನುಗ್ರಹಿಸುತ್ತಾನೆ. ಈ ರೀತಿಯಲ್ಲಿ ನಾವು ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿ ಅಬ್ರಹಾಮನ ಆತ್ಮೀಕವಾದ ಸಂತತಿಯೂ, ಶ್ರೇಷ್ಠ ಮಧ್ಯಸ್ತನೂ ಶ್ರೇಷ್ಠ ಪ್ರವಾದಿಯೂ ಯಾಜಕನೂ ರಾಜನೂ ನ್ಯಾಯಾಧಿಪತಿಯೂ ಆಗಿರುವಾತನ ದೇಹದ ಅಂಗಗಳಾಗುತ್ತೇವೆ. ಈತನು ಸಾವಿರ ವರುಷದಲ್ಲಿ ತನ್ನ ರಕ್ತದಿಂದ ಮುದ್ರಿತವಾದ (ಧರ್ಮಶಾಸ್ತ್ರ ಸಂಬಂಧವಾದ) ಹೊಸ ಒಡಂಬಡಿಕೆಯ ಮೂಲಕ ಭೂಮಿಯಲ್ಲಿ ನೀತಿಯನ್ನು ಸ್ಥಾಪಿಸಿ, ಮಾನವರಲ್ಲಿ ಮನಃಪೂರ್ವಕವಾಗಿ ವಿಧೇಯರಾದವರನ್ನು ಪಾಪ ಮರಣದ ದುಸ್ಥಿತಿಯಿಂದ ಮೇಲಕ್ಕೆ ತಂದು ಅವರು ನಿತ್ಯಜೀವ ಪಡೆದು ದೇವರನ್ನು ಹೊಂದಿಕೊಂಡಿರುವಂತೆ ಮಾಡುವನು.

ರಾಜವಂಶದ ಯಾಜಕತ್ವ ಪಡೆದಿರುವ ಚೊಚ್ಚಲ ಮಕ್ಕಳ ಸಭೆಯು ಯಾವ ಒಡಂಬಡಿಕೆಯ ಮೂಲಕವಾಗಿ ನೀತಿವಂತರೆಂದು ನಿರ್ಣಯಿಸಲ್ಪಡುವರು ಎಂದು ಕೇಳುವುದುಂಟು. ಇದಕ್ಕೆ ನಮ್ಮ ಉತ್ತರ: ಅದು ಯಾವ ಒಡಂಬಡಿಕೆಯ ಮೂಲಕವಾಗಿಯೂ ಇಲ್ಲ. ನಮ್ಮ ನೀತಿ ನಿರ್ಣಯವು. ಅಬ್ರಹಾಮನ ವಿಷಯದಲ್ಲಿದ್ದಂತೆ, ನಂಬಿಕೆಯ ಮೂಲಕವಾದದ್ದು. ಸತ್ಯವೇದದಲ್ಲಿ ಬರೆದಿರುವಂತೆ "ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು". "ಆದರೆ ಅದು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತೆಂಬುದು ಅವನಿಗೋಸ್ಕರ ಮಾತ್ರವಲ್ಲದೆ ನಮಗೋಸ್ಕರವೂ ಬರೆದಿರುವುದು. ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರನ್ನು ನಂಬುವ ನಮಗೂ ನಂಬಿಕೆಯು ನೀತಿಯೆಂದು ಎಣಿಸಲ್ಪಡುವುದು. ದೇವರು ಆತನನ್ನು ನಮ್ಮ ಅಪರಾಧಗಳ ನಿಮಿತ್ತ ಮರಣಕ್ಕೆ ಒಪ್ಪಿಸಿಕೊಟ್ಟು ನಮಗೆ ನೀತಿವಂತರೆಂಬ ನಿರ್ಣಯವು ಉಂಟಾಗುವ ನಿಮಿತ್ತ ಜೀವದಿಂದ ಎಬ್ಬಿಸಿದನು (ರೋಮಾ 4:3, 23–24).

## ಭಾಗ–8

# ಇಸ್ರಾಯೇಲ್ಯರೊಂದಿಗೆ ದೇವರ ವ್ಯವಹಾರಗಳು

ವಿಮೋಚನಾಕಾಂಡ 20:1 32:5

ಇಸ್ರಾಯೇಲ್ಯರೊಂದಿಗೆ ದೇವರ ವಿಶೇಷ ರೀತಿಯ ನಡವಳಿಕೆಯು ಪ್ರಾರಂಭವಾದದ್ದು ಅವರು ಇನ್ನೂ ಐಗುಪ್ತ ದೇಶದಲ್ಲಿ ಫರೋಹನನ ಹಾಗೂ ಆತನ ಕ್ರೂರ ಬಿಟ್ಟೀಕೆಲಸ ಮಾಡಿಸುವವರ ದುಷ್ಟ ಆಡಳಿತದಲ್ಲಿರುವಾಗಲೇ ಎಂದು ನಾವು ಹೇಳಬಹುದು. ಆ ಇಸ್ರಾಯೇಲ್ಯರು ಐಗುಪ್ತಕ್ಕೆ ಇಳಿದು ಹೋದದ್ದು ತಮ್ಮ ಪಿತೃಗಳ ಪಾಪಾಧೀನ ಸ್ವಭಾವದ ನಿಮಿತ್ತವಾಗಿತ್ತು. ಹಾಗೂ ಅವರನ್ನು ವಿಮೋಚಿಸುವ ಯಾವ ಹಂಗೂ ಇರಲಿಲ್ಲ. ಆದಾಗ್ಯೂ ಈ ಪ್ರಕಾರದಲ್ಲಿ ದೇವರು ತನ್ನ ದಿವ್ಯ ಪ್ರೀತಿ ಪರಾಮರಿಕೆಗಳನ್ನು (ಅವರಲ್ಲಿ) ತೋರ್ಪಡಿಸಿದನು. ಅವರನ್ನು ಮೊದಲು ಪಸ್ಕದ ಕುರಿಯ ರಕ್ತದ ಅಡಿಯಲ್ಲಿ ಬರಮಾಡುವುದರ ಮೂಲಕ ಅವರನ್ನು (ಐಗುಪ್ತದಿಂದ) ಬಿಡುಗಡೆ ಮಾಡಿದನು. ಅನಂತರ ಅವರಿಗಾದ ಎಲ್ಲಾ ಕಷ್ಟಾನುಭವಗಳು ಆತನ ಕೃಪಾನುಗ್ರಹದ ಮೂಕಲವಾಗಿ ತಮ್ಮನ್ನು ದೇವರ ಹತ್ತಿರಕ್ಕೆ ಕೊಂಡೊಯ್ಯುವಂತೆ ಅವುಗಳನ್ನು ಮಾರ್ಪಡಿಸಿದನು. ಕೃಪಾನುಗ್ರಹ ಪೂರ್ವಕವಾದ ಈ ಕಾರ್ಯಗಳನ್ನು ಗ್ರಹಿಸಿಕೊಂಡು ಅವುಗಳ ಮಹತ್ವಗಳನ್ನು ಮನವರಿಕೆ ಮಾಡಿಕೊಂಡಿದ್ದಲ್ಲಿ ಅವುಗಳು ಹೃದಯದಲ್ಲಿ ನಂಬಿಕೆಯನ್ನು ಉಂಟು ಮಾಡುತ್ತಿದ್ದವು – "ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವುದು ಕಣ್ಣಿಗೆ ಕಾಣದಿರುವುಗಳನ್ನು ನಿಜವೆಂದು (ನಿಶ್ಚಯವಾಗಿ) ತಿಳಿದುಕೊಳ್ಳುವುದು ಆಗಿದೆ." (ಇಬ್ರಿಯ 11:1) ಆ ನಂಬಿಕೆಯು ಅವರನ್ನು ಯಾವಾಗಲೂ ದೇವರ ಚಿತ್ತಕ್ಕೆ ಕಟ್ಟುನಿಟ್ಟಾದ ವಿಧೇಯತೆಗೆ ಪ್ರೇರಿಸಿ ನಡೆಸುತ್ತಿತ್ತು. ಇಂತಹ ವಿಧೇಯತೆಯು ಅವರು ದೇವರಿಗಾಗಿ ತಮ್ಮನ್ನು ಪ್ರತ್ಯೇಕಿಸಿಕೊಂಡು ಎಲ್ಲಾ ಜನರಲ್ಲಿ ಅವರು "ಆತನ ಸ್ವಕೀಯ ಪ್ರಜೆಗಳಾಗುವಂತೆ" ಮಾಡುತ್ತಿತ್ತು. ಆದರೂ ಅವರಿಗೆ – ರಾಮ್ಸೇಸ್, ಸುಕ್ಕೋತ್, ಈತಾಮ್, ಪಿ–ಹಹಿರೋತ್, ಕೆಂಪುಸಮುದ್ರದ ಪೂರ್ವ ತೀರ, ಮಾರಾ, ಏಲೀಮ್, ಸೀನ್ ಅರಣ್ಯ, ಆಲೂಷ್, ದೊಪ್ಕ ಹಾಗೂ ರೇಫಿದ್ದೀಮ್ – ಈ ಸ್ಥಳಗಳಲ್ಲಿ ನಡೆದ ಯಾವ ಸಂಗತಿಗಳೂ ದೇವರಿಗೆ ಅಂಗೀಕೃತವಾಗುವ ನಂಬಿಕೆಯನ್ನು ಅವರಲ್ಲಿ ಜಾಗೃತಗೊಳಿಸಲಿಲ್ಲವೆಂದು ತೋರುತ್ತದೆ. ಅವರು ದೇವರ ಆಜ್ಞಾವಿಧಿಗಳನ್ನು ಕೈಗೊಂಡು ನಡೆಯುವವರು ಹೌದೋ ಅಲ್ಲವೋ ಎಂಬುದನ್ನು ಪರೀಕ್ಷಿಸುತ್ತಿದ್ದೇನೆಂದು ದೇವರು ಅವರಿಗೆ ಅನೇಕ ಸಂದರ್ಭಗಳಲ್ಲಿ ಜ್ಞಾಪಿಸಬೇಕಾಗಿ ಬಂತು. ಪದೇ ಪದೇ ಆತನನ್ನು ಮರೆತು ಹೋಗುವ ಇಲ್ಲವೇ ಆತನ ಕೃಪಾಪೂರ್ಣವಾದ ಅನುಗ್ರಹಗಳ ವಿರುದ್ಧ ಗುಣಗುಟ್ಟುವುದರ ಮೂಲಕವಾಗಿಯೇ ಅವರು ದೇವರಿಗೆ ಉತ್ತರಿಸುತ್ತಿದ್ದರು. ಕಡೆಯಲ್ಲಿ ದೇವರು ಅವರನ್ನು "ದೇವ ಗಿರಿಯಾದ" ಸೀನಾಯಿಗೆ ಕರಕೊಂಡು ಬಂದು ಅಲ್ಲಿ ಅವರಿಗೆ ತನ್ನ ಚಿತ್ತವನ್ನು ಸ್ಪಷ್ಟವಾಗಿ ಅಂದರೆ ಅವರು

ಆತನ ಚಿತ್ತವನ್ನು ಕೈಗೊಂಡು ನಡೆಯಲು ಪ್ರತಿಷ್ಠೆ ಪಡಿಸಿಕೊಳ್ಳಬೇಕೆಂಬುದನ್ನು ತಿಳಿಯಪಡಿಸಿದನು. ಇಲ್ಲಿ ಅವರು "ಆತನು ಹೇಳಿದಂತೆಯೇ ಮಾಡುವೆವು" ಎಂದು ಪ್ರತಿಯಾಗಿ ಉತ್ತರಿಸಿದರು.

ಇಲ್ಲಿರುವ ಗಾಢವಾದ ಹೋಲಿಕೆಯನ್ನು ಲಕ್ಷಿಸಿ! ನಿಜರೂಪದ ಇಸ್ರಾಯೇಲ್ಯರಾಗಿರುವ ನಮ್ಮೊಡನೆ ದೇವರ ನಡಾವಳಿಯು ನಾವು ಇನ್ನೂ ಐಗುಪ್ತದಲ್ಲಿ ಪಾಪ ಮರಣದ ದಾಸತ್ವದಲ್ಲಿರುವಾಗಲೇ ಪ್ರಾರಂಭವಾಯಿತೆಂದು ಹೇಳಬಹುದು. ನಮ್ಮ ಪಿತೃಗಳ ಪಾಪದ ದೆಸೆಯಿಂದ ನಾವು ಸಹ ಐಗುಪ್ತದಲ್ಲೇ ಹುಟ್ಟಿದೆವು. ನಮ್ಮನ್ನು ಅಲ್ಲಿಂದ ಬಿಡಿಸಬೇಕೆಂದು ಯಾವ ಹಂಗೂ ದೇವರಿಗೆ ಇರಲಿಲ್ಲ. ಆದಾಗ್ಯೂ ಈ ಪ್ರಕಾರವಾಗಿ ದೇವರು ತನ್ನ ದಿವ್ಯ ಪ್ರೀತಿ ಪರಾಮರಿಕೆಗಳನ್ನು ನಮ್ಮಲ್ಲಿ ತೋರ್ಪಡಿಸಿದನು. ನಮ್ಮನ್ನು ಮೊದಲು ನಿಜರೂಪದ ಪಸ್ಕದ ಕುರಿಯ ರಕ್ತದ ಅಡಿಯಲ್ಲಿ ಬರಮಾಡುವುದರ ಮೂಲಕ ಆದಾಮನಿಂದ ಬಂದ ಪಾಪದಿಂದ ನಮಗೆ ಬಿಡುಗಡೆ ಮಾಡಿದನು. ಆನಂತರ ನಮಗಾದ ಎಲ್ಲಾ ಜೀವಿತಾನುಭವಗಳು ಆತನ ಕೃಪಾನುಗ್ರಹದ ಮೂಲಕವಾಗಿ ನಮ್ಮನ್ನು ದೇವರ ಹತ್ತಿರ ಹತ್ತಿರಕ್ಕೆ ಕೊಂಡೊಯ್ಯುವಂತೆ ಅವುಗಳನ್ನು ಮಾರ್ಪಡಿಸಿದನು. ಬಹುಶಃ ನಾವು ದೇವರನ್ನು ನಮ್ಮ ರಕ್ಷಕನೆಂದು ಅಂಗೀಕರಿಸಿದಾಗ ಆತನ ಕೃಪಾನುಗ್ರಹ ಪೂರ್ಣವಾದ ಕಾರ್ಯಗಳ ಮಹತ್ವಗಳು ನಮಗೆ ಮನವರಿಕೆಯಾಗಿರಲಿಲ್ಲವೆಂದು ತೋರುತ್ತದೆ; ಯಾಕೆಂದರೆ ಆಗ ಅದು– ನಮ್ಮ ಪರವಾಗಿರುವ ದೇವರ ಚಿತ್ತವನ್ನು ನಾವು ತಿಳುಕೊಂಡು ಅದಕ್ಕೆ ಕಟ್ಟುನಿಟ್ಟಾದ ವಿಧೇಯತೆಯನ್ನು ತೋರಲು ಪ್ರೇರೇಪಿಸುವಂತಹ–ನಂಬಿಕೆಯನ್ನು ನಮ್ಮಲ್ಲಿ ಉಂಟು ಮಾಡಿರಲಿಲ್ಲ. "ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವುದು ಕಣ್ಣಿಗೆ ಕಾಣದಿರುವುಗಳನ್ನು ನಿಜವೆಂದು (ನಿಶ್ಚಯವಾಗಿ) ತಿಳಿದುಕೊಳ್ಳುವುದು ಆಗಿದೆ." ಇಂತಹ ವಿಧೇಯತೆಯು–ನಾವು ದೇವರಿಗಾಗಿ ನಮ್ಮನ್ನು ಪ್ರತ್ಯೇಕಿಸಿಕೊಂಡು ಎಲ್ಲಾ ಜನರಲ್ಲಿ ನಾವು "ಆತನ ಸ್ವಕೀಯ ಪ್ರಜೆಯೂ, ಯಾಜಕ ರಾಜ್ಯವೂ, ಮೀಸಲು ಜನರೂ ಆಗುವಂತೆ" ಮಾಡುತ್ತಿತ್ತು. ಆದರೂ ನಮಗೆ ಸಂಭವಿಸಿದ – ರಾಮ್ಸೇಸ್, ಸಕ್ಕೋತ್, ಈತಾಮ್, ಪಿ–ಹಹಿರೋತ್, ಕೆಂಪುಸಮುದ್ರದ ಪೂರ್ವತೀರ, ಮಾರಾ, ಏಲೀಮ್, ಸೀನ್ ಅರಣ್ಯ, ಆಲೂಷ್, ದೊಪ್ಕ ಹಾಗೂ ರೆಫೀದ್ದೀಮ್ – ಈ ಸ್ಥಳ ಸನ್ನಿವೇಶಗಳ ವೈವಿಧ್ಯ ಜೀವಿತಾನುಭವಗಳಾವುವು ನಮ್ಮಲ್ಲಿ ದೇವರಿಗೆ ಅಂಗೀಕೃತವಾಗುವಂತಹ ನಂಬಿಕೆಯನ್ನು ನಮ್ಮಲ್ಲಿ ಜಾಗೃತಗೊಳಿಸಲಿಲ್ಲವೆಂದು ತೋರುತ್ತದೆ. ಕಡೆಯಲ್ಲಿ ದೇವರು ನಮ್ಮನ್ನು "ದೇವ ಗಿರಿಯಾದ" ಸೀನಾಯಿಗೆ ಕರಕೊಂಡು ಬಂದು ಅಲ್ಲಿ ತನ್ನ ಕೃಪಾಕಾರ್ಯಗಳೆಲ್ಲವನ್ನು ನಮ್ಮ ನೆನಪಿಗೆ ತಂದು ನಂತರ ನಮ್ಮ ಪರವಾಗಿರುವ ಆತನ ಚಿತ್ತವನ್ನು ಅಂದರೆ ನಾವು ಪರಿಶುದ್ಧರಾಗುವುದಕ್ಕಾಗಿ ಪ್ರತಿಷ್ಠೆ ಪಡಿಸಿಕೊಳ್ಳಬೇಕು ಎಂಬುದನ್ನು ಸ್ಪಷ್ಟವಾಗಿ ತಿಳಿಯಪಡಿಸಿದನು. ಇಲ್ಲಿ ನಾವೂ ಸಹ "ಆತನು ಹೇಳಿದಂತೆಯೇ ಮಾಡುವೆವು" ಎಂದು ಪ್ರತಿಯಾಗಿ ಉತ್ತರಿಸಿದೆವು. (R4029:1 ನೋಡಿ)

ಹೋಲಿಕೆಗಳಾಗಿರುವ ಇದನ್ನು ನೋಡಿ, "ಅವರಿಗೆ ಸಂಭವಿಸಿದ ಈ ಸಂಗತಿಗಳು (ಛಾಯಾರೂಪ) ನಿದರ್ಶನಗಳಾಗಿದ್ದು... ನಮಗೆ ಬುದ್ಧಿವಾದಗಳಾಗಿ ಬರೆಯಲ್ಪಟ್ಟಿರುವುದು... (1 ಕೊರಿಂಥ 10:11) ಎಂಬುದನ್ನು ನಾವು ತಿಳಿದುಕೊಳ್ಳುವುದು ಒಳ್ಳೆಯದು. ನಾವೂ ಸಹ ಪ್ರಾರ್ಥನಾಪೂರ್ವಕವಾಗಿ ಎಚ್ಚರಿಕೆಯಿಂದಿದ್ದು ಅದೇ ವಿಧವಾದ ಅಪನಂಬಿಕೆ ಅವಿಧೇಯತೆಗಳೆಂಬ ತಪ್ಪುಗಳಲ್ಲಿ ಬೀಳದಂತೆ ಪ್ರಯತ್ನಿಸೋಣ.

ಇಸ್ರಾಯೇಲ್ಯರು ದೇವರಿಗೆ ತಾವು ಸಂಪೂರ್ಣವಾಗಿ ಅಧೀನರಾಗಲು – ಅಂದರೆ ಅತನ ಸ್ವರಕ್ಕೆ ವಿಧೇಯರಾಗಿ ಒಡಂಬಡಿಕೆಯನ್ನು ಅನುಸರಿಸಿ ನಡೆಯುವುದಕ್ಕೆ (ವಿಮೋ. 19:8) ತಮ್ಮ ಒಪ್ಪಿಗೆಯನ್ನು ಪ್ರಕಟಿಸಿದ ಸ್ವಲ್ಪ ಸಮಯದ ನಂತರ ಮೋಶೆಯು – ಅವರ ಪರವಾದ ದೇವರ ಚಿತ್ತವನ್ನು ಒಳಗೊಂಡ ಒಡಂಬಡಿಕೆಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದ – ಆಜ್ಞಾ ಶಾಸನಗಳುಳ್ಳ ಕಲ್ಲಿನ ಹಲಿಗೆಗಳನ್ನು ಪಡೆಯಲು "ದೇವಗಿರಿಗೆ" ಹತ್ತಿದನು. (ವಿಮೋ. 4:12, 31:18) ಮೋಶೆಯು ಮೊದಲೇ ಈ ಆಜ್ಞಾ ವಿಧಿಗಳನ್ನೂ (ವಿಮೋ. 20:1–17) ಅದರ ಉಪನಿಯಮ. ಮುಂತಾದವುಗಳನ್ನೂ (ವಿಮೋ. 20:23–26: 21:1–36, 22:1–31, 23:1–33) ಪುಸ್ತಕದಲ್ಲಿ (ವಿಮೋ. 24:4) ಬರೆದು ಅದಕ್ಕೆ ಅಗತ್ಯವಾದ ಸರ್ವಾಂಗ ಹೋಮ ಮತ್ತು ಸಮಾಧಾನ ಯಜ್ಞಗಳನ್ನು ಅರ್ಪಿಸಿ ಅವುಗಳ ರಕ್ತದಲ್ಲಿ ಸ್ವಲ್ಪ ತೆಗೆದುಕೊಂಡು ಯಜ್ಞವೇದಿಗೆ ಎರಚಿ ಅನಂತರ ಪುಸ್ತಕದಲ್ಲಿರುವುದನ್ನು ಜನರಿಗೆ ಓದಿದ್ದನು. ಮತ್ತೆ ಅವರು ದೇವರ ಚಿತ್ತವನ್ನು ಅನುಸರಿಸಿ ನಡೆಯಲು ತಾವು ಪ್ರತಿಷ್ಠೆ ಪಡಿಸಿಕೊಂಡದ್ದನ್ನು ಅಲ್ಲಿ ದೃಢಪಡಿಸಿದ್ದರು. "ಯೆಹೋವನ ಆಜ್ಞೆಗಳನ್ನೆಲ್ಲಾ ನಾವು ಅನುಸರಿಸಿ ವಿಧೇಯರಾಗುವೆವು" (ವಿಮೋ. 24:7) ಈ ಕಾರಣದಿಂದ ಮೋಶೆಯು ಯಜ್ಞಾರ್ಪಣೆಯ ಉಳಿದ ರಕ್ತವನ್ನು ತೆಗೆದುಕೊಂಡು ಪುಸ್ತಕದ ಮೇಲೆಯೂ ಮತ್ತು ಎಲ್ಲಾ ಜನರ ಮೇಲೆಯೂ ಚಿಮುಕಿಸಿ. (ವಿಮೋ. 24:8, ಇಬ್ರಿಯ 9:19) "ಇಗೋ ಈ ಗ್ರಂಥದಲ್ಲಿ ಹೇಳಿರುವ ಎಲ್ಲಾ ಆಜ್ಞೆಗಳ ಪ್ರಕಾರ ಯೆಹೋವನು ನಿಮ್ಮ ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ಸ್ಥಿರಪಡಿಸುವ ರಕ್ತವು ಇದೇ ಅಂದನು". (ವಿಮೋ. 24:5–8).

ಈಗಾಗಲೇ ಮೋಶೆಯು ಬೆಟ್ಟದಲ್ಲಿದ್ದುದ್ದು – ನಾಲ್ವತ್ತು ಹಗಲುಗಳು ನಾಲ್ವತ್ತು ರಾತ್ರಿಗಳ – ಒಂದು ದೀರ್ಘಾವಧಿಯ ಕಾಲವಾಗಿತ್ತು. (ಧರ್ಮೋ. 9:9) ಅವನು ಅಷ್ಟುಕಾಲ ಅಲ್ಲಿ ಯಾಕೆ ಇರಬಾರದಾಗಿತ್ತು? ಆತನು ಆಜ್ಞಾಶಾಸನಗಳ ಕಲ್ಲಿನ ಹಲಿಗೆಗಳನ್ನು ಪಡೆದುದಲ್ಲದೆ ದೇವದರ್ಶನ ಗುಡಾರದ ಮತ್ತು ಅದರ ಕಟ್ಟಡದ ವಿವರಗಳೂ, ಅದರ ಯಾಜಕತ್ವವೂ, ಯಜ್ಞಾರ್ಪಣೆಗಳೂ, ಅದರ ಸಂಸ್ಕಾರಗಳು ಇತ್ಯಾದಿ ಸಂಬಂಧದ ಅದ್ಭುತವಾದ ಸೂಚನೆಗಳನ್ನೂ ಹಾಗೂ ವಿವರಗಳನ್ನೂ ಪಡೆದನಲ್ಲವೇ? (ವಿಮೋ. 25:1 ರಿಂದ 30:11) ಇವುಗಳನ್ನು ಮನನ ಮಾಡಿಕೊಂಡು ಈ ವಿಷಯಗಳು ಕರಗತವಾಗಲು ನಮಗೆ ವರುಷಗಳು ಬೇಕಾಗುವವು. ಹಾಗಿದ್ದಲ್ಲಿ ನಮ್ಮಲ್ಲಿ ಎಷ್ಟು ಮಂದಿ ಈ ಎಲ್ಲಾ ವಿವರಗಳನ್ನು ನೆನಪಿನಲ್ಲಿ ಇಟ್ಟುಕೊಂಡಿದ್ದೇವೆ! ಆದರೂ ಈ 40 ದಿನಗಳಲ್ಲಿ ಮೋಶೆಗೆ ಎಲ್ಲಾ

ವಿವರಗಳನ್ನು ಗ್ರಹಿಸಿ ಅದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕಾಯಿತು. ಹೀಗಿದ್ದರೂ ಅವನಿಗೆ ಅಲ್ಲಿ ಯಾವ ನೀಲ ನಕ್ಷೆಯನ್ನಾಗಲೀ, ಸೂಚನೆಗಳ ಕೈಪಿಡಿಯನ್ನಾಗಲಿ, ಅಥವಾ "ದೇವದರ್ಶನ ಗುಡಾರವೂ ಅದರ ಉತ್ತಮ ಯಜ್ಞಗಳ ಛಾಯೆಗಳು" ಎಂಬ ಪುಸ್ತಕವನ್ನಾಗಲಿ ನೀಡದೆ, ಕೇವಲ ಅವನಿಗೆ – "ಬೆಟ್ಟದಲ್ಲಿ ನಾನು ನಿನಗೆ ತೋರಿಸಿದ ಮಾದರಿಯ ಪ್ರಕಾರವೇ ಎಲ್ಲವನ್ನೂ ಮಾಡಬೇಕು" (ಇಬ್ರಿಯ 8:5) ಎಂದು ಹೇಳಲಾಯಿತು.

ಯೇಸುವಿನ ಗುಣಸ್ವಭಾವಗಳ ನಮ್ಮ ನಿಜವಾದ ಮೆಚ್ಚಿಗೆಯು ಆತನ ಭೂಲೋಕ ಜೀವಿತದ ಸಾಮಾನ್ಯ ಚಿಂತನೆಯ ಫಲವಲ್ಲ. ಆದರೂ ಇದನ್ನು ಯಾವಾಗಲೂ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ನಾವು ಆತನ ಭೂಲೋಕದ ಜೀವಿತವನ್ನು ಅನುಕರಣೆ ಮಾಡಲು ಸಾಧ್ಯವೆಂಬುದು ಬಹುಶಃ ನಿಜವಾದರೂ ಇವುಗಳ ಪೂರ್ಣ ಮಟ್ಟದ ಮೆಚ್ಚಿಗೆಯು ಸಹ ಪ್ರಭಾವ ಮಹಿಮೆಗಳುಳ್ಳ "ಮಾದರಿಯನ್ನು" ನೋಡುವುದಕ್ಕಾಗಿ ಆತ್ಮೀಕತೆಯ ಬೆಟ್ಟಕ್ಕೆ ದೇವರಿಂದ ಕರೆಯಲ್ಪಡುವುದರ ಫಲವಾಗಿ ಮಾತ್ರ ಬರುವುದು. ಹೀಗೆ ಆ ಬೆಟ್ಟದಲ್ಲಿಯೇ ನಮಗೆ ಕ್ರಿಸ್ತನ ನಿಜರೂಪ ದರ್ಶನವಾಗುವುದು ಮತ್ತು ನಮ್ಮ ಈ ದೇಹವೆಂಬ ಭೂಸಂಬಂಧವಾದ ಗುಡಾರವನ್ನು ಆ ಮಾದರಿಯ ಪ್ರಕಾರ ರೂಪಿಸಿಕೊಳ್ಳುವುದಕ್ಕೆ ನಿಯಮಗಳು ಕೊಡಲ್ಪಡುವುದು. ದೇವದರ್ಶನ ಗುಡಾರದ ಮೂಲ ಮಾದರಿಯನ್ನು ಪಡೆದು ಅದರ ವಿವರಗಳನ್ನು ಅಳಿಸಲಾಗದಂತೆ ಮನದಟ್ಟು ಮಾಡಿಕೊಳ್ಳಲು ಮೋಶೆಗೆ ನಾಲ್ವತ್ತು ದಿನ ಹಗಲು ರಾತ್ರಿ ಏನೂ ತಿನ್ನದೇ ಕುಡಿಯದೆ ಉಪವಾಸವಿರುವ ಅಗತ್ಯವಿತ್ತು. (ಧರ್ಮೋ. 9:9) ನಮಗೂ ಸಹ ಇದರಂತೆಯೇ ಪರಲೋಕದ ವಿಷಯಗಳನ್ನು ಧ್ಯಾನಿಸಿ ಅವಲೋಕಿಸುವಾಗ ನಮ್ಮ ಭೂಸಂಬಂಧದ ವಿಷಯಗಳಲ್ಲಿ ಏರುಪೇರುಗಳಾಗಲಿ ಇಲ್ಲವೇ ಶಾರೀರಿಕ ಅಗತ್ಯಗಳಾಗಲಿ ಪರಲೋಕ ವಿಷಯದ ದರ್ಶನಗಳ ಮಧ್ಯೆ ಅಡ್ಡಿಯಾಗಿ ನಿಲ್ಲುವುದಕ್ಕೆ ಬಿಡಲಾಗುವುದಿಲ್ಲ. ದೇವರ ಸಮ್ಮುಖದಲ್ಲಿ ನಮ್ಮತನವನ್ನು ನಾವು ಮರೆತುಬಿಟ್ಟು, ಹೌದು ಅದನ್ನು ನಮ್ಮಿಂದ ಹೊರಹಾಕಿ ದೇವರನ್ನು ಬರಮಾಡಿಕೊಳ್ಳಬೇಕು.

"ಮೋಶೆ ಬೆಟ್ಟದಿಂದ ಇಳಿಯದೆ ತಡಮಾಡಿದ್ದನ್ನು ಇಸ್ರಾಯೇಲ್ಯರು ನೋಡಿ ಆರೋನನ ಬಳಿಗೆ ಕೂಡಿಬಂದು – ಏಳು: ನಮ್ಮ ಮುಂದುಗಡೆ ಹೋಗುವುದಕ್ಕೆ ನಮಗೆ ದೇವರುಗಳನ್ನು ಮಾಡಿಕೊಡು; ಐಗುಪ್ತದೇಶದಿಂದ ನಮ್ಮನ್ನು ಕರಕೊಂಡು ಬಂದ ಮೋಶೆ ಏನಾದನೋ ಗೊತ್ತಿಲ್ಲ ಎಂದು ಹೇಳಿದರು." (ವಿಮೋ. 32:1)

ಮಾನವನ ಹೃದಯವು ಎಷ್ಟು ವಿಪರೀತವಾಗಿ ಕೆಟ್ಟುಹೋಗಿದೆ! (ಯೆರೆಮೀಯ 17:9) ಕೇವಲ ಸ್ವಲ್ಪ ಸಮಯದ ಹಿಂದೆಯೇ ಇಸ್ರಾಯೇಲ್ಯರು ದೇವರ ಚಿತ್ತಕ್ಕೆ ವಿಧೇಯರಾಗಿ ನಡೆಯಲು ತಮ್ಮನು ಪ್ರತಿಷ್ಠೆ ಪಡಿಸಿಕೊಂಡಿರುವುದನ್ನು ಧೃಡಪಡಿಸಿದ್ದರು (ವಿಮೋ. 24:7)

ಗತಿಸಿದ ಕಾಲಗಳಲ್ಲಿ ಅವರು ದೇವರನ್ನು ಮರೆತು ಹೋಗುತ್ತಿದ್ದುದು ಮತ್ತು ಆತನ ಕೃಪಾನುಗ್ರಹ ಪಾಲನೆಯ ವಿರುದ್ಧವಾಗಿ ಗುಣಗುಟ್ಟುತಿದ್ದದ್ದು ಸಾಕಷ್ಟು ಕೆಟ್ಟದ್ದಾಗಿತ್ತು. ಆದರೆ ಇಲ್ಲಿ ಅವರು ಉದ್ದೇಶ ಪೂರ್ವಕವಾಗಿ ಆತನನ್ನು ತೊರೆದಿದ್ದರೆಂದು ಕಾಣುತ್ತದೆ. ಅವರು ತಮಗಾಗಿ "ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು. ಆಕಾಶದಲ್ಲಾಗಲಿ ಭೂಮಿಯಲ್ಲಾಗಲಿ ಭೂಮಿಯ ಕೆಳಗಣ ನೀರಿನಲ್ಲಾಗಲಿ ಇರುವ ಯಾವ ರೂಪವನ್ನೂ ಮಾಡಿಕೊಳ್ಳಬಾರದು" (ವಿಮೋ. 20:4) ಎಂದು ದೇವರು ಪ್ರಕಟಿಸಿದ್ದನಲ್ಲವೇ? ಅವರು ಆತನ ಒಡಂಬಡಿಕೆಯನ್ನು ಅಲಕ್ಷಿಸಿ ಆತನ ಆಜ್ಞೆಗಳನ್ನು ಉಲ್ಲಂಘಿಸಿದಾಗ ಅವರು ದೇವರನ್ನು ತೊರೆದುಬಿಟ್ಟರು. ಆದರೆ  ಅವರು ಆತನನ್ನು ತ್ಯಜಿಸುವ ಉದ್ಧೇಶದಲ್ಲಿದ್ದರು ಎಂದು ನಾವು ಊಹಿಸುವ ಅಗತ್ಯವಿಲ್ಲ.

ಆವರೆಗೂ ಮೋಶೆಯು ದೇವರ ಭುಜಬಲಕ್ಕೆ ಸಾದೃಶ್ಯ ಪ್ರತಿನಿಧಿಯಾಗಿದ್ದನು. ಇಸ್ರಾಯೇಲ್ಯರಿಗೆ ಕಂಡುಬಂದದ್ದು–ಫರೋಹನನ ದಾಸತ್ವದಿಂದ ಬಿಡಿಸಿ ಹೊರತಂದವನು ಮೋಶೆ; ಕೆಂಪುಸಮುದ್ರದಲ್ಲಿ ಅವರನ್ನು ದಾಟಿಸಿಕೊಂಡು ಬಂದವನೂ ಅಲ್ಲದೆ ಮಾರಾ ಎಂಬಲ್ಲಿ ಕಹಿನೀರನ್ನು ಸಿಹಿಯನ್ನಾಗಿಸಿದವನು ಮೋಶೆಯೇ; ಏಲೀಮ್ ಎಂಬ ಸಮಾಧಾನ ಕರವಾದ ವಿಶ್ರಾಂತಿ ಸ್ಥಳಕ್ಕೆ ನಡೆಸಿದವನು ಮೋಶೆಯೇ; ಬಂಡೆಯನ್ನು ಒಡೆದು ಜೀವಕರ ನೀರನ್ನು ತರಿಸಿದವನು ಮೋಶೆಯೇ; ಬೆಟ್ಟದ ಮೇಲೆ ತನ್ನ ವಿಜ್ಞಾಪನೆಯ ಮೂಲಕವಾಗಿ ಅಮಾಲೇಕ್ಯರ ವಿರುದ್ಧ ಯುದ್ಧದಲ್ಲಿ ಅವರು ಜಯಿಸುವಂತೆ ಮಾಡಿದ್ದೂ ಮೋಶೆಯೇ. ಆದರೆ ತಮಗಾದ ಎಲ್ಲಾ ಕೃಪಾಶೀರ್ವಾದಗಳಿಗೆ ಮೂಲ ಕಾರಣನಾಗಿದ್ದ ಅದೃಶ್ಯನಾದ ದೇವರ ಮೇಲಿರುವ ತಮ್ಮ ನಂಬಿಕೆಯನ್ನು ಸಾಬೀತು ಮಾಡುವ ಸಮಯ ಈಗ ಅವರಿಗೆ ಬಂದಿತ್ತು.

ಮೋಶೆಯು ಅವರ ಮಧ್ಯದಲ್ಲಿ ಇರುವಷ್ಟು ಕಾಲ ಅವರು ಕಾಲಕಾಲಕ್ಕೆ ಸರಿಯಾಗಿ ದೇವರನ್ನು ನೆನೆಯುತ್ತಿದ್ದರು. ಏಕೆಂದರೆ ಮೋಶೆಯು ಅವರ ಗಮನವನ್ನು ಯಾವಾಗಲೂ ದೇವರ ಕಡೆಗೆ ತಿರುಗಿಸುತ್ತಿದ್ದನು. ಆದರೆ ಅಬ್ರಹಾಮನಲ್ಲಿದ್ದು ಆತನನ್ನು ಸಹ ನೀತಿವಂತನನ್ನಾಗಿ ಮಾಡಿದಂತಹ ನಂಬಿಕೆನ್ನು ಅವರಲ್ಲಿ ಬೆಳೆಸಲು ಸಾಧ್ಯವಾಗಲಿಲ್ಲ. (ದೇವರ) ಸಾದೃಶ್ಯ ಊರುಗೋಲನ್ನು (ಮೋಶೆಯನ್ನು) ಮೊದಲು ಅವರಿಂದ ತೆಗೆಯಬೇಕಾಗುತ್ತದೆ. ಆಗ ಅವರು ಅದೃಶ್ಯನಾಗಿರುವಾತನ ಬಾಹುವನ್ನು ಆತುಕೊಳ್ಳುವರು. ಏಕೆಂದರೆ ನಂಬಿಕೆಯು ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವುದು ಮಾತ್ರವಲ್ಲದೆ ಕಣ್ಣಿಗೆ ಕಾಣದವುಗಳನ್ನು ನಿಜವೆಂದು (ನಿಶ್ಚಯವಾಗಿ) ತಿಳಿದುಕೊಳ್ಳುವುದೂ ಸಹ ಆಗಿರುವುದು. (ಇಬ್ರಿಯ 11:1) ಇದಕ್ಕೆ ಅನುಸಾರವಾಗಿ ಮೋಶೆಯು ಅವರ ಸಮಕ್ಷಮದಿಂದ ತೆಗೆಯಲ್ಪಟ್ಟು ಬೆಟ್ಟದ ಮೇಲಕ್ಕೆ ಏರಿಸಲ್ಪಟ್ಟನು.

ಇಲ್ಲಿ ನೆನಪಿನಲ್ಲಿ ಇಡಬೇಕಾದುದೆಂದರೆ – "ದೇವರು ಆತ್ಮಸ್ವರೂಪನು ಆತನನ್ನು

ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕಂತೆ ಆರಾಧಿಸಬೇಕು" (ಯೋಹಾನ 4:24) ಇಂತಹ ವಿಷಯಗಳಲ್ಲೇ ದೇವರು ತೀವ್ರ ಆಸಕ್ತಿಯುಳ್ಳವನಾಗಿರುವುದು. ತನಗೆ ಸಲ್ಲತಕ್ಕ ಆರಾಧನೆ ಸ್ತುತಿಗಳ ನಡುವೆ ಯಾರಾಗಲಿ ಯಾವುದಾಗಲಿ ಅಡ್ಡಿಯಾಗಿ ನಿಲ್ಲುವು–ದನ್ನು ಆತನು ಸಹಿಸುವುದಿಲ್ಲ. ಇದನ್ನು ಆತನು ಎಷ್ಟು ಒತ್ತುಕೊಟ್ಟು ಹೇಳಿದ್ದಾನೆ ನೋಡಿರಿ.

"ನಿನ್ನನ್ನು ಐಗುಪ್ತ ದೇಶದ ದಾಸತ್ವದೊಳಗಿಂದ ಬಿಡುಗಡೆ ಮಾಡಿದ ಯೆಹೋವನು ಎಂಬ ದೇವರು ನಾನೇ. ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು. ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು. ಆಕಾಶದಲ್ಲಿಯಾಗಲಿ ಭೂಮಿಯಲ್ಲಾಗಲೀ ಕೆಳಗಣ ನೀರಲ್ಲಿಯಾಗಲಿ ಇರುವ ಯಾವ ರೂಪವನ್ನೂ ಮಾಡಿಕೊಳ್ಳಬಾರದು. ಅವುಗಳಿಗೆ ಅಡ್ಡಬೀಳಲೂ ಬಾರದು, ಪೂಜೆ ಮಾಡಲೂ ಬಾರದು. ನಿನ್ನ ದೇವರಾದ ಯೆಹೋವನೆಂಬ ನಾನು ನನಗೆ ಸಲ್ಲತಕ್ಕ ಗೌರವವನ್ನು ಮತ್ತೊಬ್ಬನಿಗೆ ಸಲ್ಲಗೊಡಿಸದವನಾದ್ದರಿಂದ... (ವಿಮೋ. 20:2–5) ಮತ್ತು ಪುನಃ,

"ನಾನೇ ಯೆಹೋವನು; ಇದೇ ನನ್ನ ನಾಮವು; ನನ್ನ ಮಹಿಮೆಯನ್ನು ಮತ್ತೊಬ್ಬನಿಗೆ ಸಲ್ಲಗೊಡಿಸೆನು. ನನ್ನ ಸ್ತೋತ್ರವನ್ನು ವಿಗ್ರಹಗಳ ಪಾಲು ಮಾಡೆನು" (ಯೆಶಾಯ 42:8)

ವಿಗ್ರಹಗಳಾಗಲಿ ಪ್ರತಿಕೃತಿಗಳಾಗಲಿ, ಅವು ಎರಕದವುಗಳಾಗಲಿ ಅಥವಾ ಇನ್ನಾವುದೇ ಆಗಲಿ, ಅವುಗಳ ಗುರಿಯು ಯಾವಾಗಲೂ ಆರಾಧನೆಯ ಉದ್ಧೇಶವಾಗಿರುವುದಿಲ್ಲ. ಹಲವು ಸಾರಿ ಅವು ಕೇವಲ ಮಾನುಷ ಬಾಹುವು ಆತುಕೊಳ್ಳಲು ಸಾಧನವಾಗುವ ಒಂದು ಉದ್ಧೇಶಕ್ಕಾಗಿ ಇರುವಂತಹವುಗಳು. ಅವುಗಳು ದೇವರು ಮೆಚ್ಚುವ ನಂಬಿಕೆಯನ್ನು ಬೆಳೆಸಲು ಹಿಂದೆಂದೂ ಸಹಾಯಕವಾಗಿ ಇರಲಿಲ್ಲ. ಮುಂದೆಂದಿಗೂ ಇರುವುದಿಲ್ಲ. ಆದರೆ, ಇದಕ್ಕೆ ತದ್ವಿರುದ್ಧವಾಗಿ, ಅವುಗಳು ಯಾವಾಗಲೂ ಅದರ (ನಂಬಿಕೆಯ) ಮೂಲತತ್ವಗಳಿಗೆ ಕೇವಲ ಹಾನಿಯುಂಟು ಮಾಡುವಂತವುಗಳು ಆಗಿವೆ.

ಮೋಶೆಯನ್ನು ಅವರ ನಡುವೆಯಿಂದ ತೆಗೆಯಲ್ಪಟ್ಟದ್ದು, ದೇವರು ಇಸ್ರಾಯೇಲ್ಯರಿಗೆ ತಮ್ಮ ನಂಬಿಕೆಯನ್ನು ಅಭ್ಯಾಸಿಸಿ ತೋರ್ಪಡಿಸಲು ಒದಗಿಸಿದ ಒಂದು ಅವಕಾಶ. ಇದೆಂತಹ ಒಂದು ಸೌಭಾಗ್ಯ! ಅವರು ಅದರಂತೆ ನಡೆದುಕೊಂಡರೋ? ಅಯ್ಯೋ, ಇಲ್ಲ! ಆತ್ಮೀಕ ಇಸ್ರಾಯೇಲ್ಯರೇನೂ ಇದಕ್ಕೆ ಹೆಚ್ಚಾದ ಘನತೆ ಗೌರವಗಳಿಂದ ಸ್ಪಂದಿಸಲಿಲ್ಲ. ಈ (ಸುವಾರ್ತಾ) ಯುಗದ ಆರಂಭದಲ್ಲಿ, ಅಪೋಸ್ತಲರು ಸಭೆಯೊಂದಿಗೆ ಉಪಸ್ಥಿತರಾಗಿದ್ದು ಅದರ ಗಮನವನ್ನು ದೇವರ ಕಡೆಗೆ ತಿರುಗಿಸುವುದನ್ನು ತಪ್ಪದೇ ಮಾಡುತ್ತಿದ್ದರು. ಆದರೆ ಅಪೋಸ್ತಲರು ನಿದ್ರೆ ಹೋಗುವ ಸಮಯ ಬಂದಿತು. ಆಗ ಅಲ್ಲಿ ಸಭೆಗೆ ಅಪೋಸ್ತಲರು ಸಾರಿ ತಿಳಿಸಿದ ಅದೃಶ್ಯನಾದ ದೇವರ ಮೇಲೆ ನಂಬಿಕೆಯನ್ನು ತೋರ್ಪಡಿಸುವ ಸದಾವಕಾಶ ಬಂದೊದಗಿತು; ಆದರೆ ಅದೂ ಸಹ ಶಾರೀರಿಕ ಇಸ್ರಾಯೇಲ್ಯರಂತೆ – "ನಮಗೆ ದೇವರುಗಳನ್ನು ಮಾಡಿಕೊಡು" ಎಂದು ಕೂಗಿತು.

ಅಯ್ಯೋ! ಅಯ್ಯೋ! ಮಾನವ ಇತಿಹಾಸದಲ್ಲಿ ಯಾವಾಗಲೂ ಹೀಗೆಯೇ ಆಗಿದೆ. ಮಾನವ ಹೃದಯವು ಪ್ರೀತಿಸುವುದು ಕಾಣಲು ಸಾಧ್ಯವಾಗುವಂತ ಸಂಗತಿಯನ್ನು; ತನ್ನ ಇಂದ್ರಿಯದ ಬಯಕೆಗಳನ್ನು ತೀರಿಸಿ ತೃಪ್ತಿ ಕೊಡುವುದನ್ನು ಅದು ಪ್ರೀತಿಸುತ್ತದೆ; ಅದೃಶ್ಯನಾಗಿರುವಾತನನ್ನು ನೋಡುವುದಕ್ಕಾಗಿ ತಾಳಿಕೊಂಡಿರುವುದನ್ನು ಸಾಧ್ಯವಾಗಿಸುವುದು ನಂಬಿಕೆ ಮಾತ್ರವೇ. ಆದ್ದರಿಂದ ಎಲ್ಲಾ ಕಾಲಗಳಲ್ಲೂ ಮನುಷ್ಯರು ದೈವೀಕ ಸತ್ಯತೆಗಳನ್ನು ಮಾನವ ಶೈಲಿಯಲ್ಲಿ ಅನುಕರಣೆ ಮಾಡುವ ವ್ಯವಸ್ಥೆ ಮಾಡಿ ಅವುಗಳನ್ನು ಆತುಕೊಳ್ಳುವುದರಲ್ಲಿ ಮುಂದಾಗುತ್ತಾರೆ. ಹೀಗಾಗಿ ನಮ್ಮ ಕಣ್ಣಿನ ಮುಂದೆ ಸತ್ಯ ಬ್ರಷ್ಟವಾದ ನಕಲಿ ಧಾರ್ಮಿಕ ಪಂಥಗಳು ಬಹು ಸಂಖ್ಯೆಯಲ್ಲಿ ಬರುತ್ತಿರುವುದನ್ನು ನೋಡುತ್ತಿದ್ದೇವೆ. ನಾವು ದೇವರ ವಾಕ್ಯಾಧಿಕಾರದಿಂದ ಯಾವುದನ್ನು ದೈವೀಕವಾಗಿ ಹಾಗೂ ಪಾರಮಾರ್ಥಿಕವಾಗಿ ಸತ್ಯವಾದವುಗಳೆಂದು ತಿಳಿದಿದ್ದೇವೋ, ಅವುಗಳನ್ನು ಈ ತೋರಿಕೆಯ ಕ್ರೈಸ್ತ ಸಭೆಗಳು ಲೌಕಿಕ ರೀತಿಯಲ್ಲಿ ಮಾನವನು ಅನುಕರಣೆ ಮಾಡುವುದಕ್ಕೆ ಮಾರ್ಪಡಿಸಿವೆ. ದೇವರ ಅದೃಶ್ಯ ಬಾಹುವನ್ನು ಆತುಕೊಂಡು, ಕಣ್ಣಿಗೆ ಕಾಣದಿರುವ ಯಜ್ಞಗಳಲ್ಲಿ ಭರವಸೆ ಇಟ್ಟು, ಒಬ್ಬ ಅದೃಶ್ಯ ಯಾಜಕನ ಆಸರೆ ಮಾಡಿಕೊಂಡು, ಅಗೋಚರ ಶಿರಸ್ಸಿನ ಮಾರ್ಗದರ್ಶನಕ್ಕೆ ತನ್ನನ್ನು ಬದ್ಧಳಾಗಿ ಮಾಡಿಕೊಳ್ಳುವುದರಲ್ಲಿ ಬಳಲಿ ಹೋಗಿ, ಆಕೆ ಈಗ ಕಣ್ಣಿಗೆ ಕಾಣುವವುಗಳನ್ನು ರೂಪಿಸುವುದಕ್ಕೆ ತೊಡಗಿದ್ದಾಳೆ. ಹೀಗೆ ಆಕೆ ಕಾಲಾನುಕಾಲದಿಂದಲೂ ಎರಕದ ಉಪಕರಣಗಳನ್ನು ಕೈಯಲ್ಲಿ ಹಿಡಿದುಕೊಂಡು ಒಂದಾದ ಮೇಲೆ ಒಂದರಂತೆ ವಸ್ತು ವಿಷಯಗಳನ್ನು ಎರಕ ಮಾಡಿ ಅವುಗಳಿಗೆ ರೂಪ ಕೊಡುವ ಕಾರ್ಯಗಳಲ್ಲಿ ಮಗ್ನಳಾಗಿ–ದ್ದಾಳೆ. ಇದು ಎಲ್ಲಿಯವರೆಗೆ ನಡೆದಿದೆ ಎಂದರೆ – ನಮ್ಮ ಸುತ್ತಲೂ ನಡೆಯುತ್ತಿರುವ ಸಂಗತಿಗಳಿಗೂ ದೇವರ ವಾಕ್ಯದಲ್ಲಿ ನಾವು ಓದುವ ಸಂಗತಿಗಳಿಗೂ ಯಾವ ವ್ಯತ್ಯಾಸವನ್ನೂ ಗುರುತಿಸಲಾಗದ ಹಂತಕ್ಕೆ, ಆ ಎರಕದ ಬಸವನಿಗೂ ಮತ್ತು ಇಸ್ರಾಯೇಲ್ಯರ ದೇವರಿಗೂ ಇರುವ ವ್ಯತ್ಯಾಸವನ್ನು ಇಸ್ರಾಯೇಲ್ಯರು ಗ್ರಹಿಸಲಾರದ ಮಟ್ಟಿಗೆ ಅವು ಹೋಗಿರುತ್ತವೆ.

ಈಗಾಗಲೇ ಸೂಚಿಸಿರುವ ಹಾಗೆ, ಹಿಂದಿದ್ದ ಇಸ್ರಾಯೇಲ್ಯರಿಗೆ (ಆತುಕೊಳ್ಳಲು) ಮೋಶೆಯು ಬಹು ಕಾಲ (ದೇವರ ಕಾರ್ಯಗಳಿಗೆ) ಒಂದು ಊರುಗೋಲಾಗಿ ಕಾರ್ಯ ನಿರ್ವಹಿಸಿದ್ದನು. ಈಗ ಅವರ ಸಮ್ಮುಖದಿಂದ ಆತನು ಹೊರಟು ಹೋಗಿರಲಾಗಿ, ಅವರು ಈ ವಿಷಯದಲ್ಲಿ ದೇವರನ್ನು ಸರಿಯಾಗಿ ಎದುರು ನೋಡುವ ಬದಲು, ಅವರು (ಆತುಕೊಳ್ಳಲು) ಬೇರೊಂದು ಊರುಗೋಲಿಗಾಗಿ ಕೂಗಿಕೊಂಡರು. ಇದು ದೇವರ ಕೃಪಾನುಗ್ರಹಕ್ಕೆ ವಿರುದ್ಧ ಬಹಿರಂಗವಾದ ತಿರಿಗಿ ಬೀಳುವಿಕೆ ಎಂಬುದನ್ನು ಅವರು ಅರಿಯದಿದ್ದರು. ಹೀಗಿರುವಲ್ಲಿ ಅವರು ಎಂದಾದರೂ ಹೇಗೆ ಆತನ "ಸ್ವಕೀಯ ಜನವಾಗುತ್ತಿದ್ದರು?"

ಈಗ ಅವರ ಕೂಗು ಎದ್ದದ್ದು ಯಾರಿಗೋಸ್ಕರ ಎನ್ನುವುದು ಗಮನದಲ್ಲಿರಲಿ, ಆರೋನನಿಗೆ!!! ಮೋಶೆಯು ತನಗೆ ದೇವರ ವಾಗ್ದಾನವನ್ನು ಪೂರ್ಣವಾಗಿ ನಂಬಿ

ಮುನ್ನಡೆಯಲು ಸಾಮರ್ಥ್ಯವಿಲ್ಲವೆಂದು ಅನಿಸಿದಾಗ ಆರೋನನನ್ನೇ ಆತನಿಗೆ ಒಂದು ಊರುಗೋಲನ್ನಾಗಿ ಒದಗಿಸಲಾಯಿತು. ವಿಮೋಚನಾಕಾಂಡ 3:11, 12. 4:10–17 ನೋಡಿ. ಆ ಸಮಯದಲ್ಲಿ ಮೋಶೆಯು ಈ ಊರುಗೋಲನ್ನು ಉಪಯೋಗ ಮಾಡಿಕೊಳ್ಳಲಿಲ್ಲ ಎಂಬುದು ನಿಜ. ಆದರೆ ಇದು ಇಸ್ರಾಯೇಲ್ಯರಿಗೆ ಒಂದು ಪರೀಕ್ಷೆಯಾಗಿರಲು ಬಿಡಲ್ಪಟ್ಟಿತ್ತು. ಈ ಪರಿಸ್ಥಿತಿಯ ಲಾಭವನ್ನು ವಿರೋಧಿಯು (ಸೈತಾನನು) ಎಷ್ಟು ಬೇಗನೆ ಪಡೆದುಕೊಂಡನೆಂಬುದನ್ನು ಇಲ್ಲಿ ಗಮನಿಸಿ.

"ಅದಕ್ಕೆ ಆರೋನನು – ನಿಮ್ಮ ಹೆಂಡರೂ ಗಂಡು ಮಕ್ಕಳೂ ಹೆಣ್ಣು ಮಕ್ಕಳೂ ಕಿವಿಗೆ ಹಾಕಿಕೊಂಡಿರುವ ಚಿನ್ನದ ಮುರುವುಗಳನ್ನು ನೀವು ಕಿತ್ತು ನನಗೆ ಒಪ್ಪಿಸಿರಿ ಎಂದು ಹೇಳಲಾಗಿ ಜನರೆಲ್ಲರೂ ತಮ್ಮ ಕಿವಿಗಳಲ್ಲಿದ್ದ ಮುರುವುಗಳನ್ನು ಕಿತ್ತು ಆರೋನನ ಬಳಿಗೆ ತಂದು ಕೊಟ್ಟರು. ಅವನು ಆ ಚಿನ್ನವನ್ನು ತನ್ನ ವಶಕ್ಕೆ ತೆಗೆದುಕೊಂಡು ಬಸವನ ಆಕಾರವನ್ನು ಉಳಿಯಿಂದ ರೂಪಿಸಿ ಎರಕ ಹೊಯಿಸಲಾಗಿ ಅವರು – ಇಸ್ರಾಯೇಲ್ಯರೇ, ನೋಡಿರಿ; ಇದೇ ನಿಮ್ಮನ್ನು ಐಗುಪ್ತದೇಶದಿಂದ ಕರೆದುಕೊಂಡು ಬಂದ ದೇವರು ಎಂದು ಹೇಳಿದರು (ವಿಮೋ. 32:2–4)

ಮಾನವ ಹೃದಯವು ನುಣುಚಿಕೊಳ್ಳುವುದರಲ್ಲಿ ಎಷ್ಟು ತೀವ್ರವೂ ಮತ್ತು ವಂಚಕವೂ ಆಗಬಲ್ಲದು! ನಮ್ಮನ್ನೇ ನಾವು ನೋಡಿಕೊಳ್ಳೋಣ. ಅದೃಶ್ಯನಾಗಿದ್ದರೂ ಯಾವಾಗಲೂ ನಮ್ಮೊಂದಿಗೆ ಇರುವ ದೇವರ ಮೇಲಿನ ನಂಬಿಕೆಯ ಮೂಲಕವಾಗಿ ನಾವು ಕೃಪಾನುಗ್ರಹಗಳಲ್ಲಿ ಬೆಳೆಯುವ ಹಾಗೆ (ಆತು ಕೊಳ್ಳಲು) ನಮ್ಮ ಊರುಗೋಲುಗಳನ್ನು ಹಲವು ಸಾರಿ ಆತನು ತೆಗೆದು ಹಾಕುವುದಿಲ್ಲವೇ! ಆಗ ನಾವು ಆತುಕೊಂಡ ನಮ್ಮ ಹಿಂದಿನ ಊರುಗೋಲುಗಳನ್ನು ತೆಗೆದುದರಿಂದಾದ ಉಂಟಾದ ಶೂನ್ಯವನ್ನು (ಮಾನಸಿಕ) ಪ್ರತಿಮೆಗಳಿಂದಾಗಲಿ ಎರಕದ ಮೂರ್ತಿಗಳಿಂದಾಗಲೀ ತುಂಬುವ ಹಾಗೆ ನಾವು ದೇವರಿಗೆ ವಿರುದ್ಧವಾಗಿ ತಿರುಗಿಬಿದ್ದು ಹೇಗೆ ಆತನಿಗೆ ಕೂಗಿಕೊಂಡಿದ್ದೇವಲ್ಲವೇ. ನಮ್ಮ ಹೃದಯದ ಕೂಗುವಿಕೆಗೆ ಉತ್ತರವಾಗಿ, ನಾವು ಐಗುಪ್ತದಿಂದ ನಮ್ಮೊಂದಿಗೆ ತಂದಿದ್ದ ವಸ್ತುಗಳಿಂದ ನಾವು ಅವರಿಗೆ ಕೊಟ್ಟಿರುವ ಪ್ರತಿಯೊಂದು ಪದಾರ್ಥಗಳಿಂದಲೇ ನಮಗಾಗಿ "ಚಿನ್ನದ ಬಸವಗಳನ್ನು" ಉಂಟು ಮಾಡುವ ಇಲ್ಲವೇ ರೂಪಿಸಿ ಕೊಡುವ "ದೇವರ ಸೇವಕರುಗಳು(?)"ಯಾವಾಗಲೂ ಇರುತ್ತಾರೆಂಬುದು ನಮಗೆ ನಿಸ್ಸಂದೇಹವಾಗಿರಲಿ. (ವಿಮೋ. 3:22) ಇದು ಎಷ್ಟು ಮಹತ್ವದ್ದಾಗಿದೆ!

ಆರೋನನು ಮೊದಲು ಇಸ್ರಾಯೇಲ್ಯರ ಬೇಡಿಕೆಗಳಿಗೆ ಪೂರ್ಣವಾಗಿ ಸಮ್ಮತಿಸಿದ್ದನೆಂದು ನಾವು ಭಾವಿಸುವ ಅಗತ್ಯವಿಲ್ಲ. ಇದರ ವಿಷಯವಾಗಿ ಪಾಸ್ಟರ್ ರಸಲ್ಲರು R4022:3 ರಲ್ಲಿ ಹೇಳುತ್ತಾರೆ.

ಚಿನ್ನದ ಬಸವನನ್ನು ಮಾಡುವ ವಿಷಯದಲ್ಲಿ ಜನರೊಡನೆ ಆರೋನನು ಪೂರ್ಣ ಸಹನುಭೂತಿ ತೋರಿಸಿದ್ದನೆಂದು ನಾವು ಭಾವಿಸುವ ಹಾಗಿಲ್ಲ; ತಮ್ಮ ಬೇಡಿಕೆಯಲ್ಲಿ ಕಂಡುಬಂದ ಅತೃಪ್ತಿಯಿಂದ ಜನರು ದಂಗೆ ಏಳುವುದನ್ನು ಹತೋಟಿಯಲ್ಲಿ ಇಡಲು ಹೀಗೆ ಮಾಡುವುದು ಸಮಯೋಚಿತವಾದುದ್ದೆಂದು ಆರೋನನಿಗೆ ಚೆನ್ನಾಗಿ ತಿಳಿದಿತ್ತು ಮತ್ತು ಅದು ಚೆನ್ನಾಗಿ ಅರ್ಥವಾಗಿತ್ತು ಎಂದು ನಾವು ಭಾವಿಸಬೇಕು. ನಾವು ಊಹಿಸಬೇಕಾದದ್ದು ಏನೆಂದರೆ – ಹೀಗೆ ಅವರ ಬೇಡಿಕೆಯನ್ನು ಏನೂ ಹೇಳದೆ ಸ್ಪಷ್ಟವಾಗಿ ಒಪ್ಪಿಕೊಳ್ಳುವಲ್ಲಿ ಆರೋನನು ಮೋಶೆಯು ಹಿಂದಿರುಗಿ ಬರುವವರೆಗೆ ಸಮಯವನ್ನು ಕೊಂಡುಕೊಳ್ಳಲು ಮಾಡುತ್ತಿದ್ದ ಪ್ರಯತ್ನ. ಜನರು ತಮ್ಮ ಚಿನ್ನದ ಮುರುವುಗಳನ್ನು ಇತರ ಆಭರಣಗಳನ್ನು ತಂದುಕೊಡಲು ಕೇಳಿದ್ದು ಮೂಲದಲ್ಲಿ ಇದು ಕೇವಲ ಒಂದು ನೆಪ ಮಾತ್ರ; ಇದರಿಂದ ಜನರು ತಮ್ಮ ಆಭರಣಗಳನ್ನು ಕೊಡಲು ನಿರಾಕರಿಸುವರೆಂದೂ, ಆಗ ಅವನು – "ಸರಿ ಚಿನ್ನದಿಂದಲ್ಲದೆ ನಿಮಗೆ ದೇವರನ್ನು ಪ್ರತಿನಿಧಿಸುವಂತದ್ದನ್ನು ಮಾಡಿಕೊಡಲು ನನಗೆ ಸಾಧ್ಯವಿಲ್ಲ ಮತ್ತು ನೀವು ಆಭರಣಗಳನ್ನು ತ್ಯಾಗ ಮಾಡದ ಹೊರತು ಚಿನ್ನವು ನನ್ನಲ್ಲಿರುವುದಿಲ್ಲ" ಎಂದು ಹೇಳಿಬಿಡಬಹುದೆಂದು ನಿರೀಕ್ಷಿಸಿದ್ದನು. ಆದರೆ ಇಲ್ಲಿ ಅವನ ಉದ್ಧೇಶಗಳು ಎಷ್ಟೇ ಒಳ್ಳೆಯದಿದ್ದರೂ, ಇದರಲ್ಲಿ ನಮಗಿರುವ ಪಾಠವೆಂದರೆ ಅವನು ಹಿಡಿದ ದಾರಿ ಅನುಚಿತವಾದದ್ದು.

ನಾವು ಒಳ್ಳೆಯ ಫಲ ಬರುತ್ತದೆಂದು ಕೆಟ್ಟದ್ದನ್ನು ಮಾಡುವುದರಲ್ಲಿ ಎಂದೂ ರಾಜಿಯಾಗುವ ಹಾಗಿಲ್ಲ. ಆ ವಿವರಣೆಯಲ್ಲಿ ನಾವು ಓದುವುದೇನೆಂದರೆ:

"ಆರೋನನು ಅದನ್ನು ನೋಡಿ ಬಸವನಿಗೆ ಎದುರಾಗಿ ಯಜ್ಞವೇದಿಯನ್ನು ಕಟ್ಟಿಸಿ – ನಾಳೆ ಯೆಹೋವನಿಗೆ ಉತ್ಸವವಾಗಬೇಕೆಂದು ಪ್ರಕಟಿಸಿದನು." (ವಿಮೋ. 32:5)

"ಕೆಟ್ಟವುಗಳು ಒಂದಕ್ಕೊಂದು ಮುನ್ನಡೆಯುವಂತಹವುಗಳು; ಒಂದು ತಪ್ಪು ಇನ್ನೊಂದು ತಪ್ಪಿಗೆ ನಡೆಸುತ್ತದೆ. ಹೀಗೆ ಚಿನ್ನದ ಬಸವನನ್ನು ಮಾಡಿದ ನಂತರ ಮುಂದಿನ ಕ್ರಮದಲ್ಲಿ ಬರುವುದು ಯಜ್ಞವನ್ನು ಅರ್ಪಿಸಲು ಒಂದು ಚಿನ್ನದ ಯಜ್ಞವೇದಿ ಮಾಡುವುದು. ಆತ್ಮೀಕ ಇಸ್ರಾಯೇಲ್ಯರ ವಿಗ್ರಹಗಳ ವಿಷಯವಾಗಿಯೂ ಹೀಗೆಯೇ, ಒಂದು ಯಜ್ಞವೇದಿಯು ಅದರ ಯಜ್ಞಾರ್ಪಣೆಗಳನ್ನು ಸೂಚಿಸುತ್ತದೆ. ನಮ್ಮ ಹೃದಯಗಳಲ್ಲಿ ನಾವು ಯಾವುದನ್ನು ವಿಗ್ರಹವನ್ನಾಗಿ ಇಟ್ಟುಕೊಳ್ಳುತ್ತೇವೋ ಅವುಗಳಿಗೆ ಯಜ್ಞವನ್ನು ಅರ್ಪಿಸಬೇಕಿರುವುದು ಸಹಜವಾದ ಸಂಗತಿ. ಕೆಲವು ಹೃದಯಗಳಲ್ಲಿ ಹಲವು ವಿಗ್ರಹಗಳಿರಬಹುದು. ಬೇರೆಯದರಲ್ಲಿ ಕೆಲವು ಮಾತ್ರ ಇರಬಹುದು ಮತ್ತು ಒಬ್ಬ ಮನುಷ್ಯನು ಯಾವ ವಿಗ್ರಹವನ್ನು ಆರಾಧಿಸುವವನೆಂದು ನಿರ್ಧರಿಸುವುದು ಕಷ್ಟವಲ್ಲ. ಅರ್ಪಣೆಯಾಗುವ ಯಜ್ಞದ ಮೂಲಕವೇ ಆರಾಧನೆ ಯಾವುದಕ್ಕಾಗಿ ಎಂಬುದನ್ನು ತೋರಿಸಿ ಕೊಡುತ್ತದೆ. ಒಬ್ಬ ಪುರುಷನಾಗಲಿ ಸ್ತ್ರೀಯಾಗಲಿ ಯಾವ ವಿಷಯಕ್ಕಾಗಿ ತನ್ನ

ಅಮೂಲ್ಯ ಆಲೋಚನೆಗಳನ್ನು, ಅಮೂಲ್ಯ ಸಮಯವನ್ನು, ತನ್ನ ಮುಖ್ಯವಾದ ಪ್ರಭಾವ ಅಧಿಕಾರಗಳನ್ನು ಬಳಕೆ ಮಾಡುತ್ತಾನೋ ಅದನ್ನು ನಮಗೆ ತಿಳಿಸಿರಿ ಮತ್ತು ನಾವು ನಿಮಗೆ ಆತನು ಯಾವ ವಿಗ್ರಹಕ್ಕೆ ಹೆಚ್ಚಿನ ಗೌರವ ಕೊಡುತ್ತಾನೆ. ಮತ್ತು ಯಾವ ವಿಗ್ರಹಕ್ಕೆ ದೊಡ್ಡ ಯಜ್ಞವೇದಿಯನ್ನು ಕಟ್ಟಿದ್ದಾನೆ, ಮತ್ತು ಯಾವುದಕ್ಕೆ ಯಜ್ಞವನ್ನು ಅತಿ ಹೆಚ್ಚಾಗಿ ಅರ್ಪಿಸುತ್ತಿದ್ದಾನೆ ಎಂಬುದನ್ನು ನಿಮಗೆ ತಿಳಿಸುತ್ತೇವೆ.

ತಮ್ಮ ದೇವರಾದ ಯೆಹೋವನನ್ನು ದೇವರಸ್ಥಾನದಿಂದ ಬದಲು ಮಾಡುವ ಬಯಕೆಯಾಗಲಿ ಉದ್ಧೇಶವಾಗಲಿ ಇಸ್ರಾಯೇಲ್ಯರಿಗೆ ಇರಲಿಲ್ಲ ಎಂಬುದು ನಿಜವಾದರೂ ಸಾದೃಶ್ಯವಾಗಿ, ಮುಟ್ಟಿ ನೋಡಬಲ್ಲ ಆತನ ಪ್ರತಿನಿಧಿಯೊಬ್ಬರು ಬೇಕೆಂದು ಅವರು ಕೂಗಿಕೊಂಡಿದ್ದರು. ಈ ಬಯಕೆ ಉಗಮವಾದದ್ದು – ಅವರು ಐಗುಪ್ತದಲ್ಲಿ ದಾಸತ್ವದ ಶೋಷಣೆಯಲ್ಲಿ ಇರುವಾಗ, ಇತರ ದೇವರುಗಳು ಸಾಂಕೇತಿಕ ರೀತಿಯಲ್ಲಿ ಪ್ರತಿನಿಧಿಸಲ್ಪಟ್ಟಿ–ರುವುದನ್ನು ಅವರು ನೋಡಿದ್ದರಲ್ಲಿ – ಎಂಬುದನ್ನು ಸುಲಭವಾಗಿ ಪತ್ತೆ ಹಚ್ಚಬಹುದು. ಈ ಮಾರ್ಮಿಕ ಸತ್ಯವಿರುವುದು ಇಂದಲ್ಲಾ, ಮುಂದೆ ಎಂದಾದರೂ. ಅಗೋಚರನಾಗಿ ಸತ್ಯವಾಗಿರುವಾತನ ಪ್ರಭಾವ ಗುಣಾತಿಶಯಗಳನ್ನೆಲ್ಲವನ್ನು ಆತನ ಸದೃಶ್ಯ ಪ್ರತಿನಿಧಿಗಳಿಗೆ ಸಲ್ಲಿಸಲು ಮಾನವ ಹೃದಯವು ಸದಾ ಸಿದ್ಧವಿರುವುದು ಮತ್ತು ಹೀಗೆ ಕಲ್ಪನೆಯಾದ ಆಕೃತಿಗಳು ನಂತರದಲ್ಲಿ ವಿಗ್ರಹಗಳಾಗಿ ಸ್ವತಃ ಆರಾಧನೆಗೆ ಯೋಗ್ಯವಾದ ಅತಿ ಪವಿತ್ರವಾದವು ಎಂದು ಅವುಗಳು ಪರಿಗಣಿಸಲ್ಪಡುವುದು – ಎಂಬ ಅಂಶದಲ್ಲಿ. ಈ ಹಂತದಲ್ಲಿ ಕೇವಲ ಸತ್ಯವಾಗಿರುವಾತನಿಗೇ ಸಲ್ಲತಕ್ಕ ಸ್ತುತಿ ಮಹಿಮೆಗಳನ್ನು ಆ ವಿಗ್ರಹಗಳು ಪಾಲುಹೊಂದುತ್ತದೆ. ಮಾನವನ ಈ ಪ್ರವೃತ್ತಿಯನ್ನು ತಿಳಿದಿರುವ ದೇವರು ಶಾರೀರಿಕ ಇಸ್ರಾಯೇಲ್ಯರಿಗಿ ಯಾವುದೇ ಎರಕದ ಆಕೃತಿ ಅಥವಾ ಸಾದೃಶ್ಯ ವಸ್ತುಗಳ ರೂಪಗಳನ್ನು ಮಾಡದಂತೆ ನಿರ್ದಿಷ್ಟವಾಗಿ ನಿಷೇಧಿಸಿದ್ದರಲ್ಲಿ ಆಶ್ಚರ್ಯವೇನಲ್ಲ! (ವಿಮೋ. 20:4) ಈಗಾಗಲೇ ಉಲ್ಲೇಖಿಸಿರುವ ಯೆಶಾಯನ ಗ್ರಂಥದ 42:8 ರ ವಾಕ್ಯಭಾಗದ ಈ ಮಹತ್ವವಿರುವುದು ಖಂಡಿತವಾಗಿ ನಿಸ್ಸಂದೇಹ –– "ನಾನೇ ಯೆಹೋವನು; ಇದೇ ನನ್ನ ನಾಮವು; ನನ್ನ ಮಹಿಮೆಯನ್ನು ಮತ್ತೊಬ್ಬನಿಗೆ ಸಲ್ಲಗೊಡಿಸೆನು. ನನ್ನ ಸ್ತೋತ್ರವನ್ನು ವಿಗ್ರಹಗಳ ಪಾಲು ಮಾಡೆನು".

ತಮ್ಮ ಮೂಲ ಸ್ವರೂಪದಲ್ಲಿ ವಿಗ್ರಹದಂತೆ ಇಲ್ಲವೇ ಅದರ ಪ್ರತಿಮೆಗಳಂತೆ ಇರುವ ಸಂಸ್ಥೆಗಳು ಹಿಂದೆ ಇದ್ದಂತೆ ಈಗಲೂ ಸಹ ಇವೆ. ಅವು ಹಾಗಿದ್ದಾಗ್ಯೂ ಹಲವು ನಿಜರೂಪದ ಇಸ್ರಾಯೇಲ್ಯರ ಹೃದಯ ಮತ್ತು ಅಂತರಾಳದಲ್ಲಿ ದೇವರನ್ನು ಬದಲಿಸುವ ಕೆಲಸವನ್ನು ಮಾಡದಿದ್ದರೂ, ಕೇವಲ ಆತನೊಬ್ಬನಿಗೇ ಸಲ್ಲತಕ್ಕ ಭಯಭಕ್ತಿ ಗೌರವ ಮಹಿಮೆ ಸ್ತುತಿ ಮತ್ತು ಆರಾಧನೆಗಳಲ್ಲಿ ತಮಗೂ ಪಾಲು ಸಲ್ಲುವಂತೆ ಮಾಡಿಕೊಂಡಿವೆ. ಹೆಸರಿನ ಕ್ರೈಸ್ತ ಸಭೆಗಳು ಇಂತಹ ಸಂಸ್ಥೆಗಳಲ್ಲಿ ಒಂದು. ಮೋಶೆಗೆ ಬಾಯಾಗಿದ್ದ ಆರೋನನು ಛಾಯಾರೂಪದಲ್ಲಿದ್ದ ಇಸ್ರಾಯೇಲ್ಯರಿಗೆ ಚಿನ್ನದ ಬಸವನನ್ನು ಮಾಡಿಕೊಟ್ಟ ಹಾಗೆ ಈಗಿನ ಅರೋನನಂತಿರುವ (ಸಭೆಗೆ ಬಾಯಾಗಿಯೂ ಇರುವ) ಸಭಾ ಸೇವಕ ವರ್ಗದವರೂ ಸಹ ನಿಜರೂಪ

ಇಸ್ರಾಯೇಲ್ಯರಿಗೆ ಚಿನ್ನದ ಬಸವನನ್ನು ಮಾಡಿಕೊಟ್ಟಿದ್ದಾರೆ. ಬೆಟ್ಟದಿಂದ ಇಳಿದು ಬಂದ ನಿಜರೂಪದ ಮೋಶೆಯು ಈ ಚಿನ್ನದ ಬಸವನನ್ನು ನಾಶ ಮಾಡುವುದಕ್ಕೆ ಪ್ರಾರಂಭಿಸಿರು–ವುದು ನಮಗೆ ಸಂತೋಷವಾಗಿದೆ. "ಯೆಹೋವನು ಹೇಳಿದಂತೆಯೇ ಮಾಡುವೆವು" ಎಂದು ಘೋಷಿಸಿರುವ ನಾವಾದರೋ ನಮ್ಮ ಪ್ರತಿಷ್ಠಿತ ಜೀವಿತದ ನಿಷ್ಠೆ ಮತ್ತು ನಂಬಿಗಸ್ತತೆಯನ್ನು ದೇವರೊಬ್ಬರಿಗೆ ಮಾತ್ರವೇ ಸಲ್ಲಿಸಲು ಎಚ್ಚರಿಕೆಯಿಂದಿರೋಣ. ದೇವರನ್ನು ಆರಾಧಿಸಬೇಕೆಂದರೆ, ಕೆಲವು ನಿರ್ಧಿಷ್ಟ ಸಹೋದರ ಅಥವ ಸಹೋದರಿಯನ್ನು ಕೆಲವು ನಿರ್ದಿಷ್ಟ ಗುಂಪಿಗೆ, ಕೆಲವು ನಿರ್ದಿಷ್ಟ ತರಗತಿಗೆ, ನಿಗಮಕ್ಕೆ, ಸಂಸ್ಥೆಗೆ ಅಥವಾ ಸಮಾಜಕ್ಕೆ ನಮ್ಮ ಗೌರವಾರ್ಪಣೆಯು ಅಂಗೀಕಾರವಾಗುವುದಕ್ಕೆ ಇವರೇ ಮೂಲ ಎಂಬಂತೆ ಮನ್ನಣೆ ನೀಡಬೇಕು ಎಂಬುದಾಗಿ ಗ್ರಹಿಸಿ ತಪ್ಪು ಮಾಡದೇ ಇರೋಣ. ಇದಕ್ಕೆ ವಿರೋಧವಾಗಿ ನಮ್ಮ ದೇವರು, ಪ್ರೇಮಶಮೆಯುಳ್ಳ ದೇವರಾಗಿದ್ದಾರೆ ಮತ್ತು ಆತನು ನೇರವಾಗಿ ಆತನನ್ನು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕೆಂದು ಮತ್ತು ಆತನ ಚಿತ್ತ ಮಾತ್ರವೇ ಪರಿಗಣಿಸಬೇಕೆಂದು ಅಪೇಕ್ಷಿಸುತ್ತಾನೆ. ಇದು ದೇವರ ಮಕ್ಕಳೆಂದು ಹೇಳಿಕೊಳ್ಳುವ ಅನೇಕರಿಂದ ನಮ್ಮನ್ನು ಬೇರ್ಪಡಿಸಬಹುದು. ಆದರೆ ಹಾಗೆಯೇ ಮಾಡುವುದರಿಂದ ನಾವು ಆತನಿಗೆ ಒಂದು ವಿಶೇಷ ನಿಧಿಯಂತೆ (ಸ್ವಕೀಯ ಜನಾಂಗದಂತೆ) ಇರುವೆವು.

ಪ್ರಿಯ ಕರ್ತನೇ, ನಮಗಾಗಿ ವಿಗ್ರಹಗಳನ್ನು ನಾವು ಮಾಡಿಕೊಳ್ಳದಂತೆ ನಮ್ಮನ್ನು ಕಾಪಾಡಿ ರಕ್ಷಿಸು.!

"ನಾವು ನಂಬಿಕೆಯಿಂದ ಬದುಕುವುದಕ್ಕಾಗಿ ಕರೆಯಲ್ಪಟ್ಟಿದ್ದೇವೆ; ನಮ್ಮ ಶಾರೀರಿಕ ಕಣ್ಣುಗಳಿಂದ ಯಾವುದನ್ನೂ (ಆತ್ಮೀಕ ವಿಷಯಗಳನ್ನು) ಕಾಣಲು ಸಾಧ್ಯವಿಲ್ಲ. ಯೇಸುವು ಮೇಲಕ್ಕೆ ಒಯ್ಯಲ್ಪಟ್ಟಿದ್ದಾನೆ ಮತ್ತು ನಾವು ಆತನ ಬರುವಿಕೆಗೆ ತಾಳ್ಮೆಯಿಂದ ಕಾದಿರಬೇಕೆಂದು ನಮಗೆ ಹೇಳಲಾಗಿದೆ. ಪವಿತ್ರಾತ್ಮನ ಬಲದ ಮೂಲಕ ನಮ್ಮ ಹೃದಯಾಂತರಾಳಕ್ಕೆ ದೇವರ ವಾಕ್ಯವು ಒಯ್ಯಲ್ಪಟ್ಟಿದೆ; ಈಗಿನ ಮತ್ತು ಮುಂದಿನ ಕಾಲಗಳ ಭೌತಿಕ ಇಲ್ಲವೇ ಆತ್ಮೀಕ ವಿಷಯವಾಗಿ ನಮಗಿರುವ ಬರವಸೆಗೆ ಈ ವಾಕ್ಯಗಳೇ ಆಧಾರ. ಕ್ರಿಸ್ತನು ಮಾಡಿದ ಬಲಿದಾನವು ಪೂರ್ಣಗೊಂಡಿದೆ ಎಂದು ಆತನು ಹೇಳುತ್ತಾನೆ; ಮತ್ತು ನಾವು ಅದನ್ನು ನಂಬಿ ಆ ಬಲಿದಾನದ ಯಜ್ಞ ಫಲವು ನಮ್ಮಲ್ಲಿ ತನ್ನ ಕಾರ್ಯ ಸಾಧಿಸುವುದಕ್ಕೆ ನಮ್ಮ ಪ್ರಾಣಾತ್ಮಗಳನ್ನು ದೇವಕೃಪಾಧೀನರಾಗಿ ಒಪ್ಪಿಸಿಕೊಟ್ಟಿದ್ದೇವೆ. ಹಾಗೂ ಈ ವಿಷಯದಲ್ಲಿ ನಮ್ಮಲ್ಲಿ ಗೊಂದಲವೇನೂ ಇಲ್ಲವೆಂದು ತಿಳಿದಿದ್ದೇವೆ. ಶ್ರೇಷ್ಠ ಮಹಾ ಯಾಜಕನೂ ದೇವಕುಮರಾರನೂ ಆಗಿರುವ ಯೇಸುವು ಪರಲೋಕಕ್ಕೆ ಏರಿ ಹೋಗಿದ್ದಾನೆಂದು ಆತ್ಮನು ನಮಗೆ ಹೇಳಿದ್ದಾನೆ. ಯೇಸುವು ನಮ್ಮ ಪರವಾಗಿ ಮಾಡುವ ವಿಜ್ಞಾಪನೆಗಳು ಬಹು ಬಲವುಳ್ಳವುಗಳಾಗಿದ್ದು. ಆತನು ನಮ್ಮನ್ನು ಸಂಪೂರ್ಣವಾಗಿ ರಕ್ಷಿಸುವನೆಂದು ತಿಳಿದು. ಕೃಪಾಧೀನರಾಗಿ ಅದನ್ನು ನಂಬಿ, ಆತನ ಸಾಮರ್ಥ್ಯವನ್ನು ಪೂರ್ಣ ವಿಶ್ವಾಸದಿಂದ ಆತುಕೊಂಡಿದ್ದೇವೆ. ತನ್ನ ಪುನರುತ್ಥಾನವಾದ ಶಕ್ತಿಯಿಂದ (ಸಭೆಗೆ) ಸಜೀವವಾದ

ಶಿರಸ್ಸಾಗಿರುವಾತನಿಗೆ ನಾವು ಜೋಡಿಸಲ್ಪಟ್ಟಿರುವುದಾಗಿ ಆತ್ಮನು ಹೇಳಿದ್ದಾನೆ. ದೇವದೂತರ ಯಾವ ಶಕ್ತಿ ಪ್ರಭಾವವೇ ಆಗಲಿ. ಮನುಷ್ಯರೇ ಆಗಲಿ, ಅಥವಾ ದುಷ್ಟ ಶಕ್ತಿಗಳದೇ ಆಗಿರಲಿ, ಇವು ಯಾವುದೂ ನಮ್ಮನ್ನು ಆ ಶಿರಸ್ಸಿನಿಂದ ಬೇರ್ಪಡಿಸಲಾರವು. ನಾವು ಕೃಪಧೀನರಾಗಿ ಸರಳವಾದ ನಂಬಿಕೆಯಿಂದ ಕೂಡಿ ಆಶೀರ್ವಾದವುಳ್ಳ ಶಿರಸ್ಸನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದು. ನಾವು ಎಂದಿಗೂ ನಾಶವಾಗಲಾರೆವೆಂದು ತಿಳಿದಿದ್ದೇವೆ. ಲಯ ಕಳಂಕ ಕ್ಷಯಗಳಿಲ್ಲದ ಬಾಧ್ಯತೆ ನಮಗಾಗಿ ಪರಲೋಕದಲ್ಲಿ ಕಾದಿರಿಸಲಾಗಿದೆಯೆಂದೂ, ಅದು ನಮಗೆ ದೊರೆಯಬೇಕೆಂದು ದೇವರು ತನ್ನ ಬಲದಿಂದ ಕಾಯುತ್ತಿದ್ದಾನೆಂದು ಆತ್ಮನು ಹೇಳಿದ್ದಾನೆ. ಕೃಪೆಯ ಮೂಲಕ ನಾವು ಸೂಕ್ತ ಸಮಯದಲ್ಲಿ ಅಲ್ಲಿಗೆ ಸೇರುವೆವೆಂದು ನಂಬಿದ್ದು; ಇದರಲ್ಲಿ ನಮಗೆ ಯಾವ ಗೊಂದಲವೂ ಇರುವುದಿಲ್ಲ.

"ಹೀಗಿರುವ ಸಂಗತಿಗಳು, ಏನಿಲ್ಲವೆಂದರೂ ಕನಿಷ್ಠ ಪಕ್ಷದಲ್ಲಿ, ನಮ್ಮ ದೇವರು ಅದನ್ನು ಈ ರೀತಿಯಾಗುವಂತೆ ಮಾಡಿದ್ದಾನೆ. ಆದರೂ ವಾಸ್ತವಿಕವಾದ ಈ ದೈವೀಕ ಸತ್ಯತೆಗಳ ವಿಷಯಗಳಿಂದ ನಮ್ಮನ್ನು ದೂರ ಮಾಡಿ, ನಾವು ಅಪನಂಬಿಕೆ ಎಂಬ ಎರಕದ ಉಪಕರಣವನ್ನು ತೆಗೆದುಕೊಂಡು, ನಾವೇ ಸ್ವತಃ ನಮಗಾಗಿ ದೇವರುಗಳನ್ನು ಮಾಡಿಕೊಳ್ಳುವಂತೆ, ವೈರಿಯಾದ ಸೈತಾನನು ಯಾವಾಗಲೂ ಪ್ರಯತ್ನಿಸುತ್ತಿರುತ್ತಾನೆ. ಹೀಗಿರುವಲ್ಲಿ ಆತನಿಗೆ ವಿರೋಧವಾಗಿ ನಾವು ಎಚ್ಚರಿಕೆಯಾಗಿರೋಣ; ಆತನ ವಿರುದ್ಧ ಎಚ್ಚರಿಕೆಯಾಗಿರುವುದಕ್ಕಾಗಿ ಪ್ರಾರ್ಥಿಸೋಣ; ಆತನಿಗೆ ವಿರುದ್ಧವಾದ ನಂಬಿಕೆಯಲ್ಲಿರೋಣ. ಆತನ ವಿರುದ್ಧವಾಗಿ ಸಾಕ್ಷಿ ಹೇಳೋಣ. ಆತನ ವಿರುದ್ಧವಾಗಿ ಕ್ರಿಯಾಶೀಲರಾಗೋಣ. ಹೀಗೆ ಆತನು ಗೊಂದಲಕ್ಕೀಡಾಗುವನು. ಇದರಿಂದ ದೇವರಿಗೆ ಮಹಿಮೆಯುಂಟಾಗಿ, ಈ ಮೂಲಕ ನಾವು ಹೇರಳವಾದ ಆಶೀರ್ವಾದವನ್ನು ಹೊಂದುವವರಾಗೋಣ.

ನಾವು ಈಗ ಈ ಪಾಠವನ್ನು ಆತ್ಮೀಕ ಇಸ್ರಾಯೇಲ್ಯರಿಗೆ ಅನ್ವಯ ಮಾಡೋಣ. ಕ್ರೈಸ್ತನು ಲೋಕ, ಪಾಪ, ದಾಸತ್ವಗಳನ್ನು ಬಿಟ್ಟು, ಮಾರಾ ಎಂಬ ಕಹಿ ಅನುಭವಗಳ ಸ್ಥಳವನ್ನು ದಾಟಿ, ದೇವರ ಕೃಪಾನುಗ್ರಹಗಳ ಸವಿ ನೋಡಿ, ಪರಲೋಕದಿಂದ ಇಳಿದುಬಂದ ರೊಟ್ಟಿಯಲ್ಲಿ ಪಾಲನ್ನು ತೆಗೆದುಕೊಂಡು, ದೇವರ ಒಡಂಬಡಿಕೆಯಲ್ಲಿ ಪೂರ್ಣವಾಗಿ ಭಾಗಿಯಾದ ನಂತರ, ಆತನಿಗೆ – ನೋಡಿ ನಡೆಯದೆ ತಾನು ನಂಬಿ ನಡೆಯುವ ಕಾಲವು ಬರುತ್ತದೆ. ಆತನು ದೇವರಿಂದ ಈ ರೀತಿಯಲ್ಲಿ ಶಿಕ್ಷಿತನಾಗುತ್ತಿರುತ್ತಾನೆ. ಈ ಪಾಠಗಳನ್ನು ಕಲಿಯುವುದರಲ್ಲಿ, ಶಾರೀರಿಕ ಇಸ್ರಾಯೇಲ್ಯರಂತೆ ಆತನು ವಿಫಲನಾದಲ್ಲಿ, ಅದು ಆತನಿಗೆ ಒಂದು ಗಂಭೀರವಾದ ವಿಷಯವಾಗುತ್ತದೆ.

"ಯಾವ ಕ್ರೈಸ್ತನೇ ಆಗಲಿ ಖುದ್ದಾಗಿ ಆತನು ಚಿನ್ನದ ವಿಗ್ರಹ ರೂಪಗಳನ್ನು ಮಾಡಿಕೊಳ್ಳುವ ಅಪಾಯದಲ್ಲಿ ಇರುತ್ತಾನೆಂದು ಸೂಚಿಸಿ ಹೇಳುವುದು ನಮ್ಮ ಅರ್ಥವಲ್ಲ. ಹೀಗಿರುವಲ್ಲಿ ಇಂತಹ ಮೂರ್ತಿರೂಪಗಳನ್ನು ಮಾಡಿಕೊಳ್ಳುವ ವಿಷಯಗಳು ಮತ್ತು

ಅವುಗಳು ನಮ್ಮ ದೇವರನ್ನು ಆರಾಧಿಸುವುದರಿಂದ ನಮ್ಮ ಮನಸ್ಸನ್ನು ತಿರುಗಿಸುವ ಹಾಗೆ ಮಾಡುವಂತಹ ವಿಷಯಗಳು, ಆತ್ಮೀಕ ಇಸ್ರಾಯೇಲ್ಯರಿಗೆ ಬರುವ ಅತಿ ತೀಕ್ಷಣವಾದ ಪರೀಕ್ಷೆ ಪರಿಶೋಧನೆಗಳಲ್ಲಿ ಇದು ಒಂದೆಂಬುದು, ಇಲ್ಲಿ ನಮ್ಮ ಅರ್ಥ.

## ಭಾಗ–9

# ಮೋಶೆಯ ಮಧ್ಯಸ್ಥಿಕೆಯ ಫಲವಾಗಿ ಇಸ್ರಾಯೇಲ್ಯರು ನಾಶನದಿಂದ ಪಾರಾದುದು

ವಿಮೋಚನಾಕಾಂಡ 32:7–29, 32

ಮೋಶೆಯು "ದೇವಗಿರಿಯ" ಮೇಲಿನಲ್ಲಿ ಇದ್ದುಕೊಂಡು ಇಸ್ರಾಯೇಲ್ಯರ ಪರವಾಗಿ ಇನ್ನೂ ಬೇಡುತ್ತಿರುವಲ್ಲಿ; ನಾವು ಹಿಂದಿನ ಪಾಠದಲ್ಲಿ ನೋಡಿದ ಹಾಗೆ, ಕೆಳಗೆ ಅವರು ಆರೋನನು ತಮ್ಮ ಕೋರಿಕೆಯಂತೆ ಮಾಡಿ ನಿಲ್ಲಿಸಿದ ಚಿನ್ನದ ಬಸವನ ಮುಂದೆ ತಮ್ಮನ್ನು ಮಲಿನ ಮಾಡಿಕೊಳ್ಳುತ್ತಿದ್ದರು.

ಅಲ್ಲಿ ಏನು ನಡೆಯುತ್ತಿತ್ತು ಎನ್ನುವ ಬಗ್ಗೆ ದೇವರಿಗೆ ಸಂಪೂರ್ಣ ಅರಿವಿತ್ತು ಎಂಬುದನ್ನು ಹೇಳುವ ಅಗತ್ಯವಿಲ್ಲ. ಯಾಕೆಂದರೆ ಆತನು ಮೋಶೆಗೆ ಹೇಳಿದ್ದು – "ನೀನು ಬೆಟ್ಟದಿಂದ ಇಳಿದು ಹೋಗು; ಐಗುಪ್ತ ದೇಶದಿಂದ ನೀನು ಕರಕೊಂಡ ಬಂದ ನಿನ್ನ ಜನರು ಕೆಟ್ಟು ಹೋದರು. ನಾನು ಅವರಿಗೆ ಆಜ್ಞಾಪಿಸಿದ ಮಾರ್ಗವನ್ನು ಅವರು ಬೇಗನೇ ಬಿಟ್ಟುಹೋಗಿ ತಮಗೆ ಲೋಹದ ಬಸವನನ್ನು ಮಾಡಿಕೊಂಡು ಅದಕ್ಕೆ ಅಡ್ಡಬಿದ್ದು ಯಜ್ಞಗಳನ್ನು ಅರ್ಪಿಸಿ – ಇಸ್ರಾಯೇಲ್ಯರೆ ನೋಡಿರಿ; ಇದೇ ನಿಮ್ಮನ್ನು ಐಗುಪ್ತ ದೇಶದಿಂದ ಕರಕೊಂಡು ಬಂದ ದೇವರು ಎಂದು ಹೇಳಿಕೊಳ್ಳುತ್ತಿದ್ದಾರೆ..." (ವಿಮೋ 32:7,8)

ಓ, ಪ್ರಿಯ ಮಿತ್ರರೇ, ದೇವರು ಆಜ್ಞಾಪಿಸಿದ ಮಾರ್ಗವನ್ನು ನಾವು ಬಿಟ್ಟು ಹೋಗುವ ಪ್ರತಿ ಸಂದರ್ಭವೂ ಆತನಿಗೆ ತಿಳಿದಿರುತ್ತದೆ ಎನ್ನುವ ಅಂಶವನ್ನು ನಮ್ಮ ಮನಸ್ಸಿನಲ್ಲಿ ಯಾವಾಗಲೂ ಇಟ್ಟುಕೊಂಡಿದ್ದರೆ ನಮ್ಮ ಜೀವಿತಗಳು ಎಷ್ಟು ವಿಭಿನ್ನವಾಗಿರುತ್ತದೆ. ನಮಗೆ ಇದರಲ್ಲಿ ಹಿಂದೆ ಇದ್ದ ಇಸ್ರಾಯೇಲ್ಯರಿಗಿಂತ ಹೆಚ್ಚೇನು ಸಬೂಬು ಹೇಳುವಂತಿಲ್ಲ. ವಾಸ್ತವದಲ್ಲಿ ಅವರಿಗಾದ ಕಷ್ಟಾನುಭವಗಳು ಅವರ ವೈಫಲ್ಯಗಳು ಅವರ ಅವಿಧೇಯತೆಗಳು ಅವರ ಅಪನಂಬಿಕೆಗಳು ಎಲ್ಲವೂ ಪವಿತ್ರಾತ್ಮನ ಮೂಲಕವಾಗಿ ನಮಗೆ ಬುದ್ಧಿಪಾಠಗಳಾಗಿ ಬರೆಯಲ್ಪಟ್ಟು ನಾವು ಅವರಂತೆ ವಿಫಲರಾಗದಂತೆ ಇರುವುದಕ್ಕಾಗಿ ಕೊಡಲ್ಪಟ್ಟಿವೆ. (1ಕೊರಿಂಥ 10:6, 11, 15; ಇಬ್ರಿಯ 3:12, 16–19; 4:2, 6) ವಿಮೋಚನಾಕಾಡ 32:9ರಲ್ಲಿ ಹಿಂದಿದ್ದ ಅವರ ವಿಷಯದಲ್ಲಿ ದೇವರು ತೀವ್ರವಾಗಿ ವ್ಯಥೆಪಟ್ಟದ್ದನ್ನು ಗಮನಿಸಿ; "ಅಲ್ಲದೆ ಯೆಹೋವನು ಮೋಶೆಗೆ – ಈ ಜನರ ಸ್ವಭಾವವನ್ನು ನಾನು ನೋಡಿದ್ದೇನೆ; ಅವರು ನನ್ನ ಆಜ್ಞೆಗೆ ಬೊಗ್ಗದವರಾಗಿದ್ದಾರೆ: ಆದ ಕಾರಣ ನೀನು ನನ್ನನ್ನು ತಡೆಯಬೇಡ; ನನ್ನ ಕೋಪಾಗ್ನಿ ಉರಿಯಲಿ, ಅವರನ್ನು ಭಸ್ಮ ಮಾಡುವೆನು. ತರುವಾಯ ನಿನ್ನಿಂದಲೇ ಬೇರೆ ಒಂದು ದೊಡ್ಡ ಜನಾಂಗವುಂಟಾಗುವಂತೆ ಮಾಡುವೆನು ಎಂದು ಹೇಳಿದನು. "ನಾವು ಹಲವು ಸಮಯಗಳಲ್ಲಿ ಇದಕ್ಕಿಂತಲೂ ಇನ್ನೂ ಎಷ್ಟೋ ತೀಕ್ಷಣವಾದ ದಂಡನೆಗೆ

ಪಾತ್ರರೆಂಬುದನ್ನೂ, ಅಲ್ಲದೆ ಕ್ರಿಸ್ತ ಯೇಸುವು ನಮ್ಮ ಪರವಾಗಿರುವ ತನ್ನ ಅಪರಿಮಿತವಾದ ಪ್ರೀತಿಯ ಫಲವಾಗಿ ನಮ್ಮ ದಿವ್ಯ ಸಹಾಯಕನಾಗಿ, ಆತನು ನಮ್ಮ ವಿಷಯದಲ್ಲಿ ಬೇಡುವುದರಿಂದ ನಾವು ಉಳಿಸಲ್ಪಟ್ಟಿರುವೆವು ಎಂಬುದನ್ನೂ ಕಲ್ಪಿಸಿಕೊಳ್ಳಬಲ್ಲವೋ! ನಮ್ಮ ಪ್ರತಿಜ್ಞಾ ನಿರ್ಣಯಗಳನ್ನು ನಾವು ನವೀಕರಿಸಿಕೊಂಡವರಾಗಿ ನಮ್ಮ ದಿವ್ಯ ಸಹಾಯಕನು ಸತತವಾಗಿ ನಮ್ಮ ಪರ ಬೇಡುವುದಕ್ಕೆ ಪಾತ್ರರಾಗುವಂತಹ ಜೀವನ ನಡೆಸುವುದಕ್ಕೆ ಈ ಅಂಶವು ನಮ್ಮನ್ನು ಉತ್ತೇಜಿಸಬೇಕು. ಆತನು ಎಂತಹ ಅದ್ಭುತವಾದ ರಕ್ಷಕನು!

ಆತನಲ್ಲಿರುವ (ಕ್ರಿಸ್ತನ) ನೀತಿ ಮತ್ತು ದೇವರ ಚಿತ್ತಕ್ಕೆ ಆತನ ಪೂರ್ಣ ವಿಧೇಯತೆಯನ್ನು ನಾವು ಅವಲೋಕಿಸಿದಾಗ ಸತತವಾಗಿ ನಮ್ಮಲ್ಲಿರುವ ವಿವಿಧ ನ್ಯೂನತೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡಾಗ, ದೇವರ ರೋಷಾಗ್ನಿಯು ಎಂದೋ ನಮ್ಮನ್ನು ನ್ಯಾಯವಾಗಿ ದಹಿಸಿಬಹುದಿತ್ತು ಎಂಬುದನ್ನು ತಿಳಿಯುವುದು ಸುಲಭವಲ್ಲವೆ? ಹೌದು, ಆದಾಮನ ಸಂತತಿ ಎಲ್ಲವನ್ನೂ ನಾಶಮಾಡಿ ನಂಬಿಗಸ್ತನಾದ ಯೇಸುವಿನಿಂದ ದೇವರ ವಾಗ್ದಾನಗಳಿಗೆ ಯೋಗ್ಯಫಲ ನೀಡುವ ಒಂದು ಹೊಸ ಸಂತತಿಯನ್ನು ತರುವುದು (ದೇವರಿಗೆ) ಅತಿ ಸುಲಭವಾದ ವಿಷಯವಾಗಿತ್ತು. ಇದಕ್ಕೆ ಸಮಾನವಾದ ವಿಷಯಗಳನ್ನೇ ಖಂಡಿತವಾಗಿ ಇದು ದೇವರು – "ನಿನ್ನಿಂದಲೇ ಬೇರೆ ಒಂದು ದೊಡ್ಡ ಜನಾಂಗ ಉಂಟಾಗುವಂತೆ ಮಾಡುವೆನು" ಎಂದು ಮೋಶೆಗೆ ಹೇಳಿದ ಈ ಮಾತುಗಳು ಸೂಚಿಸುತ್ತವೆ.

ಇಲ್ಲಿತ್ತು ಮೋಶೆಗೆ ತೆರೆದ ಒಂದು (ಅವಕಾಶದ) ಬಾಗಿಲು, ಮತ್ತು ಇಲ್ಲಿ ಆತನು ಕೃಪಾಪೂರ್ಣವಾದ ಅಸಾಮಾನ್ಯ ಗುಣವನ್ನು ಹಾಗೂ ಕರ್ತನು ಎಬ್ಬಿಸಲಿರುವ ಆ ಪ್ರವಾದಿಗೆ ಹೋಲಿಕೆಯಾದ ಮನೋಭಾವವನ್ನು ಪ್ರದರ್ಶಿಸಿರುವನು. ಆತನು ಆ ಜನರಿಗಿಲ್ಲದ ಯಾವ ಸ್ಥಾನ ಮಾನಗಳಾಗಲಿ ಇಲ್ಲವೇ ಯಾವ ಪದವಿಯೇ ಆಗಲಿ ಹೊಂದಲು ನಿರಾಕರಿಸಿರುವನು. ಆತನು ದೇವರಿಗೆ, ತನ್ನ ಮಹಿಮೆ ಗೌರವಗಳು ಅಡಕವಾಗಿರುವುದನ್ನೂ ಮತ್ತು ಆ ಜನರ ಪಾಲನೆ ತನ್ನ ಹೊಣೆಗಾರಿಕೆ ಎಂಬ ಅಂಶಗಳನ್ನು ಆಧರಿಸಿಕೊಂಡು, ಈ ಮನಮುಟ್ಟುವ ಮಾತುಗಳಿಂದ ಬೇಡಿಕೊಂಡಿರುವನು – "ಯೆಹೋವನೇ, ನೀನು ಮಹಾಶಕ್ತಿಯಿಂದಲೂ, ಭುಜಬಲದಿಂದಲೂ ಐಗುಪ್ತದೇಶದಿಂದ ಬಿಡಿಸಿದ ನಿನ್ನ ಪ್ರಜೆಗಳ ಮೇಲೆ ಕೋಪದಿಂದಿರುವುದೇಕೆ? ... ನಿನ್ನ ಸೇವಕರಾದ ಅಬ್ರಹಾಮ್ ಇಸಾಕ್ ಯಾಕೋಬರನ್ನು ನೆನಪಿಗೆ ತಂದುಕೋ. ನೀನು ನಿನ್ನ ಜೀವದಾಣೆ ಪ್ರಮಾಣ ಮಾಡಿ ಅವರಿಗೆ – ನಾನು ನಿಮ್ಮ ಸಂತತಿಯನ್ನು ಹೆಚ್ಚಿಸಿ ಆಕಾಶದ ನಕ್ಷತ್ರಗಳಷ್ಟು ಅಸಂಖ್ಯವಾಗಿ ಮಾಡುವೆನೆಂದೂ ನಾನು ಸೂಚಿಸಿರುವ ಈ ಪ್ರದೇಶಗಳನ್ನೆಲ್ಲಾ ನಿಮ್ಮ ಸಂತತಿಯವರಿಗೆ ಕೊಡುವೆನೆಂದೂ ಅವರು ಈ ದೇಶವನ್ನು ಶಾಶ್ವತವಾಗಿ ಸ್ವಾಧೀನದಲ್ಲಿಟ್ಟುಕೊಳ್ಳುವರೆಂದೂ ಮಾತು ಕೊಡಲಿಲ್ಲವೇ ಅಂದನು" (ವಿಮೋ. 32:11, 13) ಇದು ಒಂದು ಪ್ರಭಲವಾದ ಶ್ರದ್ಧಾಪೂರ್ಣ ಬೇಡಿಕೆಯಾಗಿತ್ತು. ದೇವರ ಮಹಿಮೆ, ಆತನ ಪವಿತ್ರ ನಾಮವನ್ನು ಎತ್ತಿಹಿಡಿಯುವುದು. ತನ್ನ ವಾಗ್ದಾನದ ನೆರವೇರಿಸುವುದು – ಇವುಗಳು ದೇವರು ತನ್ನ

ತೀಕ್ಷಣವಾದ ಕೋಪವನ್ನು ಅವರ ಕಡೆಯಿಂದ ತಿರುಗಿಸಲು ಮೋಶೆಯು ತನ್ನ ಬೇಡಿಕೊಳ್ಳುವಿಕೆಯಲ್ಲಿ ಆಧಾರ ಮಾಡಿಕೊಂಡ ಅಂಶಗಳು. ಇಸ್ರಾಯೇಲ್ಯರ ನಡತೆಯಲ್ಲಾಗಲಿ ಗುಣಗಳಲ್ಲಿಯಾಗಲಿ ತನ್ನ ವಿನಂತಿಯಲ್ಲಿ ಹೇಳಿಕೊಳ್ಳಲು ಮೋಶೆಗೆ ಯಾವ ಆಧಾರಗಳೂ ದೊರಕಲಿಲ್ಲ. ಆದರೆ ಎಲ್ಲಾ ಆಧಾರಗಳು ದೇವರಲ್ಲಿಯೇ ಇರುವುದಾಗಿ ಕಂಡುಕೊಂಡನು.

ದೇವರು ಮೋಶೆಗೆ ಹೇಳಿದ್ದು; ನೀನು ಕರಕೊಂಡು ಬಂದ ನಿನ್ನ ಜನರು" ಎಂದು ಆದರೆ ಮೋಶೆ ದೇವರಿಗೆ ಉತ್ತರವಾಗಿ ಹೇಳಿದ್ದು, "ನೀನು ಕರಕೊಂಡು ಬಂದ ನಿನ್ನ ಜನರು" ಎಂದು. ಮೋಶೆಯು ತನ್ನ ದೃಷ್ಟಿಯನ್ನು ತನ್ನ ಮೇಲಿಂದ ಸಂಪೂರ್ಣವಾಗಿ ತೆಗೆದು ತನ್ನನ್ನು ದೇವರ ಮಹಿಮೆ ಮತ್ತು ದೇವ ಜನರ ಮೇಲಿನ ಹಿತಾಲೋಚನೆಗಳಲ್ಲಿ ತಲ್ಲೀನ ಮಾಡಿಕೊಂಡಿದ್ದನು. "ಧನ್ಯನಾದ ಸೇವಕನು. ಎಷ್ಟು ಕೆಲವೇ ಮಂದಿ ಈತನ ಹಾಗೆ ಇರುವರು!".

ತನ್ನ ಸರ್ವಸ್ವವೆಲ್ಲವನ್ನು ಮರೆತವನಾಗಿ, ದೇವರ ಮಹಿಮೆಯನ್ನು ಬಯಸಿದ್ದ ಮನುಷ್ಯನಾದ ಮೋಶೆಯು ಅನೇಕ ಸಾರಿ ಛಾಯಾ ರೂಪದಲ್ಲಿ ಭಾಗ್ಯವಂತನಾದ ನಮ್ಮ ಕರ್ತನಿಗೆ ಬಹು ಸೊಗಸಾದ ಹೋಲಿಕೆಯಾಗಿರುವನು. ಈ ವಿಶೇಷ ಸಮಯದಲ್ಲಿ ಮೋಶೆಯು ತನ್ನ ವಿನಂತಿಸುವಿಕೆಯ ಫಲವಾಗಿ ದೇವರ ಕೋಪವನ್ನು ತಿರುಗಿಸುವುದರ ಮೂಲಕ, ಒಂದು ಅರ್ಥದಲ್ಲಿ, ತನ್ನ ಜನರ ರಕ್ಷಕನಾದನು. ಈ ಕಾಲದಲ್ಲಿ ನಮ್ಮ ಪರವಾಗಿ ಬೇಡುವವನಾಗಿ ನಮ್ಮನ್ನು ನಿತ್ಯವಾದ ಮರಣದಿಂದ ರಕ್ಷಿಸುವ ಕ್ರಿಸ್ತನ ಎಂಥಹ ಸೂಕ್ತವಾದ ಚಿತ್ರಣವಿದು. ಆತನು ನಮ್ಮ ಪರ ಮಧ್ಯವರ್ತಿಯಾಗಿ ನಿಲ್ಲುವುದು ಮಾತ್ರವಲ್ಲದೆ ಮುಂದೆ ಕ್ಲುಪ್ತ ಕಾಲದಲ್ಲಿ ಲೋಕಕ್ಕೆ ಹೊಸ ಒಡಂಬಡಿಕೆಯ ಮಧ್ಯಸ್ಥನಾಗಿರುವನು. ಸ್ವತಃ ಒಬ್ಬ ವ್ಯಕ್ತಿಯಾಗಿ (ಮಧ್ಯಸ್ತನೆಂಬ) ಮುಂದೆ ಲಭಿಸುವ ಬಿರುದು ಈಗಾಗಲೇ ಆತನಿಗೆ ದೊರಕಿರುವುದು. ಆದರೆ ಈ ಸ್ಥಾನದಲ್ಲಿ ಆತನೊಬ್ಬನೇ ಕಾರ್ಯ ನಿರ್ವಹಿಸಬಾರದೆಂದು ಆತನಿಗೆ ಸಹಕಾರಿಗಳೂ ಇರಬೇಕೆಂದು ದೇವರು ನಿಷ್ಕರ್ಷೆ ಮಾಡಿದ್ದಾನೆ. ಹೀಗಿರಲು, ಮುಂದಾಗಿ ನಿಷ್ಕರ್ಷೆ ಮಡಿದ ಈ ವರ್ಗವು ಆತನ (ಕ್ರಿಸ್ತನ) ಸಾರೂಪ್ಯಕ್ಕೆ ಬಂದು ತನ್ನ ಪ್ರಭಾವ ಮಹಿಮೆಗಳಲ್ಲಿ ಪಾಲನ್ನು ಹೊಂದುವವರೆಗೂ ಮಾತ್ರ ಛಾಯೆ ಯಾಗಿರುವುದಲ್ಲದೆ ಆತನ ಜೊತೆಗಾರನಾಗಿ ಆತನಂತೆಯೇ ತಮ್ಮನ್ನೂ ಯಜ್ಞವನ್ನಾಗಿ ಅರ್ಪಿಸಿಕೊಂಡು ಶ್ರೇಷ್ಠ ಮಧ್ಯಸ್ತನದ ಆ ಪ್ರವಾದಿಯೊಡನೆ ಮಹಿಮೆ ಹೊಂದುವವರಿಗೂ ಛಾಯೆಯಾಗಿರುವನು. ಈ ಪ್ರವಾದಿಯ ವಿಷಯದಲ್ಲಿ ಮೋಶೆ ಹೀಗೆ ಹೇಳಿರುವನು. "ನಿಮ್ಮ ದೇವರಾದ ಯೆಹೋವನು ನಿಮ್ಮ ಸಹೋದರರಲ್ಲಿ ನನ್ನಂಥ ಪ್ರವಾದಿಯನ್ನು (ನಿಮಗೆ) ಏರ್ಪಡಿಸುವನು. ಅವನಿಗೇ ನೀವು ಕಿವಿಗೊಡಬೇಕು". (ಧರ್ಮೋ. 18:15. ಅಪೋ. ಕೃತ್ಯಗಳು 3:22) ಈ ಮಹಿಮೆಯಲ್ಲಿ ಸೇರುವ ಪ್ರತಿಯೊಬ್ಬನೂ ಕ್ರಿಸ್ತನಲ್ಲಿ ಐಕ್ಯರಾಗಿ ತಮ್ಮ ಸ್ವವ್ಯಕ್ತಿತ್ವ ಎಲ್ಲವನ್ನೂ ಕಳಕೊಂಡರೂ, ಒಂದು ಅರ್ಥದಲ್ಲಿ, ಅವರೆಲ್ಲರೂ ಜನರ

ರಕ್ಷಕರಾಗುವರು. ಈ ಅಂಶವನ್ನು ಓಬದ್ಯನ ಪ್ರವಾದನೆಯ ಗ್ರಂಥದ 21ನೇ ವಚನದಲ್ಲಿ ವರ್ಣಿಸಲ್ಪಟ್ಟಿಲ್ಲವೇ?"

"ರಕ್ಷಕರು ಚಿಯೋನ್ ಪರ್ವತದಲ್ಲಿ ಎದ್ದು ಏಸಾವಿನ ಪರ್ವತವನ್ನು ಆಳುವರು; ಆಗ ರಾಜ್ಯವು ಯೆಹೋವನದಾಗಿರುವುದು" ಮೋಶೆಯು ಒಂದು ನಿರ್ಧಿಷ್ಟ ಸಮಯದಲ್ಲಿ, ಅಂದರೆ ಅವನು ತಿರುಗಿ ದೇವರ ಬೆಟ್ಟವನ್ನು ಏರಿದಾಗ, ತನ್ನ ಜನರ ಪ್ರಯೋಜನಾರ್ಥವಾಗಿ ಆತನು (ಮುಂದೆ ಹೊಂದಲಿದ್ದ) ನಿತ್ಯ ಜೀವವನ್ನು ಅಪಾಯಕ್ಕೆ ಗುರಿಮಾಡಿಕೊಂಡ ಹಾಗೆ ಕ್ರಿಸ್ತನೂ ಮತ್ತು ಅವನ ಹೆಜ್ಜೆಯ ಜಾಡಿನಲ್ಲಿ ನಡೆಯುವ ಪ್ರತಿಯೊಬ್ಬನೂ ಸಹ ಜನರಿಗೋಸ್ಕರವಾಗಿ ತಾವು (ಹೊಂದಲಿರುವ) ನಿತ್ಯ ಜೀವವನ್ನು ಅಪಾಯಕ್ಕೆ ಗುರಿ ಮಾಡಿಕೊಳ್ಳಬೇಕು.

ಮೋಶೆಯಲ್ಲಿ ವಿಜೃಂಬಿಸಿದ ಈ ಗುಣವು ಕೇವಲ ಆ ಒಂದು ಸಂದರ್ಭಕ್ಕಾಗಿ ಆತನು ಗಳಿಸಿ ವ್ಯಕ್ತಪಡಿಸಿದ್ದಲ್ಲ. ಆದರೆ ವಾಸ್ತವವಾಗಿ ಅದು ದೇವರ ಚಿತ್ತಕ್ಕೆ ವಿಧೇಯನಾಗುವುದರ ಮೂಲಕವಾಗಿಯೂ ಮತ್ತು ಈ ಜನರ ನಿರ್ಬಲಾವಸ್ಥೆಗಳಲ್ಲಿ ಅವರ ಸಂಪರ್ಕದಲ್ಲಿರುವುದರ ಮೂಲಕವಾಗಿ ಅತನಲ್ಲಿ ಮೊದಲೇ ಬೆಳೆದು ಬಂದ ಸ್ವಭಾವ. ನರಳುತ್ತಿರುವ ನತದೃಷ್ಟ ಜಗತ್ತಿನ ಮೇಲಿನ ನಮ್ಮ ಪ್ರೀತಿ ಮತ್ತು ಅತಿ ವಿಶೇಷವಾಗಿ ನಮ್ಮ ಸಹೋದರರ ಬಗ್ಗೆ ಭಕ್ತಿ ಭಾವಗಳನ್ನು ಈಗಲೇ ವೃದ್ಧಿಪಡಿಸಿಕೊಳ್ಳಬೇಕು ಇಲ್ಲವಾದಲ್ಲಿ ನಮಗೆ ಭೂಲೋಕದ ಶ್ರೇಷ್ಠ ಮಧ್ಯಸ್ಥನ ದೇಹದ ಅಂಗಗಳಾಗುವ ಅವಕಾಶವೇ ಇಲ್ಲವಾಗುತ್ತದೆ. ಈ ಸಂದರ್ಭದಲ್ಲಿ ನಾವು **R4023:6** ಇಲ್ಲಿ ಉಲ್ಲೇಖಿಸುತ್ತೇವೆ.

"ಮೋಶೆಯ ಮನೋಭಾವವು ಕೇವಲ ಕ್ರಿಸ್ತನ ಮನೋಭಾವಕ್ಕೆ ಛಾಯೆಯಲ್ಲದೆ ಕ್ರಿಸ್ತನ ದೇಹದ ಅಂಗಗಳಾಗುವವರ ಮನೋಭಾವಗಳ ದೃಷ್ಟಾಂತವೂ ಆಗಿತ್ತು. ನಾವು ಸಹ ಈ ಪ್ರೀತಿ ಭಕ್ತಿ ಭಾವವನ್ನು ಕೇವಲ ಕ್ರಿಸ್ತನ ದೇಹದ ಅಂಗಗಳಿಗೆ ಹಾಗೂ ನಮ್ಮ ಸ್ವಂತ ದೇಹಗಳಿಗೆ ಸೀಮಿತ ಮಾಡಿಕೊಳ್ಳದೆ, ದೇವರ ಕೃಪೆಯಿಂದ ಕರೆಯಲ್ಪಟ್ಟು ನಿರ್ವಹಿಸಲು ನಮಗೆ ಕೊಡಲ್ಪಟ್ಟ ಸೇವಾಕಾರ್ಯಭಾರದ ಮೇಲೆ ಮತ್ತು ಆ ಕೆಲಸಗಳಿಗಾಗಿ ನಮ್ಮ ಶ್ರದ್ಧಾ ಭಕ್ತಿಯನ್ನು ಬೆಳಸಿಕೊಳ್ಳಬೇಕು. ನೀವು ಯಾವುದಕ್ಕಾಗಿ ಕರೆಯಲ್ಪಟ್ಟಿರಿ ಎಂದು ನಿಮಗೆ ತಿಳಿದದೆ ಸಹೋದರರೆ, ದೇವರು ತನ್ನ ಕುಮಾರನೊಂದಿಗೆ ಸಹ ಭಾಧ್ಯರಾಗುವುದಕ್ಕೆ ನಮ್ಮನ್ನು ಕರೆದಿರುವನು. ಕ್ರಿಸ್ತನ ವಧುವಾಗಿ, ಯಜ್ಞದ ಕುರಿಯ ಮದಲಗಿತ್ತಿಯಾಗಿ, ಹೊಸ ಒಡಂಬಡಿಕೆಗೆ ಮಧ್ಯಸ್ಥರಾಗಿ ಮಾಡುವ ಆ ಶ್ರೇಷ್ಠ ಕಾರ್ಯಗಳಲ್ಲಿ ಭಾಗಿಗಳಾಗುವುದಕ್ಕೆ ನಮ್ಮನ್ನು ದೇವರು ಕರೆದಿರುವನು. ಹಾಗೂ ಅದರ ಆಶೀರ್ವಾದದಾಯಕ ಏರ್ಪಾಡುಗಳ ಮೂಲಕ ಕ್ರಿಸ್ತನ ಸಾವಿರ ವರ್ಷಗಳಲ್ಲಿ ಭೂಲೋಕದ ಮಾನವ ಕುಲವನ್ನು ಮೇಲೆತ್ತುವ ಕಾರ್ಯದಲ್ಲಿ ಕ್ರಿಸ್ತನೊಂದಿಗೆ ಸಹಕರಿಸಿ, ಅವರು ಅಲ್ಲಿ ಆ ಪವಿತ್ರವಾದ ರಾಜಮಾರ್ಗದಲ್ಲಿ ನಡೆದು ಅವರಲ್ಲಿ ಮನಃಪೂರ್ವಕವಾಗಿ ವಿಧೇಯರಾದವರು ಕ್ರಮೇಣ ಪರಿಪೂರ್ಣರಾಗಿ

ಕಡೆಯಲ್ಲಿ ನಿತ್ಯಜೀವ ಪಡೆಯುವಂತೆ ಸಹಾಯ ಮಡುವುದಕ್ಕಾಗಿ ನಮ್ಮನ್ನು ಕರೆದಿರುವನು. ಈ ವಿಷಯಗಳಲ್ಲಿ ನಾವು ಮೋಶೆಯಲ್ಲಿದ್ದ ಮನೋಭಾವವಾದ ಕ್ರಿಸ್ತನ ಮನೋಭಾವವನ್ನು ಬೆಳಸಿಕೊಳ್ಳಬೇಕು. ಒಟ್ಟಾರೆ ನಾವು ಮಾನವ ಕುಲವನ್ನು ಸರಿಯಾದ ಮಾರ್ಗದಲ್ಲಿ ನಡೆಯಲು ಮಾರ್ಗದರ್ಶನ ಮಾಡಿ ಅವರನ್ನು ಮೇಲೆತ್ತಿ ಆಶೀರ್ವದಿಸುವ ಕಾರ್ಯಕ್ಕೆ, ವಿಶೇಷವಾಗಿ ಮುಂದೆ ಬರುವ ದೇವರ ರಾಜ್ಯದಲ್ಲಿ ನಡೆಯಲಿರುವ ವೈಭವಪೂರಿತವಾದ ಕಾರ್ಯಗಳಿಗೆ ನಮ್ಮನ್ನು ಸಿದ್ಧಪಡಿಸಿಕೊಳ್ಳಬೇಕು. ನಮಗಿರುವ ಈ ಕರೆಯನ್ನು ಅಂಗೀಕರಿಸಿ ನಡೆಯುವವರಿಗೆ ಲಭಿಸುವ ಭವ್ಯ ಸೌಲಭ್ಯ ಸವಲತ್ತುಗಳ ಪರಿಮಾಣದ ಉನ್ನತ ಮಟ್ಟಕ್ಕೆ ಸಾಧ್ಯವಾದಷ್ಟು ನಮ್ಮ ಗುಣಗಳನ್ನು ಸರಿದೂಗಿಸಿಕೊಳ್ಳುವುದು ನಮಗೆ ಬಿಟ್ಟಿರುವ ವಿಷಯ.

ನಾವು ಸಿದ್ಧರಾಗುತ್ತಿರುವ ಸಂಗತಿಗಳಲ್ಲಿ ಸಹಾನುಭೂತಿಪೂರ್ಣವಾದ ಪ್ರೀತಿಯ ಮನೋಭಾವ ಬೆಳೆಸಿಕೊಳ್ಳುವುದು ಮುಖ್ಯವಾದುದು. ಉಪಕಾರ ನೆನಸದವರಿಗೂ ಕರುಣೆ ತೋರುವ, ಕನಿಕರ ಮುಂತಾದ ಒಳ್ಳೆಯ ಫಲಗಳಿಂದ ತುಂಬಿದ ನಮ್ಮ ಪ್ರಿಯ ಗುರುವಿನ ಪ್ರತಿರೂಪಕ್ಕೆ ಬರಲು ಇದು ನಮ್ಮನ್ನು ಶಕ್ತರಾಗ ಮಾಡುತ್ತದೆ. ಲೋಕ ಸಂಬಂಧದ ವಿಷಯಗಳಲ್ಲಿ ನಾವು ಇಂತಹ ಉನ್ನತ ಮಟ್ಟದಲ್ಲಿ ಆಲೋಚಿಸುವವರಾಗೋಣ. ನಮ್ಮ ಗುರುವು ಸಾರಿ ಹೇಳಿರುವುದು. "ನಾನು ಲೋಕದವನಲ್ಲದೇ  ಇರುವ ಪ್ರಕಾರ ನೀವೂ ಲೋಕದವರಲ್ಲ". ನಾವು ಕ್ರಿಸ್ತನ ದೇಹದ ಅಂಗಗಳೂ, (ಹೊಸ ಒಡಂಬಡಿಕೆಯ) ಶ್ರೇಷ್ಠ ಮಧ್ಯಸ್ಥನ ದೇಹದ ಅಂಗಗಳೂ ಆಗಿರಲಾಗಿ, ನಮ್ಮ ಮುಂದಿರುವ ದೊಡ್ಡ ಕಾರ್ಯಕ್ಕೆ ಅಂದರೆ; ದೇವಾನುಗ್ರಹದಿಂದ ಕೂಡಿದ್ದಾಗಿ ಮತ್ತು ನಿತ್ಯ ಜೀವವು ದೊರಕುವ ಮಾತ್ರವಲ್ಲದೆ ಸಮಸ್ತವೂ ಸರಿಮಾಡಲ್ಪಟ್ಟಿರುವ ಪರದೈಸೆಂಬ ವಾಗ್ಧತ್ತ ದೇಶಕ್ಕೆ ಜನರನ್ನು ನಡೆಸುವ ಕಾರ್ಯಕ್ಕೆ ನಮ್ಮನ್ನು ಕ್ರಿಸ್ತೀಯ ಅನುಭವ ಶಾಲೆಯಲ್ಲಿ ಸಿದ್ಧ ಮಾಡಿಕೊಳ್ಳುತ್ತಿದ್ದೇವೆ. ನಾವು ಇಲ್ಲಿ ಅಗತ್ಯವಿರುವ ಪಾಠಗಳನ್ನು ಕಲಿಯದಿದ್ದರೆ ಅಂದರೆ ಪ್ರೀತಿ ಸಹಾನುಭೂತಿಗಳನ್ನು ತೋರಿಸುವುದರಲ್ಲಿಯೂ, ಜಗತ್ತಿನ ವಿಷಯವಾಗಿ ಉದಾರ ಮನೋಭಾವವನ್ನು ತೋರಿಸುವುದರಲ್ಲಿ ಕ್ರಿಸ್ತನ ಪ್ರತಿರೂಪಿಗಳಾಗದಿದ್ದಲ್ಲಿ, ಆತನ ಮಹಿಮೆಯುಳ್ಳ ದೇಹದ ಅಂಗಗಳಾಗುವುದಕ್ಕೂ, ಆ ರಾಜ್ಯದಲ್ಲಿ ಬಾಧ್ಯತೆ ಪಡೆಯುವ ಗುಂಪಿಗೆ ಸೇರುವುದಕ್ಕೂ ಯೋಗ್ಯತೆ ಇಲ್ಲದಂತಾಗಿ, ನಾವು ಇದಕ್ಕೆ ಆಯಲ್ಪಡದವರಾಗಿ ನಿರಾಕರಿಸಲ್ಪಡುತ್ತೇವೆ. ಹೀಗಿರುವಲ್ಲಿ ನಾವು ಶ್ರದ್ಧೆಯುಳ್ಳವರಾಗಿರೋಣ. ಮತ್ತು ನಾವು ಕಲಿಯಲಿರುವ ಶ್ರೇಷ್ಠ ಪಾಠವು ಪ್ರೀತಿಯ ಸಂಬಂಧವಾಗಿದ್ದು, ಅದು ದೇವರ ಮೇಲಿನ, ಸಹೋದರರ ಮೇಲಿನ, ನಮ್ಮ ನೆರೆಯವರ ಮೇಲಿನ, ಮಾತ್ರವಲ್ಲದೆ ನಮ್ಮ ವೈರಿಗಳ ಮೇಲಿನ ಪ್ರೀತಿಯನ್ನು ಅಭ್ಯಾಸಿಸುವ ಕಾರ್ಯವನ್ನು ಒಳಗೊಂಡಿದೆ. ಈ ಪ್ರೀತಿಯು ಹೆಚ್ಚುತ್ತಾ ಬಂದರೆ ಅದು ನಮ್ಮನ್ನು ದೇವರ ದೃಷ್ಟಿಯಲ್ಲಿ ಬರಡಾದವರೂ ನಿಷ್ಫಲರೂ ಆಗದಂತೆ ಮಾಡಿ ಕ್ರಿಸ್ತನ ಮೂಲಕವಾಗಿ ನಿತ್ಯರಾಜ್ಯಕ್ಕೆ ಧಾರಾಳವಾಗಿ ಪ್ರವೇಶಿಸುವಂತಾಗಿ; ಅಲ್ಲಿ ರಾಜಾಧಿ ರಾಜನೂ ಕರ್ತರ ಕರ್ತನೂ ಹೊಸ ಒಡಂಬಡಿಕೆಯ ಮಧ್ಯಸ್ಥನಾಗಿ ಕ್ರಿಸ್ತನು ಭೂಲೋಕದ ಎಲ್ಲಾ

ಕುಲದವರನ್ನು ಆಶೀರ್ವಾದ ಮಾಡುವ ವಿಶೇಷ ಕಾರ್ಯದಲ್ಲಿ ಸಹಕಾರಿಗಳಾಗುವಂತೆ ಮಾಡುತ್ತದೆ.

ಮೋಶೆಯ ಗುಣದ ಇನ್ನೊಂದು ಭಾಗವನ್ನು ನೋಡುವುದು ನಮಗೆ ಉತ್ತಮ. ಅದು ನೀತಿಯನ್ನು ಪ್ರೀತಿಸುವ ಹಾಗೂ ಅನೀತಿಯನ್ನು ದ್ವೇಷಿಸುವ ಸ್ವಭಾವ. ನಿಜರೂಪದಲ್ಲಿ ಮಧ್ಯಸ್ಥನಾಗಿರುವ (ಕ್ರಿಸ್ತನ) ದೇಹದ ಅಂಗಗಳಾಗುವವರು ಈ ಎರಡು ಗುಣಗಳನ್ನು ತಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಇಸ್ರಾಯೇಲ್ಯರ ಮೇಲೆ ತನ್ನ ಕೋಪಾಗ್ನಿಯು ಹತ್ತಿ ಉರಿಯಬಾರದೆಂದು ದೇವರನ್ನು ವಿನಂತಿಸಿದ ಮೋಶೆಗೆ ಸ್ವತಃ ಅವರ ಮೇಲೆ ತನ್ನ ಕೋಪಾಗ್ನಿಯನ್ನು ಹಾಕಿದ್ದು ಬಹುಶಃ ಅದು ವಿಚಿತ್ರವಾಗಿ ತೋರುತ್ತದೆ. (ವಿಮೋ. 32:19) ಅನೀತಿಯ ವಿರುದ್ಧವಾದ ಈ ಕೋಪವು ನ್ಯಾಯಸಮ್ಮತವೆಂಬುದು ನಮ್ಮ ಆಲೋಚನೆ. ಈ ವಿಷಯದಲ್ಲಿ ಮೋಶೆಯು ಪಾಪ ಮಾಡಿದನೆಂದು ನಾವು ಭಾವಿಸುವ ಅಗತ್ಯವಿಲ್ಲ. ಇಲ್ಲದಿದ್ದಲ್ಲಿ ಇದೇ ಅಪರಾಧದ ಸಂಬಂಧದಲ್ಲಿ ದೇವರನ್ನೂ ಸಹ ತಪ್ಪಿತಸ್ತನೆಂದು ನಾವು ನಿರ್ಣಯಿಸಬೇಕಾಗುತ್ತದೆ. ಈ ವಿಷಯವಾಗಿ ನಾವು "ಕೋಪ ಮಾಡಿದರೂ ಪಾಪ ಮಾಡಬೇಡಿರೆಂದು" (ಎಫೆಸ. 4:26) ವಿಶೇಷ ಬುದ್ಧಿ ಪಾಠವಾಗಿ ನಮಗೆ ಹೇಳಲ್ಪಟ್ಟಿದೆ.

"ನ್ಯಾಯಸಮ್ಮತವಾದ ಕಾರಣಗಳಿಗೆ ಕೋಪ ಮಾಡುವುದಕ್ಕೂ ಮತ್ತು ಪ್ರೀತಿ ಇರದ, ನಿರ್ಧಯವಾದ ನ್ಯಾಯವಲ್ಲದ ಕೋಪಕ್ಕೂ ಒಂದು ವ್ಯತ್ಯಾಸವಿದೆ. ನಾವು ತಿಳಿದಿರುವ ಹಾಗೆ ದೇವರು ದುಷ್ಟರ ವಿಷಯದಲ್ಲಿ ಕೋಪವುಳ್ಳವನಾಗಿದ್ದಾನೆ ಎಂದು ಸತ್ಯವೇದವು ನಮಗೆ ಹೇಳುತ್ತದೆ. (ಕೀರ್ತನೆ 7:11) ಕೇವಲ ಕೋಪಮಾಡುವುದು ಪಾಪವೆಂದು ಹೇಳುವ ಅಗತ್ಯವಿಲ್ಲವೆಂದು ಈ ವಿಷಯವು ತೋರಿಸುವುದು. ಏಕೆಂದರೆ ದೇವರಲ್ಲಿ ಪಾಪವಿಲ್ಲ. ಆತನು ತನ್ನ ಸೃಷ್ಟಿಗಳನ್ನು ಯಾವ ನಿಯಮಗಳ ಮೂಲಕ ನ್ಯಾಯ ವಿಚಾರಣೆ ಮಾಡುವನೋ ಅದೇ ನಿಯಮಗಳ ಮೂಲಕವಾಗಿ ತನ್ನ ವಿಷಯದಲ್ಲೂ ವಿಚಾರಿಸಿಕೊಳ್ಳುವನು. ಆದುದರಿಂದ ಕೇವಲ ಕೋಪಿಸುವುದಷ್ಟೇ ಪಾಪವಲ್ಲ.

"ದೇವರಲ್ಲಿ ನೀತಿಯ ವಿಷಯದಲ್ಲಿ ಕೋಪಿಸಿಕೊಳ್ಳುವ ಅಥವಾ ಅನೀತಿಯನ್ನು ಮೆಚ್ಚುವ ಇಲ್ಲವೇ ಅನೀತಿಯ ವಿಷಯದಲ್ಲಿ ಸಹಾನುಭೂತಿಯುಳ್ಳ ಮತ್ತು ನೀತಿಯನ್ನು ವಿರೋಧಿಸುವ ಅಪಾಯದ ಸಂಗತಿಗಳಿರುವುದಿಲ್ಲ. ಆತನ ಜ್ಞಾನವು ಪರಿಪೂರ್ಣವಾಗಿರುವುದು. ಹೀಗಾಗಿ ಅತನ ನಡವಳಿಕೆಯೂ ಪರಿಪೂರ್ಣವಾಗಿದ್ದು ಅದರಲ್ಲಿ ಯಾವ ದೋಷವೂ ಇರುವುದಿಲ್ಲ. ನಮ್ಮ ವಿಷಯದಲ್ಲಾದರೋ, ಕೋಪಿಸುವುದು ನಮಗೆ ಸಮಂಜಸವೆಂದು ಅನ್ನಿಸಿದ್ದಲ್ಲಿ, ಅದರ ಯುಕ್ತಾಯುಕ್ತತೆಗಳನ್ನು ನಾವು ಮೊದಲು ಬಹುವಾಗಿ ವಿವೇಚಿಸಬೇಕು. ಆದ ಕಾರಣ ಅಪೋಸ್ತಲನಾದ ಪೌಲನು ಹೇಳುವುದು; "ಕೋಪ ಮಾಡಬೇಕಾದರೂ ಪಾಪ ಮಾಡಬೇಡಿರಿ" (ಎಫೆಸ 4:26) (R5417:5)

ಅನೀತಿಯನ್ನು ಹಗೆ ಮಾಡುವ ತನ್ನ ಸ್ವಭಾವದ ಪ್ರಕಾರ ಮೋಶೆಯು ಜನರನ್ನು ಶಿಕ್ಷಿಸಿ

ಆರೋನನನ್ನು ಗದರಿಸಿರುವುದನ್ನು ನಾವು ಕಂಡಿದ್ದೇವೆ. (ವಿಮೋ. 32:20, 21) ಹೀಗಿದ್ದರೂ, ಜನರಲ್ಲಿ ಕೆಲವರು ಆ ಶಿಕ್ಷೆಯನ್ನು ತಾತ್ಸಾರ ಮಾಡಿ ಮೋಶೆಯ ಗದರಿಕೆಯನ್ನು ವಿರೋಧಿಸಿದ್ದರೆಂಬುದು ಸ್ಪಷ್ಟ. ಈ ಸ್ವಲ್ಪ ಹುಳಿಯು ಬಹು ಬೇಗ ಇಸ್ರಾಯೇಲ್ಯರ ಪಾಳೇಯವನ್ನೆಲ್ಲಾ ಹುಳಿಯಾಗಿಸುತ್ತದೆಂದು ಮೋಶೆಗೆ ಚೆನ್ನಾಗಿ ತಿಳಿದಿತ್ತು. ದೇವರ ಕೋಪಾಗ್ನಿಯು ಹೊರಟು ಇಸ್ರಾಯೇಲ್ಯರನ್ನೆಲ್ಲಾ ದಹಿಸದಂತೆ, ಬಂಡಾಯವೆದ್ದು ಮತ್ತಷ್ಟು ದೇವರ ಕೃಪಾನುಗ್ರಹ ಹೊಂದುವುದಕ್ಕೆ ಅಯೋಗ್ಯರೆಂದು ರುಜುವಾತುಪಡಿಸಿದ್ದವರನ್ನು ಪಾಳೆಯದಿಂದ ಶುಚಿ ಮಾಡುವುದು ಅಗತ್ಯವಾಗಿತ್ತು. ಪಾಳೇಯದ ಬಾಗಿಲಿನಲ್ಲಿ ನಿಂತು ಮೋಶೆಯು ಒಂದು ಸವಾಲನ್ನು ಎಸೆದನು. "ಯೆಹೋವನ ಪಕ್ಷದವರೆಲ್ಲರೂ ನನ್ನ ಬಳಿಗೆ ಬರಬೇಕು..." ಎಂದು ಕೂಗಿ ಹೇಳಿದನು. (ವಿಮೋ. 32:26)

ಮೋಶೆಯಾಗಲಿ ಇಲ್ಲವೇ ಚಿನ್ನದ ಬಸವನಾಗಲಿ ಈಗ ನಿಜವಾದ ಸಮಸ್ಯೆಯಾಗಿರಲಿಲ್ಲ. ಅವರು ಯಾವಾತನ ಶಬ್ಧಕ್ಕೆ ಕಿವಿಗೊಟ್ಟು ವಿಧೇಯರಾಗುತ್ತೇವೆಂದು ಮಾತು ಕೊಟ್ಟಿದ್ದರೋ, ಮತ್ತು ಯಾವಾತನ ಒಡಂಬಡಿಕೆಯನ್ನು ಪಾಲಿಸುವೆವೆಂದು ಮಾತು ಕೊಟ್ಟಿದ್ದರೋ ಆ ಕರ್ತನ ವಿಷಯವೇ ಅವರಿಗೆ ಒಂದು ಸಮಸ್ಯೆಯಾಗಿತ್ತು. ಮೋಶೆಯು ಒಡ್ಡಿದ ಸವಾಲು ಐಗುಪ್ತದಿಂದಾಗಲೀ ಇಲ್ಲವೇ ಆ ನಾಡಿನ ಜನರಿಂದಾಗಲಿ ಪ್ರತ್ಯೇಕಿಸಿಕೊಳ್ಳುವ ಸಂಗತಿಯಾಗಿರಲಿಲ್ಲ. ಬದಲಾಗಿ ದೇವರ "ಒಂದು ವಿಶಿಷ್ಟ ಸಂಪತ್ತಿನಂತಾಗಿ ಆತನಿಗೆ ಸ್ವಕೀಯ ಜನರಾಗ" ಬಯಸಿ ಆತನ ಚಿತ್ತಕ್ಕೆ ಪೂರ್ಣವಾಗಿ ವಿಧೇಯರಾಗಲು ನಿರಾಕರಿಸಿದ ತಮ್ಮ ಸ್ವಂತ ಜನರಿಂದ ಪ್ರತ್ಯೇಕಿಸಿಕೊಳ್ಳುವ ಸಂಗತಿಯಾಗಿತ್ತು. ಚಿನ್ನದ ಬಸವ ದೇವರ ಮೇಲಿನ ಅವರ ನಂಬಿಕೆಯ ನಿರಾಕರಣೆ ಆಗಿರಲಿಲ್ಲ. ಆದರೆ ನಿಜದಲ್ಲಿ ಆತನನ್ನು ಆರಾಧಿಸುವ ವಿಧದಲ್ಲಿಯಾದ ಆತನ ಆಜ್ಞೆಯ ನೇರ ಉಲ್ಲಂಘನೆಯಾಗಿತ್ತು ಅದು ಅಂಗೀಕಾರ ಅರ್ಹವಾಗಿರಲಿಲ್ಲ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳೋಣ.

ಈ ಒಂದು ಸವಾಲು ನಮ್ಮೆಲ್ಲರಿಗೂ ಎದುರಾಗಿರುತ್ತದೆ ಮತ್ತು ದೇವರ ಜನರನ್ನು ಜರಡಿ ಹಿಡಿಯುವ ಪ್ರತಿ ಸಮಯದಲ್ಲಿಯೂ ಎದುರಾಗುತ್ತಾ ಸುವಾರ್ತಾಯುಗದ ಅಂತ್ಯದವರೆಗೂ ಮುಂದುವರೆಯುವುದು. ಹೊರಗಿನ ಜನರಿಂದ ನಮ್ಮನ್ನು ಪ್ರತ್ಯೇಕಿಸಿಕೊಳ್ಳುವುದು ಸುಲಭದ ವಿಷಯ. ಆದರೆ ಶರೀರ ಸಂಬಂಧವಾದ ನಮ್ಮ ಸ್ವಂತ ಜನರಿಗಿಂತಲೂ ಹೆಚ್ಚಾಗಿ ಪ್ರೀತಿಸುವುದನ್ನು ಕಲಿತು ಮತ್ತು ಅವರು ಅಮೂಲ್ಯವೆಂದು ಭಾವಿಸಿದವರಿಂದ ನಮ್ಮನ್ನು ಪ್ರತ್ಯೇಕಿಸಿಕೊಳ್ಳುವುದು ಸಾವಿರ ಪಟ್ಟು ಕಷ್ಟದ ಕೆಲಸ. ಆದರೂ ಈ ವಿಧವಾದ ಪರೀಕ್ಷೆ ಇದ್ದೇ ಇರುತ್ತದೆ!. "ಯೆಹೋವನ ಪಕ್ಷದವರೆಲ್ಲರೂ ನನ್ನ ಬಳಿಗೆ ಬರಬೇಕು". ಎಂದು ಓದುತ್ತೇವೆ – "ಆಗ ಲೇವಿಯ ಕುಲದವರೆಲ್ಲರೂ ಆತನ ಬಳಿಗೆ ಕೂಡಿ ಬಂದರು" (ವಿಮೋ. 32:26) ಇತರ ಕುಲದ ಯಾರೂ ಮೋಶೆ ಬಳಿಗೆ ಬರಲಿಲ್ಲವೆಂದು ನಾವು ಭಾವಿಸಲಾಗದು, ಆದರೆ ಇತರ ಕುಲದವರಿಗಿಂತ ಲೇವಿಯ ಕುಲದವರಲ್ಲಿ ಕರೆಗೆ

ಸ್ಪಂದಿಸಿದವರ ಸಂಖ್ಯೆ ಕಡಿಮೆಯಾಯಿತು. ಖಂಡಿತವಾಗಿ ಈ (ಲೇವಿಯ) ಕುಲವು ಹಲವು ವಿಧದಲ್ಲಿ ದೇವರ ನಿಜವಾದ ಪ್ರತಿಷ್ಠಿತರಿಗೆ ಛಾಯಾರೂಪದಲ್ಲಿ ಹೋಲಿಕೆಯಾಗಿರುವರು. ಅವರ ನಿಷ್ಠೆಯು, ಕರೆಗೆ ಅವರು ಸ್ಪಂದಿಸುವುದರ ಮೂಲಕ ಮಾತ್ರವೇ ವ್ಯಕ್ತವಾಗದೇ ದೇವರ ಚಿತ್ತಕ್ಕೆ ಅವರು ವಿಧೇಯರಾಗುವುದರ ಮೂಲಕವೂ ವ್ಯಕ್ತವಾಗಿದೆ. ಆ ಕಾರಣದಿಂದಾಗಿ ನಿಜವಾಗಿ ದೇವರ ಪಕ್ಷದಲ್ಲಿ ಇಲ್ಲದವರಾದ ಎಲ್ಲರೊಡನೆಯೂ ಅವರು ತಮ್ಮ ಅನ್ಯೋನ್ಯತೆಯನ್ನು ಕಡೆದುಕೊಂಡಿದ್ದಾರೆ. ಮೋಶೆಯ ಮಾತನ್ನು ಗಮನಿಸಿ: "ಇಸ್ರಾಯೇಲ್ಯರ ದೇವರಾದ ಯೆಹೋವನು ಅಪ್ಪಣೆ ಮಾಡುವುದೇನೆಂದರೆ–ನಿಮ್ಮಲ್ಲಿ ಪ್ರತಿಯೊಬ್ಬನೂ ಕತ್ತಿಯನ್ನು ಸೊಂಟಕ್ಕೆ ಕಟ್ಟಿಕೊಂಡು ಪಾಳೆಯದ ಮಧ್ಯದಲ್ಲಿ ಒಂದು ಬಾಗಿಲಿನಿಂದ ಮತ್ತೊಂದು ಬಾಗಿಲಿನ ವರೆಗೂ ಹೋಗುತ್ತಾ ಬರುತ್ತಾ ಅಣ್ಣ ತಮ್ಮ ಗೆಳೆಯ ನೆರೆಯವ ಎಂದು ಲಕ್ಷಿಸದೆ ಸಂಹರಿಸಬೇಕು..." (ವಿಮೋ. 32:27)

ಲೇವಿಕುಲದವರು ಈ ಸವಾಲಿಗೆ ವಿಧೇಯರಾಗಿ ನಡೆದುಕೊಂಡರು. (ವಿಮೋ. 32:28, 29) ಹೀಗೆ ಅವರು ಮೋಶೆಯನ್ನು ತಮ್ಮ ವಿಮೋಚಕನೆಂದೂ, ತಮ್ಮ ರಕ್ಷಕನೆಂದೂ ಅರಿಕೆ ಮಾಡಿ, ಆತನು ಇಸ್ರಾಯೇಲ್ಯರ ಮಹಾ ದೇವರ ಮುಂದೆ ತಮ್ಮ ಪರವಾಗಿ ವಿನಂತಿಸುವುದನ್ನು ಮುಂದುವರಿಸುವುದಕ್ಕೆ ತಾವು ಯೋಗ್ಯರೆಂಬುದನ್ನು ಸಾಭೀತುಪಡಿಸಿದರು. ಮತ್ತಾಯ 10:32, 34–38 ರಲ್ಲಿ ಹೇಳಿದ ನಮ್ಮ ಪ್ರಿಯ ವಿಮೋಚಕನೂ ರಕ್ಷಕನೂ ಆದ ಯೇಸುಕ್ರಿಸ್ತನ ಮಾತನ್ನು ಇದು ನಮಗೆ ಜ್ಞಾಪಿಸುತ್ತದೆ.

"ಹಾಗಾದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ, ನಾನೂ ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆ ಮುಂದೆ ಒಪ್ಪಿಕೊಳ್ಳುವೆನು... ಭೂಲೋಕದ ಮೇಲೆ ಸಮಾಧಾನ ಹುಟ್ಟಿಸುವುದಕ್ಕೆ ಬಂದೆನೆಂದು ನೆನಸಬೇಡಿರಿ, ಸಮಾಧಾನವನ್ನು ಹುಟ್ಟಿಸುವುದಕ್ಕೆ ನಾನು ಬಂದಿಲ್ಲ, ಖಡ್ಗವನ್ನು ಹಾಕುವುದಕ್ಕೆ ಬಂದೆನು, ಹೇಗೆಂದರೆ ಮಗನಿಗೂ ತಂದೆಗೂ, ಮಗಳಿಗೂ ತಾಯಿಗೂ, ಸೊಸೆಗೂ ಅತ್ತೆಗೂ, ಭೇದ ಹುಟ್ಟಿಸುವುದಕ್ಕೆ ಬಂದೆನು. ಹೀಗೆ ಒಬ್ಬ ಮನುಷ್ಯನಿಗೆ ಅವನ ಮನೆಯವರೇ ವೈರಿಗಳಾಗುವರು. ತಂದೆಯ ಮೇಲಾಗಲೀ ತಾಯಿಯ ಮೇಲಾಗಲೀ ನನ್ನ ಮೇಲೆ ಇಡುವುದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ. ಮತ್ತು ಯಾವನಾದರೂ ತನ್ನ ಶಿಲುಬೆಯನ್ನು ತೆಗೆದುಕೊಂಡು ನನ್ನ ಹಿಂದೆ ಬಂದ ಹೊರತು ನನಗೆ ಯೋಗ್ಯನಲ್ಲ.

ಆಹಾ, ಪ್ರಿಯ ಮಿತ್ರರೇ, ಯಾವಾಗಲೂ ನಮ್ಮ ಮುಂದಿರಬೇಕಾದ ಪ್ರಶ್ನೆಯೆಂದರೆ ಯೆಹೋವನ ಪಕ್ಷದಲ್ಲಿರುವವರು ಯಾರು? ಪ್ರತಿಯೊಂದು ದಿನವೂ ನಮ್ಮನ್ನು ನಮ್ಮ ಯಾತ್ರಾ ಮಾರ್ಗದ ಅಂತ್ಯ ಭಾಗದ ಸಮೀಪಕ್ಕೆ ಕೊಂಡೊಯ್ಯುತ್ತಿರುತ್ತದೆ. ಪ್ರತಿಯೊಂದು ದಿನವೂ ದೇವರಿಗೆ ನಿಷ್ಠೆಯುಳ್ಳವರಾಗಿರಲು ನಮಗೆ ಕರೆ ನೀಡುತ್ತದೆ. ಆದರೆ ನಾವು ಈ

ಸವಾಲನ್ನು ಎದುರಿಸುವೆವಾ? ಸತ್ಯದ ಮೂಲಕವಾಗಿ ನಾವು ಪಡೆದ ನಮ್ಮ ತಾಯಿಯಾಗಲೀ, ತಂದೆಯಾಗಲೀ, ಸಹೋದರರಾಗಲೀ, ಸಹೋದರಿಯರಾಗಲೀ, ದಾರಿ ಮೊಗ್ಗಲಿಗೆ ಬಿದ್ದು ಸತ್ಯವನ್ನು ಬಿಟ್ಟು ಹೋದಾಗಲೂ ಸಹ ನಾವು ಯೆಹೋವನ ಪಕ್ಷದಲ್ಲಿ ನಿಲ್ಲುವಷ್ಟು ಸಂಪೂರ್ಣವಾಗಿ ಪರಲೋಕದ ನಮ್ಮ ತಂದೆ ದೇವರ ಚಿತ್ತಕ್ಕೆ ನಮ್ಮನ್ನು ಪ್ರತಿಷ್ಠಿಸಿಕೊಂಡಿದ್ದೇವೋ? ಹೌದು, ಹೀಗೆ ನಾವು ಒಬ್ಬಂದಿಗರಾಗಿ ನಿಲ್ಲುವಂತಾದರೂ, ಇದಕ್ಕೆ ನಾವು ಶಕ್ತರೋ? ಹೀಗೆ ಇದಕ್ಕೆ ಶಕ್ತರಾದವರಿಗೆ ಕೀರ್ತನೆಗಾರನ ಮಾತಿನಲ್ಲಿ ಎಂಥಾ ಆದರಣೆ ಇರುವುದು.

"ನಿನ್ನ ಮೊಗ್ಗುಲಲ್ಲಿ ಸಾವಿರ ಜನರು, ನಿನ್ನ ಬಲಗಡೆಯಲ್ಲಿ ಹತ್ತುಸಾವಿರ ಜನರು ಸತ್ತು ಬಿದ್ದರೂ ನಿನಗೇನೂ ತಟ್ಟದು. ನೀನು ಅದನ್ನು ಕಣ್ಣಾರೆ ಕಂಡು ದುಷ್ಟರಿಗೆ ಪ್ರತಿ ದಂಡನೆ ಉಂಟೆಂಬುದಕ್ಕೆ ಸಾಕ್ಷಿಯಾಗಿರುವಿಯಷ್ಟೆ... ಯಾವ ಕೇಡೂ ನಿನಗೆ ಸಂಭವಿಸದು; ಉಪದ್ರವವು ನಿನ್ನ ಗುಡಾರದ ಸಮೀಪಕ್ಕೂ ಬಾರದು. ನೀನು ಹೋಗುವಲ್ಲೆಲ್ಲಾ ನಿನ್ನನ್ನು ಕಾಯುವುದಕ್ಕೆ ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು... ಅವನು ಮೊರೆಯಿಡುವಾಗ ಸದುತ್ತರವನ್ನು ದಯಪಾಲಿಸುವನು. ಇಕ್ಕಟ್ಟಿನಲ್ಲಿ ಹತ್ತಿರವಿದ್ದು ಅವನನ್ನು ತಪ್ಪಿಸಿ ಘನಪಡಿಸುವೆನು" (ಕೀರ್ತನೆ 91:7, 8, 10, 11, 15). ಮೋಶೆಯ ಗುಣವನ್ನು ಇನ್ನೂ ಹೆಚ್ಚು ಪೂರ್ಣವಾಗಿ ಗ್ರಹಿಸಲು, ಆತನು ದೇವರ ಬೆಟ್ಟದ ಮೇಲೆ ಮತ್ತೆ ಏರಿ ಆಜ್ಞಾಶಾಸನಗಳ ಕಲ್ಲಿನ ಹಲಿಗೆಗಳನ್ನು ಪಡೆಯಲು ದೇವರ ಮುಂದೆ ವಿಜ್ಞಾಪಿಸಿದ್ದ ರೀತಿಯನ್ನು ಈಗ ಪರಿಗಣನೆಗೆ ತೆಗೆದುಕೊಳ್ಳೋಣ. ಆತನು ಯೆಹೋವನಿಗೆ ಹೇಳಿದ್ದೇನೆಂದರೆ,

"ಅಯ್ಯೋ, ಅಯ್ಯೋ ಈ ಜನರು ಮಹಾಪಾಪವನ್ನು ಮಾಡಿದ್ದಾರೆ; ಚಿನ್ನದ ದೇವರನ್ನು ಮಾಡಿಕೊಂಡಿದ್ದಾರೆ, ಆದರೂ ನೀನು ಕರುಣವಿಟ್ಟು ಅವರ ಪಾಪವನ್ನು ಕ್ಷಮಿಸಬೇಕು. ಇಲ್ಲವಾದರೆ ನೀನು ಬರೆದಿರುವ (ಜೀವಿತರ) ಪಟ್ಟಿಯಿಂದ ನನ್ನ ಹೆಸರನ್ನೂ ಅಳಿಸಿಬಿಡಬೇಕೆಂದು ಕೇಳಿಕೊಳ್ಳುತ್ತೇನೆ" (ವಿಮೋ. 32:31, 32)

ಈ ಶ್ರೇಷ್ಠ ದೇವರ ಮನುಷ್ಯನ ನಿಜವಾದ ಪ್ರಭಾವ ಗುಣಗಳನ್ನು ಕೇವಲ ಮಾತು ಶಬ್ಧಗಳಿಂದ ವಿವರಿಸಲು ಸಾಧ್ಯವೇ? ನಾವು ಈತನ ವಿಷಯವಾಗಿ ಅವಲೋಕಿಸಿದಾಗ ನಮ್ಮೊಳಗೆ ಪುಳಕಿತರಾಗುತ್ತೇವೆ ಆದರೂ ನಮ್ಮ ಆ ಭಾವೋದ್ವೇಗವನ್ನು ವರ್ಣಿಸಲು ಸ್ವತಃ ನಾವು ಅಶಕ್ತರೆಂದು ಕಂಡುಬರುತ್ತದೆ. ಬಹುತೇಕ ಇವನು ಈ ಭೂಲೋಕದ ಸೃಷ್ಟಿಯಾಗಿರಲು ಸಾಧ್ಯವಿಲ್ಲವೆಂದು ತೋರುತ್ತದೆ. ಕನಿಷ್ಟವೆಂದರೆ, "ಇಂಥವರಿಗೆ ಈ ಲೋಕವು ಯೋಗ್ಯ ಸ್ಥಳವಲ್ಲ" ಎನ್ನಿಸಿಕೊಳ್ಳುವ ಗುಂಪಿನವರಲ್ಲಿ ಈತನು ಒಬ್ಬನು! ಎಂತಹ ನಂಬಿಕೆ, ಎಂತಹ ಪ್ರೀತಿ, ಎಂತಹ ಅನುತಾಪ, ಅದೆಂತಹ ಸ್ವ–ವೈರಾಗ್ಯ ಮತ್ತು ಸ್ವಾರ್ಥತ್ಯಾಗ ಈತನು ಪ್ರದರ್ಶಿಸಿದ್ದು. ಇಷ್ಟಾದರೂ ಈತನು ಶ್ರೇಷ್ಠ ಮಧ್ಯಸ್ಥನಾದ ಕ್ರಿಸ್ತನಿಗೆ ಒಂದು ಛಾಯೆ ಮಾತ್ರ. ಈ ಶ್ರೇಷ್ಟ ಮಧ್ಯಸ್ಥನ ದೇಹಕ್ಕೆ ಕ್ರಿಸ್ತನು ಸ್ವತಃ ಶಿರಸ್ಸಾಗಿ ಮತ್ತು ಸಭೆಯು ಈ ದೇಹದ

ಅಂಗವಾಗಿದೆ. ಮಿತ್ರರೇ, ಕ್ರಿಸ್ತ ಯೇಸುವಿನ (ಪರಿಪೂರ್ಣತೆಯ) ಪ್ರಮಾಣಕ್ಕೆ ನಮ್ಮನ್ನು ಅಳೆದುಕೊಳ್ಳುವುದಿರಲಿ, ಆದರೆ ದೇವರ ಮನುಷ್ಯನಾದ ಮೋಶೆಯ ಪಕ್ಕದಲ್ಲಿ ನಮ್ಮನ್ನು ಇರಿಸಿಕೊಂಡಾಗ, ನಾವು ಎಷ್ಟು ಚಿಕ್ಕವರಾಗಿ ಎಷ್ಟು ನಿಕೃಷ್ಟರಾಗಿ ಇರುವೆವು. ಈ ವಿಷಯಗಳ ಧ್ಯಾನದ ಮೂಲಕ ಬೇರೆ ಯಾವ ಪಾಠಗಳನ್ನು ಕಲಿಯಲು ನಮಗೆ ಸಾಧ್ಯವಿಲ್ಲದಿದ್ದರೂ, ನಮ್ಮಲ್ಲಿರುವ ಅನೇಕ ನ್ಯೂನತೆ, ದೌರ್ಬಲ್ಯಗಳನ್ನು ತಿದ್ದಿಕೊಂಡು ಅವುಗಳನ್ನು ಜಯಿಸುವವರಾಗಲು ಹೆಚ್ಚಾದ ಆಸಕ್ತಿಯಿಂದ ನಮ್ಮ ಪ್ರಯತ್ನಗಳನ್ನು ನವೀಕರಿಸಿಕೊಳ್ಳುವಂತೆ ನಮ್ಮನ್ನು ಪ್ರೇರೇಪಿಸಲು ಈ ಒಂದೇ ಅಂಶವು ಸಾಕಾಗುತ್ತದೆ. ಇದಲ್ಲದೆ ದೇವರು ನಮ್ಮ ಮುಂದಿಟ್ಟಿರುವ ಉನ್ನತ ಮಟ್ಟದ ಆದರ್ಶ ಗುಣಗಳನ್ನು ಗಳಿಸಿಕೊಳ್ಳುವುದಕ್ಕೆ ತೀರ್ಮಾನ ತೆಗೆದುಕೊಳ್ಳಲು, ಮುಂದೆ ಇನ್ನೂ ಉತ್ತಮ ಸಮಯ ಬರುವುದೆಂದು ಮುಂದೂಡಬಾರದು. ನಮ್ಮ ಪ್ರಾರ್ಥನೆಯು, ಕೀರ್ತನೆ 90ನೇ ಅಧ್ಯಾಯದ 12ನೇ ವಚನದಲ್ಲಿರುವ ಮೋಶೆಯ ಮಾತಿನಂತೆ ವ್ಯಕ್ತವಾಗಲಿ.

**"ನಮ್ಮ ದಿನಗಳು ಕೊಂಚವೇ ಎಂದು ಎನಿಸಿಕೊಳ್ಳುವ ಹಾಗೆ ನಮಗೆ ಕಲಿಸು; ಆಗ ಜ್ಞಾನದ ಹೃದಯವನ್ನು ಪಡಕೊಳ್ಳುವೆವು"**

## ಭಾಗ–10

# ದೇವದರ್ಶನ ಗುಡಾರ ನಿರ್ಮಾಣದ ವಿವರಣೆಗಳು

ವಿಮೋಚನಾಕಾಂಡ 33:1–7; 31:1–6; 36:1–19

ಇಸ್ರಾಯೇಲ್ಯರ ಪರವಾಗಿ ಮೋಶೆಯು ಮಾಡಿದ ವಿಜ್ಞಾಪನೆಗೆ ಉತ್ತರವಾಗಿ ದೇವರು ಅವರಿಗೆ ತನ್ನ ದೂತನು ಇನ್ನು ಮುಂದೆ ಮಾರ್ಗದರ್ಶನ ಮಾಡುವುದಾಗಿ ಮೋಶೆಗೆ ಮಾತುಕೊಟ್ಟನು. ಆದರೆ, ತನ್ನ ಕೋಪಾಗ್ನಿಯು ಅವರನ್ನು ದಹಿಸದಂತೆ ಇರುವಂತಾಗಲು ತಾನೇ ಸ್ವತಃ ಅವರ ಮಧ್ಯದಲ್ಲಿ ವಾಸಮಾಡಲು ಸಾಧ್ಯವಿಲ್ಲವೆಂದನು.

"ನೀನು ಇಲ್ಲಿಂದ ಹೊರಟು ನಾನು ನಿನಗೆ ಹೇಳಿದ ದೇಶಕ್ಕೆ ಈ ಜನರನ್ನು ನಡಿಸಿಕೊಂಡು ಹೋಗು, ನನ್ನ ದೂತನು ನಿನ್ನ ಮುಂದುಗಡೆಯಲ್ಲಿ ನಡೆಯುವನು" ವಿಮೋ. 32:34

"... ಆದರೆ ನಾನೇ ನಿಮ್ಮ ಸಂಗಡ ಬರುವುದಿಲ್ಲ; ನೀವು ನನ್ನ ಅಜ್ಞೆಗೆ ಬೊಗ್ಗದವರಾದ್ದರಿಂದ ನಾನು ದಾರಿಯಲ್ಲಿ ನಿಮ್ಮನ್ನು ಸಂಹರಿಸೇನು..." (ವಿಮೋ. 33:3)

ಅದರಂತೆ ಮೋಶೆಯು ತನ್ನ ಡೇರೆಯನ್ನು ತೆಗೆದು ಇಸ್ರಾಯೇಲ್ಯರ ಪಾಳೆಯದ ಹೊರಗೆ ಹಾಕಿಸಿದನು. ವಾಕ್ಯದಲ್ಲಿ ಹೀಗೆ ಓದುತ್ತೇವೆ; "ಮೋಶೆ ಡೇರೆಯನ್ನು ಪಾಳೆಯದ ಹೊರಗೆ ದೂರವಾಗಿ ಹಾಕಿಸುತ್ತಿದ್ದನು. ಅದಕ್ಕೆ ದೇವದರ್ಶನದ ಡೇರೆ ಎಂದು ಹೆಸರಿಟ್ಟನು. (ವಿಮೋ. 33:7)

ಇದರಂತೆ ಸಹ ಈ ಸುವಾರ್ತಾ ಯುಗದ ಪರ್ಯಂತರ ನಡೆದಿದೆ, ನಿಜರೂಪದ ದೇವದರ್ಶನ ಗುಡಾರವಾಗಿರುವ ಸಭೆಯನ್ನು ಇದರಲ್ಲಿ ದೇವರು ತನ್ನಾತ್ಮನ ಮೂಲಕ ವಾಸಿಸುವವನಾಗಿದ್ದು, ದೇವಾಜ್ಞೆಗೆ ಕಿವಿಗೊಡದ ಕಠಿಣ ಹೃದಯವುಳ್ಳ ವಿಗ್ರಹಾರಾದಕ ಸಂತತಿಯಂತಿರುವ ಈ ಲೋಕದವರಿಂದ ಹೊರಗೆ ಬಹು ದೂರದಲ್ಲಿ ಹಾಕಲಾಗಿದೆ. ಹೀಗಿರುವಲ್ಲಿ ಶ್ರೇಷ್ಠ ಮಧ್ಯಸ್ಥನ ವಿಜ್ಞಾಪನೆಯ ಫಲವಾಗಿ ದೇವರ ನಿವಾಸವು (ಇಸ್ರಾಯೇಲ್ಯರ) ಪಾಳೆಯದಂತಿರುವ ಈ ಲೋಕದ ಮಧ್ಯದಲ್ಲಿ ಶೀಘ್ರವಾಗಿ ಸ್ಥಾಪಿಸಲಾಗುವುದೆಂಬುದನ್ನು ತಿಳಿಯುವುದು ಒಂದು ಆಧರಣೆಯ ಸಂಗತಿ. ಈ ವಿಷಯವಾಗಿ ಪಾಸ್ಟರ್ ರಸೆಲ್ಲರು ದೇವದರ್ಶನ ಗುಡಾರದ ಉತ್ತಮ ಯಜ್ಞಗಳ ಛಾಯೆಗಳು ಎಂಬ ಗ್ರಂಥದಲ್ಲಿ ಈ ಮುಂದಿನ ಮಾತನ್ನು ಹೇಳಿದ್ದಾರೆ.

"... (ದೇವರ ಮತ್ತು ಮನುಷ್ಯರ) ನಡುವಿನ ಮರುಸಂಧಾನ ಕಾರ್ಯವು ಪೂರ್ಣಗೊಂಡಾಗ, ದೇವರು ಈ ಮಾನವ ಲೋಕವನ್ನು ಮಾನ್ಯ ಮಾಡಿ ತನ್ನ ನಿವಾಸವನ್ನು ಮನುಷ್ಯರ ಮಧ್ಯದಲ್ಲಿ ಸ್ಥಾಪಿಸುವನು. ಆಗ ಬರೆದಿರುವ ಮಾತು ನೆರವೇರುವುದು ಅದೇನೆಂದರೆ; ದೇವರ ನಿವಾಸವು (ದೇವರ ವಾಸಸ್ಥಾನವಾದ ಮಹಿಮ

ಪದವಿಗೆ ಸೇರಿದ ಸಭೆ) ಮನುಷ್ಯರ ಮಧ್ಯದಲ್ಲಿ ಅದೇ; ಆತನು ಅವರ ಮಧ್ಯದಲ್ಲಿ ವಾಸ ಮಾಡುವನು; ಅವರು ಆತನಿಗೆ ಪ್ರಜೆಗಳಾಗಿರುವರು; ದೇವರು ತಾನೇ ಅವರ ಸಂಗಡ (ಅವರ ದೇವರಾಗಿ) ಇರುವನು. (T 76)

ಮೋಶೆಯು ಪಾಳೆಯದಿಂದ ಹೊರ ತೆಗೆದ (ತನ್ನ ) ಡೇರೆಯ ಮತ್ತು ಮುಂದೆ ಪಾಳೆಯದ ಮಧ್ಯದಲ್ಲಿ ನಿಲ್ಲಿಸಿದ ದೇವದರ್ಶನ ಗುಡರದ ನಡುವೆ ಒಂದು ಗಮನಾರ್ಹವಾದ ವ್ಯತ್ಯಾಸವಿತ್ತು. ಕ್ರೈಸ್ತ ಸಭೆಯು ಇಂದಿನ ಪವಿತ್ರಾತ್ಮನಿಂದ (ಗರ್ಭ) ಅಂಕುರಿಸಿದ ಸ್ಥಿತಿಗೆ ಮತ್ತು ಮುಂದಿನ ಪವಿತ್ರಾತ್ಮನಿಂದ ಹುಟ್ಟಿದ ಮಹಿಮಾಸ್ಥಿತಿಗೆ ಇದೇ ರೀತಿಯ ಗಮನಾರ್ಹವಾದ ವ್ಯತ್ಯಾಸವಿರುವುದು. ಪೂರ್ವಕಾಲದ ದೇವದರ್ಶನ ಗುಡಾರ ನಿರ್ಮಾಣದ ನಕ್ಷತ್ರ ವಿವರಗಳನ್ನು ದೇವರು ತಾನೇ ತಯಾರಿಸಿ ಮೋಶೆಗೆ – ಬೆಟ್ಟದಲ್ಲಿ ನಾನು ತೋರಿಸಿದ ಮಾದರಿಯ ಪ್ರಕಾರವೇ ಎಲ್ಲವನ್ನೂ ಮಾಡಿಸಬೇಕೆಂದು ಹೇಳಿ ಅದರ ಸೂಚನೆಗಳನ್ನು ನೀಡಿದ ಹಾಗೆಯೇ ದೇವರು ಪರಲೋಕದಲ್ಲಿರುವ ಗುಡಾರದ ಮಾದರಿಯ ಪ್ರಕಾರವೇ ನಿಜರೂಪದ ಗುಡಾರ ವಿನ್ಯಾಸವನ್ನು ಉದ್ಧೇಶ ಮಾಡಿ ಅದನ್ನು ರಚಿಸಿರುವನು.

ಪೂರ್ವಕಾಲದ ಗುಡಾರದ ನಿರ್ಮಾಣದ ಸಲುವಾಗಿ ದೇವರು ವಿಶೇಷವಾಗಿ ಇಬ್ಬರು ಕುಶಲ ಕೆಲಸಗಾರರಾದ ಬೆಚಲೇಲ ಮತ್ತು ಒಹೋಲಿಯಾಬನನ್ನು ಈ ಕೆಲಸಕ್ಕೆ ನೇಮಿಸಿದ್ದನ್ನು ನಮ್ಮ ನೆನಪಿಗೆ ತರಲಾಗಿದೆ. ಇಬ್ಬರು ಕುಶಲ ಕೆಲಸಗಾರರನ್ನು ದೇವರು ವಿಶೇಷವಾಗಿ ಕರೆದು ಅವರಿಗೆ ನಿಜರೂಪದ ಗುಡಾರದ ನಿರ್ಮಾಣ ಕಾರ್ಯವನ್ನು ವಹಿಸಿದ್ದಾನೆ. ಅವರು ಯಾರೆಂದರೆ ಕ್ರಿಸ್ತನು ಮತ್ತು ಆತನ ಸಭೆ ಗಮನಿಸಬೇಕಾದ ಕುತೂಹಲಕಾರಿ ಸಂಗತಿಯೆಂದರೆ, ಯೆಶಾಯನ ಮೂಲಕವಾಗಿ ದೇವರು ತಾನೇ ಹೇಗೆ ಈ ನಿಜರೂಪದ ಬೆಚಲೇಲನು ಕ್ರಿಸ್ತನೆಂದು ತಿಳಿಯ ಪಡಿಸಿರುವನೆಂಬುದು. ಇವುಗಳು ಈ ಮುಂದಿನ ಸಮಾನ ಹೇಳಿಕೆಯಲ್ಲಿರುವುದನ್ನು ನಾವು ಗಮನಿಸಿ ಓದೋಣ.

ಯೆಹೋವನು ಮೋಶೆಗೆ ಹೀಗೆಂದನು– ವಿಚಿತ್ರವಾಗಿ ನಯವಾದ ಕೆಲಸಗಳನ್ನು ಕಲ್ಪಿಸುವುದಕ್ಕೂ ಚಿನ್ನ ಬೆಳ್ಳಿ ತಾಮ್ರಗಳಿಂದ ಕೆಲಸ ನಡಿಸುವುದಕ್ಕೂ ರತ್ನಗಳನ್ನು ಕೆತ್ತುವುದಕ್ಕೂ ಮರದಲ್ಲಿ ವಿಚಿತ್ರವಾಗಿ ಕೆತ್ತನೆ ಕೆಲಸಗಳನ್ನು ಮಾಡುವುದಕ್ಕೂ ಇವೇ ಮೊದಲಾದ ಸಮಸ್ತ ಶೃಂಗಾರವಾದ ಕೆಲಸವನ್ನು ಮಾಡುವುದಕ್ಕೂ ನಾನು ಯೆಹೂದ ಕುಲದವನಾದ ಹೂರನ ಮೊಮ್ಮಗನೂ ಊರಿಯ ಮಗನೂ ಆಗಿರುವ ಬೆಚಲೇಲನೆಂಬುವನನ್ನು ಗೊತ್ತು ಮಾಡಿದ್ದೇನೆ. ಆತನಿಗೆ ದಿವ್ಯಾತ್ಮವನ್ನು ಕೊಟ್ಟು ಬೇಕಾದ ಜ್ಞಾನ ವಿದ್ಯಾ ವಿವೇಕಗಳನ್ನೂ ಸಕಲ ಶಿಲ್ಪ ಶಾಸ್ತ್ರ ಜ್ಞಾನವನ್ನೂ ಅನುಗ್ರಹಿಸಿದ್ದೇನೆ. (ವಿಮೋ. 31:1–5)

ಆ ಅಂಕುರದ ಮೇಲೆ ಜ್ಞಾನ ವಿವೇಕದಾಯಕ ಆತ್ಮ, ಆಲೋಚನಾ ಪರಾಕ್ರಮಗಳನ್ನು ಹುಟ್ಟಿಸುವ ಆತ್ಮ, ತಿಳುವಳಿ–ಕೆಯೂ ಯೆಹೋವನ ಭಯವನ್ನು ಉಂಟು ಮಾಡುವ ಆತ್ಮ, ಅಂತು ಯೆಹೋವನ ಆತ್ಮವೇ ನೆಲೆಗೊಂಡಿರುವುದು. (ಯೆಶಾ. 11:2)

ಆದರೆ ಈ ಗುರುತು ಹಚ್ಚುವ ಕಾರ್ಯ ಇಲ್ಲಿಗೇ ಮುಗಿಯುವುದಿಲ್ಲ! ದೇವರು ಬೆಚಲೇಲನನ್ನು ಹೆಸರು ಹಿಡಿದು ಕರೆದನೆಂದು ದೇವರ ವಾಕ್ಯವು ತೋರಿಸುತ್ತದೆ. ಇದು ಈ ಹೆಸರಿನಲ್ಲಿರುವ ಆಳವಾದ  ಅರ್ಥದ ಕಡೆಗೆ ದೇವರ ಪವಿತ್ರಾತ್ಮನು ನಮ್ಮ ಗಮನವನ್ನು ಸೆಳೆಯುವ ಇನ್ನೊಂದು ವಿಧಾನ. ಇದು ಹೀಗಿರುವುದು ಕೇವಲ ಆಕಸ್ಮಿಕ ಸಂಗತಿಯಲ್ಲ.

**ಬೆಚಲೇಲ ಅಂದರೆ "ದೇವರ ನೆರಳು" ಎಂದರ್ಥ.**

ಕ್ರಿಸ್ತನ ವರ್ಣನೆಯು ಇದಕ್ಕಿಂತಲೂ ಹೆಚ್ಚು ಪ್ರಭಲವಾಗಿರಲು ಸಾಧ್ಯವಿದೆಯೇ? ಅಪೋಸ್ತಲನಾದ ಪೌಲನು ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಕ್ರಿಸ್ತನನ್ನು "ಆತನ (ತಂದೆಯ) ತತ್ವದ ಮೂರ್ತಿಯೂ" ಎಂದು ಹೇಳಿಲ್ಲವೋ? (ಇಬ್ರಿಯ 1:1–3) ಆತನು ಊರಿಯ ಮಗನಾಗಿದ್ದನು. ಮತ್ತು –

**ಊರಿ ಅಂದರೆ "ಬೆಳಕು" ಎಂದರ್ಥ.**

ಯೋಹಾನನು ಯೇಸುವಿನ ವಿಷಯವಾಗಿ ಸಾಕ್ಷಿಕೊಟ್ಟು ಹೀಗೆ ಹೇಳಿರುವನು – "ನಿಜವಾದ ಬೆಳಕು ಲೋಕಕ್ಕೆ ಬರುವುದಾಗಿತ್ತು, ಆ ಬೆಳಕೇ ಪ್ರತಿ ಮನುಷ್ಯನಿಗೂ ಬೆಳಕನ್ನು ಕೊಡುವಂತದು" (ಯೋಹಾನ 1:9) ಮತ್ತು ಸ್ವತಃ ಯೇಸುವೇ ತನ್ನ ಬಗ್ಗೆ "ನಾನು ಲೋಕಕ್ಕೆ ಬೆಳಕಾಗಿದ್ದೇನೆ" ಎಂದು ಸಾರಿ ಹೇಳಿರುವನು (ಯೋಹಾನ 8:12) ಈತನು ಹೂರನ ಮಗನಾಗಿದ್ದನು.

ಸೈರಸ್ ಪಾಟ್‌ರವರ "ಡಿಕ್ಷನರಿ ಆಫ್ ಪ್ರಾಪರ್ ನೇಮ್ಸ್" ಪ್ರಕಾರ "ಹೂರ್" ಅಂದರೆ ಉದಾತ್ತ ಸ್ವಭಾವದವನು ಎಂದೂ "ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಡಿಕ್ಷನರಿ ಆಫ್ ಪ್ರಾಪರ್ ನೇಮ್ಸ್" ಪ್ರಕಾರ ಭೂರಂಧ್ರ ಅಥವಾ ನೆಲಗವಿ ಎಂದೂ ಅರ್ಥ.

ಈ ಎರಡೂ ಅಂಶಗಳು ನಿಜರೂಪದ ಬೆಚಲೇಲನ ವ್ಯಕ್ತಿತ್ವವನ್ನು ದೃಢಪಡಿಸುತ್ತವೆ. ತಾನು ಐಶ್ವರ್ಯವಂತನಾಗಿದ್ದು ನಮಗೋಸ್ಕರ ಬಡತನದಲ್ಲಿ ಸೇರಿದವನಾಗಿ, ಅಂಧಕಾರದ ಛಾಯೆಗೆ ಸೇರಲು ಬೆಳಕಿನ ರಾಜ್ಯವನ್ನು ತ್ಯಜಿಸಿ, ಹೀಗೆ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಿದ ಯೇಸುವಿನ ಉದಾತ್ತ ಭಾವವನ್ನು ಯಾರು ಅಲ್ಲಗಳೆಯುವರು? ನಿಜವಾದ ಉದಾತ್ತ ಭಾವವುಳ್ಳವರು ಮಾತ್ರ ಈ ತ್ಯಾಗ ಬಲಿದಾನಗಳನ್ನು ಮಾಡುವರು. ನಿತ್ಯವಾಗಿ ಜೀವಿಸುವ ಹಕ್ಕುಳ್ಳ ಏಕೈಕ ಮಾನವ ಸೃಷ್ಟಿಯು ಅಂಧಕಾರದ ಛಾಯೆಯಲ್ಲಿ ಸೇರುವುದು ಈ ಪಾಪ ಶಾಪಗಳಿಂದ ಕೂಡಿದ ಈ ಪ್ರಪಂಚದಲ್ಲಿ ಜೀವಿಸುವುದು ಮಾತ್ರವಲ್ಲದೆ ಭೂರಂಧ್ರದಂತಿರುವ ಸಮಾಧಿಯಲ್ಲಿ ಸೇರಿ ಮರಣಾವಸ್ಥೆಗೆ ಹೋಗುವುದನ್ನು ಒಳಗೊಂಡಿದೆ. ನಮ್ಮ ಕರ್ತನಾದ ಯೇಸುವು ಎಂಥಾ ಅದ್ಭುತವಾದ ರಕ್ಷಕನು. ಈತನು ಯೆಹೂದ ಕುಲದವನಾಗಿದ್ದನು.

**ಯೆಹೂದ ಅಂದರೆ "ಸ್ತುತಿ"**

ಇದೆಷ್ಟು ಮಹತ್ವವುಳ್ಳದ್ದು! ಯೇಸುವು (ಮನುಷ್ಯನಾಗಿ ಬರುವುದಕ್ಕೆ ಮೊದಲಿನ) ತನ್ನ ಪೂರ್ವದ ಅಸ್ಥಿತ್ವದಲ್ಲಿ ಪರಲೋಕ ರಾಜ್ಯದಲ್ಲಿ ದೇವರ ಸೃಷ್ಟಿಗಳಲೆಲ್ಲಾ ಉತ್ಕೃಷ್ಟವೂ ಘನವೂ ಆಗಿ ಪರಲೋಕ ಜೀವಿಗಳು ಮತ್ತು ದೇವದೂತರೆಲ್ಲರಿಂದ ಗೌರವ ಸ್ತುತಿಗಳನ್ನು ಹೊಂದುತ್ತಿದ್ದನು. ಸುವಾರ್ತಾಯುಗ ಪರ್ಯಂತರವೂ ನಿಜ ಪ್ರತಿಷ್ಠಿತರಾದ ದೇವಜನರಿಂದ ಸ್ತುತಿ ಹೊಂದುತ್ತಿದ್ದು ಮುಂದೆ ಬರುವ ನಿತ್ಯಕಾಲದ ಪರ್ಯಂತರವೂ ಭೂಪರಲೋಕಗಳಲ್ಲಿರುವ ಎಲ್ಲಾ ಜೀವಿಗಳಿಂದ ಸ್ತುತಿ ಹೊಂದುವನು.

ಹೀಗೆ ಆತನು ತನ್ನ ಮನುಷ್ಯ ಪೂರ್ವಾಸ್ತಿತ್ವದಲ್ಲಿ ಮಹಿಮೆಯಲ್ಲಿ ಸ್ತುತಿ ಹೊಂದುತ್ತಿದ್ದು, ತನ್ನ ಗುಣಾತಿಶಯದ ಮೂಲಕ ಲೋಕದಲ್ಲಿ ಬೆಳಕಾಗಿ ಬರುವ ಸಲುವಾಗಿ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ತಗ್ಗಿಸಿಕೊಂಡು ಮನುಷ್ಯನಾದ ಕ್ರಿಸ್ತ ಯೇಸು ಆದನು. ತಾನು ಎಲ್ಲಾ ಮನುಷ್ಯರಿಗೋಸ್ಕರ ಮರಣವನ್ನು ಅನುಭವಿಸಿ(ಭೂರಂಧ್ರವಾದ) ಸಮಾಧಿಯ ಸ್ಥಿತಿಗೆ ಸೇರಿದನು. ಈಗ ಆತನು ಅತ್ಯುನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ದೈವಸ್ವಭಾವದಲ್ಲಿ ಪಾಲು ಹೊಂದಿ ಸ್ಪಷ್ಟವಾದ ರೀತಿಯಲ್ಲಿ ತನ್ನ ತಂದೆಯ ಪ್ರತಿರೂಪವಾಗಿರುವನು. ಇಂತಹ ಒಬ್ಬನಿಗೆ ದೇವರು ಮನುಷ್ಯರ ಮಧ್ಯದಲ್ಲಿರಬೇಕಾದ ನಿಜರೂಪದ ಶ್ರೇಷ್ಠ ಗುಡಾರದ ಸಾಮಗ್ರಿಗಳನ್ನು ಸಿದ್ಧ ಮಾಡುವ ದೊಡ್ಡ ಜವಾಬ್ಧಾರಿಯನ್ನು ವಹಿಸಿರುವನು.

ಬೆಚಲೇಲನಿಗೆ ತಾನು ಹೇಗೆ ವಿಚಿತ್ರವಾಗಿ ನಯವಾದ ಕೆಲಸಗಳನ್ನು ಕಲ್ಪಿಸುವುದಕ್ಕೂ ಚಿನ್ನ ಬೆಳ್ಳಿ ತಾಮ್ರಗಳಿಂದ ಕೆಲಸ ನಡಿಸುವುದಕ್ಕೂ ರತ್ನಗಳನ್ನು ಕೆತ್ತುವುದಕ್ಕೂ ಮರದಲ್ಲಿ ವಿಚಿತ್ರವಾಗಿ ಕೆತ್ತನೆಕೆಲಸಗಳನ್ನು ಮಾಡುವುದಕ್ಕೂ ಇವೇ ಮೊದಲಾದ ಸಮಸ್ತ ಶೃಂಗಾರವಾದ ಕೆಲಸವನ್ನು ಮಾಡುವುದಕ್ಕೂ ದಿವ್ಯಾತ್ಮ ವರಗಳನ್ನು ಅನುಗ್ರಹಿಸಿದನೆಂದು (ವಿಮೊ. 31:4–5) ಪ್ರಕಟಿಸಿದ ನಂತರ ದೇವರು ಮತ್ತೂ ಹೇಳಿರುವುದು.

"ಅವನೊಂದಿಗೆ ದಾನ್ ಕುಲದವನಾದ ಅಹೀನಾಮಾಕನ ಮಗನಾದ ಒಹೊಲೀಯಾಬನನ್ನೂ ನೇಮಿಸಿದ್ದೇನೆ" ವಿಮೋ. 31:6. ಇಲ್ಲಿ ಸಹ, ನಿಜರೂಪದ ಒಹೊಲೀಯಾಬನನ್ನಾಗಿ, ಸಭೆಯನ್ನು ಸ್ಪಷ್ಟವಾಗಿ ತೋರಿಸಲಾಗಿದೆ ಎಂದು ನಂಬುತ್ತೇವೆ. ಯಾಕೆಂದರೆ–

**ಒಹೊಲೀಯಾಬ ಅಂದರೆ "ತಂದೆಯ ಗುಡಾರ" ಎಂದರ್ಥ.**

ಕ್ರೈಸ್ತಸಭೆ ಈ ಸುವಾರ್ತಾಯುಗದಲ್ಲಿ ದೇವರು ತನ್ನ ಆತ್ಮನ ಮೂಲಕ ವಾಸ ಮಾಡುವ ಗುಡಾರವಾಗಿ, ನಿರ್ವಹಿಸಲಿರುವ ನಿಜವಾದ ಕಾರ್ಯಕ್ಕೆ ಇದಕ್ಕಿಂತಲೂ ಹೆಚ್ಚು ಗಮನಾರ್ಹವಾದ ರೀತಿಯಲ್ಲಿ ಪ್ರತಿಪಾದಿಸಲು ಸಾಧ್ಯವೇ? ಸಾಮೂಹಿಕವಾಗಿ ಸಭೆಯ ವಿಷಯದಲ್ಲಿ ಯಾವುದು ಸತ್ಯವೋ ಅದು ಪ್ರತಿ ಸಭಾಸದಸ್ಯನ ವಿಷಯದಲ್ಲೂ ಸತ್ಯವೇ

ಆಗಿರಬೇಕು. ಅಪೋಸ್ತಲನು ಪ್ರಕಟಿಸಿರುವಂತೆ ನಾವು ನಿರಂತರವೂ "ದೇವರ ಆಲಯ" ಆಗಿದ್ದೇವೆ. "ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸ ಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ? (1 ಕೊರಿಂಥ 3:16) ಅವನು ಅಹಿಸಾಮಾಕನ ಮಗನು. ಮತ್ತು

**ಅಹಿಸಾಕನು ಅಂದರೆ "ನನ್ನ ಸಹೋದರನು ಆಧಾರವಾದನು" ಎಂದರ್ಥ.**

ಇದೆಷ್ಟು ಸತ್ಯ! ನಾವು ಹೇಳುವುದೇನೆಂದರೆ ನಮ್ಮ ಹಿರಿಯ ಸಹೋದರನಾದ ಯೇಸುವಿನ ಆಧಾರವಿಲ್ಲದೆ ನಾವು ಏನು ಮಾಡಲೂ ಸಾಧ್ಯವಿಲ್ಲ. ನಾವು ಕೇವಲ ಕೊಂಬೆಗಳಷ್ಟೇ ನಮ್ಮ ಆಧಾರಕ್ಕಾಗಿ ದ್ರಾಕ್ಷೆ ಬಳ್ಳಿಯನ್ನು ನೋಡಬೇಕು. "ನಾನು ದ್ರಾಕ್ಷೇಬಳ್ಳಿ ನೀವು ಕೊಂಬೆಗಳು... ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ". (ಯೋಹಾನ 15:5) ಆತನು ದಾನ್ ಕುಲದವನಾಗಿದ್ದನು. ಮತ್ತು –

**ದಾನ್ ಅಂದರೆ "ನ್ಯಾಯ ವಿಚಾರಣೆ" ಎಂದರ್ಥ.**

ನಿಗದಿತಕಾಲದಲ್ಲಿ ಲೋಕದ ನ್ಯಾಯವಿಚಾರಣೆ ಮಾಡಲು ದೇವರು ಸಭೆಯನ್ನು ನೇಮಿಸಿದ್ದಾನೆ. (1 ಕೊರಿಂಥ 6:2) ಆದರೆ ಆ ಸಬೆಯಲ್ಲಿ ಸೇರುವವರೆಲ್ಲರೂ ಈಗ ತಮ್ಮನ್ನು ತಾವೇ ನ್ಯಾಯವಿಚಾರಣೆ ಮಾಡಿಕೊಳ್ಳಬೇಕೆಂದು ಅವರಿಗೆ ಬುದ್ಧಿವಾದ ಹೇಳಲಾಗಿದೆ. "ನಮ್ಮನ್ನು ಸರಿಯಾಗಿ ನ್ಯಾಯವಿಚಾರಣೆ ಮಾಡಿಕೊಳ್ಳುವುದು" ಎಂಬ ಶೀರ್ಷಿಕೆ ಅಡಿಯಲ್ಲಿ ಪಾಸ್ಟರ್ ರಸಲ್ಲರು ಸತ್ಯವೇದಾಧ್ಯಯ ಪಾಠಮಾಲೆಯ ಆರನೇ ಗ್ರಂಥದ ಪುಟ 409ರಲ್ಲಿ ಹೇಳುವುದು "ಅಪೋಸ್ತಲನಾದ ಪೌಲನು– ನೂತನ ಸೃಷ್ಟಿಗಳಾದ ನಮ್ಮ ಸರಿಯಾದ ರೀತಿಯ ಬೆಳವಣಿಗೆ ಹಾಗೂ ನಮ್ಮ ವಿಷಯವಾಗಿ ನಾವು ಸರಿಯಾಗಿ ನ್ಯಾಯವಿಚಾರಿಸಿಕೊಳ್ಳುವದು ಇಲ್ಲವೇ ನಮ್ಮನ್ನು ವಿಮರ್ಶಿಸಿಕೊಳ್ಳುವುದು–ಇವುಗಳನ್ನು ಸೂಚಿಸಿ ಹೀಗೆ ಹೇಳಿದ್ದಾನೆ. "ಪ್ರಿಯರೇ, ಈ ವಾಗ್ದಾನಗಳು ನಮಗಿರುವುದರಿಂದ ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವುದಕ್ಕೆ ಪ್ರಯತ್ನಿಸೋಣ" (2ಕೊರಿಂಥ 7:1) ಪ್ರತಿಯೊಬ್ಬನೂ ತನ್ನನ್ನು ಪರೀಕ್ಷಿಸಿಕೊಳ್ಳಲಿ–ಅವನು (ಪರಿಪೂರ್ಣತೆಯಿಂದ) ಬಿದ್ದುಹೋದ ತನ್ನ ಶರೀರ ಭಾವದ ಬಲಹೀನತೆಗಳು ಮತ್ತು ಕಲ್ಮಶಗಳನ್ನು ಗಮನಿಸಿಕೊಂಡು ಅವುಗಳಿಂದ ತನ್ನನ್ನು ಶುಚಿಮಾಡಿಕೊಳ್ಳಲು ಶ್ರಮಿಸಲಿ. ಹೀಗೆ ಅವನು ತನ್ನ ಪೂರ್ವ ಸ್ವಭಾವವನ್ನು ಅದರ ಕೃತ್ಯಗಳ ಸಮೇತ ತೆಗೆದಿಟ್ಟು ದಿನೇ ದಿನೇ ನೂತನವಾಗುತ್ತಾ ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಸಾಗುತ್ತಾ ನಮ್ಮ ವಿಮೋಚಕನು ನಮ್ಮ ಕರ್ತನು ನಮಗೆ ಮಾದರಿಯೂ ಸಹ ಆಗಿರುವ ದೇವಕುಮಾರನ ಸ್ವರೂಪಕ್ಕೆ ಹೆಚ್ಚು ಹೆಚ್ಚಾಗಿ ಮಾರ್ಪಡಲಿ. ನಾವು ನಮ್ಮ ಶರೀರಭಾವವನ್ನು ಸಾಧ್ಯವಾದಷ್ಟು ಶುಚಿ ಮಾಡಿಕೊಳ್ಳುವುದಲ್ಲದೆ, ನಮ್ಮ ಆತ್ಮ ಅಥವಾ ಮನೋಭಾವ, ನೂತನ ಮನಸ್ಸು, ನಮ್ಮ ಪವಿತ್ರವಾದ ಮನೋ ನಿರ್ಧಾರ ಅಥವಾ ನಮ್ಮ ಚಿತ್ತ ಇವುಗಳನ್ನು ಪೂರ್ಣ

ಸ್ವಾಧೀನ ಮಾಡಿಕೊಂಡವನಾಗಿ, ನಮ್ಮ ಎಲ್ಲಾ ಆಲೋಚನೆಗಳನ್ನು ಕ್ರಿಸ್ತನಲ್ಲಿ ದೃಷ್ಟಾಂತವಾಗಿ ತೋರಿಬಂದ ದೇವರ ಚಿತ್ತಕ್ಕೆ ಅಧೀನ ಮಾಡಿಕೊಳ್ಳಲಿ ಎಂದು ಅಪೋಸ್ತಲನಾದ ಪೌಲನು ನಮಗೆ ಒತ್ತಾಯ ಮಾಡಿದ್ದಾನೆ.

ಆತನ ಮುಂದಿನ ವಾಸಸ್ಥಾನವಾಗಲಿರುವ ಆ ಗುಡಾರವನ್ನು ಕಟ್ಟುವುದಕ್ಕೆ ದೇವರಿಂದ ಕರೆಯಲ್ಪಟ್ಟಿರುವ ಕ್ರಿಸ್ತನು ಮತ್ತು ಆತನ ಸಭೆಯ ಗುಣ, ಮನಸ್ಸು, ಚಿತ್ತ ಮತ್ತು ಸ್ವಭಾವದ ಸೌಂದರ್ಯವನ್ನು ಪವಿತ್ರಾತ್ಮವು ಈ ಅರಣ್ಯದ ಅಲೆದಾಟಗಳ ಮಧ್ಯೆ ನಮಗೆ ಹೀಗೆ ಚಿತ್ರಿಸುತ್ತದೆ.

ಅದರೆ ದೇವರ ಈ ವಿಶೇಷ ವಾಕ್ಯಭಾಗದಿಂದ ಇನ್ನೂ ಬೇರೆ ಪಾಠಗಳನ್ನು ನಾವು ಪಡೆಯಬಹುದು. ಇವುಗಳಲ್ಲಿ ಕೆಲವು (ಕ್ರಿಸ್ತನು ನೀಡಿದ) ಈಡು ಹಾಗೂ ಪಾಪ ನಿವಾರಣಾ ಯಜ್ಞದ ವಿಷಯವಾದ ಬೋಧನೆಗಳನ್ನು ದೃಢೀಕರಿಸುವಂತವುಗಳು. ಇಲ್ಲಿ ಸ್ವಲ್ಪ ಸಮಯ ನಿಂತು ಈ ಪುರಾತನ ದೇವದರ್ಶನ ಗುಡಾರದ ಸಮಕ್ಷಮದಲ್ಲಿ ದೇವರ ಯೋಜನೆಯಲ್ಲಿನ ಇಂತಹ ಕೆಲವು ಮುಖ್ಯ ಲಕ್ಷಣಗಳನ್ನು ಧ್ಯಾನಿಸುವುದು ನಮ್ಮ ಉದ್ಧೇಶ.

ದೇವದರ್ಶನ ಗುಡಾರ ನಿರ್ಮಾಣದ ಸೂಚನೆಗಳನ್ನು ಎಷ್ಟು ಎಚ್ಚರಿಕೆಯಿಂದ ಮೋಶೆಗೆ ನೀಡಲಾಗಿದೆ ಎಂಬ ಅಂಶವೇ ಇದರ ವಿನ್ಯಾಸದ ಪ್ರತಿಯೊಂದು ವಿವರಣೆಗಳು ಇದರ ಉದ್ಧೇಶಿತವಾದ ದೇವಜನರಿಗೆ ವಿಶೇಷ ಮಹತ್ವ ಹೊಂದಿತ್ತು ಎಂಬ ಸತ್ಯಾಂಶಕ್ಕೆ ಸಾಕ್ಷಿಯಾಗಿದೆ ಎಂಬುದಾಗಿ ನಾವು ಗಮನಿಸಿತ್ತೇವೆ. ದೇವ ಜನರೆಂದರೆ ದೇವರ ಮಕ್ಕಳು ಚಿತ್ರ ಮಾಧ್ಯಮದ ಮೂಲಕವಾಗಿ ದೇವರು ಅವರಿಗೆ ಬೋಧನೆ ಮಾಡಿ ಭಕ್ತಿ ವೃದ್ಧಿ ಉಂಟುಮಾಡುವನು. ಖಂಡಿತವಾಗಿಯೂ ದೇವದರ್ಶನ ಗುಡಾರವು ಇಸ್ರಾಯೇಲ್ಯರಿಗೆ ನಿದರ್ಶನವಾಗಿ ಸಂಭವಿಸಿದ ಹಲವು ವಿಶೇಷವಾಗಿ ರೂಪಿತವಾದ ಸಂಗತಿಗಳಲ್ಲಿ ಒಂದು. ಆದರೆ ಇದು ನಮಗೆ ಬುದ್ಧಿ ಪಾಠವಾಗಿ ನಮ್ಮ ಭಕ್ತಿವೃದ್ಧಿಗಾಗಿ ಬರೆಯಲ್ಪಟ್ಟಿತ್ತು.

ನಾವು ಈ ಅಧ್ಯಯನವನ್ನು ದೇವದರ್ಶನ ಗುಡಾರದ ಮತ್ತು ಅದರ ಮೇಲೊದಿಕೆಯ ವಿಷಯಗಳಿಗೆ ಸೀಮಿತಗೊಳಿಸಿದ್ದೇವೆ. ಈ ವಿಷಯವಾಗಿ ದೇವರು ನೀಡಿದ ಸೂಚನೆಗಳನ್ನು ನಾವು ಮೊದಲು ಪರಿಗಣಿಸೋಣ.

(ನನ್ನ ನಿವಾಸಕ್ಕಾಗಿ) ಒಂದು ಗುಡಾರವನ್ನು ಹತ್ತು ತಾನು ಬಟ್ಟೆಗಳಿಂದ ಮಾಡಿಸಬೇಕು. ಅವು ಹೊಸೆದ ನಾರಿನ ಬಟ್ಟೆಗಳಾಗಿರಬೇಕು. ಅವುಗಳಲ್ಲಿ ನೀಲಿ ಧೂಮ್ರ ರಕ್ತವರ್ಣಗಳ ದಾರದಿಂದ ಕೆರೂಬಿಗಳನ್ನು ಚಮತ್ಕಾರವಾಗಿ ಕಸೂತಿ ಹಾಕಿರಬೇಕು" (ವಿಮೋ 26:1). "ಪ್ರತಿಯೊಂದು ಬಟ್ಟೆಯೂ ಇಪ್ಪತ್ತೆಂಟು ಮೊಳ ಉದ್ದವಾಗಿಯೂ ನಾಲ್ಕು ಮೊಳ ಅಗಲವಾಗಿಯೂ ಇರಬೇಕು; ಎಲ್ಲಾ ಬಟ್ಟೆಗಳೂ ಒಂದೇ ಅಳತೆಯಾಗಿರಬೇಕು" (ವಿಮೋ. 26:2).

ಐದೈದು ಬಟ್ಟೆಗಳನ್ನು ಒಂದೊಂದಾಗಿ ಜೋಡಿಸಬೇಕು" (ವಿಮೋ. 26:3).

ಈ ಎರಡು ಜೋಡಣೆಗಳಲ್ಲಿ ಒಂದೊಂದರ ಕೊನೆಯ ಅಂಚಿನಲ್ಲಿ ನೀಲಿ ದಾರದಿಂದ ಕುಣಿಕೆಗಳನ್ನು ಮಾಡಿಸಬೇಕು (ವಿಮೋ. 26:4).

ಆ ಕುಣಿಕೆಗಳು ಐವತ್ತರ ಮೇರೆಗೆ ಒಂದಕ್ಕೊಂದು ಎದುರಾಗಿರಬೇಕು (ವಿಮೋ.26:5).

ಅದಲ್ಲದೆ ಐವತ್ತು ಚಿನ್ನದ ಕೊಂಡಿಗಳನ್ನು ಮಾಡಿಸಿ ಆ ಬಟ್ಟೆಗಳನ್ನು ಒಂದಕ್ಕೊಂದು ಕೂಡಿಸಬೇಕು. ಹೀಗೆ ಒಂದೇ ಗುಡಾರವಾಗುವುದು (ವಿಮೋ. 26:6).

"ಈ ಗುಡಾರದ ಮೇಲೆ ಹೊದಿಸುವುದಕ್ಕಾಗಿ ಆಡು ಕೂದಲಿನ ಹನ್ನೊಂದು ತಾನು ಬಟ್ಟೆಗಳನ್ನು ಮಾಡಿಸಬೇಕು.

"ಒಂದೊಂದು ಬಟ್ಟೆಯೂ ಮೂವತ್ತು ಮೊಳ ಉದ್ದವಾಗಿಯೂ ನಾಲ್ಕು ಮೊಳ ಅಗಲವಾಗಿಯೂ ಇರಬೇಕು. ಎಲ್ಲಾ ಬಟ್ಟೆಗಳೂ ಒಂದೇ ಅಳತೆಯಾಗಿರಬೇಕು (ವಿಮೋ. 26:8).

"ಐದು ಬಟ್ಟೆಗಳನ್ನು ಒಂದಾಗಿ ಜೋಡಿಸಿ ಮಿಕ್ಕ ಆರು ಬಟ್ಟೆಗಳನ್ನೂ ಒಂದಾಗಿ ಜೋಡಿಸಿ ಆರನೆಯ ಬಟ್ಟೆಯನ್ನು ಡೇರೆಯ ಮುಂಭಾಗದಲ್ಲಿ ಮಡಿಸಿ ತೂಗಾಡುವಂತೆ ಮಾಡಬೇಕು. (ವಿಮೋ. 26:9)

"ಒಂದೊಂದರ ಕೊನೆಯ ಬಟ್ಟೆಯ ಅಂಚಿನಲ್ಲಿ ಐವತ್ತೈದು ಕುಣಿಕೆಗಳನ್ನು ಮಾಡಿಸಬೇಕು" (ವಿಮೋ. 26:10)

"ತಾಮ್ರದ ಐವತ್ತು ಕೊಂಡಿಗಳನ್ನು ಮಾಡಿಸಿ ಒಂದೇ ಡೇರೆಯಾಗುವಂತೆ ಆ ಕೊಂಡಿಗಳನ್ನು ಕುಣಿಕೆಗಳಲ್ಲಿ ಸಿಕ್ಕಿಸಿ ಸಮಸ್ತವನ್ನೂ ಕೂಡಿಸಬೇಕು" (ವಿಮೋ. 26:11)

"ಹೊದಿಕೆಯ ಬಟ್ಟೆಗಳಲ್ಲಿ ಅರ್ಧ ಬಟ್ಟೆ ಹೆಚ್ಚಾಗಿರುವದಷ್ಟೆ; ಆ ಹೆಚ್ಚಿನ ಭಾಗವು ಗುಡಾರದ ಹಿಂಭಾಗದಲ್ಲಿ ಮಡಿಚಿ ತೂಗಾಡುವಂತೆ ಬಿಡಬೇಕು." (ವಿಮೋ. 26:12)

## ದೇವದರ್ಶನ ಗುಡಾರದ ಮೇಲ್ಹೊದಿಕೆಗಳು
## ಕಡಲು ಹಂದಿ ತೊಗಲಿನ ಮೊದಲನೇ ಮೇಲ್ಹೊದಿಕೆ

"ಈ ಹೊದಿಕೆಗೆ ಹೊದಿಸುವುದಕ್ಕಾಗಿ ಹದಮಾಡಿರುವ ಕೆಂಪು ಬಣ್ಣದ ಕುರಿದೊಗಲುಗಳಿಂದ ಒಂದು ಮೇಲ್ಹೊದಿಕೆಯನ್ನೂ ಕಡಲು ಹಂದಿಯ ತೊಗಲುಗಳಿಂದ ಮತ್ತೊಂದು ಮೇಲ್ಹೊದಿಕೆಯನ್ನೂ ಮಾಡಿಸಬೇಕು ( ವಿಮೋ. 26:14).

ನಿತ್ಯವಾದದ್ದಾಗಿರುವ ಉದ್ಧೇಶವುಳ್ಳ ಯುಗಯುಗಾಂತರಗಳ ದೈವ ಯೋಜನೆಯನ್ನು ಅಂದರೆ (ಮಾನವ ಜನಾಂಗವನ್ನು ಪಾಪ ಮರಣಗಳಿಂದ) ವಿಮೋಚನೆ ಮಾಡುವ ಪ್ರಭಾವವುಳ್ಳ ಸಂಕಲ್ಪವನ್ನು ಯೆಹೋವನು ಕ್ರಿಸ್ತನಲ್ಲಿ ಉದ್ಧೇಶಿಸಿದ್ದನ್ನು ನೆನಪು ಮಾಡಿಕೊಳ್ಳುವುದು ನಮಗೆ ಒಳ್ಳೆಯದು. ಎಫೆಸ. 3:11ರಲ್ಲಿ ನಾವು ಹೀಗೆ ಓದುತ್ತೇವೆ. "ದೇವರು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪ..." ಆದಿಯಲ್ಲಿ ದೇವರೊಂದಿಗಿದ್ದ ದೇವರ ವಾಕ್ಯವಾಗಿರುವ ಲೋಗಾಸ್ ಎಂಬುವನಲ್ಲಿ ಇದನ್ನು ಉದ್ಧೇಶಿಸಿರಲಿಲ್ಲವೆಂಬುದನ್ನು ನಾವು ಜಾಗರೂಕರಾಗಿ ಗಮನಿಸಬೇಕು. ಅದಕ್ಕೆ ಪ್ರತಿಯಾಗಿ, ಆ ವಾಕ್ಯವೆಂಬಾತನು ದೇವರ ಯೋಜನೆ ಆಗುವ ಮೊದಲು ಉದ್ಧೇಶಿಸಲ್ಪಟ್ಟಿದ್ದ ಆ ಕ್ರಿಸ್ತ ಯೇಸು ತನ್ನ ತಂದೆಯ ಬಳಿಯಲ್ಲಿ ತನಗಿದ್ದ ಮಹಿಮೆಯನ್ನು ಬಿಟ್ಟವನಾಗಿ (ಮಾನವ) ಶರೀರವನ್ನು ಧರಿಸಬೇಕಾಗಿ ಬಂತು (ಯೋಹಾನ 1:14) ಕ್ರಿಸ್ತನು ಅಂದರೆ ಅಭಿಷಕ್ತನು ಎಂದರ್ಥ. ಮನುಷ್ಯನಾಗಿ ಬರುವ ಮೊದಲು ತನಗಿದ್ದ ಅಸ್ಥಿತ್ವದಲ್ಲಿ ಆತನು ತಂದೆಯಿಂದ ಅಭಿಷೇಕಿಸಲ್ಪಟ್ಟವನಾಗಿರಲಿಲ್ಲ.

ದೇವರು ತನ್ನ ಮನಸ್ಸಿನಲ್ಲಿ ಸಂಕಲ್ಪಿಸಿದ ಈ ಯೋಜನೆಯನ್ನು ಗ್ರಹಿಸಿವುದು ಸೀಮಿತ ಮನೋ ಸಾಮರ್ಥ್ಯವಿರುವ ಸೃಷ್ಟಿಗಳ ಕಲ್ಪನೆಗೆ ಮೀರಿದ ಸಂಗತಿ. ಆದರೂ ದೇವರು ತನ್ನದೇ ಆದ ರೀತಿಯಲ್ಲಿ ತನ್ನ ಯೋಜನೆಯನ್ನು ಪ್ರಕಟಮಾಡುವನು. ಇದಕ್ಕನುಸಾರವಾಗಿ, ಪೂರ್ವದಲ್ಲಿದ್ದ ದೇವಜನರಿಗೆ ಮೊದಲು ತನ್ನ ಪವಿತ್ರಾತ್ಮ ಪ್ರೇರಿಸಿದ ರೀತಿಯಲ್ಲಿ ಬರೆಯುವಂತೆ ಮಾಡಿದನು. (2 ಪೇತ್ರ 1:21) ನಂತರದಲ್ಲಿ ರಕ್ಷಣೆಯನ್ನುಉಂಟು ಮಾಡುವ ತನ್ನ ಭುಜಬಲವಾಗಿರುವ ತನ್ನ ಕುಮಾರನನ್ನು ಕಳುಹಿಸಿಕೊಟ್ಟನು. ಆದರೆ ಪ್ರವಾದಿಗಳು ದೇವರನ್ನು ಮನುಷ್ಯರಿಗೆ ಪ್ರಕಟ ಮಾಡಲಿರುವ ಮೆಸ್ಸೀಯನ ವಿಷಯದಲ್ಲಿ ಅಂದರೆ ಆತನ ಶ್ರಮ ಸಂಕಟಗಳನ್ನು ಆತನ ದೀನಾವಸ್ಥೆಯ ವಿಷಯವಾಗಿ, ನೀಡಿದ ಸಂದೇಶದ ಸಮಾಚಾರವನ್ನು ಜನರು ನಂಬಲಿಲ್ಲ. ಹೀಗೆ ಅವುಗಳನ್ನು ನೋಡುವುದು ಇಸ್ರಾಯೇಲ್ಯರಿಗೆ ಬೇಕಿರಲಿಲ್ಲ. ಅವರು ಸಹಜವಾಗಿ ನಿರೀಕ್ಷಿಸುತ್ತಿದ್ದುದು ಇಸ್ರಾಯೇಲ್ ರಾಜ್ಯವನ್ನು ತಮಗೆ ಪುನಃ ಸ್ಥಾಪಿಸಿ ಕೊಡುವ ಪ್ರಭಾವ ಸಾಮರ್ಥ್ಯ ಮಾನ ಮಹಿಮೆಯುಳ್ಳ ಒಬ್ಬ ಶ್ರೇಷ್ಟ ಯುದ್ಧ ವೀರನನ್ನು. ಅವರು ಈ ನಿರೀಕ್ಷೆಯಲ್ಲಿದ್ದುಕೊಂಡು ಎಷ್ಟು ಕರುಡರಾಗಿದ್ದರೆಂದರೆ; ಯೇಸುವು ಸ್ವಜನರ ಬಳಿಗೆ ಬಂದಾಗ ಅವರು ಆತನನ್ನು ಅಂಗೀಕಾರ ಮಾಡಲಿಲ್ಲ. (ಯೋಹಾನ 1:11) ಇಲ್ಲವೇ ಈ ಸುವಾರ್ತಾಯುಗದಲ್ಲಿ ನಿಜರೂಪದ ಆತ್ಮೀಕ ಇಸ್ರಾಯೇಲ್ಯರಾಗಿರುವ ಅಪೋಸ್ತಲರ ಅಥವಾ ಪ್ರತಿಷ್ಟಿತರಾದ ದೇವರಜನರ ಬೋಧನೆಗಳಿಗೆ ಹೆಚ್ಚಿನ ಪ್ರತಿಕ್ರಿಯೆ ಏನೂ ಲಭಿಸಲಿಲ್ಲ. ಲಕ್ಷಗಟ್ಟಲೆ ತೋರಿಕೆಯ ಕ್ರೈಸ್ತರಲ್ಲಿ ಕೇವಲ ಕೆಲವೇ ಕೆಲವು ಮಂದಿ ಮಾತ್ರವೇ ಕ್ರಿಸ್ತನನ್ನು ರಕ್ಷಣೆಯನ್ನು ಉಂಟು ಮಾಡುವ ದೇವರ ಭುಜಬಲವೆಂದು ನಿಜವಾಗಿ ಅಂಗೀಕರಿಸಿದ್ದಾರೆ.

ತನ್ನ ಮೊದಲನೇ ಬರುವಿಕೆಯಲ್ಲಿ ಕ್ರಿಸ್ತನನ್ನು ಜನರು ಅಂಗೀಕಾರ ಮಾಡದೇ

ಇದ್ದುದಕ್ಕೆ ಒಂದು ಕಾರಣವೆಂದರೆ ಆತನು ಒಬ್ಬ ವೈಭವವುಳ್ಳ ಅರಸನಾಗಿ ಬರದೇ ಲೋಕದ ಎಣಿಕೆಯಲ್ಲಿ ಯಾವ ಕೆಲಸಕ್ಕೂ ಬಾರದ ಎಳೇ ಸಸಿಯಂತೆ ಒಬ್ಬ ದೀನನೂ ಸಾತ್ವಿಕನೂ ಅದ ನಜರಾಯನಾಗಿ ಬಂದುದೇ. ಹೌದು, ಆತನು ಒಣನೆಲದೊಳಗೆ ಬೇರಿನಿಂದ ಹೊರಡುವ ಅಂಕುರದಂತಿದ್ದನು. ದಾವೀದ ವಂಶವು ತನ್ನ ಪೌರುಷತ್ವವನ್ನು ಕಳೆದುಕೊಂಡಂತೆ ತೋರುತ್ತಿತ್ತು. ಇವೆಲ್ಲವುಗಳನ್ನು ಪರಿಗಣನೆಗೆ ತೆಗೆದುಕೊಂಡಾಗ ಒಂದು ಸಂಗತಿ ಸ್ಪಷ್ಟವಾಗುವುದೆಂದರೆ – ಯೇಸುವಿನ ಶಾರೀರಿಕ ಭಾವ, ಆತನ ದೀನತೆ ಇವುಗಳಲ್ಲಿ ಅಡಕವಾಗಿರುವ ಇತರ ಸಂಗತಿಯೆಲ್ಲವೂ ಅತನು ಯೆಹೋವನ ಬಾಹುವೆಂಬ ಸಂಗತಿಯನ್ನು ಜನರ ದೃಷ್ಟಿಯಿಂದ ಮರೆ ಮಾಡಿದ್ದವು. ಗಲಿಲಾಯದವನಾದ ಈ ದೀನ ವ್ಯಕ್ತಿಯಲ್ಲಿ ದೇವರು ಲೋಕವನ್ನು ತನಗೆ ಮರುಸಂಧಾನ ಪಡಿಸಿಕೊಳ್ಳುತ್ತಿದ್ದನೆಂಬುದನ್ನು ಗ್ರಹಿಸಲು ಯಾರಿಗೆ ತಾನೇ ಸಾಧ್ಯ. ಈ ನಜರಾಯನ ಶರೀರವೆಂಬ ಗುಡಾರದಲ್ಲಿ ದೇವರ ಆತ್ಮನು ವಾಸಿಸುತ್ತಿದ್ದುದ್ದಕ್ಕೆ ಪರಿಸಾಯರೂ ಶಾಸ್ತ್ರಿಗಳೂ ಸಹ ಆಸ್ಪದ ನೀಡುತ್ತಿರಲಿಲ್ಲ. ಹೀಗೆ ದೇವರು, ಮನುಷ್ಯನಾಗಿ ಬಂದ ಕ್ರಿಸ್ತ ಯೇಸುವಿನಲ್ಲಿ ಲೋಕವನ್ನು ತನಗೆ ಸಂಧಾನ ಪಡಿಸಿಕೊಳ್ಳುವ ಮರ್ಮವನ್ನು ಅಡಗಿಸಿದ್ದುದು ಆತನನ್ನು ಮೊದಲು ಗುರುತಿಸಿ ಸ್ವೀಕರಿಸಬೇಕಾಗಿದ್ದವರಿಗೆ ಅಂಗೀಕಾರವಾಗಲಿಲ್ಲ. ಆತನಲ್ಲಿದ್ದ ದೀನತೆ ಸಾತ್ವಿಕತೆಗಳು ದೇವರ ದೃಷ್ಟಿಯಲ್ಲಿ ಹೊಗಳುವಂತಾಗಿದ್ದರೂ, ಅದು ಮನಷ್ಯರಿಂದ ದ್ವೇಷಿಸಲ್ಪಟ್ಟು ಅಸಹ್ಯಿಸಿ ತಿರಸ್ಕಾರವಾಯಿತು. ಹೌದು ಆತನಲ್ಲಿ ನೋಡತಕ್ಕ ಯಾವ ಲಕ್ಷಣಗಳು ಅಂದ ಚಂದಗಳೂ ಇರಲಿಲ್ಲ. ಈ ಸಂಬಂಧದಲ್ಲಿ ನಾವು ಯೆಶಾಯನ ಪ್ರವಾದನೆಯಲ್ಲಿ ಬರೆದಿರುವುದನ್ನು ಓದೋಣ:

ಯೆಶಾಯ 53:1–6 – "ನಾವು ಕೇಳಿದ ಸಂಗತಿಯನ್ನು (ನಮ್ಮಲ್ಲಿ) ಯಾರು ನಂಬಿದ್ದರು? ಯೆಹೋವನ ಬಾಹುವು ಯಾರಿಗೆ ಗೋಚರವಾಗಿತ್ತು? ಒಣನೆಲದೊಳಗೆ ಬೇರಿನಿಂದ ಹೊರಡುವ ಅಂಕುರದಂತೆಯೂ ಬುಡದಿಂದ ಒಡೆಯುವ ಚಿಗುರಿನ ಹಾಗೂ ಅವನು ಯೆಹೋವನ ದೃಷ್ಟಿಯಲ್ಲಿ ಬೆಳೆದನು. ಅವನಲ್ಲಿ ಯಾವ ಅಂದಚಂದಗಳೂ ಇರಲಿಲ್ಲ. ನಾವು ಅವನನ್ನು ನೋಡುವಾಗ ನೋಡತಕ್ಕ ಯಾವ ಲಕ್ಷಣವೂ ಕಾಣಲಿಲ್ಲ. ಅವನು ಧಿಕ್ಕರಿಸಲ್ಪಟ್ಟವನು, ಮನುಷ್ಯರು ಸೇರಿಸಿಕೊಳ್ಳದವನು, ಸಂಕಷ್ಟಕ್ಕೊಳಗಾದವನು, ವ್ಯಾಧಿಪೀಡಿತನು, ಜನರು ಮುಖವನ್ನು ಓರೆ ಮಾಡಿಕೊಳ್ಳುವ ಧಿಕ್ಕಾರಕ್ಕೆ ಒಳಗಾದವನೂ ಆಗಿದ್ದನು. ನಾವು ಅವನನ್ನು ಲಕ್ಷಕ್ಕೇ ತರಲಿಲ್ಲ. ನಿಜವಾಗಿಯೂ ನಮ್ಮ ಸಂಕಷ್ಟಗಳನ್ನು ಅನುಭವಿಸಿದನು; ಅವನು ಹೊತ್ತ ಹೊರೆಯು ನಮ್ಮ ಸಂಕಟವೇ ಹೌದು. ನಾವಾದರೋ ಅವನು ದೇವರಿಂದ ಬಾಧಿತನು, ಪೆಟ್ಟು ತಿಂದವನು, ಕುಗ್ಗಿಸಲ್ಪಟ್ಟವನು ಎಂದು ಭಾವಿಸಿಕೊಂಡೆವು. ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು. ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು. ನಮಗೆ ಸುಶಾಂತಿಯನ್ನು ಉಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು. ಅವನ ಬಾಸುಂಡೆಗಳಿಂದ ನಮಗೆ

ಗುಣವಾಯಿತು. ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು. ಪ್ರತಿಯೊಬ್ಬನೂ ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು; ನಮ್ಮೆಲ್ಲರ ದೋಷ ಫಲವನ್ನು ಯೆಹೋವನು ಅವನ ಮೇಲೆ ಹಾಕಿದನು.

ಲೋಗಾಸ್ ಆಗಿ ಯೇಸುವಿಗಿದ್ದ ಉನ್ನತ ಸ್ಥಿತಿಯನ್ನೂ ಆತ್ಮ ಜೀವಿಯಾಗಿದ್ದ ಆತನ ಮಹಿಮೆಯನ್ನೂ ಈಗ ಮನುಷ್ಯನಾದ ಯೇಸು ಕ್ರಿಸ್ತನ ದೀನ ಸ್ಥಿತಿಯೊಂದಿಗೆ ಹೋಲಿಸಿ ಆತ್ಮೀಕ ಸ್ವಭಾವದ ಮತ್ತು ಮಾನವ ಸ್ವಭಾವದ ಹಾಗೂ ಆತ್ಮೀಕ ಮಟ್ಟದಲ್ಲಿ ಆತನು ಪಡೆದಿದ್ದ ಮಾನ ಮರ್ಯಾದೆಗಳು ಹಾಗೂ ಮಾನವನ ಮಟ್ಟದಲ್ಲಿ ಆತನಿಗೆ ಮನುಷ್ಯರಿಂದಾದ ತಿರಸ್ಕಾರಗಳು – ಇವುಗಳಲ್ಲಿನ ವ್ಯತ್ಯಸಗಳನ್ನೂ ಲೆಕ್ಕಾಚಾರ ಮಾಡಿ, ಆಗ ನಿಮಗೆ ದೇವದರ್ಶನದ ಹೊರ ಮೇಲ್ಹೊದಿಕೆಯಾದ ಕಡಲು ಹಂದಿಯ ತೊಗಲುಗಳು ಯಾವುದನ್ನು ಪ್ರತಿನಿಧಿಸುವುದೆಂಬ ಸಚಿತ್ರ ವಿವರಣೆ ದೊರಕುವುದು ಅದು "ಬೆಳಕಿನ ರಾಜ್ಯದಿಂದ ಆತನು ರಾತ್ರಿಯ ಕತ್ತಲಿನ ಮರೆಗೆ ಸೇರುವುದರ" ವರ್ಣನೆ.

ದೇವದರ್ಶನ ಗುಡಾರದ ಕಡಲು ಹಂದಿಯ ತೊಗಲಿನ ಮೇಲ್ಹೊದಿಕೆ ಒಂದೇ ಹೊರಗಿನಿಂದ ಕಾಣುತ್ತಿದ್ದ ಗುಡಾರದ ಭಾಗವಾಗಿದ್ದು ವಾಸ್ತವದಲ್ಲಿ ಅದರಲ್ಲಿ ಅಂದ ಚಂದಗಳೇನೂ ಇರಲಿಲ್ಲ. ಬದಲಾಗಿ ಅದು ಒರಟಾದ ನೋಡಲು ಬಯಸದ ರೀತಿಯಲ್ಲಿತ್ತು. ಇದರ ವಿಷಯವಾಗಿ ಪಾಸ್ಟರ್ ರಸೆಲ್ಲರು ದೇವದರ್ಶನ ಗುಡಾರದ ವಿವರಣೆಯಲ್ಲಿ ಈ ಮುಂದಿನದನ್ನು ಬರೆದಿದ್ದಾರೆ.

ದೇವದರ್ಶನ ಗುಡಾರದ ಸೌಂದರ್ಯ ವೈಭವಗಳು, ಅದರ ಬಂಗಾರದ ಗೋಡೆಗಳು ಅದರ ಸುಂದರವಾಗಿ ನಕಾಸೆ ಮಾಡಿದ ಬಂಗಾರದ ಪೀಠೋಪಕರಣಗಳು, ವಿಚಿತ್ರವಾಗಿ ಕಸೂತಿ ಮಾಡಿದ ತೆರೆಗಳು, ಇವುಗಳನ್ನು (ಸಾಮಾನ್ಯ ಇಸ್ರಾಯೇಲ್) ಜನರ ದೃಷ್ಟಿಯಿಂದ ಪೂರ್ಣವಾಗಿ ಮರೆಮಾಡಿರುವುದು ಕೆಲವರಿಗೆ ಒಂದು ಆಶ್ಚರ್ಯವಾದ ಸಂಗತಿಯಾಗಿರುವುದು. ಅದರಲ್ಲಿ ಪ್ರಕಾಶ ಕೊಡುವ ಒಂದೇ ಬೆಳಕೆಂದರೆ; ಪರಿಶುದ್ಧ ಸ್ಥಳದ ಚಿನ್ನದ ದೀಪಸ್ತಂಭದ ಬೆಳಕು ಮತ್ತು ಅತಿ ಪರಿಶುದ್ಧ ಸ್ಥಳದ (ಮಂಜೂಷದ ಮೇಲಿನ) ಶಕೀನ ಪ್ರಭೆ, ಇವುಗಳನ್ನು ಹೊರತು ಪಡಿಸಿದರೆ ಹೊರಗಿನ ಸೂರ್ಯನ ಬೆಳಕೂ ಸಹ ಒಳಗೆ ಬರುವಂತಿರಲಿಲ್ಲ. ಹೀಗಿರುವಲ್ಲಿ ಅವುಗಳಿಂದ ಅಲ್ಲಿ ದೊರೆಯುವ ಉಪಯೋಗಗಳ ವಿಷಯದಲ್ಲಿ ನಮಗಿರುವ ಪಾಠಗಳಿಗೆ ಇವುಗಳು ಪೂರ್ಣವಾಗಿ ಸರಿಬೀಳುತ್ತವೆ. ಅಲ್ಲಿ ದೇವರು ಆ ಗುಡಾರವನ್ನು (ಮೇಲ್ಹೊದಿಕೆಗಳಿಂದ ಮುಚ್ಚಿ) ಅದರ ಸೊಗಸನ್ನು ಪರದೆಗಳು ಮತ್ತು ಒರಟಾದ ನಯವಿಲ್ಲದ ತೊಗಲುಗಳಿಂದ (ಹೊರಗಿನವರಿಗೆ ಕಾಣದ ಹಾಗೆ) ಮರೆಮಾಡಿರುವನು ಅದರಂತೆಯೇ, ಪ್ರತಿಷ್ಠೆ ಹೊಂದಿದ ಸ್ಥಿತಿಗೆ ಪ್ರವೇಶಿಸುವ "ರಾಜವಂಶದ ಯಾಜಕರು" ಮಾತ್ರ (ಅಲ್ಲಿ ಒಳಗಿನ) ಆತ್ಮೀಕ ಸಂಗತಿಗಳ ಸೌಂದರ್ಯ ವೈಭವಗಳನ್ನು ನೋಡುವರು ಹೊರ ಜಗತ್ತಿನವರು ಗ್ರಹಿಸಲಾಗದಂತೆ ಮರೆಮಾಡಲ್ಪಟ್ಟಿರುವ ಒಂದು

ಮಹಿಮಾ ಪ್ರಭಾವದ ಸ್ಥಿತಿಗೆ ಇವರು ಪ್ರವೇಶಿಸುವರು ಪ್ರಭಾವವುಳ್ಳ ಅವರ ನಿರೀಕ್ಷೆಗಳು, ನೂತನ ಸೃಷ್ಟಿಗಳಾಗಿ ಅವರ ಸ್ಥಾನ ಮಾನಗಳು ಅವರ ಜೊತೆಯಲ್ಲಿರುವ ಲೋಕದ ಜನರಿಂದ ಸಹ ಅವುಗಳನ್ನು ಕಾಣದ ಹಾಗೆ ಮರೆಮಾಡಲಾಗಿದೆ. (T–27)

ಕಡಲು ಹಂದಿಯು ಸಮುದ್ರದಲ್ಲಿ ಜೀವಿಸುವ ಅಥವಾ ಅದು ಒಂದು ಜಲಚರ ಪ್ರಾಣಿ ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಮೇಲ್ಹೊದಿಕೆಗೆ ಸಂಬಂದಿಸಿರುವ ಇತರ ಪ್ರಾಣಿಗಳೆಲ್ಲವೂ ಭೂಮಿಯ ಮೇಲೆ ಜೀವಿಸುವವುಗಳು. ಇದು ನಮಗೆ ಬಹು ಸೊಗಸಾಗಿ ಪ್ರತಿಪಾದಿಸುವುದೆಂದರೆ, ತನ್ನ ತೊಗಲಿನಿಂದ ದೇವದರ್ಶನ ಗುಡಾರದ ಮೊದಲ ಮೇಲ್ಹೊದಿಕೆಯಾಗಲು ಕಡಲು ಹಂದಿಯೂ ಸಹ ತಾನು ಜೀವಿಸುವ ಸಹಜವಾದ ಪರಿಸರದಿಂದ (ನೀರಿನಿಂದ) ತೆಗೆಯಲ್ಪಟ್ಟು ಸಾವನ್ನು ಹೊಂದಬೇಕು. ಹಾಗೆಯೇ ದೇವರು ತನ್ನ ಲೋಕ ಸಂಧಾನ ಕಾರ್ಯದ ಮರ್ಮವನ್ನು ಅಡಗಿಸಿರುವ ಮನುಷ್ಯನಾದ ಕ್ರಿಸ್ತ ಯೇಸುವಾಗಲು ಲೋಗಾಸ್‌ನು ಸಹ ತಾನು ಜೀವಿಸುತ್ತಿದ್ದ ತನ್ನ ಸಹಜ ಪರಿಸರದಿಂದ (ಆತ್ಮೀಕ ಸ್ಥಿತಿಯಿಂದ) ತೆಗೆಯಲ್ಪಡಬೇಕು.

ಇದಲ್ಲದೆ ಮನುಷ್ಯರನ್ನು ವಿಮೋಚಿಸುವ ಸಂಧಾನ ಕಾರ್ಯ ನೆರವೇರಿಸಿ, ಎಲ್ಲವನ್ನೂ ಮರು ಹೊಂದಾಣಿಕೆ ಮಾಡುವ ತನ್ನ ತಂದೆಯ ದೈವ ಯೋಜನೆಯನ್ನು ಜಾರಿಗೊಳಿಸಲು ಕ್ರಿಸ್ತ ಯೇಸುವಿಗೆ ಮನುಷ್ಯನಾಗಿ ಬರುವುದನ್ನು ಬಿಟ್ಟರೆ ಬೇರೆ ಯಾವ ದಾರಿಯೂ ಇರಲಿಲ್ಲ. ಹೀಗಿದ್ದರೆ ಮಾತ್ರ ಆತನು ಎಲ್ಲರಿಗೋಸ್ಕರ ತನ್ನನ್ನು ಈಡಾಗಿ ಅರ್ಪಿಸಿಕೊಳ್ಳಲು ಸಾಧ್ಯವಿತ್ತು. (1ತಿಮೋಥೆ 2:5, 6)

ಬಾಧೆಯನ್ನು ಅನುಭವಿಸುವುದು ಯೇಸುವಿಗೆ ಅಗತ್ಯವಿರಲಿಲ್ಲ. ಅದರೆ ನೀತಿವಂತನಾಗಿ ಅನೀತಿವಂತರಿಗೋಸ್ಕರ ಕೇವಲ ಸಾಯಬೇಕಿತ್ತಷ್ಟೆ. ಆದಾಗ್ಯೂ ತನ್ನ ಪ್ರತಿಷ್ಟೆಯಲ್ಲಿ ಯೇಸುವು ಪಡೆದ ಹೊಸ ಸೃಷ್ಟಿಯು ಕೇವಲ ಬಾಧೆಗಳಿಂದಲೇ ಸಿದ್ಧಿಗೆ ಬರಬೇಕಿತ್ತು. (ಇಬ್ರಿಯ 2:10) ಈ ಬಾಧೆಗಳನ್ನು ಅನುಭವಿಸುವಲ್ಲಿ ಆತನು ವ್ಯಾಧಿ ಪೀಡಿತನಾಗಿ ಸಂಕಷ್ಟಕ್ಕೊಳಗಾದವನಾದ ಮನುಷ್ಯನಾದನು. ಹೀಗೆ ನಾವೂ ಸಹ ಕ್ರಿಸ್ತನ ಬಾಧೆಗಳಲ್ಲಿ ಉಳಿದುದನ್ನು (ಸಭೆಯೆಂಬ ಅತನ ದೇಹಕ್ಕೋಸ್ಕರ) ನಮ್ಮ ದೇಹದಲ್ಲಿ ಅನುಭವಿಸಿ, ಆತನು ಬಾಧೆಗಳಿಂದ ಸಿದ್ಧಿಗೆ ಬಂದಂತೆ ನಾವೂ ಸಿದ್ಧಿಗೆ ಬಂದು, ಮುಂದೆ ಕ್ಲುಪ್ತ ಕಾಲದಲ್ಲಿ ಆತನ ಮಹಿಮೆಯಲ್ಲಿಯೂ ಸಹ ಪಾಲುದಾರರಾಗುವ ಭಾಗ್ಯವನ್ನು ಪಡೆದಿದ್ದೇವೆ. ಆದರೆ ಆತನೊಂದಿಗೆ ಬಾಧೆಯನ್ನು ಅನುಭವಿಸುವ ಮೊದಲು ನಾವು ಆತನು ತನ್ನ ಈಡುಬಲಿಯ ಮೂಲಕ ಗಳಿಸಿದ ಆ ಅರ್ಹತಾಶೀರ್ವಾದವನ್ನು ಅಂಗೀಕಾರ ಮಾಡಬೇಕು. ಹಾಗಾದಲ್ಲಿ ಮಾತ್ರ ನಾವು ಕ್ರಿಸ್ತನ ಜೊತೆಗಾರರಾಗಿ ನಾವೂ ಸಹ ಆತನೊಡನೆ ಮೆಚ್ಚಿಕೆಯಾದ ಯಜ್ಞವಾಗಿ ನಮ್ಮನ್ನು ಅರ್ಪಿಸಿಕೊಳ್ಳಬಹುದು. ಹೀಗೆ ಆತನು ನಿಜವಾಗಿಯೂ ನಮ್ಮ ಸಂಕಷ್ಟಗಳನ್ನು ಅನುಭವಿಸಿದನು. ಅವನು ಹೊತ್ತ ಹೊರೆಯು ನಮ್ಮ

ಸಂಕಟವೇ ಹೌದು, ನಮಗೆ ಸುಶಾಂತಿಯನ್ನು ಉಂಟು ಮಾಡುವ ದಂಡನೆಯನ್ನು ಅವನು ಅನುಭವಿಸಿದನು. ಎಂಬುದನ್ನೂ ನಾವು ಗುರುತಿಸುತ್ತೇವೆ, ನಮಗೆ ಸುಶಾಂತಿಯನ್ನು ಉಂಟುಮಾಡುವ ದಂಡನೆ ಇದೆಂಥಾ ಒಂದು ನಿರೂಪಣೆ ನಾವು ಶಿಕ್ಷಾ ಪಾತ್ರರಾಗಿದ್ದೇವೆಂಬುದನ್ನೂ ನಮ್ಮ ದ್ರೋಹಗಳ ಫಲವನ್ನು ನಾವು ಅನುಭವಿಸಬೇಕಾಗಿದ್ದು, ದೇವರೊಂದಿಗೆ ಶಾಂತಿಯಲ್ಲಿ ಸೇರುವುದಕ್ಕೆ ನಾವು ಅಯೋಗ್ಯರಾಗಿದ್ದೇವೆಂದು ನಾವು ಗುರುತಿಸಲು ಸಾಧ್ಯವಾಗುತ್ತದೆ. ಆದರೆ ಕ್ರಿಸ್ತನು ನಮ್ಮ ಪರವಾಗಿ ಇದೆಲ್ಲವನ್ನೂ ಅನುಭವಿಸಿದನು. ಅಲ್ಲದೆ ನಾವು ಆತನು ಮಾಡಿದ ಯಜ್ಞದಲ್ಲಿ ನಂಬಿಕೆಯಿಡುವುದರ ಮೂಲಕ ನಾವು ನೀತಿವಂತರಾಗಿ (ಸರಿಪಡಿಸಿಕೊಂಡು) ದೇವರಲ್ಲಿ ಸಮಾಧಾನ ಹೊಂದಿದೆವು. ಇದು ಎಷ್ಟು ಆಶ್ಚರ್ಯಕರ! ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು, ಪ್ರತಿಯೊಬ್ಬನೂ ತನ್ನ ತನ್ನ ಮಾರ್ಗವನ್ನು ಹಿಡಿಯುತ್ತಿದ್ದನು, ಆದರೆ ನಮ್ಮೆಲ್ಲರ ದೋಷ ಫಲವನ್ನು ಯೆಹೋವನು ಅವನ ಮೇಲೆ ಹಾಕಿದನು.

## ದೇವದರ್ಶನ ಗುಡಾರದ ಕೆಂಪುಬಣ್ಣದ ಕುರಿದೊಗಲಿನ ಎರಡನೇ ಮೇಲ್ಹೊದಿಕೆ

ಅವನು ಧಿಕ್ಕರಿಸಲ್ಪಟ್ಟವನು, ಸಂಕಷ್ಟಕ್ಕೊಳಗಾದವನು ವ್ಯಾಧಿಪೀಡಿತನು, ಆದರೂ ಬಾಯಿತೆರೆಯಲಿಲ್ಲ ಇಲ್ಲವೇ ದೇವರ ಏರ್ಪಾಟುಗಳಿಗೆ ವಿರೋಧವಾಗಿ ತಿರುಗಿ ಬೀಳಲಿಲ್ಲ, ಪ್ರವಾದಿಯು ಹೇಳುವುದನ್ನು ನಾವು ಕೇಳೋಣ:

ಯೆಶಾಯ 53:7, 8 – "ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿಕೊಂಡನು. ಬಾಯಿ ತೆರೆಯಲಿಲ್ಲ; ವಧ್ಯ ಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು, ಬಾಯಿ ತೆರೆಯಲೇ ಇಲ್ಲ. ಹಿಂಸೆಯ ನ್ಯಾಯದಿಂದ ಕೊಲ್ಲಲ್ಪಟ್ಟನು ಆಹಾ, ಇವನು ಜೀವಲೋಕದಿಂದ ಕೀಳಲ್ಪಟ್ಟಿದ್ದಾನೆ, ನಮ್ಮ ಜನಗಳ ದ್ರೋಹಗಳ ದೆಸೆಯಿಂದ ಈ ಪೆಟ್ಟು ಅವನ ಮೇಲೆ ಬಿತ್ತಲ್ಲಾ ಎಂದು ಅವನ ಕಾಲದವರಲ್ಲಿ ಯಾರು ಮನಮುಟ್ಟಿ ಮರುಗಿದರು? ಅವನು ಯಾವ ಅನ್ಯಾಯವನ್ನು ಮಾಡದಿದ್ದರೂ ಅವನ ಬಾಯಲ್ಲಿ ಯಾವ ವಂಚನೆಯು ಇಲ್ಲದಿದ್ದರೂ ಅವನು ಸತ್ತಾಗ ದುಷ್ಟರ ಮಧ್ಯೆ ಪುಷ್ಟರ ನಡುವೆ ಅವನನ್ನು ಹೂಣಿಟ್ಟರು"

ಈ ವಚನಗಳಲ್ಲಿ ನಾವು ದೇವದರ್ಶನ ಗುಡಾರದ ಎರಡನೇ ಮೇಲ್ಹೊದಿಕೆಯಾದ ಕೆಂಪುಬಣ್ಣದ ಕುರಿದೊಗಲಿನ ಮಹತ್ವಗಳ ಸೂಚನೆಗಳು ನಮಗೆ ಕಂಡುಬರುತ್ತವೆ.

ಯೇಸುವು ಮೂವತ್ತನೆಯ ವರುಷ ತಲುಪಿದಾಗ ಆತನು ಮೊದಲನೆಯ ಮನುಷ್ಯನಾದ ಆದಾಮನಿಗೆ ನಿಖರವಾಗಿ ಸರಿಸಮಾನನಾಗಿದ್ದನು. ಆತನು ಪರಿಪೂರ್ಣ ಮನುಷ್ಯನಾಗಿದ್ದನು. ಹೀಗೆ ತನ್ನ ಜೀವವನ್ನು – ಆದಾಮನ ಮತ್ತು ದಂಡನೆಗೊಳಗಾದ ಅವರ ಸಂತತಿಯವರೆಲ್ಲರಿಗೆ ಈಡಾಗಿ ಅರ್ಪಿಸಲು ಸಿದ್ಧವಾಯಿತು. ಇದರ ಅನುಸಾರವಾಗಿ

ತನ್ನ ತಂದೆಯ ಚಿತ್ತದಂತೆ ನಡೆಯಲು ಅಂದರೆ, ತಾನು ಕೊಯ್ಯಲ್ಪಟ್ಟ ಕುರಿಮರಿಯಾಗಿ (ಪ್ರಕಟಣೆ 13:8) ದೇವರು ಕ್ರಿಸ್ತ ಯೇಸುವಿನಲ್ಲಿ ಉದ್ದೇಶಿಸಿದ ತನ್ನ ಯೋಜನೆಯನ್ನು ನೆರವೇರಿಸಲು ತನ್ನನ್ನು ಪ್ರತಿಷ್ಟೆಯಲ್ಲಿ ಅರ್ಪಿಸಿಕೊಂಡನು. ಯಜ್ಞಗಳಿಗಿಂತ ವಿಧೇಯತೆಯು ದೇವರಿಗೆ ಮೆಚ್ಚಿಕೆಯಾದದ್ದೆಂದು ಯೇಸುವಿಗೆ ಚೆನ್ನಾಗಿ ತಿಳಿದಿತ್ತು. ಆದರೂ ಆತನ ಪ್ರತಿಷ್ಠೆಯಲ್ಲಿ ಆತನ ವಿಧೇಯತೆಯು ಮರಣದವರೆಗೂ ಇರಬೇಕಿತ್ತು. ಆದರೂ ಯೇಸುವಿಗೆ ಇವು ಇಷ್ಟವಿಲ್ಲದ ವಿಷಯಗಳಾಗಿರಲಿಲ್ಲ. ಆದುದರಿಂದ ಯೋಹಾನನ ಮುಂದೆ ಸ್ನಾನ ದೀಕ್ಷೆಗಾಗಿ ತಾನು ಹಾಜರಾದುದನ್ನು ನೋಡುತ್ತೇವೆ. ಇದು ಪಾಪ ಪರಿಹಾರವಾಗುವುದಕ್ಕಲ್ಲ (ಏಕೆಂದರೆ ಆತನಲ್ಲಿ ಯಾವ ಪಾಪವೂ ಇರಲಿಲ್ಲ) ಆದರೆ ತನ್ನ ತಂದೆಯ ಚಿತ್ತವನ್ನು ಕೈಗೊಂಡು ನಡೆಯುವುದಕ್ಕಾಗಿ ಸಾಂಕೇತಿಕವಾಗಿ ತನ್ನನ್ನು ಪ್ರತಿಷ್ಠಿಸಿಕೊಂಡುದು. ಈ ಮೂಲಕವಾಗಿ ದೇವರಿಗಾಗಿ ಕೇವಲ ದೇವರಿಗಾಗಿಯೇ ಜೀವಿಸಲು ತನ್ನನ್ನು ಸತ್ತವನಂತೆ ಪರಿಗಣಿಸಿಕೊಂಡನು. (ತದನುಸಾರವಾಗಿ ಯೇಹಾನನು ಆತನನ್ನು ನೀರಿನಲ್ಲಿ ಮುಳುಗಿಸಿದಾಗ – ಹೂಣಲ್ಪಟ್ಟನು) ಈ ಸಂದರ್ಭದಲ್ಲಿ ಯೋಹಾನನು ಕೊಟ್ಟ ಸಾಕ್ಷಿಯನ್ನು ನಾವು ಗಮನಿಸೋಣ. ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು.

ಯೇಸುವು ಎಂದೂ ಗುಣಗುಟ್ಟಲಿಲ್ಲ, ಆದರೆ ನಮ್ರನಾಗಿ ವಿಧೇಯನಾಗುವುದರ ಮೂಲಕ ದೇವರ ಚಿತ್ತಕ್ಕೆ ತನ್ನನ್ನು ಯಾವಾಗಲೂ ಸಂಪೂರ್ಣವಾಗಿ ಒಳಪಡಿಸಿಕೊಂಡಿದ್ದನು. ದೇವರು ನೇಮಿಸಿದ ಯಜ್ಞದ ಕುರಿಮರಿಯಾಗಿ ಆತನ ಮರಣವು ಲೋಕದ ಪಾಪ ನಿವಾರಣೆಗಾಗಿ ಆಗಿತ್ತು. ಈ ಮೂಲಕ ಆದಾಮನಲ್ಲಿ ದಂಡನೆಗೆ ಒಳಗಾದವರೆಲ್ಲನ್ನೂ ವಿಮೋಚಿಸಿ ಮತ್ತೆ ಜೀವ ಪಡೆಯುವಂತೆ ಮಾಡುವುದಾಗಿತ್ತು. ಇದನ್ನು ಈಡೇರಿಸಲು ಆ ವಾಕ್ಯವೆಂಬುವನು ಮಾಂಸಧಾರಿಯಾಗಿ ಮನುಷ್ಯನಾದ ಕ್ರಿಸ್ತ ಯೇಸುವಾಗಿ ನಂತರದಲ್ಲಿ ಆ ಮನುಷ್ಯತ್ವವನ್ನು ಮರಣಕ್ಕೆ ಒಪ್ಪಿಸುವ ಅವಶ್ಯಕತೆಯಿತ್ತು. ಈ ಅಂಶಗಳು ಕುರಿದೊಗಲಿನ ಮೇಲ್ಹೊದಿಕೆಯನ್ನು ಕೆಂಪುಬಣ್ಣವಾಗಿಸುವ ವಿಷಯದಲ್ಲಿ ವರ್ಣಿತವಾಗಿದೆ. ವಿಮೋಚನಾರ್ಹ ಗುಣ ವಿಶೇಷಗಳಿರುವ ಕ್ರಿಸ್ತನ ಯಜ್ಞವನ್ನು ಸೂಚಿಸುವ ರಕ್ತವನ್ನು ನೇರವಾಗಿ ತೋರಿಸಿರುವುದು ಈ ಮೇಲ್ಹೊದಿಕೆಯೊಂದೇ.

## ಆಡು ಕೂದಲಿನ ಮೂರನೇ ಮೇಲ್ಹೊದಿಕೆ

ಲೋಕದ ಪಾಪ ನಿವಾರಣೆಗೆ ಈಡು ಬೆಲೆ ಸಂದಾಯವಾಗಿದೆ ಎಂಬುದನ್ನು ನಾವು ತಿಳಿದಿದ್ದೇವಾದರೂ. ಅದರ ಯಜ್ಞಫಲವನ್ನು ಈ ವರೆಗೂ (ಲೋಕ ಪಾಪ ನಿವಾರಣೆಗೆ) ಅವರಿಗೆ ಅನ್ವಯ ಮಾಡಲಿಲ್ಲ ಎನ್ನುವುದನ್ನೂ ಸಹ ತಿಳಿದವರಾಗಿದ್ದೇವೆ. ಇದಲ್ಲದೆ ಸಭೆಗೆ ಸೇರುವವರೆಲ್ಲರಿಗೂ ಈ ಯಜ್ಞವು ಅನ್ವಯವಾಗುವವರೆಗೂ ಲೋಕದ ಪಾಪ ನಿವಾರಣೆಗೆ ಅದು ಅನ್ವಯಿಸಲ್ಪಡುವುದಿಲ್ಲ. ಹೀಗೆ ಸಭೆಯವರು ನೀತಿವಂತರೆಂದು

ನಿರ್ಣಯಿಸಲ್ಪಟ್ಟವರಾಗಿ ತಾವು ಕ್ರಿಸ್ತನ ಆ ಮಹಾ ಪಾಪ ನಿವಾರಣಾ ಯಜ್ಞದಲ್ಲಿ ಪಾಲುಗಾರರಾಗಿ ತಮ್ಮ ನೀತಿ ನಿರ್ಣಯಿಸಲ್ಪಟ್ಟ ಮನುಷ್ಯತ್ವವನ್ನು ಅರ್ಪಿಸಿಕೊಂಡು, ಕ್ರಿಸ್ತನೊಂದಿಗೆ ಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸುವ ಅಬ್ರಹಾಮನ ಸಂತತಿಯಾಗುವರು. (ಗಲಾತ್ಯ 3:29) ಯಜ್ಞ ಫಲವಾದ ಮರುಹೊಂದಾಣಿಕೆ, ಯಜ್ಞ ಫಲವಾದ ಸಂಧಾನ ಕಾರ್ಯ, ಇವೆಲ್ಲವೂ ಪೂರ್ಣವಾಗಿ ಈಡುಬಲಿಯ ಯಜ್ಞದಲ್ಲಿ ಅಡಕವಾಗಿವೆ; ಆದರೂ ಇವುಗಳನ್ನು ಮಾನವ ಲೋಕಕ್ಕೆ ಅನ್ವಯ ಮಾಡುವ ಸಾಧನವು ದೋಷಪರಿಹಾರ ಯಜ್ಞದ ಮೂಲಕವಾಗಿ ಎಂಬುದನ್ನೂ ಲಕ್ಷಿಸೋಣ. ದೇವದರ್ಶನ ಗುಡಾರದ ಛಾಯಾರೂಪದ ಆಚರಣೆಗಳ ಪ್ರಕಾರ, ದೋಷಪರಿಹಾರ ಮಹಾ ದಿನದ ಯಜ್ಞಗಳಲ್ಲಿ ಎರಡು ಪ್ರಾಣಿಗಳು ವಧಿಸಲ್ಪಡುತ್ತಿದ್ದವು. ಎರಡು ದೋಷ ಪರಿಹಾರ ಯಜ್ಞಗಳು, ಒಂದು ಹೋರಿ ಮತ್ತು ಒಂದು ಹೋತ, ಮುಂಚಿನದು ಕ್ರಿಸ್ತನನ್ನು ಪ್ರತಿನಿಧಿಸುವುದು ನಂತರದ್ದು ಸಭೆಯನ್ನು. ಹೀಗಿರುವಲ್ಲಿ, ಛಾಯೆಗಳಲ್ಲಿ ಮಹಾ ದೋಷ ಪರಿಹಾರ ಯಜ್ಞಫಲವು ಯಾವುದರಲ್ಲಿ ಅಡಕವಾಗಿರುವುದೆಂದು ತಿಳೀಯುವುದು ಕಷ್ಟವೇನಲ್ಲ. ವಾಸ್ತವದ ಸಂಗತಿಯೆಂದರೆ, ಸಂಧಾನ ಕಾರ್ಯದ ಆಶೀರ್ವಾದವನ್ನು ಲೋಕಕ್ಕೆ ನೀಡುವಲ್ಲಿ ಯಾವ ಕುಂದೂ ಉಂಟಾಗದಂತೆ, ದೋಷಪರಿಹಾರ ಯಜ್ಞದಲ್ಲಿ ಹೋತದ ಪಾಲನ್ನು ಸಂಪೂರ್ಣವಾಗಿ ತೆಗೆದು ಹಾಕಬಹುದೆಂಬುದು ಬಹು ಸ್ಪಷ್ಟ. ಈ ವಿಷಯದಲ್ಲಿ ನಾವು ಮತ್ತೆ ಪಾಸ್ಟರ್ ರಸಲ್ಲರ ಲೇಖನಿಯಿಂದ ಬಂದದ್ದನ್ನು ಉಲ್ಲೇಖಿಸುತ್ತೇವೆ.

"... ಮೋಶೆ ಅವರಿಗೆ – ನೀವು ಮಾಡಬೇಕೆಂದು ಯೆಹೋವನು ಆಜ್ಞಾಪಿಸಿದ್ದು ಇದೆ; ಅದರಂತೆ ನಡೆದರೆ ಯೆಹೋವನ ಮಹಿಮೆ ನಿಮಗೆ ಪ್ರತ್ಯಕ್ಷವಾಗುವುದು ಎಂದು ಹೇಳಿದನು ಆಗ ಮೋಶೆ ಆರೋನನಿಗೆ – ಯಜ್ಞವೇದಿಯ ಹತ್ತಿರಕ್ಕೆ ಬಂದು ನೀನು ಮಾಡಬೇಕಾದ ದೋಷಪರಿಹಾರಕ ಯಜ್ಞವನ್ನೂ ಸರ್ವಾಂಗ ಹೋಮವನ್ನೂ ದೋಷ ಪರಿಹಾರಕ್ಕಾಗಿ ನಿನಗೋಸ್ಕರವೂ (ತನ್ನ ದೇಹದ ಅಂಗಗಳಾಗುವುದಕ್ಕೆ ಕರೆಯಲ್ಪಟ್ಟಿರುವವರಿಗೆ ಅಗತ್ಯವಾಗಿತ್ತು) ಜನರಿಗೋಸ್ಕರವೂ (ಲೋಕಕ್ಕೆ) ಸಮರ್ಪಿಸಬೇಕು ಎಂದು ಹೇಳಿದನು.

"ಯಜ್ಞಕ್ರಮದ ಛಾಯೆಗಳಲ್ಲಿ ಸಚಿತ್ರವಾಗಿ ವಿವರಿಸಿರುವ ಅಂಶವೆಂದರೆ, ಕರ್ತನಾದ ಯೇಸುವು (ದೋಷ ಪರಿಹಾರಕ ಯಜ್ಞಪಶುವಾದ ಹೋರಿಯಾಗಿ) ತನ್ನ ದೇಹವಾಗಿರುವ "ಚಿಕ್ಕ ಹಿಂಡನ್ನು" ಮತ್ತು ಲೋಕದ ಮಾನವರೆಲ್ಲರನ್ನೂ ವಿಮೋಚಿಸಲು ಸಾಕಷ್ಟಾಗಿರುವನು. ದೋಷಪರಿಹಾರ ಯಜ್ಞಾರ್ಪಣೆಯಲ್ಲಿ ಸಭೆಯ ಪಾಲನ್ನು ಪೂರ್ಣವಾಗಿ ತೆಗೆದು ಹಾಕಲು ಸಾಧ್ಯವಿತ್ತು. ಇಕ್ಕಟ್ಟಾದ ಮಾರ್ಗದಲ್ಲಿನ ವಿಶೇಷ ರೀತಿಯ ಪರಿಶೋಧನೆ ತ್ಯಾಗ ಬಲಿದಾನಗಳ ಫಲವಾದ ಬಾಧೆ ಇವುಗಳು ನಮಗೆ ಬಾರದಂತೆ ನಾವು ಕಾಪಾಡಲ್ಪಟ್ಟು ಇತರ ಎಲ್ಲಾ ಮನುಷ್ಯರಂತೆ ನಮ್ಮನ್ನೂ ಸಹ ಪರಿಪೂರ್ಣ ಮನುಷ್ಯ ಸ್ವಭಾವಕ್ಕೆ ಮತ್ತೆ ತರಬಹುದಿತ್ತು. ಆದರೆ ಯೆಹೋವನು ಯೇಸುವನ್ನು ಈ ಶ್ರೇಷ್ಠ ಯಜ್ಞಕ್ಕೆ ಆದುಕೊಂಡಿರುವುದು

ಮಾತ್ರವಲ್ಲದೆ ತನ್ನ ದೇಹವಾಗಿರುವ ಸಭೆಗೆ ಆತನನ್ನು ಶಿರಸ್ಸನ್ನಾಗಿ ಅಥವಾ ನಾಯಕನನ್ನಾಗಿ ಮಾಡುವುದು ಆತನ ಅಪೇಕ್ಷೆಯಾಗಿತ್ತು. ಇವರೂ ಮತ್ತು ಅವರ ನಾಯಕನನ್ನು ದೋಷಪರಿಹಾರಕ ಯಜ್ಞಗಳಾಗಿ ತಮ್ಮ ದೇಹದಲ್ಲಿ ಬಾಧೆಯನ್ನು ಅನುಭವಿಸುವುದರ ಮೂಲಕ ಆತ್ಮೀಕ ಜೀವಿಗಳಾಗಿ ತರುವುದು ಆತನ ಚಿತ್ತ. (ಇಬ್ರಿಯ 2:10; ಕೊಲೊಸ್ಸೆ 2:24) (T–79)

ಯೇಸುವಿನ ದೇಹವು ಅಂದರೆ ಆತನ ಮನುಷ್ಯತ್ವವು ಈಡುಬಲಿಯನ್ನು ಸಾಧ್ಯವಾಗಿಸಿತು. ದೇವರ ಕೃಪೆ ಹಾಗೂ ಈ ಯಜ್ಞಫಲವನ್ನು ಈಗ ನಮಗೆ ಆರೋಪಿಸಿರುವುದರಿಂದ ಭೂಲೋಕದ ಸಂಧಾನ ಕಾರ್ಯಕ್ಕೆ ಕಾರಣವಾದ ದೋಷಪರಿಹಾರ ಯಜ್ಞದಲ್ಲಿ ಯೇಸುವಿನೊಂದಿಗೆ ನಾವು ಪಾಲುಗಾರರಾಗುವುದನ್ನು ಸಾಧ್ಯವಾಗಿಸಿದೆ. ಇದರ ಅನುಸಾರವಾಗಿ ಯೇಸುವು ದೋಷ ಪರಿಹಾರ ಯಜ್ಞಪಶುವಾದ ಹೋರಿಯನ್ನು ಪ್ರತಿನಿಧಿಸಿದರೆ ಸಭೆಯು ಯೆಹೋವನ ಹೋತವಾಗಿ ಪ್ರತಿನಿಧಿಸುವುದು. ಹೋರಿ ಇಲ್ಲವೇ ಹೋತಗಳು ಸ್ವತಃ ತಾವಾಗಿಯೇ ಯಜ್ಞಾರ್ಪಿತವಾಗುವುದಿಲ್ಲ. ಆದರೆ ಇವೆರಡೂ ಅದೇ ಒಬ್ಬ ಮಹಾ ಯಾಜಕನಿಂದ ಅರ್ಪಣೆಯಾಗುವುದು. ಹೀಗಾಗಿ ಅವು ಆತನ ದೋಷ ಪರಿಹಾರ ಯಜ್ಞಗಳಾಗಿ ಎಣಿಸಲ್ಪಡುವುದು.

ಕುರಿದೊಗಲ ಕೆಳಗಿನ ಹೊದಿಕೆಯು ಆಡಿನ ಕೂದಲಿನದಾಗಿತ್ತು. ಆಡನ್ನು (ಹೋತ) ದೋಷ ಪರಿಹಾರ ಮಹಾ ದಿನದ ಯಜ್ಞಾಚರಣೆಯಲ್ಲಿ ಬಳಸಿರುವುದರಿಂದ ಸಾಂಕೇತಿಕವಾಗಿ ಇದು ನಮ್ಮ ರಕ್ಷಕ ದೋಷ ಪರಿಹಾರ ಯಜ್ಞವನ್ನು ಸೂಚಿಸುತ್ತದೆ ಎಂಬುದು ನಮ್ಮ ನಂಬಿಕೆ. ದೋಷ ಪರಿಹಾರ ಯಜ್ಞದಲ್ಲಿ ನಮ್ಮ ಕರ್ತನ ಸ್ವಂತ ಪಾಲು – ಇದೊಂದೇ ಸ್ವತಃ ತನ್ನಲ್ಲಿ ದೋಷಪರಿಹಾರ ಮಾಡುವ ಅರ್ಹತೆ ಹೊಂದಿದ್ದು, ಹೋರಿಯ ಮರಣದಲ್ಲಿ ಇದು ಸೂಚಿಸಲ್ಪಟ್ಟಿದೆ. ಇದು ಈಡುಬಲಿ ಯಜ್ಞಕ್ಕೆ ಸರಿಬೀಳುತ್ತದೆ ಎಂಬುದನ್ನು ನಾವು ಈಗಾಗಲೇ ನೊಡಿದ್ದೇವೆ. ಈ ದೋಷ ಪರಿಹಾರ ಯಜ್ಞದ ಮೂಲಕವೇ ಸಂಧಾನ ಕಾರ್ಯದ ಇತರ ವೈಶಿಷ್ಟ್ಯಗಳು ನೆರವೇರಲು ಸಾಧ್ಯವಾಗಿರುವುದು. ಈ ಅರ್ಥದಲ್ಲಿ ದೋಷಪರಿಹಾರ ಯಜ್ಞಾರ್ಪಣೆಯಲ್ಲಿ ಯೇಸುವಿನ ಪಾಲು ಬಹು ವಿಶೇಷವಾಗಿ ಕುರಿಯದೊಗಲಿನ ಮೇಲ್ಹೊದಿಕೆಯಲ್ಲಿ ಸೂಚಿತವಾಗಿದ್ದು ಸಭೆಯ ಪಾಲು ಆಡಿನ ಕೂದಲಿನಲ್ಲಿ ಸೂಚಿತವಾಗಿದೆ ಬಹು ಕುತೂಹಲಕಾರಿ ಸಂಗತಿಯೆಂದರೆ, ಈ ಆಡಿನ ಕೂದಲ ಮೇಲ್ಹೊದಿಕೆಯ ಸುತ್ತಳತೆ, ಗುಡಾರದ ಮುಂಭಾಗದಲ್ಲಿ ಎರಡು ಮಡಿಕೆ ಮಾಡಿ ತೂಗಾಡುವುದಕ್ಕೆ ಬಿಡುವ ಆರನೇ ಬಟ್ಟೆಯೂ (ವಿಮೋ. 26:9) ಸೇರಿ ಸರಿಯಾಗಿ 144 ಮೊಳ. ಇದನ್ನು (ಗುಡಾರದ ಅಳತೆಗಳಲ್ಲಿ ಸಾಂಕೇತಿಕವಾಗಿ ದೇವರನ್ನು ಸೂಚಿಸುವ) 1000 ದಿಂದ ಗುಣಿಸಿದರೆ ಗುಣಲಬ್ಧವಾಗಿ ಬರುವುದು – ದೋಷಪರಿಹಾರ ಯಜ್ಞಾರ್ಪಣೆಯಲ್ಲಿ ಕ್ರಿಸ್ತನೊಂದಿಗೆ ಪಾಲುಗಾರರಾಗುವವರ ಸಂಖ್ಯೆ ಅಂದರೆ 1,44,000.

ಆದರೂ, ಬಹು ಸಾಧಾರಣವಾದ ಒಂದು ರೀತಿಯಲ್ಲಿ, ಈ ಆಡು ಕೂದಲಿನ ಹೊದಿಕೆಯು ನಮ್ಮ ಮಹಾಯಾಜಕನು ಮಾಡುವ ಒಂದು ದೋಷ ಪರಿಹಾರ ಯಜ್ಞದ ಎರಡು ಭಾಗಗಳನ್ನು ಅಂದರೆ ತನ್ನ ಸ್ವಂತ ಪಾಲು ಮತ್ತು ಸಭೆಯ ಪಾಲನ್ನು ಸೂಚಿಸುತ್ತದೆ. ಹೊದಿಕೆಯ ಒಂದು ಭಾಗವು ಆರು ಬಟ್ಟೆಗಳಿಂದಲೂ ಅದರ ಇನ್ನೊಂದು ಭಾಗವು ಐದು ಬಟ್ಟೆಗಳಿಂದಲೂ ಕೂಡಿರುವುದು ಈ ಎರಡು ಭಾಗಗಳಲ್ಲಿ ಸಮಾನತೆಗಳು ಇಲ್ಲದಿರುವುದೆಂಬ ಅಂಶವನ್ನು ತೋರಿಸುತ್ತದೆ. ಈ ಆರು ಬಟ್ಟೆಗಳ ಹೊದಿಕೆಯ ಒಂದು ಭಾಗವು ದೋಷ ಪರಿಹಾರ ಯಜ್ಞಾರ್ಪಣೆಯಲ್ಲಿ ಕ್ರಿಸ್ತನ ಪಾಲು ದೊಡ್ಡದೆಂದು ತೋರಿಸುತ್ತದೆ. ಹೀಗಿದ್ದರೂ, ಈ ಎರಡು ಭಾಗಗಳನ್ನು ಕೊಂಡಿಗಳಿಂದ ಕೂಡಿಸಿರುವ ಕಾರಣದಿಂದ ಅವು ಒಂದೇ ಹೊದಿಕೆಯಾಗುವುದು. (ವಿಮೋ. 26:11) ಇದರಂತೆಯೇ ದೋಷಪರಿಹಾರ ಯಜ್ಞಾರ್ಪಣೆಯಲ್ಲಿರುವ ಎರಡು ಭಾಗಗಳೂ ಅದರ ನಿಜರೂಪದಲ್ಲಿ ಒಂದೇ ಯಜ್ಞವಾಗಿ ರೂಪುಗೊಳ್ಳುತ್ತದೆ. ಕ್ರಿಸ್ತನನ್ನು ಮತ್ತು ಸಭೆಯನ್ನು ಒಟ್ಟುಗೂಡಿಸುವ ಈ ದೋಷ ಪರಿಹಾರ ಯಜ್ಞದಲ್ಲಿ ಅವರನ್ನು ಬಂಧನಗೊಳಿಸುವ ಅಥವಾ ಒಂದು ಮಾಡುವ ಕೊಂಡಿಯು ಯಾವದೆಂದರೆ, ಪರಿಪೂರ್ಣವಾದ ಮನುಷ್ಯನ ಸ್ವಭಾವ, ಇದನ್ನು ಸಾಮಾನ್ಯವಾಗಿ ಇಬ್ಬರೂ ಹೊಂದಿದ್ದಾರೆ ಮತ್ತು ಅದನ್ನು ಯೆಹೋವನಿಗೆ ಮೆಚ್ಚಿಗೆಯಾದ ಯಜ್ಞವಾಗಿ ಅರ್ಪಿಸಿದ್ದಾರೆ. ಇಲ್ಲಿ ಸಭೆಯು ನಿಜವಾದ ಸ್ವತಃ ಪರಿಪೂರ್ಣ ಮನುಷ್ಯ ಸ್ವಭಾವವನ್ನು ಪಡೆದಿದೆ ಎಂಬ ಅಂಶವನ್ನು ಸೂಚಿಸುವುದಿಲ್ಲ. ಆದರೆ ಅದು ಕ್ರಿಸ್ತನ ಯಜ್ಞ ಫಲವನ್ನು (ಪರಿಪೂರ್ಣತೆ) ಸಭೆಗೆ ಆರೋಪಿಸುವುದರ ಫಲವಾಗಿ ಆ ಸ್ವಭಾವವನ್ನು ಅವರೇ ಸ್ವತಃ ಹೊಂದಿರುವರೆಂದು ದೇವರ ದೃಷ್ಟಿಯಲ್ಲಿ ಎಣಿಸಲ್ಪಡುವುದನ್ನು ಸೂಚಿಸುತ್ತದೆ. ಇದು ಬಹು ಸೊಗಸಾಗಿ ದೇವದರ್ಶನ ಗುಡಾರದ ಆಡಿನ ಕೂದಲಿನ ಹೊದಿಕೆಯ ಎರಡು ಭಾಗಗಳನ್ನು ಬಂಧಿಸಿರುವ ಕೊಂಡಿಗಳು ತಾಮ್ರದವುಗಳು ಎಂಬ ಅಂಶದಲ್ಲಿ ನಿರೂಪಿಸಲಾಗಿದೆ. ಪಾಸ್ಟರ್ ರೆಸೆಲ್ಲರ ಸಲಹೆಯಂತೆ ತಾಮ್ರವು ಪರಿಪೂರ್ಣ ಮನುಷ್ಯನ ಸ್ವಭಾವವನ್ನು ಪ್ರತಿನಿಧಿಸುತ್ತದೆ. ನಾವು ದೇವದರ್ಶನ ಗುಡಾರದ ಉತ್ತಮ ಛಾಯೆ ಎಂಬ ಗ್ರಂಥದ 18ನೇ ಪುಟದಲ್ಲಿ ಬರೆದಿರುವುದನ್ನು ನಾವು ಇಲ್ಲಿ ಉಲ್ಲೇಖಿಸುತ್ತೇವೆ. "... ತಾಮ್ರವು ಪರಿಪೂರ್ಣತೆಯಲ್ಲಿರುವ ಮನುಷ್ಯ ಸ್ವಭಾವವನ್ನು ಪ್ರತಿನಿಧಿಸುವುದು..." ಈ ಯಜ್ಞದಲ್ಲಿರುವ ಐಕ್ಯತೆಯನ್ನು ಅಪೋಸ್ತಲನಾದ ಪೌಲನ ವಾಕ್ಯಗಳಲ್ಲಿ ಸೂಚಿತವಾಗಿರುವುದನ್ನು 1ನೇ ಕೊರಿಂಥ 10:16 ರಲ್ಲಿ ನಾವು ಓದುತ್ತೇವೆ; "ನಾವು ದೇವಸ್ತೋತ್ರ ಮಾಡಿ ಪಾತ್ರೆಯಲ್ಲಿ ಪಾನ ಮಾಡುವುದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ. ನಾವು ರೊಟ್ಟಿಯನ್ನು ಮುರಿದು ತಿನ್ನುವುದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ" ಯೆಶಾಯನ ಪ್ರವಾದನೆಯಲ್ಲಿ ಬರೆದಿರುವುದನ್ನು ನಾವು ಮುಂದುವರಿಸೋಣ.

ಯೆಶಾಯ 53:10, 11 – ಅವನನ್ನು ಜಜ್ಜುವುದು ಯೆಹೋವನ ಸಂಕಲ್ಪವಾಗಿತ್ತು.

ಆತನು ಅವನನ್ನು ವ್ಯಾಧಿಯಿಂದ ಬಾಧಿಸಿ ಹೀಗೆಂದುಕೊಂಡನು ಇವನು ತನ್ನ ಆತ್ಮವನ್ನು ಪ್ರಾಯಶ್ಚಿತ್ತ ಯಜ್ಞಕ್ಕಾಗಿ ಒಪ್ಪಿಸಿದ ಮೇಲೆ ತನ್ನ ಸಂತಾನವನ್ನು ನೋಡುವನು. ಚಿರಂಜೀವಿಯಾಗುವನು. ನನ್ನ ಸಂಕಲ್ಪವು ಇವನ ಕೈಯಿಂದ ನೆರವೇರುವುದು. ತನ್ನ ಆತ್ಮವು ಅನುಭವಿಸಿದ ಶ್ರಮೆಯ ಫಲವನ್ನು ಕಂಡು ತೃಪ್ತನಾಗುವನು. ಧರ್ಮಾತ್ಮನಾದ ನನ್ನ ಸೇವಕನು ತನ್ನ ಜ್ಞಾನದ ಮೂಲಕ ಬಹು ಜನರನ್ನು ಧರ್ಮ ಮಾರ್ಗಕ್ಕೆ ತರುವನು; ಅವರ ಅಪರಾಧಗಳನ್ನು ಹೊತ್ತುಕೊಂಡು ಹೋಗುವನು"

ಕೆಂಪುಬಣ್ಣದ ಕುರಿದೊಗಲಿನ ಮೇಲ್ಹೊದಿಕೆ ಒಂದೇ ರಕ್ತವು ದೊರಕಿಸುವ ಯಜ್ಞಫಲದ ವಿಷಯವಾಗಿ ಹೇಳಿ ಮತ್ತು ಇದು ಕೇವಲ ಯೇಸುವಿನ ಯಜ್ಞದಲ್ಲಿರುವುದೆಂಬುದನ್ನೂ ಸ್ಪಷ್ಟವಾಗಿ ತೋರಿಸುತ್ತದೆ. ಈ ಮೇಲ್ಹೊದಿಕೆಯದಾಗಲಿ ಇಲ್ಲವೇ ಕಡಲು ಹಂದಿಯ ತೊಗಲಿನದಾಗಲಿ ಅಳತೆಗಳು ಇಲ್ಲಿ ಕೊಟ್ಟಿರುವುದಿಲ್ಲ. ಇದು ದೇವರು ತನ್ನ ಮಗನನ್ನು ಮನುಷ್ಯನಾದ ಕ್ರಿಸ್ತ ಯೇಸುವಾಗಲು ಮತ್ತು ಹೀಗೆ ಎಲ್ಲರಿಗೋಸ್ಕರ ತನ್ನನ್ನು ಈಡಾಗಿ ಒಪ್ಪಿಸಲು ಬೆಳಕಿನ ರಾಜ್ಯದಿಂದ ರಾತ್ರಿಯ ಅಂಧಕಾರಕ್ಕೆ ಕಳುಹಿಸಿದ್ದರಲ್ಲಿ ಲೋಕದ ಮೇಲೆ ಪ್ರಕಟವಾಗಿರುವ ಆತನ (ದೇವರ) ಪ್ರೀತಿಯು ಅಳೆಯಲಸಾಧ್ಯ ಎಂದು ಹೇಳುವಂತಿದೆ!! ಇದನ್ನು ಅಳೆಯುವುದು ಯಾರಿಂದ ಸಾಧ್ಯ? ಈ ಎರಡು ಮೇಲ್ಹೊದಿಕೆಗಳನ್ನು, ಇನ್ನಿತರ ಎರಡು ಹೊದಿಕೆಗಳಂತೆ, ವಿಭಾಗಗಳಗಿ ಮಾಡಲಿಲ್ಲವೆಂಬ ಅಂಶವು – ಸಭೆಯು ದೋಷಪರಿಹಾರ ಯಜ್ಞದಲ್ಲೂ ಮತ್ತು ರಾಜ್ಯದ ಮಹಿಮೆಯಲ್ಲೂ ಕ್ರಿಸ್ತನ ಜೊತೆಯಲ್ಲಿ ಭಾಗಿಯಾದರೂ ಮನುಷ್ಯನಾದ ಕ್ರಿಸ್ತ ಯೇಸುವಾಗಲು ತನ್ನ ಮಹಿಮೆಯನ್ನು ಬಿಟ್ಟು ಲೋಗಾಸ್‌ನ ದೀನತೆಯಲ್ಲಾಗಲಿ ಇಲ್ಲವೇ ಲೋಕದ ಪಾಪಗಳಲ್ಲಿ ನೀಡಿದ ತನ್ನ ಈಡುಬಲಿಯ ಮರಣದಲ್ಲಾಗಲಿ ಸಭೆಯ ಯಾವ ಪಾಲನ್ನೂ ಹೊಂದಲಿಕ್ಕೆ ಸಾಧ್ಯವಿಲ್ಲ ಹಾಗೂ ಹೊಂದುವುದೂ ಇಲ್ಲ ಎಂಬುದನ್ನು ತೋರಿಸುತ್ತದೆ ಈಡುಬಲಿಯ ಯಜ್ಞಫಲವನ್ನು ಲೋಕದ ಪಾಪಗಳಿಗಾಗಿ ಅನ್ವಯ ಮಾಡಲು ಸಾಧ್ಯವಾದುದು ಕೇವಲ ಕ್ರಿಸ್ತ ಯೇಸುವಿನ ನಂಬಿಗಸ್ತಿಕೆಯ ಫಲದ ಮೂಲಕವಾಗಿಯೇ ಎಂಬುದು ಇಲ್ಲಿ ಈಗ ಎಷ್ಟು ಸ್ಪಷ್ಟ! ನಮ್ಮ ಶ್ರಮಸಂಕಟಗಳು ಮೌಲ್ಯ ಹೊಂದಿರುವುದು ಅದು ಆತನ ಶ್ರಮಗಳಾಗಿರುವುದರಿಂದಲೇ ಮತ್ತು ಅದರಂತೆಯೇ ನಗೆ ದೊರೆಯುವಂತಹ ಮಹಿಮೆಯೂ ಆತನು ಮಹಿಮೆಯಾಗಿರುವುದರಿಂದಲೇ ಮತ್ತು ಅದನ್ನು ನಮ್ಮೊಂದಿಗೆ ಆತನು ಹಂಚಿಕೊಳ್ಳುವುದರಿಂದಲೇ ನಮಗೆ ದೊರೆಯುತ್ತದೆ. ಕನಿಷ್ಟದಲ್ಲಿ ದೇವರು ಅವುಗಳನ್ನು ನೋಡಲು ಬಯಸುವ ರೀತಿಯು ಇದೇ ಎಂದು ತೋರುತ್ತದೆ. ಎಲ್ಲಾ ಘನವಾದ ಮಹಿಮೆಗಳಿಗೆ ಮೂಲ ಯೇಸುವಿನ ನಂಬಿಗಸ್ತಿಕೆಯ ಫಲ ಎಂಬ ಜಾಡನ್ನು ಯಾವಾಗಲೂ ಹಿಡಿದಿರಬೇಕು. ಇದು ಪ್ರವಾದಿಯ ಮಾತುಗಳಲ್ಲಿ ಹೇಗೆ ಸೂಚಿತವಾಗಿದೆ ಎಂಬುದನ್ನು ಗಮನಿಸಿ.

ಯೆಶಾಯ 53:12 – "ಇವನು ಇಂಥವನಾಗಿರುವುದರಿಂದ ನಾನು ಇವನಿಗೆ ದೊಡ್ಡವರ ಸಂಗಡ ಪಾಲು ಕೊಡುವೆನು. ಇವನು ಬಲಿಷ್ಠರೊಡನೆ ಸೂರೆಯನ್ನು ಹಂಚಿಕೊಳ್ಳುವನು. ತನ್ನ ಪ್ರಾಣವನ್ನು ಧಾರೆಯೆರೆದು ಮರಣಹೊಂದಿ ದ್ರೋಹಿಗಳೊಂದಿಗೆ ತನ್ನನ್ನೂ ಎಣಿಸಿಕೊಂಡು ಬಹು ಜನ ದ್ರೋಹಿಗಳ ಪಾಪವನ್ನು ಹೊರುತ್ತಾ ಅವರಿಗಾಗಿ ವಿಜ್ಞಾಪನೆ ಮಾಡಿದನಲ್ಲಾ".

ಕ್ರಿಸ್ತ ಯೇಸುವಿಗೆ ದೇವರು ನೀಡಿರುವ ಗೌರವವೆಂದರೆ ದೈವಸ್ವಭಾವದ ಪ್ರಭಾವ ಮಹಿಮೆಗಳು. ದೇವರೊಂದಿಗೆ ಆತನಿಗಿರುವುದರಲ್ಲಿ ಪಾಲನ್ನು ಹೊಂದುವುದು ಎಂತಹಾ ಒಂದು ಗೌರವ! ಈ ಮಹಿಮೆಯು ರಾಜನ ಅಧಿಕಾರ ಸ್ಥಾನಕ್ಕೆ ಏರಿಸುವುದರ ಜೊತೆಯಲ್ಲಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ದಯಪಾಲಿಸುವದನ್ನು ಒಳಗೊಂಡಿದೆ. ಕ್ರಿಸ್ತನ ನಂಬಿಗಸ್ತಿಕೆಯನ್ನೂ ಇದರ ಪರಿಣಾಮವಾಗಿ ಆತನು ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟಿರುವುದನ್ನು ಸಂಪೂರ್ಣ ರೀತಿಯಲ್ಲಿ ಎಷ್ಟು ಸೊಗಸಾಗಿ ಅಪೋಸ್ತಲನಾದ ಪೌಲನು ಈ ಮಾತುಗಳಿಂದ ನಮ್ಮ ಗಮನಕ್ಕೆ ಇಲ್ಲಿ ತಂದಿರುವನು. –

ಫಿಲಿಪ್ಪಿಯ 2:6–11 – "ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು (ಕಸಿದುಕೊಳ್ಳೆನು) ಎಂದೆಣಿಸದೆ ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು. ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು. ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದುದರಿಂದ ಸ್ವರ್ಗ ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು".

ಇವೆಲ್ಲವುಗಳೂ ಸಹ ಹತ್ತು ತಾನು ಹೊಸೆದ ನಾರಿನ ಬಟ್ಟೆಯಲ್ಲಿ ಪ್ರತಿಫಲಿತವಾಗಿವೆ. (ವಿಮೋ. 26:1) ಇದೇ ಸ್ವತಃ ಗುಡಾರವಾಗಿ ರಚಿತವಾಗಿತ್ತು. ಹೀಗೆ ಈ ಹೊಸೆದ ನಾರಿನ ಬಟ್ಟೆಯು ಅದರ ಅಂದವಾದ ಬಿಳುಪು – ಯೇಸುವಿನ ಪರಿಶುದ್ಧತೆ ಮತ್ತು ಅತನ ನೀತಿಗೆ ಸಾಕ್ಷಿ ಕೊಡುತ್ತದೆ. ಅದರ ನೀಲಿ ಮತ್ತು ರಕ್ತವರ್ಣಗಳು ಆತನ ಮರಣ ಪರ್ಯಂತರವಾಗಿರುವ ನಂಬಿಗಸ್ತಿಕೆಯ ವಿಷಯವಾಗಿ ಹೇಳುತ್ತವೆ. ನೇರಳೆ ಬಣ್ಣವು ರಾಜಸ್ಥಾನಕ್ಕೆ ಏರಿಸಲ್ಪಟ್ಟ ಆತನ ರಾಜವೈಭಗಳ ವಿಷಯವನ್ನು ಪ್ರಕಟಿಸುತ್ತದೆ. "ಶೂರರೊಡನೆ ಕೊಳ್ಳೆಯನ್ನು ಹಂಚಿಕೊಳ್ಳುವಿಕೆಯು" (ಜಯಶಾಲಿಗಳಾದ ಸಭೆಯವರು) ಹತ್ತು ಬಟ್ಟೆಗಳನ್ನು ಎರಡು ಭಾಗಗಳಾಗಿ ಮಾಡಿ ಪ್ರತಿಯೊಂದನ್ನೂ ಐದೈದರಂತೆ ಆ ಎರಡು ಭಾಗಗಳನ್ನು ಕೊಂಡಿಯಿಂದ ಕೂಡಿಸಿರುವುದರಲ್ಲಿ ತೋರಿಸಲಾಗಿದೆ. ಆಡುಕೂದಲಿನ ಮೇಲ್ಹೊದಿಕೆಯನ್ನು

ಕೂಡಿಸಿರುವುದು ತಾಮ್ರದ ಕೊಂಡಿಗಳಾಗಿತ್ತು ಆದರೆ ಇಲ್ಲಿ ಆ ಎರಡು ಭಾಗಗಳನ್ನು ಕೂಡಿಸಿರುವುದು ಚಿನ್ನದ ಕೊಂಡಿಗಳು. ಕ್ರಿಸ್ತನನ್ನು ಮತ್ತು ಸಭೆಯನ್ನು ಮಹಿಮೆಯ ರಾಜ್ಯದಲ್ಲಿ ಒಂದು ಮಾಡುವ ಬಂಧವು – ಅದು ಎಷ್ಟೇ ಪರಿಪೂರ್ಣತೆಯಲ್ಲಿರುವುದೆಂದು ಪರಿಗಣಿಸಲಟ್ಟಿದ್ದರೂ ಎಷ್ಟು ಮಾತ್ರಕ್ಕೂ ಮನುಷ್ಯನ ಸ್ವಭಾವವಾಗಿರದೆ, ಆ ಬಂಧವು ದೈವ ಸ್ವಭಾವವಾಗಿದೆ ಎಂಬುದನ್ನು ತೋರಿಸಲಾಗಿದೆ. ಹೀಗೆ ಸಭೆಯು, ಮರಣದ ಪರ್ಯಂತರ ನಂಬಿಗಸ್ತರಾಗಿ ಯೇಸುವಿನ ನೀತಿ ತಮಗೆ ದೊರಕಿರುವುದರ ಮೂಲಕ, ನೀತಿಯೆಂದು ಎಣಿಸಲ್ಪಟ್ಟ ತನ್ನ ಮನುಷ್ಯತ್ವವನ್ನು ದೇವರಿಗೆ ಮೆಚ್ಚಿಕೆಯಾದ ದೋಷ ಪರಿಹಾರಕ ಯಜ್ಞವನ್ನಾಗಿ ಅರ್ಪಿಸಲು ಅವರನ್ನು ಶಕ್ತರನ್ನಾಗಿಸಿದೆ. ದೇವರ ಸಭೆಯ ಅಂಗಗಳಾಗಿ ಸೇರುವವರೆಲ್ಲರೂ ತಮ್ಮ ನಂಬಿಗಸ್ತಿಕೆಯ ದೆಸೆಯಿಂದಾಗಿ ಕ್ರಿಸ್ತನ ಉನ್ನತ ಪದವಿಯಲ್ಲಿ ಭಾಗಿಗಳಾಗುವ ಸೌಭಾಗ್ಯವನ್ನು ಹೊಂದಿದ್ದಾರೆ. ಏಕೆಂದರೆ "ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ಪಾಲುಗಾರರಾದರೆ" (ರೋಮಾ 8:17) "ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು" ಅವರ ಮಹಿಮೆ  ರಾಜವಂಶದ ಯಾಜಕರಾಗುವುದರಲ್ಲಿ ಇರುವುದು. ಆಗ ಅವರು ಹೀಗೆ ಹಾಡುವುದರಲ್ಲಿ ಆಶ್ಚರ್ಯವೇನೂ ಇಲ್ಲ.

"ನಮ್ಮನ್ನು ಪ್ರೀತಿಸುವವನೂ ತನ್ನ ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸಿದವನೂ ನಮ್ಮನ್ನು ರಾಜ್ಯವನ್ನಾಗಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದವನೂ ಆಗಿರುವಾತನಿಗೆ ಯುಗಯುಗಾಂತರಗಳಲ್ಲಿಯೂ ಘನ ಮಹತ್ವಗಳಿರಲಿ" (ಪ್ರಕಟಣೆ 1:6).

ಹೇಗೆ ಆ ಹತ್ತು ಪರದೆಗಳು ಪುರಾತನ ಕಾಲದ ದೇವದರ್ಶನ ಗುಡಾರವನ್ನು ಸ್ವತಃ ದೇವರ ನಿವಾಸ ಸ್ಥಾನವಾಗಿರುವುದಕ್ಕಾಗಿ ಪ್ರತಿಷ್ಠೆ ಮಾಡಿದ್ದವೋ ಅದೇ ರೀತಿಯಲ್ಲಿ ಯೇಸು ಮತ್ತು ಆತನ ಸಭೆಯೂ ( ಆ ಪರದೆಗಳಲ್ಲಿ ಬಹು ಸೊಗಸಾಗಿ ಚಿತ್ರಿತವಾಗಿರುವ ಹಾಗೆ ಮನುಷ್ಯರ ಮಧ್ಯದಲ್ಲಿ ದೇವರ ನಿಜರೂಪ ನಿವಾಸವಾಗಿ (ಗುಡಾರವಾಗಿ) ನಿರ್ಮಾಣಗೊಳ್ಳುವರು (ಪ್ರಕಟಣೆ 21:3).

ಹಾ! ರಾಜವಂಶಸ್ಥರು ಇವರೆಲ್ಲರು
ಎಲ್ಲರೂ ರಾಜಕುಮಾರರು
ದೈವೀಕ ಅಮರ ಮುಕುಟಗಳಿಗೆ ಬಾಧ್ಯರು
ಇಗೋ, ಉಲ್ಲಾಸದಿಂದ ಹಾಡುವರು ಅವರು~
ಮತ್ಯಾಕೆ ಅವರು ನಿಕೃಷ್ಟರಾಗಿ ಕಾಣುವರು
ಏಕೆ ಅಷ್ಟೊಂದು ತಿರಸ್ಕೃತರಾಗಿಹರು
ಏಕೆಂದರೆ ಅವರ ಶ್ರೀಮಂತ ವಸ್ತ್ರವು ಕಾಣದು
ಲೋಕವು ಅವರ ಬೆಲೆಯನ್ನು ಅರಿಯದು.

# ಭಾಗ–11
# ಯಾಜಕ ಪ್ರತಿಷ್ಠಾಕ್ರಮ

ಯಾಜಕಕಾಂಡ 8:1–36; ವಿಮೋಚನಾಕಾಂಡ 29:1–37

ದೇವದರ್ಶನ ಗುಡಾರವು ಇನ್ನೂ ನಿಲ್ಲಿಸಲ್ಪಟ್ಟಿದ್ದು ಮತ್ತು ನಾವು ಸೀನಾಯಿಯಲ್ಲಿ ವಿಶ್ರಮಿಸುತ್ತಿರುವಂತೆ ನಮಗೆ ಕಂಡುಬರಲು ದೇವರು ತನ್ನ ಛಾಯಾರೂಪದ ಯಾಜಕತ್ವವನ್ನು ಪ್ರತಿಷ್ಠಾಪಿಸಲು ಮಾಡಿದ ಸಂಸ್ಕಾರಗಳ ವಿಚಾರವಾಗಿ ಕೆಲವು ಆಲೋಚನೆಗಳನ್ನು ನೋಡೋಣ. ಇದನ್ನು ನಾವು "ಅವರಿಗೆ (ಇಸ್ರಾಯೇಲ್ಯರಿಗೆ) ಸಂಭವಿಸಿದ ಈ ಸಂಗತಿಗಳು (ಛಾಯಾರೂಪ) ನಿದರ್ಶನಗಳಾಗಿವೆ ಮತ್ತು ಅವುಗಳು ನಮಗೆ ಬುದ್ಧಿವಾದಗಳಾಗಿ ಬರೆಯಲ್ಪಟ್ಟಿವೆ..." (1 ಕೊರಿಂಥ. 10:11) ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡವರಾಗಿ ಇದನ್ನು ನೋಡೋಣ. ಹಾಗಿದ್ದಲ್ಲಿ ನಾವು ಯಾಜಕಕಾಂಡದ 8ನೇ ಅಧ್ಯಾಯದ ಕಡೆಗೆ ನಮ್ಮ ಗಮನವನ್ನು ಹರಿಸೋಣ. ಅವುಗಳು ಈ ಮಾತುಗಳಿಂದ ಪರಿಚಯಿಸಲ್ಪಟ್ಟಿವೆ.

ಯಾಜಕಕಾಂಡ 8:1, 2 – "ಯೆಹೋವನು ಮೋಶೆಗೆ – ನೀನು –
1) ಆರೋನನನ್ನೂ
2) ಅವನ ಗಂಡು ಮಕ್ಕಳನ್ನೂ ಕರಕೊಂಡು ಅವರಿಗೆ ಬೇಕಾದ
3) ದೀಕ್ಷಾವಸ್ತ್ರಗಳನ್ನೂ
4) ಅಭಿಷೇಕತೈಲವನ್ನೂ
5) ದೋಷಪರಿಹಾರಕ್ಕಾಗಿ ಸಮರ್ಪಿಸಬೇಕಾದ ಹೋರಿಯನ್ನೂ
6) ಎರಡು ಟಗರುಗಳನ್ನೂ
7) ಹುಳಿಯಿಲ್ಲದ ಭಕ್ಷ್ಯಗಳು ಪುಟ್ಟಿಯನ್ನೂ ತೆಗೆದುಕೊಂಡು ಬಂದು..."

ಯಾರು ದೇವರ ನಿಜರೂಪ ಯಾಜಕವರ್ಗದ ಸದಸ್ಯರಾಗಲು ಅಭಿಲಾಷಿಸುವರೋ ಅವರು ಈ ಚಿತ್ರಣವನ್ನು ಮತ್ತು ಅದರಲ್ಲಿ ವಿವರಿಸಲಾಗಿರುವ ಏಳು ಮೂಲ ಸಂಗತಿಗಳನ್ನು ಜಾಗರೂಕತೆಗಯಿಂದ ಪ್ರಾರ್ಥನಾ ಪೂರ್ವಕವಾಗಿ ಅಭ್ಯಾಸಿಸಿ ಅವುಗಳಲ್ಲಿ ತಮ್ಮ ಪ್ರತಿಷ್ಟೆಯು ನಿರೂಪಿಸಲಾಗಿದೆಯೋ ಎಂಬುದನ್ನು ವಿಚಾರ ಮಾಡಿ ನೋಡಬೇಕು. ಏಳು ಎಂಬುದು ಸ್ವತಃ ಪರಿಪೂರ್ಣತೆ ಹಾಗೂ ಸಂಪೂರ್ಣತೆಯ ಸಂಕೇತವಾಗಿದೆ. "ಕರೆಯಲ್ಪಟ್ಟವರ" ಪ್ರತಿಷ್ಟೆಯ ಪರಿಪೂರ್ಣತೆ ಹಾಗೂ ಅದು ಪೂರ್ಣಗೊಳ್ಳುವುದನ್ನು ದೇವರು ಈ ವಿಧವಾಗಿ ತೋರಿಸಿರುವನು ಈ ರೀತಿಯಲ್ಲಿ ಕರೆಯಲ್ಪಟ್ಟವರು ಕೇವಲ ಈ ಸಂಸ್ಕಾರದಲ್ಲಿ ಒಂದು ಭಾಗವಾಗಿದ್ದಾರೆ. ಅಂತೆಯೇ ಇದರ ಮೂಲಕವಾಗಿ ಅವರು (ದೇವರಿಗಾಗಿ) ಪ್ರತ್ಯೇಕಿಸಲ್ಪಟ್ಟಿರುವರು.

ಈ ಸಂಸ್ಕಾರದಲ್ಲಿ ಮೋಶೆಯು ನಮ್ಮ ಪರಲೋಕದ ತಂದೆಯಾದ ದೇವರಿಗೆ ಛಾಯೆಯಾಗಿ ಆತನನ್ನು ಪ್ರತಿನಿಧಿಸುವನು ಎಂಬುದನ್ನೂ ಇಲ್ಲಿ ಗಮನಿಸಬೇಕು. ಮೋಶೆಯು ಛಾಯಾರೂಪದ ಯಾಜಕತ್ವವನ್ನು ಪ್ರತಿಷ್ಠಿಸಿದ ಹಾಗೆ ಈ ಸವಾರ್ತಾಯುಗದಲ್ಲಿ ದೇವರು ತಾನೇ ನಿಜರೂಪದ ಯಾಜಕತ್ವವನ್ನು ಹೊಂದಿರುವ ಕ್ರಿಸ್ತ ಯೇಸುವನ್ನು ಹಾಗೂ ಆತನ ಸಭೆಯನ್ನು ಪ್ರತಿಷ್ಟಿಸಿ ಅವರನ್ನು (ತನಗಾಗಿ) ಪ್ರತ್ಯೇಕಿಸಿಕೊಳ್ಳುತ್ತಿರುವನು. ಆರೋನನಾಗಲಿ ಅಥವಾ ಅವರ ಮಕ್ಕಳಾಗಲಿ, ಮೋಶೆಯ ಕರೆಗೆ ಪ್ರತಿಕ್ರಯಿಸುವ ಮೂಲಕ ಪ್ರತಿಷ್ಠೆ ಹೊಂದಬಹುದು ಹೊರತು ತಮ್ಮಷ್ಟಕ್ಕೆ ತಾವೇ ಪ್ರತಿಷ್ಠಿಸಿಕೊಳ್ಳಲು ಸಾಧ್ಯವಿಲ್ಲ. ನಿಜರೂಪದ ಯಾಜಕತ್ವದ ವಿಷಯವಾಗಿಯೂ ಹೀಗೆ ಇರುವುದು ಅಪೋಸ್ತಲನಾದ ಪೌಲನು ಇದರ ವಿಷಯವಾಗಿ ಹೀಗೆ ಹೇಳುತ್ತಾನೆ.

ಇಬ್ರಿಯ 5:4 – "ಇದಲ್ಲದೆ ಯಾವನೂ ತನ್ನಷ್ಟಕ್ಕೆ ತಾನೇ ಈ ಗೌರವವನ್ನು ವಹಿಸಿಕೊಳ್ಳದೆ ದೇವರಿಂದ ನೇಮಿಸಲ್ಪಟ್ಟು ವಹಿಸಿಕೊಳ್ಳುತ್ತಾನೆ. ಆರೋನನೂ ಸಹ ದೇವರಿಂದಲೇ ನೇಮಿಸಲ್ಪಟ್ಟು ಆ ಗೌರವವನ್ನು ವಹಿಸಿಕೊಂಡನಲ್ಲಾ".

ಯಾಜಕತ್ವಕ್ಕಾಗಿರುವ ಈ "ಕರೆಯು" ದೇವರ ಪೂರ್ವೋದ್ದೇಶಗಳನ್ನು ಈಡೇರಿಸುವ ಸಲುವಾಗಿರುವುದು. ಛಾಯೆಯಲ್ಲಿ ಈ ಪೂರ್ವೋದ್ಧೇಶಗಳನ್ನು, ಆರೋನನು ಮತ್ತು ಅವನ ಮಕ್ಕಳನ್ನು ಕರೆಯುವ ಮೊದಲೇ ದೇವದರ್ಶನ ಗುಡಾರವನ್ನು ನಿಲ್ಲಿಸಿ ಅದನ್ನು ಪ್ರತಿಷ್ಠಿಸಿದ ಅಂಶದಲ್ಲಿ ಇದನ್ನು ಸ್ಪಷ್ಟಪಡಿಸಲಾಗಿದೆ. ತನ್ನ ಮಹಾ ಯಾಜಕನ ವ್ಯಕ್ತಿತ್ವವನ್ನು ಸಹ ದೇವರು ಪೂರ್ವದಲ್ಲೇ ನಿಷ್ಕರ್ಶಿಸಿದ್ದನೆಂಬುದನ್ನು ನಾವು ವಿವೇಚನಾಪೂರ್ವಕವಾಗಿ ಖಚಿತಪಡಿಸಿಕೊಳ್ಳಬಹುದು. ಈ ಸಂಬಂಧದಲ್ಲಿ ಕೇವಲ ಆರೋನನ್ನು ಮಾತ್ರ ಹೆಸರು ಹಿಡಿದು ಕರೆಯಲಾಗಿದ್ದು, ನಾದಾಬ್, ಅಬೀಹು, ಇತಾಮಾರ ಮತ್ತು ಎಲಿಯೇಜರನನ್ನು ಇದೇ ರೀತಿಯಲ್ಲಿ ಪ್ರತಿಷ್ಠಿತರಾಗುವುದಕ್ಕೆ ಕರೆದಿದ್ದರೂ ಅವರನ್ನು ಒಟ್ಟಾರೆಯಾಗಿ ಆತನ ಮಕ್ಕಳು ಎಂಬುದಾಗಿ ವ್ಯಕ್ತಪಡಿಸಿರುವುದನ್ನು ಗಮನಿಸೋಣ ಇದು ಬಹು ಮಹತ್ವವುಳ್ಳದ್ದು.!

ದೇವರ ಯುಗಯುಗಾಂತರಗಳ ಯೋಜನೆಯನ್ನು ಉಲ್ಲೇಖಿಸುವಾಗ ಅಪೋಸ್ತಲನು ಇದನ್ನು "ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಸಂಕಲ್ಪ ಮಾಡಿರುವುದು" ಎಂದು ಹೇಳಿದ್ದಾನೆ. ಈ ಪೂರ್ವ ನಿರ್ಧಾರಿತ ಉದ್ಧೇಶಗಳನ್ನು ನೆರವೇರಿಸಲು ಯೇಸುವನ್ನು ಕರೆಯಲಿಲ್ಲ ಎಂದು ಯಾರು ತಾನೇ ಧೈರ್ಯವಾಗಿ ಹೇಳುವರು? ಈ ಕರೆಗೆ ಉತ್ತರವಾಗಿ ಆತನು ತನ್ನ ಮೂವತ್ತನೇ ವರ್ಷದಲ್ಲಿ ಸ್ನಾನದೀಕ್ಷೆ ಹೊಂದಲು ಯೊಹಾನನ ಬಳಿಗೆ ಬಂದುದು ನಮಗೆ ಕಂಡುಬರುತ್ತದೆ. ಇದು ಆತನು ತನ್ನ ಪಾಪಗಳ ಪರಿಹಾರಕ್ಕಾಗಿ ಮಾಡಿಸಿಕೊಂಡ ದೀಕ್ಷಾಸ್ನಾನವಲ್ಲ ಏಕೆಂದರೆ ಆತನಲ್ಲಿ ಯಾವ ಪಾಪವೂ ಇರಲಿಲ್ಲ. ಆದರೆ ತನ್ನ ತಂದೆಯ ಚಿತ್ತವನ್ನು ನೆರವೇರಿಸಲು ತಾನು ಪ್ರತಿಷ್ಠೆ ಮಾಡಿಕೊಂಡದ್ದನ್ನು ಸಾಂಕೇತಿಕವಾಗಿ ತೋರ್ಪಡಿಸುವುದಕ್ಕಾಗಿ ಮಾಡಿಸಿಕೊಂಡನು. ಹೀಗಿದ್ದರೂ "ಇಗೋ ನಿನ್ನ

ಚಿತ್ತವನ್ನು ನೆರವೇರಿಸುವುದಕ್ಕೆ ಬಂದಿದ್ದೇನೆ" (ಇಬ್ರಿಯ 10:9) ಎಂದು ಆತನು ಹೇಳುವುದನ್ನು ಕೇಳುತ್ತೇವೆ.

ಹೀಗೆ ಯೇಸುವು ಒಬ್ಬ ಮಹಾ ಯಾಜಕನಾದನು ಹೇಗೆಂದರೆ ದೇವರು ಆತನಿಗೆ ಅಂದು ಅಲ್ಲೇ ಪವಿತ್ರಾತ್ಮನಿಂದ ಅಬಿಷೇಕಿಸಿದನು. (ಮತ್ತಾಯ 3:16, ಮಾರ್ಕ 1:10 ನೋಡಿರಿ) ಅದು ತನ್ನ ಜೊತೆಗಾರರೆಲ್ಲರ ಮೇಲೆ ಉನ್ನತನಾಗಿರುವುದಕ್ಕಾಗಿ ಪರಮಾನಂದ ತೈಲದಿಂದ ಅಭಿಷೇಕಿಸಿರುವುದು. ಯೇಸುವಿನ ಪಾಲಿನಲ್ಲಿ ತನ್ನನ್ನು ತಾನೇ ಪ್ರತಿಷ್ಟಿಸಿಕೊಳ್ಳುವುದು ಎಂದರೆ ಯೆಹೋವ ದೇವರೊಂದಿಗೆ ಯಜ್ಞದ ಮೂಲಕವಾಗಿ ಒಡಂಬಡಿಕೆಯಲ್ಲಿ ಸೇರುವುದು ಅಡಕವಾಗಿದೆ. ಅತನು ಅಲ್ಲಿಯೇ ಅಂದೇ ನಮ್ಮ ಮಹಾ ಯಾಜಕನಾದುದಲ್ಲದೆ, ಹೊಸದಾದ ಒಂದು ವ್ಯವಸ್ಥೆಯಲ್ಲಿನ ಭಕ್ತರಲ್ಲಿ ಆತನೇ ಮೊದಲಿಗನಾದನು (ಏಕೆಂದರೆ ಆತನೇ ಎಲ್ಲಾದರಲ್ಲಿಯೂ ಮೊದಲಿಗನಾಗುವಂತೆ – ಕೊಲೊಸ್ಸೇ 1:18) (ಕೀರ್ತನೆ 50:5) ತನ್ನ ಸ್ವಂತ ಚಿತ್ತ ಅದು ಪರಿಪೂರ್ಣವಾಗಿದ್ದರೂ ಸಹ ಅದನ್ನು ತೆಗೆದಿಟ್ಟು ಅದಕ್ಕೆ ಬದಲಾಗಿ ಪರಲೋಕದ ತಂದೆಯ ಚಿತ್ತವನ್ನು ಅಂಗೀಕರಿಸುವುದಕ್ಕಾಗಿ ಈ ಯಜ್ಞವು ಕರೆನೀಡಿರುವುದು. ಯೇಸುವು ತನ್ನ ಶಿಷ್ಯರಾಗುವುದಕ್ಕೆ ಮುಖ್ಯವಾಗಿ ಬೇಕಾದುದು ತನ್ನನ್ನು ನಿರಾಕರಿಸಿಕೊಳ್ಳುವ ಗುಣ ಎಂದು ಪ್ರಕಟಿಸಿದ್ದಾನೆ.

"ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ದಿನಲೂ ಹೊತ್ತುಕೊಂಡು ನನ್ನ ಹಿಂದೆ ಬರಲಿ" ಲೂಕ 9:23

ದೇವರ ಚಿತ್ತವು ಆತನ (ಯೇಸುವಿನ) ಮೇಲೆ, ಸುಸ್ಪಷ್ಟವಾಗಿ, ಹೊರಿಸಲಿರುವುದು ಏನೆಂದರೆ ಅದು ಶಿಲುಬೆಯೇ ಆದರೆ ಇಲ್ಲಿ ತನ್ನನ್ನು ನಿರಾಕರಿಸಿಕೊಂಡು ಶಿಲುಬೆಯನ್ನು ಹೊರುವುದಕ್ಕಿಂತಲೂ ಹೆಚ್ಚಿನ ವಿಷಯಗಳು ಈ ಪ್ರತಿಷ್ಠೆಯ ಸಂಗತಿಯಲ್ಲಿ ಸೇರಿವೆ. ಇದು ನೀತಿಯನ್ನು ಪ್ರೀತಿಸುವುದು ಹಾಗೂ ಅನೀತಿಯನ್ನು ದ್ವೇಷ ಮಾಡುವುದನ್ನು ಒಳಗೊಂಡಿರುತ್ತದೆ. ಈ ವಿಷಯವು ಸಹ ನಮ್ಮ ಪ್ರತಿಷ್ಠೆಗೆ ಅಗತ್ಯವಾದುದು ಎಂಬುದನ್ನು ಗ್ರಹಿಸುವುದರಲ್ಲಿ ನಮ್ಮಲ್ಲಿ ಕೆಲವರು ವಿಫಲರಾಗುವರು ಎಂಬುದು ನನ್ನ ಅಂಜಿಕೆ. ನೀತಿಯನ್ನು ಪ್ರೀತಿಸಿರುವ ಕಾರಣಕ್ಕಾಗಿ ತಮ್ಮನ್ನು ಪ್ರತಿಷ್ಠಿಸಿಕೊಂಡಾಗ್ಯೂ, ಅನೀತಿಯನ್ನು ನಿಜವಾಗಿ ದ್ವೇಷಿಸುವುದರಲ್ಲಿ ವಿಫಲರಾಗುವ ಸಾಧ್ಯತೆಯಿದೆ. "ಪರಮಾನಂದ ತೈಲವು" ನೀತಿಯನ್ನು ಪ್ರೀತಿಸಿ ಅನೀತಿಯನ್ನು ದ್ವೇಷಿಸುವ, ಈ ಎರಡನ್ನೂ ಮಾಡುವವರಿಗೆ ಮಾತ್ರ ಸಂಬಂಧಿಸಿರುವುದು ಎಂಬುದು ಗಮನದಲ್ಲಿರಲಿ. ಯೇಸುವಿನ ವಿಷಯವಾಗಿ ಇದು ಎಷ್ಟು ನಿರ್ಧಿಷ್ಟವಾದ ಅಂಶ ಎಂಬುದನ್ನು ಅಪೋಸ್ತಲನು ಮುಂದೆ ಹೇಳಿರುವುದನ್ನು ನೋಡಿ.

"ನೀನು ಧರ್ಮವನ್ನು ಪ್ರೀತಿಸಿದಿ, ಅಧರ್ಮವನ್ನು ದ್ವೇಷಿಸಿದಿ. ಆದುದರಿಂದ ದೇವರು ನಿನ್ನ ದೇವರೇ, ನಿನ್ನನ್ನು ನಿನ್ನ ಜೊತೆಗಾರರಿಗಿಂತ ಉನ್ನತ ಸ್ಥಾನಕ್ಕೆ ಏರಿಸಿ ಪರಮಾನಂದ

ತೈಲದಿಂದ ಅಭಿಷೇಕಿಸಿದ್ದಾನೆ" (ಇಬ್ರಿಯ 1:9)

ಯೇಸುವಿಗಾದ ಕರೆ, ಇದಕ್ಕೆ ಆತನ ಪ್ರತಿಕ್ರಿಯೆ ಮತ್ತು ಇದರ ಫಲವಾಗಿ ಆತನಿಗಾದ ಅಭಿಷೇಕ ಇವೆಲ್ಲವೂ ಸ್ಪಷ್ಟವಾಗಿ ಛಾಯೆಯಲ್ಲಿ ನಿರೂಪಿಸಲಾಗಿದೆ. ಆರೋನನು ಮೋಶೆಯ ಕರೆಗೆ ಉತ್ತರವಾಗಿ ಬಂದು ತನ್ನನ್ನು ಪ್ರತಿಷ್ಠೆ ಪಡಿಸಿಕೊಂಡನು. ಮುಂದೆ ಅವನು ಕ್ಲುಪ್ತ ಸಮಯದಲ್ಲಿ, ತನ್ನ ಜೊತೆಗಾರರಾದ ಯಾಜಕರೆಲ್ಲರ ಮೇಲೆ ಪ್ರಮುಖನಾಗಿ ಇರುವುದಕ್ಕಾಗಿ, ಅಭಿಷೇಕವನ್ನು ಹೊಂದಿದನು. ನಿಷ್ಕಳಂಕನೂ ನಿರ್ದೋಷಿಯೂ ಪಾಪಿಗಳಲ್ಲಿ ಸೇರದವನೂ ಆದ ಯೇಸುವನ್ನು ಸೂಕ್ಷ್ಮವಾಗಿ ಪ್ರತಿನಿಧಿಸುವ ಸಲುವಾಗಿ ಛಾಯಾ ರೂಪದಲ್ಲಿರುವ ಯಾಜಕನಾದ ಆರೋನನು ತನ್ನನ್ನು ತೊಳಕೊಳ್ಳಬೇಕಾಯಿತು. ಇದು ಮೋಶೆಯಿಂದ ಮಾಡಲ್ಪಟ್ಟಿತು. (ಯಾಜಕಕಾಂಡ 8:6) ಆರೋನನು ಸಾಂಕೇತಿಕವಾಗಿ ಮೋಶೆಯ ಕೈಯಿಂದ (ಶುದ್ಧನಾದ) ಹೇಗೋ ಹಾಗೆ ಯೇಸುವು ದೇವರ ಕೈಯಿಂದ ಪರಿಶುದ್ಧನೂ ಪವಿತ್ರನೂ ಆಗಿ ಬಂದನು. ಆಗ ಮಾತ್ರವೇ ಆರೋನನಿಗೆ ವಸ್ತ್ರಗಳನ್ನು ತೊಡಿಸಿ ದೇವರ ಒಬ್ಬ ಮಹಾ ಯಾಜಕನಾಗಿ ಅಭಿಷೇಕಿಸಲು ಆಗುತ್ತದೆ. ಯೇಸುವಿನ ವಿಷಯವಾಗಿ ಸತ್ಯವೇದ ಕೊಡುವ ಸಾಕ್ಷಿಯು:

"ಇಂಥವನೇ ನಮಗೆ ಬೇಕಾದ ಮಹಾಯಾಜಕನು, ಈತನು ಪರಿಶುದ್ಧನೂ, ನಿರ್ದೋಷಿಯೂ, ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ..." (ಇಬ್ರಿಯ 7:26)

ಆರೋನನ ಮಕ್ಕಳಿಗೆ ಸ್ನಾನ ಮಾಡಿಸುವುದೂ ಸಹ–ಅವರು ದೇವರ ಅಧಿಕಾರ ಹಸ್ತದಿಂದ ಪರಿಶುದ್ಧರೂ ನಿರ್ಮಲರೂ ಅದ ಒಂದು ಯಾಜಕ ವರ್ಗವಾಗಿ ಬರುವುದನ್ನು ಸೂಚಿಸುತ್ತದೆ. ಪಾಪದಲ್ಲಿ ಹುಟ್ಟಿ ಅನೀತಿಯಲ್ಲಿ ರೂಪುಗೊಂಡವರಾದ (ಕೀರ್ತನೆ 51:5) ಇವರು ಯೇಸುವಿನಂತೆ ಮೂಲತಃ ಶುದ್ಧರಲ್ಲ ಯಾವನೂ ನೀತಿವಂತನಿಲ್ಲ, ಒಬ್ಬನಾದರೂ ಇಲ್ಲ! ಇವರು ನಂತರದಲ್ಲಿ ದೇವರ ದೃಷ್ಟಿಯಲ್ಲಿ ನೀತಿವಂತರಾಗಿ ಮಾಡಲ್ಪಟ್ಟವರು. ಇವರು ತಮ್ಮ ಸ್ವಂತ ಪುಣ್ಯಕ್ರಿಯೆಗಳಿಂದ ಇಲ್ಲವೇ ಅವುಗಳ ಮೂಲಕವಾಗಿ ನೀತಿವಂತರಾಗಿರದೆ ಸ್ವತಃ ದೇವರಲ್ಲಿ ಪ್ರೇರಿತವಾದ ನಂಬಿಕೆಯ ಮೂಲಕವಾಗಿ ನೀತಿವಂತರಾಗಿರುವರು. ಇವರೂ ಸಹ ದೇವರ ಪೂರ್ವೋದ್ದೇಶಗಳನ್ನು ನೆರವೇರಿಸಲು ಕರೆಯಲ್ಪಟ್ಟಿರುವರು. ಆದರೂ ಆರೋನನ ಮಕ್ಕಳು ತಮ್ಮ ಅಸ್ತಿತ್ವ ಮತ್ತು ಅದರಿಂದಾಗಿ ಅವರಿಗೆ ಯಾಜಕವರ್ಗವಾಗುವುದಕ್ಕೆ ದೊರೆತ ಕರೆಗಾಗಿ ಆರೋನನಿಗೆ ಬದ್ದರಾಗಿರುವಂತೆ ಈ ನಿಜರೂಪದ ಯಾಜಕರೂ ಸಹ ತಮ್ಮ ಅಸ್ತಿತ್ವ ಹಾಗೂ ದೇವರಿಂದ ಉಂಟಾದ ಕರೆ ಇವರೆಡು ಕಾರಣಗಳಿಗೆ ಕ್ರಿಸ್ತನಿಗೆ ಬದ್ಧರಾಗಿರಬೇಕು. ಆರೋನನಿಗೆ ರಕ್ತ ಸಂಬಂಧಿಗಳು ಎಂಬ ಕಾರಣಕ್ಕಲ್ಲದೆ ನಾದಾಬ್, ಅಭಿಹು, ಇತಾಮಾರ್ ಅಥವಾ ಎಲಿಯೇಜರರಿಗೆ ಕರೆ ಇರುತ್ತಿರಲಿಲ್ಲವೋ, ಹಾಗೆಯೇ ಕ್ರಿಸ್ತನ ರಕ್ತದಿಂದಲ್ಲದೆ ನನಗೂ ನಿಮಗೂ ನಾವು ಸ್ಪಂದಿಸಿ (ದೇವರಿಂದ) ಅಂಗೀಕರಿಸಲ್ಪಡುವಂತಹ ಕರೆ

ನಮಗಿರುವುದು ಸಾಧ್ಯವಿರುತ್ತಿರಲಿಲ್ಲ. ಹಾಗೆಯೇ ನಮಗಿರುವುದೂ ಸಹ (ಕ್ರಿಸ್ತನ) ರಕ್ತದ ಸಂಬಂಧವೇ; ಇದಕ್ಕಾಗಿ ನಾವು ದೇವರನ್ನು ಕೊಂಡಾಡಬೇಕು. ಏಕೆಂದರೆ (ಆತನೇ) ದೇವರೇ;

"ನಮ್ಮನ್ನು ಅಂಧಕಾರ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು." ಕೊಲೊಸ್ಸೆ 1:13,14.

ಇದೂ ಸಹ ಎಫೆಸ 1:3–6 ರಲ್ಲಿ ಅಡಕವಾಗಿ ಅಲ್ಲಿ ಅದನ್ನು ಹೀಗೆ ಓದುತ್ತೇವೆ.

"ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿರುವ ಸಕಲ ಆತ್ಮೀಯ ವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ. ಹೇಗೆಂದರೆ ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು.

ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸುಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವುದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೋ ಸಂಕಲ್ಪ ಮಾಡಿದ್ದನು. ಈ ಕೃಪಾದಾನವು ಆತನ ಪ್ರೀತಿಯಲ್ಲಿಯೇ ನಮಗೆ ದೊರೆಯಿತು."

ಯಾಜಕರ ಪ್ರತಿಷ್ಠೆಯ ಸಂಸ್ಕಾರದ ಮೊದಲೆರಡು ಅಂಶಗಳನ್ನು ಹೀಗೆ ಪರಿಗಣಿಸಿದ ನಂತರ, ನಾವು ಈಗ ಮೂರನೇ ಅಂಶದ ಅಂದರೆ, ಅ ವಸ್ತ್ರಗಳ ವಿಷಯಗಳಿಗೆ ಹೋಗೋಣ. ಆರೋನನಾಗಲೀ, ಅವನ ಮಕ್ಕಳಾಗಲಿ ಅವರು ಧರಿಸುವ ಯಾಜಕ ವಸ್ತ್ರಗಳನ್ನು ತಾವೇ ತರಲಿಲ್ಲ ಎಂಬುದು ನಿಸ್ಸಂದೇಹವಾಗಿ ಗಮನಿಸಿರುವ ಸಂಗತಿ. ಇವುಗಳನ್ನು ಮೋಶೆಯು ತೆಗೆದುಕೊಂಡು ಬಂದನು; ಕನಿಷ್ಠ ಅಂದರೆ, ಆರೋನನ ವಿಷಯದಲ್ಲಿ ಅವು ಎರಡು ಜೊತೆಗಳಾಗಿದ್ದವು, ಅವುಗಳು ಅವನಿಗೆ ವಿಶೇಷವಾದ ವಸ್ತ್ರಗಳಾಗಿದ್ದು. ಸಾಮಾನ್ಯವಾಗಿ ಅವುಗಳನ್ನು "ಗೌರವವೂ ಅಲಂಕಾರವೂ" ಆದದ್ದೆಂದು ಹೆಸರಿಸಲಾಗಿತ್ತು ಮತ್ತು ಅವುಗಳು ಈ ಮುಂದಿನವುಗಳನ್ನು ಒಳಗೊಂಡಿದ್ದವು; 1) ಪದಕದ ಚೀಲ, 2) ಮಹಾಯಾಜಕ ಕವಚ, 3) ಮೇಲಂಗಿ, 4) ವಿಚಿತ್ರವಾದ ನಿಲುವಂಗಿ, 5) ಮುಂಡಾಸ ಮತ್ತು ಚೊಕ್ಕ ಬಂಗಾರದ ಪಟ್ಟ 6) ನಡುಕಟ್ಟು 7) ನಾರಿನ ಚಡ್ಡಿ (ವಿಮೋ. 28:2–4, 36, 42) ಇವುಗಳ ಜೊತೆಗೆ ಆರೋನನಿಗೆ ನಾರಿನ ಮೇಲಂಗಿ, ನಾರಿನ ಚಡ್ಡಿ, ನಾರಿನ ನಡುಕಟ್ಟು ಮತ್ತು ನಾರಿನ ಮುಂಡಾಸ ಇವುಗಳಿಂದ ಕೂಡಿದ "ಯಜ್ಞ

ದೀಕ್ಷಾವಸ್ತ್ರಗಳು" ಎಂಬ ಹೆಸರಿನ ವಸ್ತ್ರಗಳು ಸಹ ಇದ್ದವು. (ಉದಾ: ಯಾಜಕಕಾಂಡ 6:9–11 ಮತ್ತು 16:3, 4 ನೋಡಿ) ಹಾಗೆಯೇ ಯಾಜಕರಿಗೆ ಕೇವಲ ಆರೋನನ ದೀಕ್ಷಾವಸ್ತ್ರಗಳಿಗೆ ಹೋಲುವ ನಾರಿನ ವಸ್ತ್ರಗಳಿದ್ದವು ಆದರೆ ಆರೋನನ ಬಂಗಾರದ ಪಟ್ಟಿಕಟ್ಟಿರುವ ಮುಂಡಾಸದ ಬದಲಾಗಿ ನಾರಿನ ಮುಂಡಾಸಗಳಿದ್ದವು (ವಿಮೋ. 28:40–42) ಈ "ಗೌರವದ" ಮತ್ತು "ಯಜ್ಞ ದೀಕ್ಷಾವಸ್ತ್ರಗಳು" ಅವರಿಗೆ "ಗೌರವವಾಗಿಯೂ ಅಲಂಕಾರವಾಗಿಯೂ" ಇರಬೇಕೆಂದು ದೇವರು ತಾನೇ ಇವುಗಳ ವಿಷಯವಾಗಿ ಸೂಚಿಸಿ ಹೇಳಿರುವನೆಂಬುದನ್ನು ಗಮನಿಸಲೇಬೇಕಾದುದು. (ವಿಮೋ. 28:2, 40) ಇದು ಎಷ್ಟು ಮಹತ್ವವುಳ್ಳದೆಂದು ನಾವೂ ಮತ್ತೂ ಹೇಳುವೆವು! ನಾವು ಈಗ ನಾರಿನ ಯಜ್ಞ ದೀಕ್ಷಾವಸ್ತ್ರ ವೇಷಧಾರಿಗಳಾಗಿರುವೆವು ಎಂಬುದಾಗಲಿ ಅಥವಾ ಮುಂದೆ ನಾವು ನಂಬಿಗಸ್ತರಾಗಿದ್ದಲ್ಲಿ ನಾವು ಗೌರವವೂ ಅಲಂಕಾರವೂ ಆದ ವಿಶೇಷ ವಸ್ತ್ರಧಾರಿಗಳಾಗುವೆವು ಎಂಬುದಾಗಲಿ ಗಮನಾರ್ಹ ಸಂಗತಿಯಲ್ಲ; ಏಕೆಂದರೆ ನಮ್ಮ ವಸ್ತ್ರಧರಿಸುವಿಕೆಗಳೆಲ್ಲಾ ಗೌರವ ಅಲಂಕಾರಗಳಿಗಾಗಿ ಇರುವುದು.

ಯೇಸುವಿಗೆ ಈ ನಾರಿನ ಯಜ್ಞ ದೀಕ್ಷಾವಸ್ತ್ರಗಳು ಸಹಜವಾಗಿ ತಾನೇ ಸ್ವಂತವಾಗಿ ಗಳಿಸಿರುವ ನೀತಿ ಪರಿಶುದ್ಧತೆಗಳನ್ನು ಪ್ರತಿನಿಧಿಸುತ್ತದೆ. ಯಾಜಕವರ್ಗದವರಾದ ನಮಗೆ ಈ ಬಿಳಿ ನಾರಿನ ಯಜ್ಞ ದೀಕ್ಷಾ ವಸ್ತ್ರಗಳು ನಮಗೆ ಗೌರವವೂ ಅಲಂಕಾರವೂ ಆಗಿರುವುದಕ್ಕಾಗಿ ಯೇಸುವಿನ ಮೂಲಕ ನಮಗೆ ದೊರೆತಿರುವ ನೀತಿ ಪರಿಶುದ್ಧತೆಗಳನ್ನು ಪ್ರತಿನಿಧಿಸುತ್ತದೆ! ಹೀಗಿರಲು ನಾವು ಆ ರಾಜ್ಯದ ಮಹಿಮೆಯಲ್ಲಿ ಸೇರಿ ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸಲಿರುವ ಆ ಮಹಿಮೆ ವೈಭವಗಳುಳ್ಳ ಮಹಾಯಾಜಕನ  ಸದಸ್ಯರಾಗುತ್ತೇವೋ ಆಗ ಆ ನಾರಿನ ಬಿಳಿ ನಿಲುವಂಗಿಯು ನಮ್ಮ ಸ್ವಂತ ನೀತಿ ಪರಿಶುದ್ಧತೆಗಳನ್ನು ಪ್ರತಿನಿಧಿಸುತ್ತವೆ. (ಹೋಲಿಸಿ T-36, 29)

ಈ ಉಳಿದ ವಸ್ತ್ರಗಳ ವಿಷಯವಾಗಿ ಇನ್ನೂ ಹೆಚ್ಚು ಹೇಳಬಹುದು. ಆದರೆ ಇಲ್ಲಿ ನಮಗೆ ಸಮಯಾವಕಾಶ ಇರುವುದಿಲ್ಲ. ಛಾಯೆಯಲ್ಲಿ ಆರೋನನು ತನಗಾಗಿ ಇಲ್ಲವೇ ಜನರಿಗಾಗಿ ಒಂದೇ ಒಂದು ಯಜ್ಞವನ್ನಾದರೂ ಅರ್ಪಿಸುವ ಮೊದಲೇ ಮಹಿಮಾ ವಸ್ತ್ರಗಳನ್ನು ಧರಿಸಿದ್ದರ ವಿಷಯವಾಗಿ ಸ್ವಲ್ಪ ಗಮನ ಹರಿಸ ಬೇಕಾದ ಹಂಗು ನಮಗೆ ಇರುತ್ತದೆ. ಇದರ ಅರ್ಥವೇನಾಗಿರಬಹುದು? ಆರೋನನು ಈ ಸಮಯದಲ್ಲಿ ಆ ವಸ್ತ್ರಗಳನ್ನು ತೆಗೆದುಕೊಂಡು ಧರಿಸಿರುವುದರಲ್ಲಿ ದೇವರ ಉದ್ದೇಶವೇನೆಂದರೆ ಇವು ಆತನು ಮುಂದೆ ಹೊಂದಲಿರುವ ಬಾಧ್ಯತೆಗೆ ಇವು ಕೇವಲ ಮುನ್ಸೂಚನೆಯಾಗಿದೆ (ಸಂಚಕಾರ) ಎಂಬುದು ನಮ್ಮ ನಂಬಿಕೆ ನಿಜವಾಗಿಯೂ ಈ ಮಹಿಮಾ ವಸ್ತ್ರಗಳು ಆರೋನನ ವಶದಲ್ಲಿರುವುದಕ್ಕಾಗಿ ಕೊಟ್ಟಿರುವುದೇ ಹೊರತು ಇನ್ನೂ ಆತನ ಒಡೆತನಕ್ಕೆ ಬಂದಿರುವುದಿಲ್ಲ. ದೋಷ ಪರಿಹಾರ ದಿನದ ಕಡೆಯಲ್ಲಿ ಆರೋನನು ಜನರ ಮುಂದೆ ತಾನು ಬಂದು ನಿಲ್ಲುವವರೆಗೂ ಈ ವಸ್ತ್ರಗಳು ಆತನ ಸ್ವಂತವೆನಿಸಿಕೊಳ್ಳುವುದಿಲ್ಲ. (ಯಾಜಕ. 16:23, 24)

ಹೀಗೆಯೇ ಪವಿತ್ರಾತ್ಮ ನಮ್ಮಲ್ಲಿ ಅಂಕುರಿಸಲ್ಪಟ್ಟಾಗ ನಮ್ಮ ಬಾಧ್ಯತೆಯು ಸಂಚಕಾರವಾಗಿರುವುದು. ಆದರೆ ಆ ಬಾಧ್ಯತೆಯು ನಮಗೆ ಪೂರ್ಣವಾಗಿ ಲಭಿಸುವುದು. ಕೇವಲ ನಾವು ಯಜ್ಞದ ಮೂಲಕವಾಗಿರುವ ನಮ್ಮ ಒಡಂಬಡಿಕೆಯನ್ನು ಮರಣ ಪರ್ಯಂತರ ನಂಬಿಗಸ್ತರಾಗಿ ಕೈಗೊಂಡು ನಡೆದಾಗಲೇ (ಎಫೆಸ 1:13, 14) ಈ ವಿಷಯವಾಗಿ ಪಾಸ್ಟರ್ ರಸೆಲ್ಲರ ಲೇಖನಿಯಿಂದ ಬಂದದ್ದನ್ನು ಈ ಮುಂದೆ ಉಲ್ಲೇಖಿಸುತ್ತೇವೆ.

"... ಈ ಬಗೆಯ ನಂಬಿಗಸ್ತಿಕೆಯು, ಅಂದರೆ ಈ ರೀತಿಯಲ್ಲಿ ಅನುದಿನವೂ ಮರಣಾವಸ್ಥೆಯನ್ನು ಅನುಭವಿಸುವುದು (ದೇವರು) ನಮ್ಮನ್ನು ಕರೆದದ್ದನ್ನೂ ಆದುಕೊಂಡದ್ದನ್ನೂ ದೃಢಪಡಿಸಿಕೊಳ್ಳುವುದಕ್ಕೆ ಅವಶ್ಯಕವಾದದ್ದು, ಅಲ್ಲದೆ ತನ್ನ ಹೆಜ್ಜೆಯ ಜಾಡಿನಲ್ಲಿ ನಂಬಿಗಸ್ತರಾಗಿ ನಡೆಯುವ ಇಂಥವರಿಗೇ ಅಂದರೆ ನಂಬಿಗಸ್ತರಾಗಿ ಜಯಶಾಲಿಗಳಾಗಲಿರುವ ಆಯಲ್ಪಟ್ಟವರಾದ ಈ ನೂತನ ಸೃಷ್ಟಿಯ ಸದಸ್ಯರಿಗೆ ಮೀಸಲಾಗಿರುವ ಆ ಪ್ರಭಾವ ಮಾನ, ನಿರ್ಲಯತ್ವಗಳನ್ನು ಅತನು ವಾಗ್ದಾನ ಮಾಡಿದ್ದಾನೆ. ನಮ್ಮ ಕರ್ತನ ನುಡಿ ಏನೆಂದರೆ, "ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು..." (ಪ್ರಕಟನೆ 2:10) ತನಗೆ ಶಿರಸ್ಸಾದ ಕರ್ತನಿಗೆ ಸಂಭವಿಸಿದಂತೆ ಸಭೆಗೂ ಸಹ ಪ್ರತಿಷ್ಠೆಯು ಪವಿತ್ರಾತ್ಮನ ಫಲಗಳನ್ನು ಉಂಟುಮಾಡಿ ಅವರು ಅನುದಿನವೂ ನಂಬಿಗಸ್ತರಾಗಿ ನಡೆದಲ್ಲಿ ಆತ್ಮನಿಂದ ಆಶೀರ್ವದಿಸಲ್ಪಟ್ಟು ಆನಂದ ಮತ್ತು (ಆತ್ಮನ) ಫಲಗಳು ಅವರಲ್ಲಿ ಅಧಿಕವಾಗುವುದನ್ನು ನಾವು ನೋಡುತ್ತೇವೆ. ಮೊದಲನೇ ಪುನರುತ್ಥಾನದಲ್ಲಿ ಮಾನ ಪ್ರಭಾವಗಳೆಂಬ ಬಾಧ್ಯತೆಯನ್ನು ಪೂರ್ಣವಾಗಿ ಹೊಂದಲು ಮರಣ ಪರ್ಯಂತರ ನಂಬಿಗಸ್ತರಾಗಿ ಒಡಂಬಡಿಕೆಯನ್ನು ಪೂರ್ಣಗೊಳಿಸುವುದು ಅವಶ್ಯ. (ಎಫೆಸ. 1:12–14. ರೋಮಾ 8:16, 17) (T–444)

(ಪ್ರತಿಷ್ಠೆಯ) ಆರಂಭ ಕ್ಷಣದಿಂದಲೂ ಆ "ನಿಕ್ಷೇಪವು" ನಮ್ಮದಾಗಿರುವುದಾಗಿ ಎಣಿಸಲೆಂದು ದೇವರು ಬಿಡುತ್ತಾನೆ. ನಿಜ, ಅದು ಮಣ್ಣಿನ ಘಟಗಳಲ್ಲಿ ಇದ್ದರೂ ನಾವು ಅದನ್ನು ವಶಕ್ಕೆ ಪಡಕೊಂಡೇ ಇದ್ದೇವೆ. ಆದರೂ ನಮ್ಮ ವಶದಲ್ಲಿರುವುದು ನಿಜವಾಗಿಯೂ ಕೇವಲ ಸ್ವಲ್ಪವಾಗಿ ಮಾತ್ರವೇ" ಮುಂದೆ ಒಂದು ಕ್ಲುಪ್ತಕಾಲದಲ್ಲಿ ಇದು "ಸಂಪೂರ್ಣವಾದ" ಅಂದರೆ ಈ ದ್ರವ್ಯದ ಪೂರ್ಣ ಒಡೆತನಕ್ಕೆ ದಾರಿಮಾಡಿಕೊಡುತ್ತದೆ. ಈ ಪಾಠವನ್ನು ದೇವದರ್ಶನ ಗುಡಾರದಲ್ಲಿ ಮೊದಲನೇ ಮತ್ತು ಎರಡನೇ ತೆರೆಗಳಿಗೆ ಆಧಾರವಾಗಿರುವ ಕಂಬಗಳ ಮೂಲಕ ನಮ್ಮ ಗಮನಕ್ಕೆ ತರಲಾಗಿದೆ. ನಾವು ಈಗ "ಸ್ವಲ್ಪವಾಗಿ" ಹೊಂದಿರುವ ಸ್ಥಿತಿಯನ್ನು ಮೊದಲನೆಯ ತೆರೆಯ ಹಿಂಭಾಗದಲ್ಲಿನ ಕಂಬಗಳನ್ನು ದೈವ ಸ್ವಭಾವವನ್ನು ಸೂಚಿಸುವ ಚಿನ್ನದಿಂದ ಹೊದಿಸಿರುವುದರಲ್ಲಿ ಪ್ರತಿಪಾದಿಸಲಾಗಿದೆ. ಅವುಗಳ ಗದ್ದಿಗೆಯನ್ನು ತಾಮ್ರದಿಂದ ಹೊದಿಸುವುದು "ನಾವು ಹೇಗೆ ಈ ನಿಕ್ಷೇಪಗಳನ್ನು (ದೈವ ಸ್ವಭಾವವನ್ನು)

ಮಣ್ಣಿನ ಘಟಗಳಲ್ಲಿ ಹೊಂದಿರುವೆವು ಎಂಬುದನ್ನು" ಪ್ರತಿನಿಧಿಸುವುದು (2 ಕೊರಿಂಥ 4:7) ಇದರಂತೆಯೇ ಎರಡನೇ ತೆರೆಯ ಹಿಂದೆ ಇರುವವರು – ಪರಿಪೂರ್ಣವಾಗಿರುವ ಒಡೆತನ ಬಂದಾಗ ದೈವ ಸ್ವಭಾವವನ್ನು ಸೂಚಿಸುವ – ಚಿನ್ನದಿಂದ ಹೊದಿಸಿರುವ ಕಂಬಗಳು ಇನ್ನೂ ತಾಮ್ರದ ಗದ್ದಿಗೆಗಳಲ್ಲಿ ನಿಲ್ಲಿಸುವುದಕ್ಕೆ ಬದಲಾಗಿ ಅವು (ಸತ್ಯವಾದ, ನಿಜವಾದ, ವಾಸ್ತವದ ಸೂಚನೆಯಾದ) ಬೆಳ್ಳಿಯ ಗದ್ದಿಗೆಗಳಲ್ಲಿ ನಿಲ್ಲಿಸಿರುವುದರಲ್ಲಿ ಪ್ರತಿನಿಧಿಸಲ್ಪಟ್ಟಿರುತ್ತಾರೆ. (T-114, 115)

ಹೀಗೆ ಆರೋನನು, ತನ್ನ ಮುಂದಿನ ಬಾಧ್ಯತೆಗೆ ಸಂಚಕಾರವಾಗಿರುವ, ಗೌರವವೂ ಅಲಂಕಾರವೂ ಆದ ವಸ್ತ್ರಗಳನ್ನು ತನ್ನ ಪ್ರತಿಷ್ಠೆಯ ಸಮಯದಲ್ಲಿ ಧರಿಸಿರುವುದನ್ನು ನಾವು ನೋಡುತ್ತೇವೆ. ದೋಷ ಪರಿಹಾರ ದಿನದ ಯಜ್ಞಾಚರಣೆಯ ಅಂತ್ಯಭಾಗದಲ್ಲಿ ಆತನು ತನ್ನ ಪೂರ್ಣ ಬಾಧ್ಯತೆಯನ್ನು ಹೊಂದಿದವನಾಗಿ (ಅಂದರೆ ತನ್ನ ಪೂರ್ಣ ಒಡೆತನಕ್ಕೆ ಬಂದಿರುವ ಮಹಿಮೆಯ ವಸ್ತ್ರಧಾರಿಯಾಗಿ) ಜನರ ಮುಂದೆ ಬಂದು ಅವರನ್ನು ಆಶೀರ್ವದಿಸಲು ಮತ್ತೆ ಕಾಣಿಸಿಕೊಳ್ಳುವುದನ್ನು ನಾವು ನೋಡುತ್ತೇವೆ. ಇಲ್ಲಿ ಮತ್ತೆ ಪಾಸ್ಟರ್ ರಸೆಲ್ಲರು ಬರೆದಿರುವುದನ್ನು ನಾವು ಉಲ್ಲೇಖಿಸೋಣ:

ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸಲಿರುವ ಅಬ್ರಹಾಮನ ಪೂರ್ಣ ಸಂತತಿಯನ್ನು ಪೂರ್ಣ ಕ್ರಿಸ್ತನನ್ನು (ಶಿರಸ್ಸು ಹಾಗೂ ದೇಹವನ್ನು) ಆರೋನನಿಗೆ ದೀಕ್ಷಾ ವಸ್ತ್ರತೊಡಿಸಿ ಪ್ರತಿಷ್ಠೆಪಡಿಸುವಲ್ಲಿ ಪ್ರತಿನಿಧಿಸಲಾಗಿದೆ ಎಂಬುದನ್ನು ನೋಡುತ್ತೇವೆ. ದೇವರ ದೃಷ್ಟಿಕೋನದಿಂದ ಮಹಾ ವಿಮೋಚಕನನ್ನು ನಾವು ಪರಿಶೀಲಿಸುತ್ತಿದ್ದೇವೆ ಎಂಬುದನ್ನು ನಾವು ಮರೆಯದಿರೋಣ. ಮತ್ತು ಆತನ ಜೊತೆಯಲ್ಲಿ ಆತನ ಪ್ರತ್ಯಕ್ಷತೆಯ ಸಮಯದವರೆಗೆ ಅಂದರೆ ಸಾವಿರ ವರ್ಷದ ದಿನದ ಮುಂಜಾನಿನ ಸಮಯದವರೆಗೂ ಗಮನಿಸೋಣ. ಅ ದಿನದಲ್ಲಿ ಎಲ್ಲಾ ಸದಸ್ಯರು ದೇಹಕ್ಕೆ ಸೇರಿರುವರು ಅಗ "ಪರಿಶುದ್ಧ ತೈಲವು" ಕೊರಳ ಪಟ್ಟಿಯವರೆಗೂ ಹರಿದು ಪ್ರತಿಯೊಬ್ಬ ಸದಸ್ಯರನ್ನು ಅಭಿಷೇಕಿಸುವುದು. ( ಯಾಜಕ. 10:7) ಅನಂತರ ಆತನು (ಕ್ರಿಸ್ತನು) ಮಾನವರನ್ನು ಆಶೀರ್ವದಿಸುವ ಕಾರ್ಯವನ್ನು ಪ್ರಾರಂಭಿಸುವನು. (T-38)

ಧರ್ಮಶಾಸ್ತ್ರದಡಿಯಲ್ಲಿ ಅಭಿಷೇಕವು ಯಾಜಕರನ್ನು ತಮ್ಮ ಸೇವೆಗೆ ಪ್ರತಿಷ್ಠಿಸುವ ಆಚರಣಾಕ್ರಮವಾಗಿತ್ತು. ಅವರು "ಪವಿತ್ರ ಅಬಿಷೇಕತೈಲ" ಎಂದು ಕರೆಯಲ್ಪಡುವ ಒಂದು ವಿಶಿಷ್ಟ ತೈಲದಿಂದ ಅಭಿಷೇಕಿಸುವುದರ ಮೂಲಕ ತಮ್ಮ ಸೇವಾಸ್ಥಾನಕ್ಕೆ ನೇಮಕಗೊಳ್ಳುತ್ತಿದ್ದರು. ಯಾಜಕರ ಹೊರತು ಯಾರ ಮೇಲೂ ಈ ತೈಲವನ್ನು ಹಾಕುವಂತಿರಲಿಲ್ಲ ಮತ್ತು ಬೇರೆ ಯಾರಾದರಾಗಲಿ ಇದನ್ನು ಇಟ್ಟುಕೊಳ್ಳುವುದು ಅಥವಾ ತಯಾರಿಸುವುದು ಕಾನೂನು ಬಾಹಿರವಾಗಿತ್ತು. (ವಿಮೋ. 30:25–33, 38) ಈ ತೈಲವು ಪುತ್ರಭಾವವನ್ನು ನಮ್ಮಲ್ಲಿ ಉಂಟು ಮಾಡುವ ಪವಿತ್ರಾತ್ಮನಿಗೆ ಸೂಚನೆಯಾಗಿರುವುದು ಈ

ಮೂಲಕ ನಾವು ನಿಜರೂಪದಲ್ಲಿ "ರಾಜವಂಶದ ಯಾಜಕರು" ಆಗುವುದರ ಮೂಲಕ ದೇವರ ಮಕ್ಕಳಾಗಿ ಮುದ್ರೆ (ಅಧಿಕಾರ) ಹೊಂದುವೆವು. ಕೇವಲ ಪ್ರತಿಷ್ಠಿತರಾದ ಯಾಜಕರು ಮಾತ್ರ ಯಾವಾಗಲೂ ಹೀಗೆ ಅಭಿಷೇಕಿಸಲ್ಪಡುವರು. (T-28, 29)

ಛಾಯಾರೂಪವನ್ನು ಎಚ್ಚರಿಕೆಯಿಂದ ಪರಿಶೀಲಿಸಿದಾಗ ಕಂಡುಬರುವ ಅಂಶವೆಂದರೆ ಕೇವಲ ಆರೋನನು ಮಾತ್ರ ತನ್ನ ತಲೆಯ ಮೇಲೆ "ಪವಿತ್ರ ಅಭಿಷೇಕ ತೈಲ" ಹೊಯ್ಯಲ್ಪಟ್ಟನು. ಈ ಮೂಲಕ ಕೇವಲ ಆರೋನನು ಮಾತ್ರ ಯಾಜಕ ವರ್ಗವಾಗಿ ಅಭಿಷೇಕಿಸಲ್ಪಟ್ಟಿದ್ದಲ್ಲದೆ ಅತನ ಪೂರ್ಣ ಕುಟುಂಬದವರೂ ಸಹ ಅಭಿಷೇಕಿಸಲ್ಪಟ್ಟರು. ಆತನು ಯಾಜಕರಾದ ತನ್ನ ಕುಟುಂಬದವರೆಲ್ಲರ ಮೇಲೆ ಮಹಾ ಯಾಜಕನಾಗಿ ಮಾಡಲ್ಪಟ್ಟನು. ಇಂತಹ ಯಾಜಕತ್ವಕ್ಕೆ ಶಿರಸ್ಸು ಅಥವಾ ಪ್ರಧಾನ ಇಲ್ಲವೇ ಮಹಾ ಯಾಜಕನಾದವನನ್ನು ಅಭಿಷೇಕಿಸುವುದರಿಂದ ತನ್ನ ಕುಟುಂಬದ ಸದಸ್ಯರಲ್ಲಿ ಪ್ರತಿಯೊಬ್ಬರನ್ನೂ ಪ್ರತ್ಯೇಕವಾಗಿ ಅಭಿಷೇಕಿಸುವು ಅಗತ್ಯವಿರಲಿಲ್ಲ. ಆದರೂ ಯಾಜಕರಾದ ತನ್ನ ಮಕ್ಕಳೆಲ್ಲರೂ ಈ ಮಹಾಯಾಜಕದ ಅಭಿಷೇಕದಲ್ಲಿ ಭಾಗಿಗಳಾಗಿದ್ದರು ಎಂಬುದನ್ನು ತೋರಿಸುವುದು ಅಗತ್ಯವೆಂದು ತೋರುತ್ತದೆ. ಹಾಗಾಗಿ ಇವರೆಲ್ಲರೂ ಪವಿತ್ರ ತೈಲದ ಅಭಿಷೇಕವನ್ನು ಹೊಂದಿದ್ದರು. ಆದರೆ ಚಿಮುಕಿಸುವುದರಿಂದ ಮಾತ್ರವಷ್ಟೇ ಅದು ಕೇವಲ ಪ್ರತಿಷ್ಟೆ ಟಗರಿನ ಯಜ್ಞದ ರಕ್ತದಲ್ಲಿ ಅಭಿಷೇಕ ತೈಲವನ್ನು ಸೇರಿಸಿ ಒಟ್ಟಾಗಿ ಕಲಸಿ ಅವುಗಳನ್ನು ಅವರ ಮೇಲೆ ಚಿಮುಕಿಸಿದ ನಂತರವೇ ಹೊರತು ಇದಕ್ಕೆ ಮೊದಲು ಅಭಿಷೇಕವಾಗುತ್ತಿರಲಿಲ್ಲ. (ಯಾಜಕ. 8:30) ನಿಜರೂಪದ ದೇವರ ಯಾಜಕ ವರ್ಗವಾದ ನಾವು ನಮ್ಮ ಕರ್ತನು ಹಾಗೂ ಶಿರಸ್ಸು ಆದಾತನಲ್ಲಿ ಅಭಿಷೇಕಿಸಲ್ಪಟ್ಟಿದ್ದೇವೆ. ಅತನ ಶರೀರದ ಅಂಗಗಳಾಗುವ ಮೂಲಕ ಆತನ ಅಭಿಷೇಕದಲ್ಲಿ ನಾವು ಪಾಲುಗಾರರಾಗಿದ್ದೇವೆ. ಮತ್ತು ಆತನ ಅಮೂಲ್ಯ ರಕ್ತದ ಮೌಲ್ಯದ ಮೂಲಕ ಮಾತ್ರವೇ ನಾವು ಆತನ ಶರೀರದ ಅಂಗಗಳಾಗುತ್ತೇವೆ ಎಂಬ ಸತ್ಯಾಂಶವನ್ನು ಎಷ್ಟು ಸುಂದರವಾಗಿ ಇದು ತೋರಿಸುತ್ತದೆ. ಪಾಸ್ಟರ್ ರಸಲ್ಲರು ಹೀಗೆ ಹೇಳುತ್ತಾರೆ.

"ಪ್ರತಿಷ್ಠಾ ರಕ್ತ ಮಿಶ್ರಿತವಾದ ಅಭಿಷೇಕ ತೈಲವನ್ನು ಅವರ ಮೇಲೆ ಚಿಮುಕಿಸುತ್ತಿದ್ದದ್ದು (ವಚನ 30) ಬೋಧಿಸುವುದೆಂದರೆ ನಮ್ಮ ಪ್ರತಿಷ್ಠೆಯು ಅಂಗೀಕಾರವಾಗುವುದು ಕೇವಲ ನಾವು ನಮ್ಮ ವಿಮೋಚಕನ ಅಮೂಲ್ಯ ರಕ್ತದಿಂದ ನೀತಿವಂತರೆಂದು ನಿರ್ಣಯ ಹೊಂದಿದ ಕಾರಣದಿಂದಲೇ. ಹೀಗೆ ನಮ್ಮನ್ನು ಅಂಗೀಕರಿಸಿರುವುದು – ಕೇವಲ – "ಆತನ ಪ್ರಿಯನಲ್ಲಿಯೇ" ಎಂದು ನಮಗೆ ಹೇಳಲ್ಪಟ್ಟಿದೆ. (ಎಫೆಸ. 1:6) (T-46, 47)

ಈಗ ದೋಷಪರಿಹಾರ ಯಜ್ಞದ ವಿಷಯವಾಗಿ, ನಾವು ನಿಮಗೆ ಮತ್ತೊಮ್ಮೆ ಜ್ಞಾಪಿಸುವುದೇನೆಂದರೆ ಯಾಜಕರ ಪ್ರತಿಷ್ಠೆಯ ಸಂದರ್ಭದಲ್ಲಿ ಹೋರಿಯನ್ನು ಒದಗಿಸಿದುದು ಮೋಶೆಯೇ. ಅದು ಆರೋನನಾಗಲಿ ಅಥವಾ ಅವನ ಮಕ್ಕಳಾಗಲಿ

ಒದಗಿಸಲಿಲ್ಲ. ಈ ದೋಷ ಪರಿಹಾರ ಯಜ್ಞಾರ್ಪಣೆಯಲ್ಲಿ ಬಳಸಿದ ಪ್ರಾಣಿಯು ಒಂದು ಹೋರಿ. ಈ ಛಾಯೆ ಮೂಲಕ ನಾವು ಕಲೆ ಹಾಕಿದ ವಿಷಯವೆಂದರೆ, ಹೋರಿಯು ಪರಿಪೂರ್ಣವಾದ ಮನುಷ್ಯತ್ವವನ್ನು ಪ್ರತಿನಿಧಿಸುವುದರಿಂದ (ಲೋಗಾಸ್ ತನ್ನ ಮಾನವ ಪೂರ್ವಾಸ್ತಿತ್ವದಲ್ಲಿದ್ದಾಗ) ಯೇಸುವಾಗಲಿ ಅಥವಾ ಸಭೆಯಾಗಲಿ ಇದನ್ನು (ತಮ್ಮದಾಗಿ) ಹೊಂದಿರಲಿಲ್ಲ. ಆದರೆ ವಾಸ್ತವದಲ್ಲಿ ಮೋಶೆಯಲ್ಲಿ ಸೂಚಿತನಾದ ದೇವರೇ ಇದನ್ನು ಈ ನಿಗದಿತ ಯಜ್ಞದ ಉದ್ಧೇಶಕ್ಕಾಗಿ ಒದಗಿಸಿದ್ದನು ಎಂಬುದು.

ಯೇಸುವಿಗೆ ಆತನು (ದೇವರು) ಒಂದು ಪರಿಪೂರ್ಣವಾದ ದೇಹವನ್ನು ಸಿದ್ಧಮಾಡಿ ಕೊಟ್ಟನು. "... ನನಗೆ ದೇಹವನ್ನು ಸಿದ್ಧಮಾಡಿಕೊಟ್ಟೆ" (ಇಬ್ರಿಯ 10:5). ಸಭೆಗೆ ಆತನು ಪರಿಪೂರ್ಣವಾದ ದೇಹವನ್ನು ಸಿದ್ಧ ಮಾಡಿಕೊಡಲಿಲ್ಲ. ಆದರೆ (ಸಭೆಯು) ಅದರ ಶಿರಸ್ಸಾದವನ ನೀತಿಯನ್ನು ಆರೋಪಿಸುವುದರ ಮೂಲಕ ಸಭೆಯನ್ನು ಕ್ರಿಸ್ತನ ದೇಹವಾಗುವುದಕ್ಕಾಗಿ ಸಿದ್ಧಮಾಡಿಕೊಟ್ಟನು. (ಎಫೆಸ. 1:23) ದೇವರ ಈ ಏರ್ಪಾಟು ಮಾತ್ರವೇ ಸಭೆಯನ್ನು ಪರಿಪೂರ್ಣರನ್ನಾಗಿ ಮಾಡಿಕೊಳ್ಳಲು ಶಕ್ತರನ್ನಾಗಿ ಮಾಡುವುದು. "ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದುದ್ದನ್ನು ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸಲು ಸಾಧ್ಯವಾಗಿಸುತ್ತದೆ (ಕೊಲೊಸ್ಸೆ 1:24). ಛಾಯಾರೂಪದಲ್ಲಿ ಆರೋನನು ಮತ್ತು ಅವನ ಮಕ್ಕಳು ಆ ಹೋರಿಯ ತಲೆಯ ಮೇಲೆ ತಮ್ಮ ಕೈಯನ್ನು ಇಟ್ಟಿದ್ದುದರಲ್ಲಿ ಅದರ ಮಹತ್ವ ಕಾಣುವುದಿಲ್ಲವೇ? (ಯಾಜಕ. 8:14)

ದೇವರು ಹೀಗೆ ಸಭೆಗೆ ಅದರ ಶಿರಸ್ಸಾದ ಕ್ರಿಸ್ತನ ಮನುಷ್ಯ ಸ್ವಭಾವದಲ್ಲಿನ ಪರಿಪೂರ್ಣತೆಯನ್ನು ಒದಗಿಸುತ್ತಾನೆ. ಸಾವಿರ ವರುಷದ ಆಳ್ವಿಕೆಯ ಕಡೆಯಲ್ಲಿ ಈ ಮನುಷ್ಯ ಸ್ವಭಾವದ ಪರಿಪೂರ್ಣತೆಯನ್ನು ಎಲ್ಲಾ ಮಾನವರಿಗೆ ನೀಡಿ ಅದು ಅವರಿಗೆ ತಮ್ಮ ಸ್ವಂತದ್ದಾಗಿರುವುದೆಂದು ಎಣಿಸುವಾಗ ಮನುಕುಲದ ಪ್ರತಿಯೊಬ್ಬ ಸದಸ್ಯನೂ ಭೂಲೋಕದಲ್ಲಿ (ಕೆಟ್ಟು ಹೋಗಿರುವ) ಸಮಸ್ತವನ್ನೂ ಸರಿಮಾಡುವ ಸಂಗತಿಗಳಲ್ಲಿ ಕೇವಲ ಪಾಲನ್ನು ಪಡೆಯುವರು. ಆಗ ಅಲ್ಲಿ ಪಡೆಯುವ ಜೀವದ ಹಕ್ಕುಗಳು ತಂದೆಯಾದ ಆದಾಮನಿಂದ ಕಳೆದುಕೊಂಡವುಗಳಲ್ಲ. ಆದರೆ ಅವುಗಳು ಮನುಷ್ಯನಾಗಿರುವ ಕ್ರಿಸ್ತ ಯೇಸುವು ಯಜ್ಞವಾಗಿ ಅರ್ಪಿಸಿದಂತವುಗಳು ಕ್ರಿಸ್ತನ ಯಜ್ಞ ಫಲವಾಗಿ ಗಳಿಸಿದ ಪರಿಪೂರ್ಣತೆಯನ್ನು ಸಭೆಗೆ ನೀಡಿ ಅದನ್ನು ಪರಿಪೂರ್ಣವಾದದ್ದೆಂದು ಎಣಿಸುವಾಗ ಆ ಸಭೆಯು ನಿಜವಾಗಿ ಪರಿಪೂರ್ಣರಾಗಿರುವುದಿಲ್ಲ. ಬದಲಾಗಿ ತಾನು ಪ್ರತಿಷ್ಠೆ ಮಾಡಿಕೊಳ್ಳುವ ವಿಷಯದಿಂದಾಗಿ ಆ ಸಭೆಯನ್ನು "ತನ್ನ ಪ್ರಿಯನಲ್ಲಿ" ಅಂಗೀಕರಿಸಿರುವುದನ್ನು ಪ್ರತಿಪಾದಿಸುತ್ತದೆ. (ಎಫೆಸ 1:6) ಆಕೆಯ ಮನುಷ್ಯತ್ವ ವಿಷಯವಾದ ನಿಜ ಸ್ಥಿತಿಯನ್ನು ಹೆಚ್ಚು ನಿರ್ಧಿಷ್ಟವಾಗಿ ದೋಷ ಪರಿಹಾರ ಮಹಾದಿನದ ಯಜ್ಞಾಚರಣೆಯಲ್ಲಿ ವಧಿತವಾಗುವ ಹೋತದ ಸಂಗತಿಯಲ್ಲಿ ತೋರಿಸಲಾಗಿದೆ. ಇಲ್ಲವೇ ಸರ್ವಾಂಗ ಹೋಮದಲ್ಲಿ ಯಜ್ಞಪಶುವಿನ ತಲೆಯನ್ನು ಮೊದಲು ಯಜ್ಞವೇದಿಯ ಮೇಲೆ ಇಟ್ಟು ನಂತರದಲ್ಲಿ ಕಾಲು

ಮತ್ತು ಹೊಟ್ಟೆಯಲ್ಲಿರುವುದನ್ನು ತೊಳೆದು ಅವುಗಳನ್ನು ತಲೆಯ ಪಕ್ಕದಲ್ಲಿ ತುಂಡುತುಂಡಾಗಿ ಇರಿಸುವುದರಲ್ಲಿಯೂ ತೋರಿಸಲಾಗಿದೆ (ಯಾಜಕ 8:20, 21). (ಯಜ್ಞಪಶುವಿನ) ತಲೆಯನ್ನು ತೊಳೆಯುವ ವಿಷಯದಲ್ಲಿ ಏನೂ ಹೇಳಲ್ಪಟ್ಟಿಲ್ಲವೆಂಬುದು ಇಲ್ಲಿ ಗಮನಿಸಬೇಕಾದ ಅಂಶ.

ದೋಷಪರಿಹಾರ ಯಜ್ಞಪಶುವಾದ ಹೋರಿಯು ತರಲ್ಪಟ್ಟಾಗ ಆರೋನನು ಮತ್ತು ಅವನ ಮಕ್ಕಳೂ ಅದರ ತಲೆಯ ಮೇಲೆ ಕೈಗಳನ್ನು ಇಟ್ಟು ಈ ಯಜ್ಞವು ನಮ್ಮನ್ನು ಪ್ರತಿನಿಧಿಸುತ್ತದೆ ಎಂದು ಹೇಳುವರು ಈ ಕ್ಷಣದಿಂದ ಆ ಹೋರಿಗೆ ಸಂಭವಿಸುವುದೆಲ್ಲವೂ ಕ್ರಿಸ್ತನಿಗೂ ಮತ್ತು ಆತನ ದೇಹವಾಗಿರುವ ನರಭಾವದಲ್ಲಿರುವ ತನ್ನ ಸಭೆಗೂ ಸಂಭವಿಸುವ ಸಂಗತಿಗಳನ್ನು ಪ್ರತಿನಿಧಿಸುತ್ತವೆ. ಇಸ್ರಾಯೇಲ್ಯರಿಗೆ ಸೂಚಿತವಾಗಿರುವ ಮಾನವಕುಲದವರೆಲ್ಲರ (ದೋಷಪರಿಹಾರರ್ಥದ) ಅಗತ್ಯತೆ ಪೂರೈಸುವುದಕ್ಕಾಗಿ ಹೋರಿಯನ್ನು (ಮೋಶೆಯಲ್ಲಿ ಸೂಚಿತವಾಗಿರುವ) ಧರ್ಮಶಾಸ್ತ್ರ ನಿಯಮಗಳ ಅಧೀನಕ್ಕೆ ಒಪ್ಪಿಸಿಕೊಡಲಾಯಿತು. ಧರ್ಮಶಾಸ್ತ್ರ ನಿಯಮದ ಅಗತ್ಯಗತೆಗಳನ್ನು ನೆರವೇರಿಸಲು ಅದನ್ನು ವಧಿಸಬೇಕಾಗಿತ್ತ. ಮತ್ತು ಮೋಶೆಯು ಅದನ್ನು ವಧಿಸಿದನು. (T-41)

ಯಾಜಕ ಪ್ರತಿಷ್ಠಾ ಸಂಸ್ಕಾರದ ಆರನೆಯ ಆಂಶ ಟಗರು. ಅವುಗಳಲ್ಲಿ ಎರಡು ಟಗರುಗಳು ಇದ್ದವು. ಇವುಗಳಲ್ಲಿ ಒಂದು ಸರ್ವಾಂಗ ಹೋಮದ ಟಗರು. ಇದು ಈಗಾಗಲೇ ಹೋರಿಯ ಯಜ್ಞದಲ್ಲಿ ತೋರಿಸಲಾದ ಅದೇ ರೀತಿಯ ಪ್ರತಿಷ್ಠೆಯನ್ನು ಆದರೆ ಬೇರೊಂದು ದೃಷ್ಟಿಕೋನದಲ್ಲಿ ಅಂದರೆ ದೈವೀಕ ಅಂಗೀಕಾರದ ದೃಷ್ಟಿಕೋನದಲ್ಲಿ ಚಿತ್ರಿಸುತ್ತದೆ. ಇದು ಯಜ್ಞಾರ್ಪಣೆ ದೇವರಿಗೆ ಮಾಡಲಾಯಿತು ಹಾಗೂ ಪೂರ್ಣವಾಗಿ ದೇವರಿಂದ ಅಂಗೀಕೃತವಾಯಿತು. ದೇವರ ಯಜ್ಞವೇದಿಯ ಬೆಂಕಿಯಿಂದ ಸಂಪೂರ್ಣವಾಗಿ ದಹಿಸಲ್ಪಟ್ಟಿತು ಎಂಬುದನ್ನು ತೋರಿಸುವುದು. ಸರ್ವಾಂಗ ಹೋಮಗಳ ಮಹತ್ವದ ವಿಷಯವಾಗಿ ನಾವು **Mr. Edersheim's** "ದೇವಾಲಯ" ಎಂಬ ಗ್ರಂಥದ 99ನೇ ಪುಟದಲ್ಲಿರುವ "ಸರ್ವಾಂಗ ಹೋಮ ಪ್ರಾಯಶ್ಚಿತ್ತ ಮತ್ತು ಸಮಾಧಾನ ಯಜ್ಞಗಳು ಎಂಬ ತಲೆಬರಹದ ಅಡಿಯಲ್ಲಿರುವ ವಿಷಯಗಳನ್ನು ಉಲ್ಲೇಖಿಸುವವರಾಗಿದ್ದೇವೆ.

"ಸರ್ವಾಂಗಹೋಮ – ಓಲಾಹ್ ಅಥವಾ "ಚಲಿಲ್" ಓಲಾಹ್ ಎಂಬ ಶಬ್ಧದ ಮೂಲವು ಪೂರ್ಣವಾಗಿ ದೇವರ ಬಳಿಗೆ ಏರಿಸುವಿಕೆ ಎಂದು ಅರ್ಥಕೊಡುವುದಾಗಿದ್ದು, ಇಲ್ಲಿ ಯಜ್ಞಾಚರಣೆಯ ವಿಧಾನ ಮತ್ತು ಅದರ ಅರ್ಥವಿವರಣೆ ಏಕ ರೀತಿಯಾಗಿರುವುದನ್ನು ತೋರಿಸುತ್ತದೆ. ಇದು ಒಂದು ವ್ಯಕ್ತಿಯಾಗಲಿ ಅಥವಾ ಸಭೆಯಾಗಲಿ ಅದು ಪೂರ್ಣವಾಗಿ ದೇವರಿಗೆ ಶರಣಾಗುವುದರ ಮತ್ತು ಇದನ್ನು ಆತನು (ದೇವರು) ಅಂಗೀಕರಿಸುವುದರ ಸಂಕೇತವಾಗಿದೆ. ಹೀಗಾಗಿ ಇದೂ ಸಹ "ರಕ್ತಧಾರೆಯಿಲ್ಲದೆ" ಸಾಧ್ಯವಾಗಲಾರದು. ಬೇರೆ ವಿಧವಾದ ಯಜ್ಞಗಳನ್ನು ಮಾಡುವಾಗ ಮೊದಲು ದೋಷಪರಿಹಾರ ಯಜ್ಞದ

ಮಾಡಬೇಕು. ನಂತರ ಸಮಾಧಾನ ಯಜ್ಞವು ಇವುಗಳನ್ನು ಹಿಂಬಾಲಿಸಬೇಕಿತ್ತು. ವಾಸ್ತವಾಂಶದಲ್ಲಿ ಇದರ ಅರ್ಥವು (ಇತರ ಯಜ್ಞಗಳು) ಒಟ್ಟಾರೆಯಾಗಿ ಅಂಗೀಕಾರವಾಗುವುದಕ್ಕೆ ಆಧಾರ ಇವುಗಳ ಮೊದಲಿನ (ದೋಷಪರಿಹಾರ ಯಜ್ಞದ) ವಿಶೇಷ ಅಂಗೀಕಾರ, ಇದನ್ನು (ಲ್ಯಾಟಿನ್ ಭಾಷೆಯಲ್ಲಿ ) ಸಾಕ್ರಿಪೀಸಿಯಮ್ ಲಾಟ್ರೇಟಿಕಮ್ ಅಥವಾ ಶ್ರದ್ಧಾಭಕ್ತಿ ಮತ್ತು ಸೇವೆಯ ಯಜ್ಞವೆಂದು ಸೂಕ್ತವಾಗಿ ಕರೆಯಲಾಗಿದೆ. ಹೀಗೆ ದಿನಗಳು ಕಳೆದಂತೆ ಇವು ದೇವಾಲಯದಲ್ಲಿ ದಿನನಿತ್ಯ ಪ್ರಾತಃಕಾಲದ ಹಾಗೂ ಸಾಯಂಕಾಲದ ಹೋಮಗಳಾಗಿ ಅರ್ಪಿತವಾಗ ತೊಡಗಿದವು. ಅಲ್ಲದೆ ಸಬ್ಬತ್ತು ಹುಣ್ಣಿಮೆ ಹಾಗೂ ಹಬ್ಬಗಳಲ್ಲಿ, ಅನುದಿನದ ದೇವಾರಾಧನಾರ್ಪಣೆ ನಂತರ ಒಂದು ಸರ್ವಾಂಗ ಹೋಮವನ್ನು ಹೆಚ್ಚಾಗಿ ಮಾಡಲಾಗುತ್ತಿತು. ಇಲ್ಲಿ ಒಡಂಬಡಿಕೆಯಲ್ಲಿ ಭಾಗಿಗಳಾದ ಜನರು ಒಡಂಬಡಿಕೆ ಯಜ್ಞಪಶುಗಳನ್ನು ತಂದಿದ್ದರು. ಬಹು ಸಂಖ್ಯೆಯಲ್ಲಿ ಅರ್ಪಿಸಿದ ಯಜ್ಞಗಳು ದೇವರಿಗೆ ತಾವು ಸ್ವತಃಪೂರ್ಣ ಆನಂದಭರಿತರೂ ಸಂತುಷ್ಟರಾಗಿ ಶರಣಾದುದನ್ನು ತೋರಿಸುತ್ತದೆ. ಸರ್ವಾಂಗ ಹೋಮದಲ್ಲಿ ಯಾವಾಗಲೂ ಗಂಡು ಪಶುವು ಅರ್ಪಿತವಾಗುತ್ತಿದ್ದು ಇದು ಘನವಾದುದಾಗಿಯೂ ಅಧಿಕ ಬಲಸಾಮರ್ಥ್ಯಗಳಿಗೆ ಸೂಚನೆಯಾಗಿತ್ತು ಈ ಯಜ್ಞಕ್ಕೆ ಉಪ್ಪನ್ನು ಬೆರಸುತ್ತಿದ್ದು ಇವು ಪೂರ್ಣವಾಗಿ ದಹಿಸಲ್ಪಡುತ್ತದ್ದವು.

ಆ ಇನ್ನೊಂದು ಟಗರನ್ನು ಅಂದರೆ "ಪ್ರತಿಷ್ಠಿತದ ಟಗರನ್ನು" ನಂತರದಲ್ಲಿ ಸಮರ್ಪಿಸಲಾಯಿತು. ನಿಸ್ಸಂದೇಹವಾಗಿ ಇದರ ಉಲ್ಲೇಖವು ಈ ಪ್ರತಿಷ್ಠಾರ್ಪಣೆಯಿಂದ ನಮ್ಮ ಮೇಲಾಗುವ ಪರಿಣಾಮವನ್ನು ತೋರಿಸಿಕೊಡುವುದು. ಮೋಶೆಯು ಪಶುವನ್ನು ವಧಿಸಿದ ನಂತರ ಅದರ ರಕ್ತವನ್ನು (ದೋಷಪರಿಹಾರದ) ಹೋರಿ (ಯಾಜಕ. 8:15) ಮತ್ತು ಸರ್ವಾಂಗ ಹೋಮದ ಟಗರಿನವುಗಳನ್ನು (ಯಾಜಕ. 8:19, 23) ಯಜ್ಞವೇದಿಗೆ ಹಚ್ಚಿದಂತೆ ಹಚ್ಚದೆ ಅದನ್ನು ಯಾಜಕರಲ್ಲಿ ಪ್ರತಿಯೊಬ್ಬನಿಗೆ ಹಚ್ಚುವುದರ ಮೂಲಕ ನಮ್ಮ ಪ್ರತಿಷ್ಠೆಯು ವ್ಯಕ್ತಿಗತವಾದ ವಿಷಯವೆಂಬುದನ್ನು ತೋರಿಸಲಾಗಿದೆ. ಆ ವಿವರಣೆಯು ನಮಗೆ ಹೇಳುವುದೇನೆಂದರೆ; ಮೋಶೆಯು ಆ ರಕ್ತವನ್ನು ತೆಗೆದುಕೊಂಡು ಅದನ್ನು ಬಲಗಿವಿಯ ತುದಿಗೆ ಬಲಗೈಯ ಹೆಬ್ಬೆಟ್ಟಿಗೆ ಬಲಗಾಲಿನ ಪಾದದ ಹೆಬ್ಬೆಟ್ಟಿಗೂ ಹಚ್ಚಿದನು. ಪಾಸ್ಟರ್ ರಸಲ್ಲರೂ ಇದನ್ನು ಹೀಗೆ ಸೂಚಿಸಿದ್ದಾರೆ:

"ನಮ್ಮ ಪ್ರತಿಷ್ಠೆಯ ಮೂಲಕವಾಗಿ ನಾವು "ನಂಬಿಕೆಯ ವಿಷಯವಾಗಿ ಕೇಳಿ" ದೇವರ ವಾಗ್ದಾನಗಳನ್ನು –ಪ್ರತಿಷ್ಠಿತರೇ ಹೊರತು ಬೇರೆ ಯಾರಿಗೂ ಸಾಧ್ಯವಾಗದ ರೀತಿಯಲ್ಲಿ – ಶ್ಲಾಘಿಸಲು ಶಕ್ತರಾಗಿದ್ದೇವೆ. ನಮ್ಮ ಕೈಗಳು ಪ್ರತಿಷ್ಠಿಸಲ್ಪಟ್ಟಿರಲಾಗಿ ನಾವು ನಮ್ಮ ಕೈಗೆ ಸಿಕ್ಕಿದ ಕೆಲಸವನ್ನು ಕರ್ತನಿಗಾಗಿಯೋ ಎಂಬಂತೆ ಪೂರ್ಣಾಸಕ್ತಿಯಿಂದ ಮಾಡುವೆವು. ನಮ್ಮ ಕಾಲುಗಳು ಪ್ರತಿಷ್ಠಿತವಾಗಿರಲು ಇನ್ನು ಮುಂದೆ ನಾವು "ಅನ್ಯ ಜನರಂತೆ ನಡೆಯದೆ" ಇದಕ್ಕೆ ಬದಲಾಗಿ "ಜೀವ ಮಾರ್ಗದಲ್ಲಿ ಹೊಸಬರಾಗಿ ನಡೆಯುವವರಾಗಿ" "ನಂಬಿ

ನಡೆಯುವವರಾಗಿ" "ಆತ್ಮನನ್ನು ಅನುಸರಿಸಿ ನಡೆಯುವವರಾಗಿ" "ಬೆಳಕಿನಲ್ಲಿ ನಡೆಯವವರಾಗಿದ್ದೇವೆ" ಕ್ರಿಸ್ತನನ್ನು ನಾವು ಅಂಗೀಕರಿಸಿದಂತೆಯೇ ಆತನಲ್ಲಿದ್ದವರಾಗಿ ನಡೆಯೋಣ. (T-45)

ಟಗರಿನ ಉತ್ತಮ ಭಾಗಗಳಾದ ಅದರ ಹೊಟ್ಟೆಯೊಳಗವು ಹಾಗೂ ಕೊಬ್ಬು ನಮ್ಮ ಹೃದಯದ ಭಾವನೆಗಳನ್ನೂ ನಮ್ಮ ಉತ್ತಮೋತ್ತಮ ಸಾಮರ್ಥ್ಯಗಳನ್ನೂ ಪ್ರತಿನಿಧಿಸುತ್ತದೆ. ಇವುಗಳನ್ನು ಯಾಜಕನು ಕೈಯಲ್ಲಿ ತೆಗೆದುಕೊಂಡು ದೇವರ ಮುಂದೆ ಹಿಂದಕ್ಕೂ ಮುಂದಕ್ಕೂ ನಿವಾಳಿಸುವುದು, ಪ್ರತಿಷ್ಠೆಯಲ್ಲಿ ನಮ್ಮನ್ನು ಕರ್ತನಿಗೆ ಸಜೀವ ಯಜ್ಞಗಳಾಗಿ ಅರ್ಪಿಸುವುದು ಒಂದು ಕ್ಷಣಕ್ಕಾಗಲಿ, ಒಂದು ದಿನಕ್ಕಾಗಲಿ, ಒಂದು ವರ್ಷಕ್ಕಾಗಲಿ ಮಾತ್ರ ಸೀಮಿತ ಮಾಡದೆ ನಮ್ಮ ಆಸೆ ಅಪೇಕ್ಷೆಗಳು ನಮ್ಮ ಬಲಸಾಮರ್ಥ್ಯಗಳನ್ನು ಸತತವಾಗಿ ಅರ್ಪಿಸುವುದನ್ನು ನಮ್ಮ ಜೀವಿತಾವಧಿ ಮುಗಿದು ಇದು ಆತನಿಂದ ಅಂಗೀಕಾರವಾಗು ವವರೆಗೆ ನಿಲ್ಲಿಸದೆ ಇರುವಂತೆ ನಮ್ಮನ್ನು ನಾವು ಪ್ರತಿಷ್ಠಿಸಿಕೊಳ್ಳುತ್ತೇವೆ ಎಂಬ ಸತ್ಯಾಂಶವನ್ನು ಸೂಚಿಸುತ್ತದೆ. ಮತ್ತು ಮೋಶೆಯು ನೀವಾಳಿಸಿದವುಗಳನ್ನು ಅವರ (ಯಾಜಕರ) ಕೈಯಿಂದ ತೆಗೆದುಕೊಂಡನು (ಯಾಜಕರು ಇದನ್ನು ಯಜ್ಞವೇದಿಯ ಮೇಲೆ ಇಡುವುದಿಲ್ಲ), ಅಗ್ನಿಯು ದೇವರ ಅಂಗೀಕಾರವನ್ನು ತೋರಿಸುತ್ತದೆ. ಇದೇ ರೀತಿಯಲ್ಲಿ "ರಾಜವಂಶದ ಯಾಜಕರಾದ" ನಾವು ಸಹ ದೇವರ ಸೇವೆಯಲ್ಲಿ ಶಕ್ತಿಸಾಮರ್ಥ್ಯಗಳು ನಮಗಿರುವವರೆಗೆ ಅದನ್ನು ದೇವರ ಸೇವೆಗೆ ಅರ್ಪಿಸುವುದನ್ನು ಬಿಟ್ಟುಬಿಡುವುದಾಗಲಿ ಇಲ್ಲವೇ ನಿಲ್ಲಿಸುವುದಾಗಲಿ ಮಾಡುವ ಹಾಗಿಲ್ಲ. ನಮಗಿರುವುದೆಲ್ಲವೂ ಸಂಪೂರ್ಣವಾಗಿ ಅರ್ಪಣೆಯಾಗಿ ಕಡೆಯಲ್ಲಿ ದೇವರು – "ಇನ್ನು ಸಾಕು" ಮೇಲೆ ಏರಿ ಬಾ – ಎಂದು ಹೇಳುವವರೆಗೂ ಇವುಗಳನ್ನು ಮುಂದುವರೆಸಬೇಕು. ನಮ್ಮ ಅಂತರಾಳದೊಳಗಿನ ಪ್ರೀತಿಯನ್ನು (ಕೊಬ್ಬು) ಯಜ್ಞವೇದಿಯ ಮೇಲೆ ಇರಿಸಿದಾಗ ದೇವರ ಅಂಗೀಕಾರ ಸೂಚಿಸುವ ಅಗ್ನಿಯನ್ನು ಅದು ಹೆಚ್ಚಿಸುತ್ತದೆ. ನಮ್ಮ ದೇವರಿಗೆ ಪ್ರತಿಷ್ಠಿಸಿಕೊಳ್ಳುವ ವಿಷಯದಲ್ಲಿ ಹೆಚ್ಚು ಪ್ರೀತಿ ತೋರಿದಷ್ಟೂ ನಮ್ಮ ಯಜ್ಞಾರ್ಪಣೆಗಳು ಅಷ್ಟು ಶೀಘ್ರವಾಗಿ ದಹಿಸಲ್ಪಟ್ಟು ಅಂಗೀಕಾರವಾಗುತ್ತವೆ." (T-45)

ಮೋಶೆಯು ಹುಳಿಯಿಲ್ಲದ ಭಕ್ಷ್ಯಗಳಿಂದ ತುಂಬಿದ ಪುಟ್ಟಿಯಿಂದ ತೆಗೆದು ಅವುಗಳನ್ನು ನೀವಾಳಿಕೆಯಾಗಿ ಅರ್ಪಿಸಿದ ವಸ್ತುಗಳ ಮೇಲೆ ಇಟ್ಟನು.

1) ಒಂದು ರೊಟ್ಟಿಯನ್ನೂ

2) ಎಣ್ಣೆ ಮಿಶ್ರಿತವಾದ ಹೋಳಿಗೆಯನ್ನೂ

3) ಒಂದು ಕಡಬನ್ನೂ ಇಟ್ಟನು. (ಯಾಜಕ 8:26)

ಇಲ್ಲಿ ನಮಗೆ ಪ್ರತಿಷ್ಠೆಯ ವಿಷಯವಾದ ಮೂರು ವಿಶೇಷ ಮೂಲ ಸತ್ಯಾರ್ಥಗಳು ಸಾಂಕೇತಿಕವಾಗಿ ಕೊಡಲ್ಪಟ್ಟಿವೆ. ಅವು ನೀತಿ ನಿರ್ಣಯ, ಶುದ್ಧೀಕರಣ ಮತ್ತು ಮಹಿಮೆಗಳು ಇವುಗಳಿಲ್ಲದೆ ಯಾವ ಪ್ರತಿಷ್ಠೆಯೂ ಎಂದೂ ಪೂರ್ಣವಾಗುವುದಿಲ್ಲ.

ಕ್ರಿಸ್ತನನ್ನು ಹೊರತುಪಡಿಸಿ ಕರೆಯಲ್ಪಟ್ಟಿರುವ ಪ್ರತಿಯೊಬ್ಬನೂ ಪಾಪದಲ್ಲಿ ಹುಟ್ಟಿ– "ಅನೀತಿಯಲ್ಲಿ ರೂಪುಗೊಂಡವನು" ಆದರೆ ದೇವರಿಗೆ ಸ್ತೋತ್ರವಾಗಲಿ, ಯಾಕೆಂದರೆ ಇವುಗಳಿಂದ ಅವರಿಗೆ ತಮ್ಮಲ್ಲಿರುವ ಸ್ವಂತ ಅನೀತಿಗಳನ್ನು ಗ್ರಹಿಸಿಕೊಳ್ಳಲು ಸಾಧ್ಯವಾಯಿತು ಮತ್ತು ದೇವರ ದೃಷ್ಟಿಯಲ್ಲಿ ಇವುಗಳನ್ನು ತೊಳೆದುಕೊಳ್ಳಲು ತಮ್ಮ ತೀವ್ರ ಅಸಮರ್ಥತೆಯ ಅರಿವು ಉಂಟಾಯಿತು. ಆಗ, ಪೂರ್ವದಲ್ಲಿದ್ದ ದಾವೀದನಂತೆ, ನಮ್ಮ ಅಂತರಾಳದ ಕೂಗು ಹೀಗೆ ಬರುವುದು.

"ಪ್ರೀತಿಸ್ವರೂಪನಾದ ದೇವರೇ, ನನ್ನನ್ನು ಕರುಣಿಸು, ಕರುಣಾನಿಧಿಯೇ, ನನ್ನ ದ್ರೋಹವನ್ನೆಲ್ಲಾ ಅಳಿಸಿಬಿಡು, ನನ್ನ ಪಾಪವನ್ನು ಸಂಪೂರ್ಣವಾಗಿ ತೊಳೆದುಬಿಡು; ನನ್ನ ದೋಷವನ್ನು ಪರಿಹರಿಸಿ ನನ್ನನ್ನು ಶುದ್ಧಿಗೊಳಿಸು, ನಾವು ದ್ರೋಹಿಯೆಂದು ನಾನೇ ಒಪ್ಪಿಕೊಂಡಿದ್ದೇನೆ; ನನ್ನ ಪಾಪವು ಯಾವಾಗಲೂ ನನ್ನ ಮುಂದೆ ಇದೆ" (ಕೀರ್ತನೆ 51:1–3)

ಇಲ್ಲಿ ತೋರಿಬಂದಿರುವುದು ಒಂದು "ಪಶ್ಚಾತ್ತಾಪದಿಂದ ಜಜ್ಜಿ ಕುಗ್ಗಿಹೋದ ಮನಸ್ಸು, ದೇವರು ಇದನ್ನು ತಿರಸ್ಕರಿಸುವುದಿಲ್ಲ ಹಾಗೂ ತನ್ನ ಪ್ರೀತಿ ಕನಿಕರಗಳ ಮೂಲಕ ಶುದ್ಧೀಕರಿಸುವುದಕ್ಕಾಗಿ ಕ್ರಿಸ್ತನ ಅಮೂಲ್ಯ ರಕ್ತದಲ್ಲಿ ಇದನ್ನು ಮುಳುಗಿಸುವನು. ಇದೇ ನೀತಿ ನಿರ್ಣಯ (Justification) ಇದರ ಮೂಲಕ ನಾವು ಪರಿಪೂರ್ಣ ಮನುಷ್ಯರ ಸ್ವಭಾವವನ್ನು ಪಡೆದುಕೊಳ್ಳುತ್ತೇವೆ ಅಥವಾ ಅದನ್ನು ಪಡೆದಿರುವೆವೆಂದು ಎಣಿಸಲ್ಪಡುತ್ತೇವೆ, ಇದು ಸಾವಿರ ವರುಷದ ಆಳ್ವಿಕೆಯ ಅಂತ್ಯದಲ್ಲಿ ನಮ್ಮೆಲ್ಲರಿಗೆ ದೊರಕಲಿರುವ ಪರಿಪೂರ್ಣ ಮನುಷ್ಯ ಸ್ವಭಾವ. ದೇವರ ಕೃಪೆಯಿಂದ ಇದನ್ನು ನಾವು ಕ್ರಿಸ್ತನು ಮಾಡಿದಂತೆ ದೇವರಿಗೆ ಮೆಚ್ಚಿಕೆಯಾದ ಯಜ್ಞವನ್ನಾಗಿ ಅರ್ಪಿಸಲು ಅವಕಾಶ ಕೊಡಲಾಗಿದೆ. ಹೀಗೆ ನಮ್ಮ ಮುಂದಿರುವ ಛಾಯೆಯಲ್ಲಿ ಮನುಷ್ಯರಾಗಿ ಸಭೆಯಲ್ಲಿರುವವರ ನಿಜವಾದ ನೀತಿ ಶುದ್ಧತೆಗಳು ಈ ಒಂದು ಹುಳಿಯಿಲ್ಲದ ರೊಟ್ಟಿ ಪ್ರತಿನಿಧಿಸುತ್ತದೆ.

ಯೇಸುವಿನ ಹಾಗೂ ಆತನ ಸಭೆಯು ಪರಿಪೂರ್ಣ ಮನುಷ್ಯತ್ವವು ದೇವರ ಯಜ್ಞವೇದಿಯ ಮೇಲೆ ಅರ್ಪಿತವಾಗುವುದನ್ನು ಮತ್ತು ಅವರ ವ್ಯಕ್ತಿತ್ವವು ನಶಿಸಿ ಹೋಗುವು ದನ್ನು ಸೂಚಿಸುತ್ತದೆ. ಇವರನ್ನು ಉಳಿಸಿ ಕಾಪಾಡಲು ಹೇಗೂ ದೇವರು ತನ್ನ ಪವಿತ್ರಾತ್ಮನ ಮೂಲಕ ಅವರಲ್ಲಿ ನೂತನ ಸ್ವಭಾವವನ್ನು ಉಂಟು ಮಾಡುವನು. ಅದು ದೈವ ಸ್ವಭಾವ! ಆತನು ಸ್ವಲ್ಪ ಕಾಲ ಮಣ್ಣಿನ ಘಟಗಳಾದ ಅವರಲ್ಲಿ ತನ್ನ ಆತ್ಮನು ವಾಸಿಸುವಂತೆ ಆಜ್ಞಾಪಿಸಿ ದ್ದಾನೆ. ಅವರ ಒಳಗೆ (ಆತ್ಮನು) ನೆಲೆಸುತ್ತಿರುವುದರ ಉದ್ದೇಶ ನಿಜವಾಗಿ ಅವರ ಶುದ್ಧೀ–ಕರಣ. ಇದರಿಂದ ಅವರು ಹೆಚ್ಚು ಹೆಚ್ಚಾಗಿ ಲೋಕದಿಂದ ಪ್ರತ್ಯೇಕವಾಗಿ ದೇವರ ಸಮೀಪಕ್ಕೆ ಹತ್ತಿರ ಹತ್ತಿರ ಬರುವಂತಾಗುವದು. ಹೀಗೆ ಛಾಯೆಯಲ್ಲಿ ಎರಡನೆಯ ಎಣ್ಣೆ ಮಿಶ್ರಿತ ಹೋಳಿಗೆಯು ಒಳಗೆ ನೆಲೆಸಿರುವ ದೇವರಾತ್ಮನ ಮೂಲಕವಾಗಿ ಉಂಟಾಗುವ ಶುದ್ಧೀಕರಣವನ್ನು ಸೂಚಿಸುತ್ತದೆ.

ದೇವರ ಪವಿತ್ರಾತ್ಮನು ತಮ್ಮೊಳಗೆ ನೆಲೆಸಿರುವುದರ ಮೂಲಕ ನೀತಿವಂತರಾಗಿ ಶುದ್ಧೀಕರಿಸಲ್ಪಟ್ಟವರಾದ ಈ ಕರೆಯಲ್ಪಟ್ಟವರು ಇವುಗಳ ದೆಸೆಯಿಂದ ದೇವರ ಅಮೂಲ್ಯವಾದ ವಾಗ್ದಾನದ ಮೂಲಕ ಪ್ರಭಾವ ಮಾನ ನಿರ್ಲಯತ್ವದ ನಿರೀಕ್ಷೆ ಪಡದಿರುವವರು. (2 ಪೇತ್ರ 1:3, 4) ಈ ಪ್ರಭಾವದ ನಿರೀಕ್ಷೆ ಹೊಂದಿದವರಾದ ಇವರೋ ಕರ್ತನು ಶುದ್ಧನಾಗಿರುವಂತೆಯೇ ತಮ್ಮನ್ನೂ ಶುದ್ಧಮಾಡಿಕೊಳ್ಳುವರು. (1 ಯೋಹಾನ 3:3) ಹೀಗೆ ಛಾಯೆಯಲ್ಲಿ ಮೂರನೇ ಹುಳಿಯಿಲ್ಲದ ರೊಟ್ಟಿಯು ನಮ್ಮ ನಿರೀಕ್ಷೆ ಹಾಗೂ ಪ್ರಭಾವ ಮಾನ ನಿರ್ಲಯತ್ವಗಳ ವಿಷಯಗಳನ್ನೊಳಗೊಂಡಿರುವ ಉತ್ಕೃಷ್ಟವೂ ಅಮೂಲ್ಯವೂ ಆದ ವಾಗ್ದಾನದ ಮೇಲಿನ ನಮ್ಮ ನಂಬಿಕೆಯನ್ನು ಪ್ರತಿನಿಧಿಸುತ್ತದೆ. ಕಡುಬು ಸಾಮಾನ್ಯವಾಗಿ ಬಹು ತೆಳುವಾಗಿರುತ್ತದೆ. ಅದು ಪಾರದರ್ಶಕವಾಗಿರದೆ ಅದು ಅರೆ ಪಾರದರ್ಶಕವಾಗಿದೆ! ಹೀಗೆಯೇ ನಮ್ಮ ನಂಬಿಕೆ ನಿರೀಕ್ಷೆಗಳೂ ಸಹ; ನಮಗೆ ಕೊಡಲ್ಪಟ್ಟಿರುವ ಅಮೂಲ್ಯವಾದ ವಾಗ್ದಾನಗಳು ಕೇವಲ ನಾವು ನಿರೀಕ್ಷಿಸುವ ವಿಷಯಗಳಿಗೆ (ಅಥವಾ ನಮ್ಮ ಭರವಸಕ್ಕೆ) ಆಧಾರವಾಗಿದ್ದು, ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳಿಯುವುದೂ (ಅಥವಾ ಕಣ್ಣಿಗೆ ಕಾಣದವುಗಳ ಬಗ್ಗೆ ನಿಶ್ಚಿತಾಭಿಪ್ರಾಯ ಹೊಂದಿರುವುದೂ) ಆಗಿದೆ (ಇಬ್ರಿಯ 11:1)

ಕೊನೆಯದು, ಅಂದರೆ ಏಳನೆಯ ಅಂಶ; ಪ್ರತಿಷ್ಠಾ ಕ್ರಮದ ಈ ಹಂತದಲ್ಲಿ ಈಗಾಗಲೇ ಉಲ್ಲೇಖಿಸಿರುವಂತೆ ಹುಳಿಯಿಲ್ಲದ ರೊಟ್ಟಿ ತುಂಬಿರುವ ಒಂದು ಪುಟ್ಟಿ ಇರುತ್ತದೆ. ತಮ್ಮ ಪ್ರತಿಷ್ಠಾವಧಿಯನ್ನು ಪೂರ್ಣಗೊಳಿಸಲು ಛಾಯೆಯಲ್ಲಿ ಯಾಜಕರು ದೇವದರ್ಶನ ಗುಡಾರದ ಬಾಗಿಲಿನೊಳಗೆ ಏಳು ದಿವಸ ಇರಬೇಕಿತ್ತು. ಆ ಸಮಯದಲ್ಲಿ ಅವರು ಇತರ ಇಸ್ರಾಯೇಲ್ಯರಿಗೆ, ಸಾಮಾನ್ಯವಾದ ಹಾಗೂ ಸೂಕ್ತವಾದ ಆಹಾರಗಳನ್ನು ಸೇವಿಸಬಾರ ದಾಗಿತ್ತು. ಆದರೆ ಅವರು ಮೋಶೆಯ "ಪ್ರತಿಷ್ಠೆಯ ಪುಟ್ಟಿಗಳಲ್ಲಿ" ತಂದುಕೊಟ್ಟ ಹುಳಿಯಿಲ್ಲದ ರೊಟ್ಟಿಗಳನ್ನು ತಿಂದು ಸಂಭ್ರಮಿಸಬಹುದಿತ್ತು. ಯಾಜಕ. 8:31–35 ಎಂತಹ ಚಿತ್ರಣ, ಏಳು ದಿವಸಗಳು, ನಮ್ಮ ಪ್ರತಿಷ್ಠೆಯು ಸಂಪೂರ್ಣವಾಗುವುದನ್ನು ಸೂಚಿಸುತ್ತದೆ. ಅಂದರೆ ಮರಣದಲ್ಲಿ ನಮ್ಮ ಜೀವಿತವನ್ನು ಮುಗಿಸುವವರೆಗಿನ ಅವಧಿಯನ್ನು ಸೂಚಿಸುತ್ತದೆ. ಈ ಎಲ್ಲಾ ಸಮಯಗಳಲ್ಲಿ ಹಳೆಯ ದೇವದರ್ಶನ ಗುಡಾರದ ಪರಿಶುದ್ಧ ಸ್ಥಳದ ಮೂಲಕವಾಗಿ ಸುಂದರವಾಗಿ ವರ್ಣಿಸಲಾಗಿರುವ ಸ್ಥಿತಿಯಲ್ಲಿ ಇರಬೇಕಾಗುತ್ತದೆ. ಅಂದರೆ ಪರಾತ್ಪರನ ಮರೆಹೊಕ್ಕು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತವಾಗಿ ಇರಬೇಕಾಗುತ್ತದೆ. (ಕೀರ್ತನೆ 91:1) ಪವಿತ್ರಾತ್ಮದಾನ ಪಡೆದ ಹೊಸಸೃಷ್ಟಿಗಳಾದ ನಾವು ನಿಜರೂಪದಲ್ಲಿ (ದೇವದರ್ಶನ ಗುಡಾರದ) ಅಂಗಳಕ್ಕೆ ಅಥವಾ (ಲೋಕವನ್ನು ಸೂಚಿಸುವ) ಪಾಳೆಯಕ್ಕೆ ಪ್ರವೇಶಿಸುವ ಸಲುವಾಗಿ (ಪರಿಶುದ್ಧ ಸ್ಥಳದಿಂದ) ಹೊರ ಬರಬಾದು. ಈ ಪ್ರತಿಬಂಧಕಾಜ್ಞೆಯನ್ನು ಮೀರುವುದು ದೇವರ ಚಿತ್ತಕ್ಕೆ ಅವಿಧೇಯರಾಗ ಮಾಡಿ ನಮ್ಮನ್ನು ಮರಣಕ್ಕೆ ಗುರಿಯಾಗ ಮಾಡುವುದು. ಮುಂದಿನ ನಮ್ಮ ಈ ಎಲ್ಲಾ ಸಮಯಗಳಲ್ಲಿ ನಾವು ಇತರರಿಗೆ ಸಾಮಾನ್ಯ

ಮತ್ತು ಸೂಕ್ತವಾಗಿರುವ ಆಹಾರಗಳಿಂದ (ಸಾಂಕೇತಿಕವಾಗಿ ಹೇಳುವುದಾದರೆ) ನಾವು ದೂರವಿದ್ದು, ದೇವರು ತಾನೇ ನಮಗೆ ಪ್ರತಿಷ್ಠಾ ಪುಟ್ಟಿಗಳಲ್ಲಿ ನಮ್ಮ ಪ್ರಯೋಜನಕ್ಕಾಗಿ ದಯಪಾಲಿಸಿರುವ ಸತ್ಯವಾಕ್ಯವೆಂಬ ಹುಳಿಯಿಲ್ಲದ ರೊಟ್ಟಿಗಳನ್ನು ಸೇವಿಸಿ ಸಂಭ್ರಮದಿಂದಿರಬೇಕು.

## ಭಾಗ-12

# ಪಾರಾನ್ ಅರಣ್ಯಕ್ಕೆ ಇಸ್ರಾಯೇಲ್ಯರ ಪ್ರಯಾಣ ಅಲ್ಲಿನ ಘಟನೆಗಳು

ಅರಣ್ಯಕಾಂಡ 9:15–23; 10:1–28 ಅರಣ್ಯಕಾಂಡ 3:25, 26, 31, 32, 36, 37

### ವಿಭಾಗ ಒಂದು

### ದೇವದರ್ಶನ ಗುಡಾರದ ಮೇಲಿನ ಮೇಘದ ಮಾರ್ಗದರ್ಶನ.

ಸೀನಾಯಿಯಲ್ಲಿ ಇಸ್ರಾಯೇಲ್ಯರು ತಂಗಿದ್ದ ಸಮಯದಲ್ಲಿ ನಡೆದ ಸಂಗತಿಗಳಿಂದ ಕಲೆಹಾಕಿದ ಅತ್ಯುತ್ತಮ ಪಾಠಗಳಲ್ಲಿ ಒಂದು ಅದು ದೇವರ ಕರುಣಾ ಪೂರ್ಣ ದೀರ್ಘಶಾಂತಿಯ ವಿಷಯವಾದದ್ದು. ಇಸ್ರಾಯೇಲ್ಯರು ಚಿನ್ನದ ಬಸವನನ್ನು ನಿಲ್ಲಿಸಿ ಅದಕ್ಕೆ ಅಡ್ಡಬಿದ್ದು ಆರಾಧಿಸಿದ್ದರಲ್ಲಿ ತೋರಿದ ಉದ್ಧೇಶ ಪೂರ್ವಕವಾದ ಅವಿಧೇಯತೆಯ ಮೂಲಕವಾಗಿ ತಮ್ಮ ಒಡಂಬಡಿಕೆಯನ್ನು ಭಂಗಪಡಿಸಿದ್ದರು. "ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು, ಆಕಾಶದಲ್ಲಾಗಲೀ, ಭೂಮಿಯಲ್ಲಾಗಲೀ, ಭೂಮಿಯ ಕೆಳಗಣ ನೀರಿನಲ್ಲಾಗಲೀ ಇರುವ ಯಾವ ರೂಪವನ್ನೂ ಮಾಡಿಕೊಳ್ಳಬಾರದು. ಅವುಗಳಿಗೆ ಅಡ್ಡಬೀಳಲೂಬಾರದು... ನಿನ್ನ ದೇವರಾದ ಯೆಹೋವನೆಂಬ ನಾನು ನನಗೆ ಸಲ್ಲತಕ್ಕ ಗೌರವವನ್ನು ಮತ್ತೊಬ್ಬರಿಗೆ ಸಲ್ಲಗೊಡಿಸದವನಾದ್ದರಿಂದ... (ವಿಮೋ. 20:4, 5) ಎಂದು ದೇವರು ಅವರಿಗೆ ಯಾವ ಎರಕದ ಮೂರ್ತಿಗಳನ್ನು ಮಾಡಿಕೊಳ್ಳಬಾರದೆಂದು ನಿರ್ಧಿಷ್ಟವಾಗಿ ಹೇಳಿದ್ದರೂ, ಅವರು ದೇವರನ್ನು ಸಾದೃಶ್ಯವಾಗಿ ಪ್ರತಿನಿಧಿಸುವವುಗಳನ್ನು ಬಯಸಿದ್ದರು. ಅದೃಶ್ಯವಾದವುಗಳ ವಿಷಯಗಳಲ್ಲಿ ಮಾತ್ರ ನಂಬಿಕೆಯನ್ನು ಅಭ್ಯಾಸಿಸಲು ಸಾಧ್ಯ. ಏಕೆಂದರೆ ದೃಶ್ಯವಾದವುಗಳಿಂದ ವಿಷಯಜ್ಞಾನ ಲಭಿಸುತ್ತದೆ. ವಿಷಯ ಜ್ಞಾನ ಬಂದಲ್ಲಿ ನಂಬಿಕೆ ಅಂತ್ಯವಾಗುತ್ತದೆ. ಹೀಗಿರಲು ಇಸ್ರಾಯೇಲ್ಯರು ಮೋಶೆಯ ಕೈಯಿಂದ ಶಿಕ್ಷೆ ಹೊಂದಿದ ನಂತರ ದೇವರು ತನಗಾಗಿ ಪಾಳೆಯದ ಮಧ್ಯದಲ್ಲಿ ಒಂದು ವಾಸಸ್ಥಾನವನ್ನು ನಿರ್ಮಿಸಲು ಅನುಮತಿ ಕೊಟ್ಟನು. ಅಲ್ಲಿ ತನ್ನ ಪ್ರತ್ಯಕ್ಷತೆ ಇರುವುದನ್ನು ಮೋಡದ ಮೂಲಕವಾಗಿ ತೋರಿಸುವನು. ಅವರ ಮಧ್ಯದಲ್ಲಿ (ದೇವರ) ಈ ಪ್ರತ್ಯಕ್ಷತೆಯು ತೋರ್ಪಡಿಸಿದ ವಿಷಯವಾಗಿ ನಾವು ಓದುವುದೇನೆಂದರೆ;

"ಇಸ್ರಾಯೇಲ್ಯರು ದೇವದರ್ಶನ ಗುಡಾರವನ್ನು ಎತ್ತಿ ನಿಲ್ಲಿಸಿದ ದಿನದಲ್ಲಿ ಮೇಘವು ಅದರ ಮೇಲೆ ಮುಚ್ಚಿಕೊಂಡಿತು. ಅದು ಸಂಜೆಯಿಂದ ಮುಂಜಾನೆಯವರೆಗೆ ಬೆಂಕಿಯಂತೆ ಕಾಣಿಸುತ್ತಿರುವುದು. ನಿತ್ಯವೂ ಹಾಗೆಯೇ ಇರುವುದು; ಮೇಘವು ದೇವಸ್ಥಾನವನ್ನು ಮುಚ್ಚಿಕೊಂಡಿರುವುದು. ರಾತ್ರಿ ವೇಳೆಯಲ್ಲಿ ಬೆಂಕಿಯಂತೆ ಕಾಣವುದು" (ಆರಣ್ಯ. 9:15, 16).

ಇದರ ಅನುಸಾರವಾಗಿ, ದೇವರು ತಮ್ಮ ನಡುವೆ ಪ್ರತ್ಯಕ್ಷವಾಗಿದ್ದಾನೆಯೇ ಅಥವಾ

ಇಲ್ಲವೇ ಎಂದು ಪಾಳೆಯದಲ್ಲಿರುವ ಯಾವ ಇಸ್ರಾಯೇಲ್ಯನಾದರೂ ಚಿಂತಿಸುವ ಅಗತ್ಯವಿರಲಿಲ್ಲ, ಹಗಲಿನಲ್ಲಾಗಲೀ ಇಲ್ಲವೇ ರಾತ್ರಿಯಲ್ಲಾಗಲೀ ಆತನು ದೇವದರ್ಶನ ಗುಡಾರದ ಕಡೆಗೆ ತನ್ನ ಮುಖವನ್ನು ತಿರುಗಿಸಿದರೆ ಅಲ್ಲಿ ಆತನಿಗೆ ದೇವರ ಪ್ರತ್ಯಕ್ಷತೆ ಇರುವುದು ತಿಳಿಯುವುದಲ್ಲದೆ ಅಲ್ಲಿ (ದೇವರ) ಸಂರಕ್ಷಣೆಯ ಪ್ರಭಾವವಿರುವ ಅರಿವೂ ಸಹ ಅತನಿಗೆ ಉಂಟಾಗುತ್ತದೆ! ಹೀಗಿರಲು, ಯಾವನಿಗಾದರೂ ಈ ವಿಷಯದಲ್ಲಿ ಅಂಜಿಕೆಯಾದರೆ, ಅದು ಅವನು ದೇವರ ಕಡೆಗೆ ತನ್ನ ಮುಖವನ್ನು ತಿರುಗಿಸಲು ವಿಫಲನಾದುದ್ದನ್ನು ತೋರಿಸುತ್ತದೆ. ಎಂಥಾ ಒಂದು ಪಾಠ ಇಲ್ಲಿ ನಮಗಿರುವುದು! ಎಲ್ಲಿಯವರೆಗೂ ನಾವು ನಮ್ಮ ಮನಸ್ಸನ್ನು ದೇವರಲ್ಲಿ ನೆಲೆಸಿರುವಂತೆ ನೋಡಿಕೊಳ್ಳುತ್ತೇವೋ. ಅದು ಹಗಲಿನಲ್ಲಾದರೂ ಸರಿ ಅಥವಾ ಇರುಳಿನಲ್ಲಾದರೂ ಸರಿ, ಅಲ್ಲಿಯವರೆಗೆ ನಾವು ಅತನ ಸಂರಕ್ಷಣಾ ಹಸ್ತ ಹಾಗೂ ಸಂತೈಸುವ ಹಸ್ತವು ನಮ್ಮನ್ನು ಹಿಡಿದಿರುವುದನ್ನು ತಿಳಿಯ ಶಕ್ತರಾಗುತ್ತೇವೆ. ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯನ್ನು ಅನುಭವಿಸುವಲ್ಲಿ ನಾವು ವಿಫಲರಾಗುವುದು ಆತನು ನಮ್ಮ ಹತ್ತಿರ ಇಲ್ಲದ ಫಲವಾಗಿಯಲ್ಲ (ಹೌದು, ಆತನು ಸದಾ ನಮ್ಮೊಂದಿಗಿರುವನು). ಆದರೆ ಅದು ನಮ್ಮ ಮನಸ್ಸು ಆತನಿಂದ ದೂರವಾಗಿರುವುದರ ಫಲ. ತನ್ನಲ್ಲಿರುವ ಪಾಪದ ಬಗ್ಗೆ ವಿಚಾರಣೆ ಮಾಡಿಕೊಳ್ಳದೆ ದಂಡನೆಯ ಭಯದಲ್ಲಿರುವ ಒಬ್ಬ ಇಸ್ರಾಯೇಲ್ಯನು ತನ್ನ ಶಾಂತಿಯನ್ನೆಲ್ಲಾ ಕಳಕೊಂಡು, ಪಾಳೆಯದಲ್ಲಿ ದೇವರ ಪ್ರತ್ಯಕ್ಷತೆಗೆ ಸೂಚಕವಾದುದನ್ನು (ಮೇಘಸ್ತಂಭವನ್ನು) ನೋಡಲು ತನ್ನ ದುಷ್ಟತನದ ದೆಸೆಯಿಂದ ಸಾಧ್ಯವಾಗದೆ, ಅದಕ್ಕೆ ಧೈರ್ಯವೂ ಮಾಡದ ಸ್ಥಿತಿಯಲ್ಲಿ, ಆತನು ಇರುವುದನ್ನು ನಾನು ಚೆನ್ನಾಗಿ ಊಹಿಸಬಲ್ಲೆ. ನಮ್ಮಲ್ಲಿಯೂ ಹೀಗೆಯೇ. ನಮ್ಮಲ್ಲಿರುವ ಪಾಪದ ಬಗ್ಗೆ ವಿಚಾರ ಮಾಡಿಕೊಳ್ಳದೆ ಅಪರಾಧಿ ಮನೋಭಾವದಲ್ಲಿರುವ ನಾವೂ ಸಹ ಪ್ರಾರ್ಥನೆಯಲ್ಲಿ ದೇವರ ಕಡೆಗೆ ನಮ್ಮ ಮನಸ್ಸನ್ನು ಎತ್ತುವುದಕ್ಕಾಗದೆ, ಭಯಪಡುವವರಾಗಿ ನಮ್ಮಲ್ಲಿರುವ ಸಮಾಧಾನವನ್ನು ಕಳೆದುಕೊಳ್ಳುತ್ತೇವೆ. ಈ ರೀತಿಯಲ್ಲಿರುವುದು ನಮ್ಮ ಪಾಳೆಯದಲ್ಲಿ ದೇವರ ಪ್ರತ್ಯಕ್ಷತೆಯ ಪ್ರಭಾವ. ಇದು ಯೇಸುವು ಹೇಳಿದಂತೆ ಪವಿತ್ರಾತ್ಮನು ಬಂದು ಪಾಪ ನೀತಿ ನ್ಯಾಯತೀರ್ವಿಕೆಯ ವಿಷಯದಲ್ಲಿ ಲೋಕಕ್ಕೆ ಅರುಹು ಹುಟ್ಟಿಸುವ ವಿಷಯಕ್ಕೆ ಸಂಭಂದಿಸಿರುವುದು. (ಯೋಹಾನ 16:8)

ಆದರೆ ಯಾವುದು ಒಬ್ಬನಿಗೆ ದಂಡನೆ ತಿದ್ದುಪಾಟಿಗೂ, ನೀತಿಶಿಕ್ಷೆಗೂ, ಯೋಗ್ಯವೋ ಅದು ಇನ್ನೊಬ್ಬನಿಗೆ ಸಂತೋಷ ಸಮಾಧಾನ ಆಧರಣೆಯಾಗಿಯೂ ಆಗಿರುವುದು. ಹೌದು, ಇದು ಇನ್ನೊಬ್ಬರಿಗೆ ಅನ್ಯೋನ್ಯತೆ ಹೊಂದುವುದಕ್ಕೆ ಕಾರಣವಾಗಿದೆ. ಆಹಾ, ಪ್ರಿಯ ಮಿತ್ರರೇ, ನಾವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸೋಣ; ಪವಿತ್ರಾತ್ಮವು ನಮ್ಮ ಆತ್ಮಗಳಿಗೆ ಸಮಾಧಾನವನ್ನು ನುಡಿಯುತ್ತದೋ? ಇಲ್ಲದಿದ್ದಲ್ಲಿ ಅದು ಏಕೆ?

ಯಾವ ಮೋಡವು ಪಾಳೆಯದಲ್ಲಿ ದೇವರ ಪ್ರತ್ಯಕ್ಷತೆಯ ವಿಷಯವಾಗಿ ನಿಗಧಿತವಾಗಿ ಹೇಳುತ್ತಿತ್ತೋ. ಅದೇ ಇಸ್ರಾಯೇಲ್ಯರಿಗೆ ಅವರ ವಿಷಯವಾಗಿ ಇರುವ ದೇವರ ಚಿತ್ತವನ್ನು

ಪ್ರಕಟಿಸಿ ಅವರನ್ನು ನಡೆಸುವ ಒಂದು ಮಾರ್ಗದರ್ಶಿಯೂ ಸಹ ಆಗಿತ್ತು. ಅವರು ಯಾವಾಗ ಹೊರಡಬೇಕಿತ್ತೋ ಅಥವಾ ಯಾವಾಗ ನಿಲ್ಲಬೇಕಿತ್ತೋ ಮತ್ತು ಎಲ್ಲಿ ನಿಲ್ಲಬೇಕಿತ್ತು ಎಂಬುದನ್ನೂ ಅದು ಸೂಚಿಸುತ್ತಿತ್ತು. ಏಕೆಂದರೆ ಇದರ ವಿಷಯದಲ್ಲಿ ನಾವು ಹೀಗೆ ಓದುತ್ತೇವೆ.

"ಆ ಮೇಘವು ಗುಡಾರದಿಂದ ಮೇಲಕ್ಕೆ ಎದ್ದಾಗ ಇಸ್ರಾಯೇಲ್ಯರು ಮುಂದಕ್ಕೆ ಪ್ರಯಾಣ ಮಾಡುವರು. ಆ ಮೇಘವು ಎಲ್ಲಿ ನಿಲ್ಲುವುದೋ ಅಲ್ಲಿ ಇಸ್ರಾಯೇಲ್ಯರು ತಮ್ಮ ಡೇರೆಗಳನ್ನು ಹಾಕಿಕೊಳ್ಳುವರು. ಯೆಹೋವನ ಅಪ್ಪಣೆಯನ್ನು ಹೊಂದಿ ಇಸ್ರಾಯೇಲ್ಯರು ಪ್ರಯಾಣ ಮಾಡುವರು; ಯೆಹೋವನ ಅಪ್ಪಣೆಯನ್ನು ಹೊಂದಿ ಅವರು ತಮ್ಮ ಡೇರೆಗಳನ್ನು ಹಾಕಿಕೊಳ್ಳುವರು. ಆ ಮೇಘವು ದೇವದರ್ಶನ ಗುಡಾರದ ಮೇಲಿರುವ ತನಕ ಅವರು ಇದ್ದ ಸ್ಥಳದಲ್ಲೇ ಇರುವರು. ಆ ಮೇಘವು ಬಹುದಿನದವರೆಗೂ ದೇವದರ್ಶನದ ಗುಡಾರದ ಮೇಲೆ ಇರುವ ಸಂದರ್ಭದಲ್ಲಿ ಇಸ್ರಾಯೇಲ್ಯರು ಯೆಹೋವನ ಸೂಚನೆಯನ್ನು ಅನುಸರಿಸಿ ಪ್ರಯಾಣ ಮಾಡದೆ ಇರುವರು. ಒಂದೊಂದು ವೇಳೆಯಲ್ಲಿ ಮೇಘವು ಕೆಲವು ದಿವಸ ಮಾತ್ರ ಗುಡಾರದ ಮೇಲೆ ನಿಂತಿರುವುದು. ಯೆಹೋವನ ಆಜ್ಞಾನುಸಾರವಾಗಿ ಅವರು ಇಳುಕೊಳ್ಳುತ್ತಿದ್ದರು. ಯೆಹೋವನ ಆಜ್ಞಾನುಸಾರವಾಗಿ ತಮ್ಮ ಡೇರೆಗಳನ್ನು ಕಿತ್ತುಕೊಂಡು ಹೊರಡುತ್ತಿದ್ದರು. ಕೆಲವು ಸಮಯಗಳಲ್ಲಿ ಮೇಘವು ಸಾಯಂಕಾಲದಿಂದ ಹೊತ್ತಾರೆಯವರೆಗೆ ಇರುವುದು. ಬೆಳಿಗ್ಗೆ ಅದು ಮೇಲಕ್ಕೆ ಎದ್ದಾಗ ಜನರು ಪ್ರಯಾಣ ಮಾಡುವರು. ಕೆಲವು ಸಮಯಗಳಲ್ಲಿ ಅದು ಹಗಲಿರುಳು ನಿಂತಿರುವುದು; ಅದು ಯಾವಾಗ ಏಳುವುದೋ ಆಗ ಜನರು ಹೊರಡುವರು. ಆ ಮೇಘವು ದೇವದರ್ಶನದ ಗುಡಾರದ ಮೇಲೆ ನಿಂತಿರುವುದು ಎರಡು ದಿನವಾದರೂ ಒಂದು ತಿಂಗಳಾದರೂ ಒಂದು ವರುಷವಾದರೂ ಸರಿಯೇ. ಆ ಪರ್ಯಂತರವೂ ಇಸ್ರಾಯೇಲ್ಯರು ಪ್ರಯಾಣ ಮಾಡದೆ ಇಳುಕೊಂಡೇ ಇರುವರು; ಅದು ಎದ್ದಾಗ ಅವರು ಹೊರಡುವರು. ಯೆಹೋವನ ಆಜ್ಞೆಯ ಪ್ರಕಾರ ಅವರು ತಮ್ಮ ಡೇರೆಗಳನ್ನು ಹಾಕಿಕೊಳ್ಳುವರು. ಯೆಹೋವನ ಆಜ್ಞೆಯ ಪ್ರಕಾರ ಡೇರೆಗಳನ್ನು ಕಿತ್ತು ಹೊರಡುವರು ಯೆಹೋವನು ಮೋಶೆಯ ಮೂಲಕವಾಗಿ ಆಜ್ಞಾಪಿಸಿದಂತೆಯೇ ಅವರು ಯೆಹೋವನ ಸೂಚನೆಗಳನ್ನು ಅನುಸರಿಸಿ ನಡೆಯುತ್ತಿದ್ದರು" (ಅರಣ್ಯಕಾಂಡ 9;17–23)

ಆಹಾ, ಪ್ರಿಯ ಮಿತ್ರರೇ, ನಮ್ಮಲ್ಲಿಯೂ ಸಂಗತಿಗಳು ಹೀಗೆಯೇ ಇವೆ! ಪವಿತ್ರಾತ್ಮವು ನಮಗೆ ಕೇವಲ ಸಂತೈಸುವುದಕ್ಕಾಗಿ ಮಾತ್ರವಲ್ಲದೆ, ನಮಗೆ ಬೋಧಿಸಿ, ನಮ್ಮನ್ನು ನಡೆಸಿ, ನಾವು ಎಂದು ನಿಲ್ಲಬೇಕು ಮತ್ತು ಎಂದು ಮುಂದಕ್ಕೆ ಹೊರಡಬೇಕು ಎಂಬುದರ ಬಗ್ಗೆ ಸೂಚನೆ ನೀಡುವುದಕ್ಕಾಗಿಯೂ ಸಹ ನೇಮಿಸಲ್ಪಟ್ಟಿದೆ. ದೇವರ ಚಿತ್ತಕ್ಕೆ ಅನುಗುಣವಾಗಿ ನಾವು ಹೊಂದಿಕೊಂಡು ನಡೆಯುವುದರಿಂದ ಯಾವ ಸಂಗತಿಯಿಂದಲೂ ಎಂದೂ ನಶಿಸಲಾರದ ಶಾಂತಿ ನಮಗೆ ದೊರೆಯುವುದು. ಯೇಸುವಿನ ಮಾತುಗಳು ನಮ್ಮ ಆಲೋಚನೆಗೆ ಬರುತ್ತವೆ.

"ಅದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನೂ ಉಪದೇಶಿಸಿ ನಾನು ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು... ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ. ನನ್ನಲ್ಲಿರುವಂತ ಶಾಂತಿಯನ್ನು ನಿಮಗೆ ಕೊಡುತ್ತೇನೆ... ನಿಮ್ಮ ಹೃದಯವು ಕಳವಳಗೊಳ್ಳದಿರಲಿ, ಹೆದರದಿರಲಿ. (ಯೋಹಾನ 14:26, 27)

ಹಾಗೂ ಇನ್ನೊಂದೆಡೆ:
"ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. (ಯೋಹಾನ 16:13)

## ಬೆಳ್ಳಿಯ ತುತ್ತೂರಿಗಳು ಅದರ ಉಪಯೋಗಗಳು

ಕೆಲಸಗಳಲ್ಲಿ ತನ್ನನ್ನು ಮಗ್ನಮಾಡಿಕೊಂಡ ಒಬ್ಬ ಇಸ್ರಾಯೇಲ್ಯನು ದೇವದರ್ಶನದ ಗುಡಾರದ ಮೇಲಿನ ಮೇಘದ ಚಲನೆಗಳನ್ನು ಗಮನಿಸುವಲ್ಲಿ ಸುಲಭವಾಗಿ ವಿಫಲನಾಗಬಹುದು. ಇಂತವರನ್ನು ಎಚ್ಚರಿಸಲು, ಅಲ್ಲದೆ ವಾಸ್ತವದಲ್ಲಿ ಇಸ್ರಾಯೇಲ್ಯರೆಲ್ಲರನ್ನೂ ಎಚ್ಚರಿಸಲು, ದೇವರು ಮೋಶೆಗೆ ಎರಡು ಬೆಳ್ಳಿಯ ತುತ್ತೂರಿಗಳನ್ನು ಮಾಡಲು ಸೂಚಿಸಿದನು. ಇವುಗಳನ್ನು ಯಾಜಕರು ಪ್ರಯಾಣಕ್ಕೆ ಹೊರಡುವ ಮತ್ತು ಎಚ್ಚರಿಕೆ ನೀಡುವ ಸೂಚನೆಗಾಗಿ ಉಪಯೋಗಿಸಬೇಕಿತ್ತು.

"ನೀನು ಬೆಳ್ಳಿಯ ತಗಡಿನಿಂದ ಎರಡು ತುತ್ತೂರಿಗಳನ್ನು ಮಾಡಿಸಬೇಕು. ಜನಸಮೂಹದವರನ್ನು ಕೂಡ ಕರಿಸುವುದಕ್ಕೂ ದಂಡುಗಳನ್ನು ಹೊರಡಿಸುವುದಕ್ಕೂ ಅವುಗಳನ್ನು ಉಪಯೋಗಿಸಬೇಕು. ಆರೋನನ ವಂಶಸ್ಥರಾದ ಯಾಜಕರೇ ಆ ತುತ್ತೂರಿಗಳನ್ನು ಊದಬೇಕು. ಇದು ನಿಮಗೂ ನಿಮ್ಮ ಸಂತತಿಗೂ ಶಾಶ್ವತ ನಿಯಮ" (ಅರಣ್ಯಕಾಂಡ 10:2–8)

ಇತರರು ಇಲ್ಲಿ ನನಗಿಂತ ಭಿನ್ನವಾದ ಅಭಿಪ್ರಾಯ ಹೊಂದಿರಬಹುದು. ಆದರೆ ಇಲ್ಲಿ ನಾನು ಇದನ್ನು ತೆಗೆದುಕೊಳ್ಳುವುದು ಹೇಗೆಂದರೆ – ಈ ಬೆಳ್ಳಿಯ ತುತ್ತೂರಿಗಳು ಒಂದೇ ಬೆಳ್ಳಿಯ ತಗಡಿನಿಂದ ಮಾಡಲ್ಪಟ್ಟವುಗಳು ಅಥವಾ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಎರಡು ತುತ್ತೂರಿಗಳು ಒಂದೇ ಬೆಳ್ಳಿಯ ತಗಡಿನಿಂದ ಮಾಡಲ್ಪಟ್ಟಿದ್ದವು. ಈ ಆಲೋಚನೆಯು ಸರಿಯಾಗಿದ್ದಲ್ಲಿ, ದೇವರ ವಾಕ್ಯಗಳ ಸತ್ಯಾರ್ಥದ ವಿಷಯವಾಗಿ ಇಲ್ಲಿ ನಾವು ಒಂದು ಬಹು ಸುಂದರವಾದ ಸಾಂಕೇತಿಕ ವಿವರಗಳನ್ನು ಹೊಂದಿದ್ದೇವೆ. ಹಳೆಯ ಒಡಂಬಡಿಕೆಯ ಗ್ರಂಥದಿಂದ ಬರುವ ಸ್ವರವಾದರೂ ಸರಿಯೆ ಅಥವಾ ಹೊಸ ಒಡಂಬಡಿಕೆಯ ಗ್ರಂಥದಿಂದ ಬರುವ (ತುತ್ತೂರಿ) ಸ್ವರವಾದರೂ ಸರಿಯೆ, ಇಲ್ಲಿ "ದೇವರ

ವಾಕ್ಯ" ಎಂಬುದು ಒಂದೇ. ಈ ತುತ್ತೂರಿಗಳನ್ನು ನಮಗಾಗಿ ಊದಲು ನಂಬಿಗಸ್ತರಾದ ಕೆಲವು ಯಾಜಕರಿಗೆ ಅದೆಷ್ಟು ಸಾರಿ ಅಗತ್ಯಬೀಳುವುದು! ಹೌದು, ಬಹುಶಃ ನಮ್ಮ ಆಲಸ್ಯಗಳನ್ನು ಬಿಟ್ಟು ಎಚ್ಚೆತ್ತುಕೊಳ್ಳಲು ಇಲ್ಲವೇ ಕೆಲವು ಸಾಧಾರಣ ಕೆಲಸಗಳಲ್ಲಿ ಮಗ್ನರಾಗಿರುವ ನಮ್ಮನ್ನು ನಮ್ಮ ವಿಷಯವಾಗಿರುವ ದೇವರ ಚಿತ್ತವೇನು ಎಂಬುದರ ಬಗ್ಗೆ ನಾವು ಪೂರ್ಣ ತಿಳುವಳಿಕೆಗೆ ಸಾಗಲು ನಮ್ಮನ್ನು ಜಾಗರೂಕರಾಗಿರುವಂತೆ ಮಾಡಲು, ಅವರಿಗೆ ನಮ್ಮ ಪರವಾಗಿ ತುತ್ತೂರಿ ಊದಿ ಎಚ್ಚರಿಸುವ ಅಗತ್ಯವಿರುವುದು. ಅನಂತರದಲ್ಲಿ ಕರ್ತನು ಸಹ ತನ್ನ ಕ್ರಮವನ್ನು ಬದಲಿಸಿ, ಅಲ್ಲಿ ನಾವೇ ನಂಬಿಗಸ್ತರಾದ ಯಾಜಕರಾಗಿ ಪೂರ್ಣ ದೀನಭಾವದಿಂದ ನಮ್ಮ ಸಹೋದರರನ್ನು ಅವರ ಕೆಟ್ಟ ನಡತೆಗಳಿಂದ ಅವರ ತಪ್ಪಾದ ಮಾರ್ಗಗಳಿಂದ ಹಿಂದೆ ಬರಲು ನಾವು ಅವರಿಗಾಗಿ ತುತ್ತೂರಿ ಊದಿ ಎಚ್ಚರಿಸುವ ಸೌಭಾಗ್ಯ ನೀಡುವನು. ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದದ್ದೇನೆಂದರೆ.

"ಬೆಳ್ಳಿಯ ತುತ್ತೂರಿಯು ಪೂರ್ವದಲ್ಲಿದ್ದ ಇಸ್ರಾಯೇಲ್ಯರ ಚಲನವಲನಗಳನ್ನು ನಿಷ್ಕರ್ಷಿಸಿ ನಿರ್ದೇಶಿಸುತ್ತಿತ್ತು. ದೇವ ಪ್ರಮಾಣ ವಿಧಿಗಳು ಸಹ ಸಭೆಯ ಪ್ರತಿಯೊಂದು ವಿಷಯಗಳನ್ನು ನಿಷ್ಕರ್ಷೆ ಮಾಡಿ ನಿರ್ದೇಶಿಸುವಂತಾಗಬೇಕು. ಬೆಳ್ಳಿಯ ತುತ್ತೂರಿಗಳು ಹಿಂದಿನ ಕಾಲದಲ್ಲಿ ಯಾಜಕರಿಂದ ಊದಲ್ಪಡುತ್ತಿದ್ದವು. ದೇವ ಪ್ರಮಾಣವಿಧಿಗಳು ಈಗ ಯಾಜಕರಾಗಿ ಅನ್ಯೋನ್ಯತೆಯಲ್ಲಿರುವವರಿಗೆ ತಿಳಿದಿರುವುದು ಒಬ್ಬ ಕ್ರೈಸ್ತನಿಗೆ ಈ ದೈವ ಪ್ರಮಾಣ ವಿಧಿಗಳನ್ನು ಬಿಟ್ಟು ಹೊರಡುವ ಇಲ್ಲವೇ ಯಾವ ಬೇರೆ ಕಾರ್ಯವನ್ನೂ ಮಾಡುವ ಹಕ್ಕಿಲ್ಲ. ಆತನು ಕರ್ತನ ಆದೇಶಕ್ಕಾಗಿ ಕಾದುಕೊಂಡಿರಬೇಕು. ಅದನ್ನು ಹೊಂದುವವರೆಗೂ ಆತನು ಕಾದುಕೊಂಡು ನಿಂತಿರಬೇಕು. ಅದನ್ನು ಪಡೆದುಕೊಂಡಾಗ ಆತನು ಮುನ್ನಡೆಯಬೇಕು. ಹಿಂದಿದ್ದ ತನ್ನ ಜನರಿಗೆ ವಿಶೇಷ ರೀತಿಯಲ್ಲಿ ಮಾಡಿದಂತೆ, ದೇವರು ಈಗಲೂ ತನ್ನ ಮನಸ್ಸಿನಲ್ಲಿರುವುದನ್ನು ಹೋರಾಟ ಪ್ರಿಯರಾದ ತನ್ನ ಜನರಿಗೆ ತಿಳಿಸಬಲ್ಲನು ಅಲ್ಲದೆ ಅದನ್ನು ತಿಳಿಸುತ್ತಾ ಬಂದಿರುವನು. ನಿಜ, ಈಗ ಅದು ತುತ್ತೂರಿ ಧ್ವನಿಯ ಮೂಲಕವಾಗಿಯೋ ಅಥವಾ ಮೇಘ ಚಲನವಲನಗಳ ಮೂಲಕವಾಗಿಯೋ ಅಲ್ಲ. ಆದರೆ ಅದು ತನ್ನ ವಚನಗಳ ಹಾಗು ತನ್ನ ಆತ್ಮನ ಮೂಲಕವಾಗಿ ಮಾಡುವನು. ಅವುಗಳನ್ನು ಮಾಡಲೇಬೇಕೆಂದು ನಮ್ಮ ಇಂದ್ರಿಯಗಳಿಗೆ ತಟ್ಟಿ ಹೇಳುವಂತೆ ನಮ್ಮ ಪರಲೋಕದ ತಂದೆ ನಮಗೆ ಮಾರ್ಗದರ್ಶನ ಮಾಡುವುದಿಲ್ಲ. ಆದರೆ ಆತ್ಮೀಕ ರೀತಿಯಲ್ಲಿ ತನ್ನ ಮನಸ್ಸನ್ನು ನಮಗೆ ತಿಳಿಯ ಪಡಿಸುವನು."

## ಲೇವಿಕುಲದ ಮೂರು ಉಪಕುಲಗಳು ಅವರ ಹೊಣೆಗಾರಿಕೆಗಳು

"ಎರಡನೆಯ ವರ್ಷದ ಎರಡನೆಯ ತಿಂಗಳಿನ ಇಪ್ಪತ್ತನೆಯ ದಿನದಲ್ಲಿ ದೇವದರ್ಶನದ ಗುಡಾರದ ಮೇಲಿದ್ದ ಮೇಘವು ಮೇಲಕ್ಕೆ ಎದ್ದದ್ದರಿಂದ ಇಸ್ರಾಯೇಲ್ಯರು ಸೀನಾಯಿ ಅರಣ್ಯವನ್ನು ಬಿಟ್ಟು ಮುಂದೆ ಪ್ರಯಾಣ ಮಾಡಿದರು. ತರುವಾಯ ಆ ಮೇಘವು

ಪಾರಾನ್ ಅರಣ್ಯದಲ್ಲಿ ನಿಂತಿತು. ಯೆಹೋವನು ಮೋಶೆಯ ಮೂಲಕ ಆಜ್ಞಾಪಿಸಿದ ರೀತಿಯಲ್ಲಿ ಅವರು ಪ್ರಯಾಣ ಮಾಡಿದ್ದು ಇದು ಮೊದಲನೆಯ ಸಾರಿ... ತರುವಾಯ ದೇವದರ್ಶನ ಗುಡಾರವನ್ನು ಇಳಿಸಿದಾಗ ಗೆರ್ಷೋನ್ಯರು, ಮೆರಾರಿಯರೂ ಹೊತ್ತುಕೊಂಡು ಹೊರಟರು... ಅವರ ಹಿಂದೆ ಕೆಹಾತ್ಯರೂ ದೇವಸ್ಥಾನದ ಸಾಮಾನುಗಳನ್ನು ಹೊತ್ತುಕೊಂಡು ಹೊರಟರು..." (ಅರಣ್ಯಕಾಂಡ 10:11, 12, 13, 17, 21)

ಲೇವಿಯ ಕುಲದ ಮೂರು ಪ್ರಮುಖ ಉಪಕುಲಗಳು ಇಲ್ಲಿ ನಡುವೆ ಸೇರಿರುವುದರಿಂದ ನಮ್ಮ ಅಧ್ಯಯನವನ್ನು ಮುಂದುವರಿಸುವ ಮೊದಲು ನಾವು ಇಲ್ಲಿ ಲೇವಿಯ ಕುಲದ ಚರಿತ್ರೆಯ ಬಗ್ಗೆ ಸಂಕ್ಷೇಪವಾಗಿ ವಿಮರ್ಶೆ ಮಾಡುವುದು ಅಸಮಂಜಸ ಎನಿಸಲಾರದು. ಮೋಶೆಯು ಚಿನ್ನದ ಬಸವನನ್ನು ಮಾಡಿ ನಿಲ್ಲಿಸಿ ದೇವರಿಗೆ ಅವಿಧೇಯರಾದ ಇಸ್ರಾಯೇಲ್ಯರನ್ನು ಶಿಕ್ಷಿಸಿದ ನಂತರ ಅವರಲ್ಲಿ ಕೆಲವರು ಅಂದರೆ ಬಹು ನಿರ್ದಿಷ್ಟವಾಗಿ ಹೇಳುವುದಾದರೆ, ಜನಾಧಿಪತಿಗಳು ಈ ವಿವಾದವನ್ನು ತೆಗೆದುಕೊಂಡು ಮೋಶೆಯ ವಿರುದ್ಧವಾಗಿ ಎದ್ದವರು ಎಂಬುದು ಸ್ಪಷ್ಟವಾಗಿ ತೋರುತ್ತದೆ. ನಾವು ಓದುವುದೇನೆಂದರೆ:

"...ಮೋಶೆ ನೋಡಿ ಪಾಳೆಯದ ಬಾಗಲಲ್ಲಿ ನಿಂತುಕೊಂಡು – ಯೆಹೋವನ ಪಕ್ಷದವರೆಲ್ಲರೂ ನನ್ನ ಬಳಿಗೆ ಬರಬೇಕು ಎಂದು ಹೇಳಿದನು..." (ವಿಮೋ. 32:26)

ಈ ಸಮಯದಲ್ಲಿ ಲೇವಿಯ ಕುಲವು ಆತನ (ಮೋಶೆಯ) ಬಳಿಗೆ ಒಟ್ಟುಗೂಡಿ ಬರುವುದರ ಮೂಲಕ ತಮ್ಮ ವಿಶೇಷ ಗುಣವನ್ನು ತೋರಿಸಿದರು. ಆದರೂ ಆ ಕರೆಗೆ ಕೇವಲ ಸ್ಪಂದಿಸುವುದಕ್ಕಿಂತಲೂ ಹೆಚ್ಚಾದ ಪ್ರತಿಕ್ರಿಯೆ ತೋರಿಸುವುದು ಅಲ್ಲಿ ಅಗತ್ಯವಿತ್ತು. "ನಾವು ಯೆಹೋವನ ಪಕ್ಷದವರು" ಎಂದು ಪ್ರಕಟಿಸಿದ್ದನ್ನು ಅವರು ಪ್ರಾಮಾಣಿಕವಾಗಿ ಸಾಭೀತುಪಡಿಸಬೇಕಿತ್ತು. ಇದಕ್ಕೆ ಅನುಸಾರವಾಗಿ, ಮೋಶೆ ಹೇಳುವುದು ನಮಗೆ ಕಂಡುಬರುತ್ತದೆ:

"... ಇಸ್ರಾಯೇಲ್ಯರ ದೇವರಾದ ಯೆಹೋವನು ಅಪ್ಪಣೆ ಮಾಡುವುದೇನೆಂದರೆ – ನಿಮ್ಮಲ್ಲಿ ಪ್ರತಿಯೊಬ್ಬನೂ ಕತ್ತಿಯನ್ನು ಸೊಂಟಕ್ಕೆ ಕಟ್ಟಿಕೊಂಡು ಪಾಳೆಯದ ಮಧ್ಯದಲ್ಲಿ ಒಂದು ಬಾಗಲಿನಿಂದ ಮತ್ತೊಂದು ಬಾಗಲಿನವರೆಗೂ ಹೋಗುತ್ತಾ ಬರುತ್ತಾ ಅಣ್ಣ ತಮ್ಮ ಗೆಳೆಯ ನೆರೆಯವ ಎಂದು ಲಕ್ಷಿಸದೆ ಜನರನ್ನು ಸಂಹರಿಸಬೇಕು ಎಂದು ಹೇಳಿದನು" (ವಿಮೋ. 32:27)

"ಲೇವಿಯ ಕುಲದವರು ಮೋಶೆಯ ಆಜ್ಞೆಯ ಮೇರೆಗೆ ಮಾಡಿದರು. ಆ ದಿನದಲ್ಲಿ ಜನರೊಳಗೆ ಹೆಚ್ಚುಕಡಿಮೆ ಮೂರು ಸಾವಿರ ಮಂದಿ ಕೊಲ್ಲಲ್ಪಟ್ಟರು" (ವಿಮೋ. 32:28) ಎಂದು ಲಿಖಿತವಾಗಿರುವುದು ನಮಗೆ ಕಂಡುಬರುತ್ತದೆ. ಇದಾದ ಸ್ವಲ್ಪ ಸಮಯದ ನಂತರ

ದೇವರು ಮೋಶೆಗೆ (ಹೀಗೆ) ಹೇಳಿದುದರಲ್ಲಿ ಆಶ್ಚರ್ಯವಿಲ್ಲ.

"... ನಾನು ಇಸ್ರಾಯೇಲ್ಯರಲ್ಲಿ ಚೊಚ್ಚಲಾದ ಗಂಡಸರಿಗೆ ಬದಲಾಗಿ ಲೇವಿಯರನ್ನೇ ತೆಗೆದುಕೊಂಡಿದ್ದೇನೆಂದು ತಿಳಿದುಕೋ. ಆದದರಿಂದ ಲೇವಿಯವರು ನನ್ನ ಸ್ವಕೀಯವಾದ ಸೊತ್ತು" (ಅರಣ್ಯಕಾಂಡ 3:11, 12)

ದೇವರ ಉತ್ಕೃಷ್ಟವಾದ ಸಂಕಲ್ಪಗಳನ್ನು, ಉದ್ದೇಶಗಳನ್ನು ಈಡೇರಿಸಲು ಈ ಲೇವಿಯರು ಮೊದಲು ಧರ್ಮವಿಧಿ ನಿಯಮದ ಪ್ರಕಾರ ಶುದ್ಧೀಕರಿಸಿಕೊಂಡರು. ಅನಂತರ ಅವರು ತಮ್ಮ ಬಟ್ಟೆಗಳನ್ನು ಒಗೆದುಕೊಂಡರು. ಅನಂತರ ಅವರು ಆರೋನನಿಂದ "ದೇವರ ಮುಂದೆ" ಅರ್ಪಿಸಲ್ಪಟ್ಟರು. ಕೇವಲ ಈ ಮೂಲಕವಾಗಿ ಮಾತ್ರವೇ ಅವರು ದೇವದರ್ಶನದ ಗುಡಾರದ ಸೇವೆಗೆ ನೈಜ ರೀತಿಯಲ್ಲಿ ಸೇರ್ಪಡೆಯಾಗಬಹುದಿತ್ತು (ಅರಣ್ಯಕಾಂಡ 8:21, 22).

ಪ್ರತಿಯೊಬ್ಬ ದೇವರ ಮಗನಿಗೆ ಇದು ಎಂಥಾ ಒಂದು ಚಿತ್ರವತ್ತಾದ ವರ್ಣನೆ. ನಾವು "ಯೆಹೋವನ ಪಕ್ಷದಲ್ಲಿ ಇದ್ದೇವೆ" ಎಂದು ನಮ್ಮ ವಿಷಯವಾಗಿ ಪ್ರಕಟಿಸಿಕೊಳ್ಳುವುದಷ್ಟೇ ಇಲ್ಲಿ ಸಾಕಾಗುವುದಿಲ್ಲ. ಆದರೆ ನಾವು ಸಹ ಆತನ ಚಿತ್ತಕ್ಕೆ ವಿಧೇಯರಾಗಿ ಪವಿತ್ರಾತ್ಮನು ಕೊಡುವ ಕತ್ತಿಯನ್ನು ತೆಗೆದುಕೊಂಡು ಆತನ ಧ್ಯೇಯೋದ್ದೇಶಗಳಿಗೆ ವಿರುದ್ಧವಾದದ್ದೆಲ್ಲವನ್ನೂ ನಮ್ಮೊಳಗಿಂದ ತುಂಡು ತುಂಡಾಗಿ ಕತ್ತರಿಸಿ ನಮ್ಮಿಂದ ಅದನ್ನು ದೂರ ಎಸೆದು ಬಿಡುವ ಹಾಗೆ ಝಳಪಿಸಬೇಕು. ಇದು ಕ್ರಿಸ್ತನಿಂದ ದೊರೆಯುವ ನೀತಿಯ ಮೂಲಕವಾದ ಶುದ್ಧೀಕರಣ ಕಾರ್ಯದ ಬಗ್ಗೆ ತಿಳಿಯಲು ಕರೆನೀಡುವುದು ಮಾತ್ರವಲ್ಲದೆ, ನಮ್ಮಿಂದ ಸತತವಾಗಿ ನಡೆಯಬೇಕಾದ ಒಂದು ಕಾರ್ಯದ ವಿಷಯವಾಗಿಯೂ ಅರಿಯಲು ಕರೆನೀಡುತ್ತದೆ. ಅದಾವುದೆಂದರೆ ಪ್ರಪಂಚದ ದೋಷ ಹತ್ತದಂತೆ ಶರೀರಾತ್ಮಗಳ ಕಲ್ಮಶಗಳನ್ನು ಸತತವಾಗಿ ತೊಳೆದುಕೊಳ್ಳುವ ಕಾರ್ಯ, ಹೀಗೆ ಶುದ್ಧೀಕರಿಸಲ್ಪಟ್ಟವರಾಗಿ ನಮ್ಮ (ನೀತಿ) ವಸ್ತ್ರಗಳನ್ನು ಮಲಿನವಾಗದಂತೆ ಕಾಪಾಡಿಕೊಂಡು, ನಮ್ಮ ಮಹಾ ಯಾಜಕನಾದ ಯೇಸುವಿನ ಹಸ್ತದಲ್ಲಿ ಯೆಹೋವನಿಗೆ ಮೆಚ್ಚಿಕೆಯಾದ ಯಜ್ಞವಾಗಿ ಅರ್ಪಿತವಾಗಲು, ಲೇವಿಯರಂತೆ ಆತನಿಗೆ ಮತ್ತು ಆತನ ದೇವದರ್ಶನ ಗುಡಾರದ ಸೇವೆಗೆ ನಿಜಕ್ಕೂ ಪ್ರತ್ಯೇಕಿಸಲ್ಪಡುತ್ತೇವೆ.

ಲೇವಿಯರೆಲ್ಲರೂ ಕರ್ತನಿಗೆ ಸೇರಿದವರಾದರೂ, ಕರ್ತನು – ನಿಜರೂಪದ ಲೇವಿಯರಲ್ಲಿ ಕೆಲವು ವ್ಯತ್ಯಾಸಗಳು ಇರುವವೆಂದು ತೋರಿಸುವ ಸಲುವಾಗಿ – ಅವರಲ್ಲಿ ಈ ಒಂದು ವ್ಯತ್ಯಾಸವನ್ನು ಉಂಟು ಮಾಡಿದ್ದಾನೆ. ಗೆರ್ಷೋನನ ಮಕ್ಕಳಿಗೆ ಡೇರೆ ಬಟ್ಟೆಗಳು, ಪರದೆಗಳು, ಇತ್ಯಾದಿಗಳನ್ನು ಅವರ ವಶಕ್ಕೆ ಕೊಟ್ಟನು. ತಮ್ಮ ಕರ್ತವ್ಯಗಳನ್ನು ನೆರವೇರಿಸಲು ಅವರಿಗೆ ಎರಡು ಬಂಡಿಗಳು ನಾಲ್ಕು ಎತ್ತುಗಳು ಸಹ ಕೊಡಲ್ಪಟ್ಟವು. (ಅರಣ್ಯ. 3:25–26; 4:24–26; 7:7) ಮೇರಾರಿಯ ಮಕ್ಕಳಿಗೆ ಗುಡಾರದ ಚೌಕಟ್ಟುಗಳು, ಕಂಬಗಳು,

ಗದ್ದಿಗೆಕಲ್ಲುಗಳು, ಹಗ್ಗಗಳು, ಗೂಟಗಳು ಮುಂತಾದವುಗಳನ್ನು ಅವರ ವಶಕ್ಕೆ ಆತನು ಕೊಟ್ಟನು. ತಮ್ಮ ಕರ್ತವ್ಯ ಪಾಲನೆಗಾಗಿ ಅವರಿಗೆ ನಾಲ್ಕು ಬಂಡಿಗಳು ಎಂಟು ಎತ್ತುಗಳು ಕೊಡಲ್ಪಟ್ಟವು. (ಅರಣ್ಯ. 3:36, 37; 4:31. 32; 7:8) ಕೇಹಾತನ ಮಕ್ಕಳಿಗೆ ಮಂಜೂಷ, ಮೇಜುಗಳು, ವೇದಿಗಳು, ದೀಪಸ್ತಂಬ ಮುಂತಾದವು ಮತ್ತು ತೆರೆಗಳು ಅವರ ವಶಕ್ಕೆ ಕೊಡಲ್ಪಟ್ಟವು. ಆದರೆ ಈ ಹೊರೆಗಳನ್ನು ಅವರು ಬಂಡಿಯಲ್ಲಿ ಸಾಗಿಸುವ ಹಾಗಿರಲಿಲ್ಲ ಅವುಗಳನ್ನು ಕೋಹಾತ್ಯರ ಭುಜಗಳ ಮೇಲೆ ಹೊರಬೇಕಿತ್ತು. (ಅರಣ್ಯ 3:31. 4:15; 7:9)

"ತರುವಾಯ ದೇವದರ್ಶನದ ಗುಡಾರವನ್ನು ಇಳಿಸಿದಾಗ ಗೇರ್ಷೋನ್ಯರು ಮೇರಾರಿಯರು ಅದನ್ನು ಹೊತ್ತುಕೊಂಡು ಹೊರಟರು... ಅವರ ಹಿಂದೆ ಕೋಹಾತ್ಯರು ದೇವಸ್ಥಾನದ ಸಾಮಾನುಗಳನ್ನು ಹೊತ್ತುಕೊಂಡು ಹೊರಟರು" (ಅರಣ್ಯಕಾಂಡ 10:17, 21)

ಗೆರ್ಷೋಮ್ ಮತ್ತು ಮೆರಾರಿಗೆ ಪರದೆಗಳು, ಚೌಕಟ್ಟುಗಳು, ಹಗ್ಗಗಳು, ಗೂಟಗಳು ಮುಂತಾದವುಗಳನ್ನು ಸಾಗಿಸುವ ಕಾರ್ಯಭಾರ ವಹಿಸಿಕೊಟ್ಟದ್ದಲ್ಲದೆ ಇವುಗಳನ್ನು ಸಾಗಿಸುವುದಕ್ಕೆ ಬಂಡಿಗಳನ್ನು ಎತ್ತುಗಳನ್ನೂ ಕೊಟ್ಟು ಅವರನ್ನು ಈತಾಮಾರನ ಮೇಲ್ವಿಚಾರಣೆಯಲ್ಲಿ ಇರಿಸಿದ್ದರಲ್ಲಿ ಸಾಕಷ್ಟು ಮಹತ್ವವಿರುವ ಸಾಧ್ಯತೆ ಇದೆ (ಅರಣ್ಯ. 4:28, 33). "ಮಹಾ ಸಮೂಹದ ವರ್ಗಕ್ಕೆ" ಸೇರಿದವರ ಒಂದ ಅತ್ಯುತ್ತಮವಾದ ಗುಣಲಕ್ಷಣದ ಚಿತ್ರವತ್ತಾದ ವಿವರಣೆ ಇಲ್ಲಿ ಇರುವುದು ತಿಳುವಳಿಕೆಯುಳ್ಳ ಭಕ್ತನ ಮನಸ್ಸಿಗೆ ತೋರುತ್ತದೆ. ಓದುಗರೇ, ಇದನ್ನು ಗಾಢವಾಗಿ ಆಲೋಚಿಸಿ! ಹಾಗೂ ಇದರಲ್ಲಿ ಯಾವುದಾದರೂ ಮಹತ್ವವಿರುವುದಾದರೆ, ಕೋಹಾತ್ಯರಿಗೆ ತಮ್ಮ ಹೊರೆಗಳನ್ನು ಹೆಗಲ ಮೇಲೆ ಹೊತ್ತುಕೊಳ್ಳುವಂತೆ ಮಾಡಿ ಎಲಿಯೇಜರನ ಮೇಲ್ವಿಚಾರಣೆಯಲ್ಲಿ ಇರಿಸಿದ (ಅರಣ್ಯ. 4:16) ಅಂಶದಲ್ಲಿಯೂ ಮಹತ್ವವಿರಬೇಕು. ದೇವರ ಮಗುವೇ, ಇದನ್ನು ಯೋಚಿಸು! ಕೋಹಾತ್ಯರಿಗೆ ಮಾತ್ರ ಬಂಗಾರದ ಪಾತ್ರೆಗಳನ್ನು ಹೊರುವ ಸೌಭಾಗ್ಯವಿತ್ತು. "ಚಿಕ್ಕ ಹಿಂಡಿನವರಲ್ಲಿ" ಎದ್ದು ಕಾಣುವ ಒಂದು ವಿಶೇಷ ಗುಣವನ್ನು ಇಲ್ಲಿ ನಾವು ಕಾಣಬಹುದಲ್ಲವೇ?

ಈ ಮುಂದಿನ ಸ್ಥೂಲವಾದ ವಿವರಣೆಯು ಸ್ಪಷ್ಟವಾಗಿ ತೋರಿಸುವ ಹಾಗೆ, ಈತಮಾರ್ ಮತ್ತು ಎಲಿಯೇಜರ್ ಇಬ್ಬರೂ ಸ್ವತಃ "**ಮಹಾ ಸಮೂಹ**" ಮತ್ತು "**ಚಿಕ್ಕ ಹಿಂಡಿಗೆ**" ಛಾಯೆಯಾಗಿದ್ದಾರೆ.

ಆರೋನನು ಮೊದಲು ನಾಲ್ಕು ಮಕ್ಕಳನ್ನು ಪಡೆದಿದ್ದು ಅವರೆಲ್ಲರೂ ಯಾಜಕರಾಗಿ ಪ್ರತಿಷ್ಠಿತರಾಗಿದ್ದರು. (ಯಾಜಕಕಾಂಡ 8 ಮತ್ತು 9ನೇ ಅಧ್ಯಾಯಗಳನ್ನು ನೋಡಿ) ಹೀಗಿದ್ದರೂ ಅವರಲ್ಲಿ ಇಬ್ಬರು ಅಂದರೆ ನಾದಾಬ್ ಮತ್ತು ಅಭೀಹು ಎಂಬುವರು ಯೆಹೋವನ ಸನ್ನಿಧಿಯಿಂದ ಹೊರಟ ಬೆಂಕಿಯ ಮೂಲಕವಾಗಿ ನಾಶವಾದರು. (ಯಾಜಕ. 10:1,2) ನಿಸ್ಸಂದೇಹವಾಗಿ ಪಾಸ್ಟರ್ ರಸಲ್ಲರು "ಟೇಬರ್‌ನಿಕಲ್ ಶ್ಯಾಡೋಸ್ ಆಫ್ ದ ಬೆಟರ್

ಸ್ಯಾಕ್ರಿಫೈಸಸ್" ಎಂಬ ಗ್ರಂಥದ 1914 ಸಂಪುಟ, 119ನೇ ಪುಟದ ಅಡಿ ಟಿಪ್ಪಣಿಯಲ್ಲಿ ಸೂಚಿಸಿರುವಂತೆ, ಈ ಇಬ್ಬರು ಮಕ್ಕಳು ಪ್ರತಿಷ್ಠಿತರಾಗಿ ಪವಿತ್ರಾತ್ಮದಾನ ಪಡೆದ ಬಹು ಪಾಲಿನವರಲ್ಲಿ ಅಗತ್ಯವಿರುವ ಹೃದಯದ ಉನ್ನತ ಗುಣಮಟ್ಟಗಳಿಗೆ ತಲುಪುವಲ್ಲಿ ವಿಫಲರಾಗಿ, ಇದರ ಫಲವಾಗಿ (ನಿತ್ಯ) ಜೀವ ಪಡೆಯಲು ಯೋಗ್ಯರೆನಿಸಿಕೊಳ್ಳದೆ. ಇದಕ್ಕೆ ಬದಲಾಗಿ ಎರಡನೇ ಮರಣವೆಂಬ ಮರವೆಯ ಲೋಕಕ್ಕೆ ಇಳಿಯುವವರನ್ನು ಸೂಚಿಸುವ ಉದ್ಧೇಶಕ್ಕಾಗಿರುವರು.

ವಿಷಯವು ಹೀಗಿರುವಲ್ಲಿ, ಉಳಿದ ಇಬ್ಬರು ಮಕ್ಕಳಾದ ಈತಾಮಾರ್ ಹಾಗೂ ಎಲಿಯೇಜರ್ ಎಂಬುವರು ಪ್ರತಿಷ್ಠಿತರಾಗಿ ಪವಿತ್ರಾತ್ಮದಾನ ಪಡೆದ ಉಳಿದ ಎರಡು ವರ್ಗಗಳಾದ "**ಮಹಾ ಸಮೂಹ**" ಮತ್ತು "**ಚಿಕ್ಕ ಹಿಂಡು**" ಇವುಗಳಿಗೆ ಅವಶ್ಯವಾಗಿ ಛಾಯೆಯಾಗಿರಲೇಬೇಕು. ಇವೆಲ್ಲವುಗಳೂ ಈ ಯಾಜಕರ ಹೆಸರುಗಳಲ್ಲಿ ಎಷ್ಟು ಪ್ರಭಲವಾದ ರೀತಿಯಲ್ಲಿ ವ್ಯಕ್ತವಾಗಿವೆ ಎಂಬುದನ್ನು ಈಗ ನಾವು ಗಮನಿಸೋಣ:

**ನಾದಾಬ್ – ಅಂದರೆ "ಉದಾರ"**

**ಅಭೀಹು – ಅಂದರೆ "ಅವನು (ಅಂದರೆ, ದೇವರು) ತಂದೆ"**

ಆರೋನನ ಈ ಇಬ್ಬರು ಮಕ್ಕಳಿಂದ (ನಾದಾಬ್ ಮತ್ತು ಅಭೀಹು, ಕನಿಷ್ಠದಲ್ಲಿ ಅಂದರೆ ಮರಣಕರವಾದ ಪಾಪಕ್ಕೆ ಸೂಚ್ಯವಾದ ಪಾಪವನ್ನು ಮಾಡಿದವರು) ಪ್ರತಿನಿಧಿಸಲ್ಪಟ್ಟ ವರ್ಗವು – ಒಮ್ಮೆ ದೇವರು ತಮ್ಮ ತಂದೆಯೆಂದು ಗ್ರಹಿಸಿಕೊಂಡಿದ್ದಾಗ್ಯೂ, ಬಹು ಉಧಾರ ಮತ್ತು ವಿಶಾಲ ಮನೋಭಾವಕ್ಕೆ ಬರುವುದರ ಮೂಲಕ ತಮ್ಮ ಹೃದಯ ಹಾಗೂ ಜೀವಿತಗಳಲ್ಲಿ ಪ್ರಾಪಂಚಿಕ ಭಾವವು ಬೆಳೆಯಲು ಅವಕಾಶ ಮಾಡಿಕೊಟ್ಟ ಈ ಅಂಶವು, ತಾವು ಛಾಯೆಯಾಗಿ ಯಾವ ಗುಂಪಿಗೆ ಸೇರಿದವರೋ ಆ ಗುಂಪಿನಲ್ಲಿ ಬಹು ನಿರ್ಧಿಷ್ಟವಾದ ರೀತಿಯಲ್ಲಿ ಸೇರಿ ಅವರಿಗೆ ಸಹಕಾರಿಗಳಾಗಿದ್ದಾರೆಂದು ಹೇಳುವುದಾಗಿ ತೋರುತ್ತದೆ (ಯಾಜಕ. 10:1–11). ಈ ಮನೋಭಾವವು ಮೊದಲು ಅವರ ಆತ್ಮೀಕ ದೃಷ್ಠಿಯನ್ನು ಮುಸುಕು ಮಾಡಿ ನಂತರದಲ್ಲಿ ಅವರನ್ನು ನಾಶಮಾಡುತ್ತದೆ. ಹೀಗಾಗಿ "ದೇವರಿಗೆ ಮೀಸಲಾದ ವಸ್ತುಗಳನ್ನು ಅಲ್ಲದ ವಸ್ತುಗಳನ್ನೂ ಶುದ್ಧವಾದವುಗಳನ್ನು ಅಶುದ್ಧವಾದವುಗಳನ್ನು ವಿವೇಚಿಸುವುದೂ" (ಯಾಜಕ. 10:10) ಇನ್ನು ಅವರಿಗೆ ಸಾಧ್ಯವಾಗದೆ ಇದ್ದರೂ, ಅವರು ಕರ್ತನಿಗೆ ಅಂಗೀಕಾರವಾಗುವ ರೀತಿಯಲ್ಲಿ ಧೂಪವನ್ನು ಅರ್ಪಿಸಬಹುದೆಂದು ತಾವು ಭಾವಿಸಿಕೊಂಡು ಮುನ್ನಡೆಯುವುದರ ಮೂಲಕ, ಕೇವಲ ಎರಡನೇ ಮರಣಕ್ಕೆ ಪಾತ್ರರಾಗುವ ಮಹಾ ದ್ರೋಹಕ್ಕೆ ಅವರು ಒಳಗಾದರು.

**ಎಲಿಯೇಜರ್ – ಅಂದರೆ "ದೇವರಿಂದ ಸಹಾಯ ಪಡೆಯುವಿಕೆ"**

ಆರೋನನಿಗೆ ನೇರವಾಗಿ ಹುಟ್ಟಿದ ಮಕ್ಕಳಲ್ಲಿ ಮಹಾ ಯಾಜಕನ ಸ್ಥಾನವನ್ನು ನಿಜವಾಗಿ ಪಡೆದವನು ಕೇವಲ ಎಲಿಯೇಜರ್ ಒಬ್ಬನೇ ಈ ವರ್ಗವನ್ನು ಹೀಗೆ ಪ್ರತಿನಿಧಿಸುವುದು. ಅವು ಯಾವುದೆಂದರೆ: ದೇವರಿಂದ ಸಹಾಯ ಪಡೆದು, ಪ್ರಭಾವವುಳ್ಳ "ರಾಜವಂಶದ ಯಾಜಕತ್ವದಲ್ಲಿ" ಅಂಗಗಳಾಗಿ ಸೇರಲಿರುವ ಆ "ಚಿಕ್ಕ ಹಿಂಡು".

**ಈತಾಮಾರ್ – ಅಂದರೆ "ಖರ್ಜೂರಗಳ ದ್ವೀಪ"**

ಖರ್ಜೂರವು (ಗರಿಗಳು) ವಿಜಯದ ಸಂಕೇತಗಳು. ಈತಾಮಾರನು ಎಂದೂ ಮಹಾಯಾಜಕ ಸ್ಥಾನವನ್ನು ಗಳಿಸಲಿಲ್ಲ. ನಿಜವೆಂದರೆ ಏಲಿಯನ ಸಮಯದವರೆಗೂ ಇವನ ಸಂತಾನದವರಲ್ಲಿ ಯಾರೂ ಈ ಸ್ಥಾನಕ್ಕೆ ಬರಲಿಲ್ಲ. ಹೀಗೆ ಈ ಸಂತಾನದವರು ಮಹಾ ಯಾಜಕ ಸ್ಥಾನಕ್ಕೆ ಬರುವುದನ್ನು ಸಾಕಷ್ಟು ಸಮಯ ತಡೆ ಹಿಡಿಯಲಾಗಿದ್ದು, ಇದು ಇಂದು ಪರಿಗಣಿಸಲಾಗುತ್ತಿರುವ ಈ ಸನ್ನಿವೇಶವು – ಛಾಯಾ ರೂಪದಲ್ಲಿ ಸೂಚಿತವಾದ ಈ ವರ್ಗವು ಯಾಜಕತನಕ್ಕೆ ಬಾಧ್ಯರಾಗಬಾರದೆಂಬುದನ್ನು ಸ್ಥಾಪಿಸುವುದಕ್ಕಾಗಿರುವುದು. ಹೀಗೆ ಆ "ಮಹಾ ಸಮೂಹವು" "ರಾಜವಂಶದ ಯಾಜಕತನದ" ಸದಸ್ಯರಾಗಿ ಸಿಂಹಾಸನದಲ್ಲಿ ಸ್ಥಾನ ಪಡೆಯಲು ವಿಫಲರಾದರೂ ಅವರಿಗೆ ಏನಿಲ್ಲದಿದ್ದರೂ ಸಿಂಹಾಸನದ ಮುಂದೆ ಖರ್ಜೂರದ ಗರಿಗಳನ್ನು ಹಿಡಿದು ನಿಲ್ಲುವ ಸೌಭಾಗ್ಯ ದೊರಕಿಸಿಕೊಡಲಾಗುವುದು. (ಪ್ರಕಟಣೆ 7:9),

## ವಿಭಾಗ ಎರಡು
## ದೇವದರ್ಶನ ಗುಡಾರದ ಪೀಠೋಪಕರಣಗಳೂ ಪ್ರಯಾಣದಲ್ಲಿ ಅದರ ಮಹತ್ವಗಳೂ

ಅರಣ್ಯಕಾಂಡ 4:5–14

ಕೋಹಾತ್ಯರು ದೇವದರ್ಶನದ ಪಾತ್ರೆ ಉಪಕರಣಗಳನ್ನು ತಮ್ಮ ಹೆಗಲಿನ ಮೇಲೆ ಹೊತ್ತು ಸಾಗಿಸುವ ವಿಷಯವನ್ನು ನಾವು ಈಗಾಗಲೇ ಪರಿಗಣನೆಗೆ ತೆಗೆದುಕೊಂಡಿದ್ದೇವೆ. ಅಲ್ಲಿ ಚಿತ್ರಿತವಾದ ಸನ್ನಿವೇಶದಲ್ಲಿ, ಬಹು ವಿಶೇಷ ರೀತಿಯಲ್ಲಿ ಕೋಹಾತ್ಯರು ಪವಿತ್ರಾತ್ಮ ದಾನವನ್ನು ಪಡೆದ ಪ್ರತಿಷ್ಠಿತರಾದ ದೇವರ ಮಕ್ಕಳನ್ನು ಹಾಗೂ ಆ ಪಾತ್ರೆ ಉಪಕರಣಗಳು ತಮ್ಮ ವಶಕ್ಕೆ ಕೊಡಲಾದ ಅಮೂಲ್ಯವಾದ ಸತ್ಯಾರ್ಥಗಳನ್ನು ಪ್ರತಿನಿಧಿಸುತ್ತಾರೆ. ಆದರೆ ಇದು ಒಂದು ಸಾಮಾನ್ಯವಾದ ಚಿತ್ರಣ. ನಾವು ಈಗ ಪ್ರಸ್ತುತ ಪಡಿಸಲಿರುವ ವಿಷಯದೊಂದಿಗೆ ಇದನ್ನು ಹೋಲಿಸಿಕೊಂಡು ಗೊಂದಲ ಮಾಡಿಕೊಳ್ಳಬಾರದು. ಈ ಪ್ರಕಾರ ಪಾತ್ರೆಗಳು ಇಲ್ಲಿ ದೈವೀಕ ಸತ್ಯಾರ್ಥಗಳನ್ನು ಪ್ರತಿನಿಧಿಸುವುದಿಲ್ಲ. ಆದರೆ ಇವು ದೇವ ಭಕ್ತರ ವಿಷಯವಾಗಿಯೂ, ದೇವರ ಹಾಗೂ ಲೋಕವನ್ನು ಸೂಚಿಸುವ ಇಸ್ರಾಯೇಲ್ಯರ ಪಾಳೆಯ ಇವೆರಡರೊಂದಿಗೆ ಇರುವ ತಮ್ಮ ಸಂಬಂಧದ ವಿಷಯವಾಗಿಯೂ ಸೂಚಿಸುತ್ತವೆ.

ದೇವರೊಂದಿಗೆ ಈ ಪಾತ್ರೋಪಕರಣಗಳಿಗೆ ಇರುವ ಸಂಬಂಧಗಳನ್ನು ದೇವದರ್ಶನ ಗುಡಾರವು ಇನ್ನೂ ನಿಲ್ಲಿಸಲ್ಪಟ್ಟಿರುವಾಗ ಅವುಗಳನ್ನು ಇರಿಸಿರುವ ಸ್ಥಳಗಳ ಸೂಚನೆಯ ಮೂಲಕ ಬಹು ಸೊಗಸಾಗಿ ನಿರೂಪಿಸಲಾಗಿದೆ. ಹೀಗೆ ಧೂಪವೇದಿ, ನೈವೇಧ್ಯ ರೊಟ್ಟಿಗಳನ್ನು ಇಡುವ ಮೇಜು, ಚಿನ್ನದ ವೇದಿ, ಇವುಗಳು ಹೊರಗಿನವರ ದೃಷ್ಟಿಗೆ ಮರೆಯಾಗಿದ್ದರೂ ದೇವರಿಗೆ ಅವು ಚಿನ್ನದ ಪಾತ್ರೆಗಳಾಗಿ ದೇವದರ್ಶನ ಗುಡಾರದ ಪರಿಶುದ್ಧ ಸ್ಥಳದಲ್ಲಿರುವ ತನ್ನ ಯಾಜಕವರ್ಗದವರಿಗೆ ಸೇವೆಸಲ್ಲಿಸುತ್ತಿವೆ. ಪರಿಶುದ್ಧ ಸ್ಥಳವು ಸ್ವತಃ ಈಗಿನ ಕಾಲದಲ್ಲಿ "ತೆರೆಯ ಈಚೆ ಕಡೆಯಲ್ಲಿದ್ದು" ಪವಿತ್ರಾತ್ಮದಾನ ಪಡೆದರೂ ಇನ್ನೂ ಪವಿತ್ರಾತ್ಮನಿಂದ ಹುಟ್ಟದ "ಸ್ವಲ್ಪವಾಗಿ (ತಿಳಿದುಕೊಂಡಿರುವ)" ಸಭೆಯನ್ನು ವರ್ಣಿಸುವುದು. ಒಡಂಬಡಿಕೆಯ ಮಂಜೂಷವಾದರೂ – ಅದು ಹೊರಗಿನವರಿಗೆ ಮಾತ್ರವಲ್ಲದೆ ಪರಿಶುದ್ಧ ಸ್ಥಳದಲ್ಲಿದ್ದು ಇನ್ನೂ "ತೆರೆಯನ್ನು ದಾಟದೇ" ಇರುವವರಿಗೂ ಮರೆಯಾಗಿರುವುದು. ಹೀಗಿದ್ದರೂ ದೇವರಿಗೆ ಇದು ಮುಚ್ಚಲ್ಪಡದೆ ಇರುವ ಚಿನ್ನದ ಪೀಠೋಪಕರಣಗಳಾಗಿದ್ದು ದೇವದರ್ಶನ ಗುಡಾರದ ಅತಿಪರಿಶುದ್ಧ ಸ್ಥಳದಲ್ಲಿ ಅತಿ ನಿಕಟವಾಗಿ ತನ್ನೊಂದಿಗೆ ಗುರುತಿಸಿಕೊಂಡವರಿಗೆ ಹೋಲಿಕೆಯಾಗಿರುವುದು, ಅತಿಪರಿಶುದ್ಧ ಸ್ಥಳವು ಮುಂದಿನ ಕಾಲದಲ್ಲಿ ಪವಿತ್ರಾತ್ಮನಿಂದ ಹುಟ್ಟಿದವರಾಗಿ, "ತೆರೆಯ ಆಚೆಯಲ್ಲಿದ್ದು", ಪರಿಪೂರ್ಣತೆಯ ಸ್ಥಿತಿಗೆ ಬಂದು ಮಹಿಮೆಗೆ ಸೇರಿರುವ ಸಭೆಯ ಬಗ್ಗೆ ವರ್ಣಿಸುವುದು! ಅಪೋಸ್ತಲನಾದ ಪೌಲನು ಕೊರಿಂಥದವರಿಗೆ ಬರೆದ ತನ್ನ ಮೊದಲನೇ ಪತ್ರಿಕೆಯಲ್ಲಿ (13:10) ಇದನ್ನು ಈ ರೀತಿಯಲ್ಲಿ ಹೇಳಿರುವನು. "ಆದರೆ ಸಂಪೂರ್ಣವಾದದ್ದು ಬಂದಾಗ ಅಪೂರ್ಣವಾದದ್ದು ಇಲ್ಲದಂತಾಗುವುದು".

ತಾಮ್ರದ ಯಜ್ಞವೇದಿಯು ಅಂಗಳಕ್ಕೆ ಬರುವವರ ದೃಷ್ಟಿಗೆ ಕಾಣುವುದಾದರೂ ಪವಿತ್ರಸ್ಥಾನವನ್ನು ಸುತ್ತುವರಿದಿರುವ ಪರದೆಗಳಿಂದ ಹೊರಗಿನವರಿಗೆ ಮರೆಮಾಡಲಾಗಿತ್ತು. ಮತ್ತು ಪಾಳೆಯವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವಾಗ ಯಜ್ಞವೇದಿಯನ್ನು ಪಾಳೆಯದವರ ಮಧ್ಯದಿಂದ ಕೊಂಡೊಯ್ಯುವಾಗಲೂ ಅದು (ಪ್ರಯಾಣದ) ಬಟ್ಟೆಗಳಿಂದ ಮುಚ್ಚಲ್ಪಟ್ಟಿರುವುದರಿಂದ ಯಾರಿಗೂ ಕಾಣಲಾರದೇ ಇರುತ್ತಿತ್ತು. ಗಂಗಾಳವನ್ನು ಹೊರತುಪಡಿಸಿದ್ದಲ್ಲಿ, ದೇವದರ್ಶನ ಗುಡಾರದ ಪೀಠೋಪಕರಣಗಳೆಲ್ಲವೂ ಸ್ಥಳದಿಂದ ಸ್ಥಳಕ್ಕೆ ಕೊಂಡೊಯ್ಯುವಾಗ ಅವೆಲ್ಲವೂ ಮುಚ್ಚಲ್ಪಟ್ಟಿರುತ್ತಿದ್ದವು.

ಅಂಗಳದಲ್ಲಿ ಚಚ್ಚೌಕವಾಗಿ ನಿಲ್ಲಿಸಲ್ಪಟ್ಟಿರುವ ಯಜ್ಞವೇದಿಯು, ಪಾಸ್ಟರ್ ರಸೆಲ್ಲರು ಸೂಚಿಸಿರುವಂತೆ ಕ್ರಿಸ್ತನ ಈಡುಬಲಿಯನ್ನು ಪ್ರತಿನಿಧಿಸುವುದು. ಅದು ತಾಮ್ರದಿಂದ ಮಾಡಲ್ಪಟ್ಟಿದ್ದು ಮನುಷ್ಯನಾಗಿ ಬಂದ ಕ್ರಿಸ್ತ ಯೇಸುವಿನ ಪರಿಪೂರ್ಣ ಮನುಷ್ಯತ್ವಕ್ಕೆ ಸಾಂಕೇತಿಕವಾಗಿದೆ. "...ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು (ಈಡಾಗಿ) ಒಪ್ಪಿಸಿಕೊಟ್ಟನು" (1ತಿಮೋಥೆ 2:5.6) ನಿಜರೂಪದ ಅಂಗಳದಲ್ಲಿರುವ, ನೀತಿವಂತರೆಂದು ನಿರ್ಣಯಿಸಲ್ಪಟ್ಟು ನಂಬಿಕೆಗೆ ಬಂದವರೆಲ್ಲರೂ, ಮರಣ ಪರ್ಯಂತರವಾದ ಕ್ರಿಸ್ತನ ನಂಬಿಗಸ್ತಿಕೆಯನ್ನು

ಕಂಡಿರುವ ಹಾಗೆಯೇ ದೇವರೂ ಕಂಡನು. ಈ ಕಾರಣದಿಂದಾಗಿ ದೇವರು ಆತನನ್ನು ಮುಂದಿನ ರಾಜ್ಯದಲ್ಲಿ ರಾಜ್ಯಾಧಿಕಾರ ಸ್ಥಾನಕ್ಕೆ ಏರಿಸಿ "... ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದದರಿಂದ ಸ್ವರ್ಗ ಮರ್ತ್ಯ, ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆ ಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು" (ಫಿಲಿಪ್ಪಿ 2:9, 10) ಹಾಗೆಯೇ ಇದನ್ನು ಹೋಲಿಸಿ ನೋಡಿದ್ದಲ್ಲಿ ಭೂಮಿಯ ಲಕ್ಷಾಂತರ ಮಂದಿಯಲ್ಲಿ ಕೆಲವೇ ಕೆಲವು ಜನ ಯೇಸುವನ್ನು ಒಬ್ಬ ಚಾರಿತ್ರಿಕ ವ್ಯಕ್ತಿಗಿಂತ ಹೆಚ್ಚಿನವನಾಗಿದ್ದನ್ನು ಅಂದರೆ ಎಲ್ಲಾ ಇತರರಂತೆ ಶರೀರ ಸಂಬಂಧದಲ್ಲಿ ದೀನನಾದ ನಜರೇತಿನವನಿಗಿಂತ ಹೆಚ್ಚಿನವನನ್ನು ನೋಡಿರುವರು. ಉಳಿದವರು ನೋಡಿದ್ದೆಲ್ಲವೂ ಯಜ್ಞವೇದಿಯನ್ನು ಮುಚ್ಚಿರುವ ಕಡಲು ಹಂದಿಯ ತೊಗಲನ್ನು, ತನ್ನ ನಿಜರೂಪದ ರಾಜತ್ವವನ್ನು ಅಂದರೆ ನೀಲಿವರ್ಣದ ಬಟ್ಟೆಯಿಂದ ಮುಚ್ಚಿರುವ ಛಾಯಾರೂಪದ ಯಜ್ಞವೇದಿಯು ಅವರಿಗೆ ಅಗೋಚರವಾಗಿಯೇ ಉಳಿದಿರುವುದು. ಛಾಯಾರೂಪದಲ್ಲಿ ಹೀಗೆ ಅದು ಆಜ್ಞಾಪಿಸಲ್ಪಟ್ಟಿತ್ತು.

"ಯೆಹೋವನು ಮೋಶೆ ಆರೋನರಿಗೆ ಆಜ್ಞಾಪಿಸಿದ್ದೇನೆಂದರೆ... ದಂಡು ಹೊರಡುವಾಗ... ಅವರು ಯಜ್ಞವೇದಿಯ ಬೂದಿಯನ್ನು ತೆಗೆದುಬಿಟ್ಟು ಆ ವೇದಿಯ ಮೇಲೆ ಧೂಮ್ರವರ್ಣದ ಬಟ್ಟೆಯನ್ನು ಹಾಸಿ... ಕಡಲು ಹಂದಿಯ ತೊಗಲನ್ನು ಹೊದಿಸಿ..." (ಅರಣ್ಯ. 4:1, 4, 13) ನಂಬಿಗಸ್ತಿಕೆ, ಪ್ರಾಮಾಣಿಕತೆ, ನಿಷ್ಠಾವಂತಿಕೆ, ಇವುಗಳನ್ನು ಧೂಮ್ರವರ್ಣವು (ನೀಲಿ ಬಣ್ಣ) ಹಾಗೂ ಕೆಂಪು ಬಣ್ಣವು (ರಕ್ತವರ್ಣ) ಮರಣಕ್ಕೆ ಬಹು ಸಮಂಜಸವಾದ ಸಂಕೇತಗಳಾದರೂ ಇಲ್ಲಿ ಇವುಗಳು ಯಾವುದೂ ಯಜ್ಞವೇದಿಯನ್ನು ಮುಚ್ಚುವ ಬಟ್ಟೆಯಾಗಿ ಉಪಯೋಗಿಸಲಿಲ್ಲವೆಂಬುದು ಗಮನಕ್ಕೆ ಬರುವ ಸಂಗತಿ. ರಾಜತ್ವದ ಸಂಕೇತವಾಗಿರುವ ನೇರಳೆ ಬಣ್ಣವು ಉಪಯೋಗವಾಗಿರುವುದು ಎಷ್ಟು ಸಮಂಜಸ ಸಹ; ಏಕೆಂದರೆ, ನೀಲಿ ಮತ್ತು ಕೆಂಪು ಬಣ್ಣಗಳ ಮಿಶ್ರಣದ ಪರಿಣಾಮವಾಗಿ ನೇರಳೆ ಬಣ್ಣ ಉಂಟಾಗುವ ಹಾಗೆ ಯೆಸುವಿನ ಮರಣ ಪರ್ಯಂತರವಾಗಿರುವ ನಂಬಿಗಸ್ತಿಕೆಯು ಉನ್ನತ ಪದವಿಯನ್ನು ಆತನಿಗೆ ತಂದು ಕೊಟ್ಟಿರುವುದು.

ದೇವದರ್ಶನ ಗುಡಾರದ ಪರಿಶುದ್ಧ ಸ್ಥಳದಲ್ಲಿರುವ ಪೀಠೋಪಕರಣಗಳ ವಿಷಯದಲ್ಲಿ ನಾವು ಓದುವುದೇನೆಂದರೆ: ಬಳಿಕ ಅವರು ಯೆಹೋವನ ಸಮ್ಮುಖದಲ್ಲಿರುವ ಮೇಜಿನ ಮೇಲೆ ನೀಲಿಬಟ್ಟೆಯನ್ನು ಹಾಸಿ... ಅದರ ಮೇಲೆ ಮೇಜಿಗೆ ಸೇರಿದ ಹರಿವಾಣ ವನ್ನು ಧೂಪಾರತಿಗಳನ್ನು ಹೂಜೆಗಳನ್ನು ಪಾನ ದ್ರವ್ಯಾರ್ಪಣೆಯ ಬಟ್ಟಲುಗಳನ್ನು ಇಡಬೇಕು... ಯಾವಾಗಲೂ ಇರಬೇಕಾದ ರೊಟ್ಟಿಗಳೂ ಅದರ ಮೇಲೆ ಇರಬೇಕು... ಅವೆಲ್ಲವುಗಳ ಮೇಲೆ ಅವರು ರಕ್ತವರ್ಣದ ಬಟ್ಟೆಯನ್ನು ಹಾಸಿ ಕಡಲು ಹಂದಿಯ ತೊಗಲನ್ನು ಹೊದಿಸಿ... ದೀಪಸ್ತಂಭವನ್ನು ಅದಕ್ಕೆ ಸಂಬಂಧಪಟ್ಟ ಹಣತೆಗಳನ್ನು

ಕತ್ತರಿಗಳನ್ನೂ ದೀಪದ ಕುಡಿ ತೆಗೆಯುವ ಬಟ್ಟಲುಗಳನ್ನೂ ಎಣ್ಣೆಯ ಪಾತ್ರೆಗಳನ್ನೂ ನೀಲಿಬಟ್ಟೆಯಿಂದ ಮುಚ್ಚಿಬಿಟ್ಟು... ಕಡಲು ಹಂದಿಯ ತೊಗಲನ್ನು ಹೊದಿಸಿ... ದೇವಸ್ಥಾನದ ಸೇವೋಪಕರಣಗಳನ್ನೆಲ್ಲಾ ನೀಲಿಬಟ್ಟೆಯಲ್ಲಿ ಇಟ್ಟು ಕಡಲು ಹಂದಿಯ ತೊಗಲನ್ನು ಹೊದಿಸಿ..." (ಅರಣ್ಯ. 4:7–12).

ಪ್ರಯಾಣದಲ್ಲಿರುವ ದೇವದರ್ಶನ ಗುಡಾರದ ಪೀಠೋಪಕರಣಗಳೂ, ದೇವದರ್ಶನ ಗುಡಾರದಲ್ಲಿ ನಿಲ್ಲಿಸಲ್ಪಟ್ಟ ಪೀಠೋಪಕರಣಗಳೂ ಒಂದೇ ತೆರನಾದವುಗಳಾದರೂ ಪ್ರಯಾಣದಲ್ಲಿರುವಾಗ ಇಸ್ರಾಯೇಲ್ಯರಿಗಿರುವ ಇವುಗಳ ಸಂಬಂಧ, ಅಲ್ಲದೆ ವಿಶೇಷವಾಗಿ ದೇವರ ಸೇವೆಗಾಗಿ ನಿಲ್ಲಿಸಲ್ಪಟ್ಟಿರುವಾಗ ಇವುಗಳಿಗೂ ದೇವರಿಗೂ ಮತ್ತು ಅತನ ದೇವದರ್ಶನ ಗುಡಾರಕ್ಕೂ ಇರುವ ಸಂಬಂಧ ಬಹು ಭಿನ್ನವಾಗಿರುವುದು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಇಲ್ಲೇ ಅಡಗಿರುವುದು ಪ್ರಯಾಣದಲ್ಲಿ ಹೊದಿಸುವ ಬಟ್ಟೆಗಳ ವಿಷಯವಾದ ಮರ್ಮ! ದೀಪಸ್ತಂಬವು ಚಿನ್ನದ ದೀಪಸ್ತಂಬವೇ ಆಗಿದ್ದರೂ ಅದು ದೇವದರ್ಶನದ ಗುಡಾರದಲ್ಲಿ ಯಾಜಕರಿಗೆ ಬೆಳಕು ಕೊಡುತ್ತಿದ್ದಂತೆ ಇಸ್ರಾಯೇಲ್ಯರಿಗೆ ಪ್ರಯಾಣದಲ್ಲಿ ಅದು ಅವರಿಗೆ ಬೆಳಕು ಕೊಡುತ್ತಿರಲಿಲ್ಲ; ಅರ್ಪಣಾ ರೊಟ್ಟಿಗಳು ಇಟ್ಟ ಮೇಜು ಯಾವಾಗಲೂ ಅದು ಅರ್ಪಣೆಯಾದ ರೊಟ್ಟಿಗಳು ಇಡುವ ಮೇಜಾಗಿದ್ದಾಗ್ಯೂ, ಅದರ ಮೇಲಿದ್ದ ರೊಟ್ಟಿಗಳು ದೇವದರ್ಶನದ ಗುಡಾರದಲ್ಲಿ ಯಾಜಕರಿಗೆ ಆಹಾರವಾಗಿದ್ದಂತೆ ಪ್ರಯಾಣದಲ್ಲಿದ್ದ ಇಸ್ರಾಯೇಲ್ಯರಿಗೆ ಆಹಾರವಾಗಿರಲಿಲ್ಲ; ಸರ್ವಾಂಗ ಹೋಮದ ಯಜ್ಞವೇದಿಯ ವಿಷಯವಾಗಿದ್ದಂತೆಯೇ, ದೀಪಸ್ತಂಬದ ವಿಷಯ, ರೊಟ್ಟಿಗಳ ಮೇಜಿನ ವಿಷಯ, ಧೂಪವೇದಿಯ ವಿಷಯಗಳೂ ಸಹ, ಅವುಗಳನ್ನು ಒಂದು ಪಾಳೆಯದಿಂದ ಇನ್ನೊಂದು ಪಾಳೆಯಕ್ಕೆ ಸಾಗಿಸುವಾಗ ಮುಚ್ಚಲ್ಪಟ್ಟಿದ್ದು ಎಲ್ಲಾ ಸಂದರ್ಭಗಳಲ್ಲೂ ಅವುಗಳು ಕಡಲು ಹಂದಿಯ ತೊಗಲಿನಿಂದ ಹೊದಿಸಲ್ಪಟ್ಟಿರುತ್ತಿದ್ದು, ಇದು ನಾವುಗಳು ಲೋಕದಲ್ಲಿ ಪ್ರಯಾಣ ಮಾಡುತ್ತಿರುವಾಗ ನಮ್ಮ ನಿಜ ಸ್ಥಿತಿಯು ದೇವರ ದೃಷ್ಟಿಯಲ್ಲಿಯೂ ಮತ್ತು ಲೋಕವು ನಮ್ಮನ್ನು ನೋಡುವ ರೀತಿಯೂ ಬಹು ಭಿನ್ನವಾಗಿರುವುದೆಂದು ಹೇಳುವಂತಿದೆ. ದೇವರು ನಮ್ಮ ನಂಬಿಕೆಯನ್ನು ನೋಡುವನು. ನಮ್ಮ ವಿಧೇಯತೆ ಮತ್ತು ಬಲಿದಾನಗಳನ್ನು ಗುರುತಿಸುವನು. ಈ ಕಾರಣದಿಂದ ದೈವ ಸ್ವಭಾವವನ್ನು ನಮ್ಮ ಲೆಖ್ಖಕ್ಕೆ ಸೇರಿಸಿಕೊಡುವನು.

ಈ ಸಂಗತಿಗಳು ಸ್ವತಃ ದೇವದರ್ಶನದ ಗುಡಾರದಲ್ಲಿನ ಚಿನ್ನದ ಪೀಠೋಪಕರಣಗಳಲ್ಲಿ ಬಹು ಚೆನ್ನಾಗಿ ಚಿತ್ರಿತವಾಗಿದೆ. ವಾಸ್ತವದಲ್ಲಿ ಲೋಕವು ನಮ್ಮನ್ನು ಹೀಗೆ ಕಾಣಲಾಗದು ಯಾಕೆಂದರೆ ಲೋಕವು ನೋಡುವುದೆಲ್ಲವೂ ನಮ್ಮ ಶರೀರವನ್ನು. ಯಾರಾರು ಪ್ರತಿಷ್ಠೆ ಮಾಡಿಕೊಳ್ಳುವ ಹಾಗೂ ಪವಿತ್ರಾತ್ಮ ದಾನ ಪಡೆಯುವ ಮೂಲಕವಾಗಿ ನಿಜರೂಪದ ದೇವದರ್ಶನದ ಗುಡಾರದ ಪರಿಶುದ್ಧ ಸ್ಥಳದೊಳಗೆ ಸೇರುವ ಸೌಭಾಗ್ಯ ಪಡೆಯುವವರೋ, ಅವರು ಅಲ್ಲಿ ಚಿನ್ನದ ದೀಪಸ್ಥಂಭದ ಮೂಲಕ ಆತ್ಮೀಕ ವಿಷಯವಾಗಿ ತಮ್ಮನ್ನು ಬೆಳಗಿಸಿಕೊಂಡು, ಚಿನ್ನದ ಮೇಜಿನ ಮೇಲಿನ ರೊಟ್ಟಿಗಳಿಂದ ಪೋಷಣೆ ಹೊಂದಿ,

ಚಿನ್ನದ ಧೂಪವೇದಿಯ ಮೇಲೆ (ಪ್ರಾರ್ಥನೆಯೆಂಬ) ಧೂಪವನ್ನರ್ಪಿಸುವುದು ಮಾತ್ರವಲ್ಲದೆ, ಆ ಚಿನ್ನದ ಪೀಠೋಪಕರಣಗಳನ್ನು ತಾವೇ ಸ್ವತಃ ಪ್ರತಿನಿಧಿಸುವರು. ಪಾಸ್ಟರ್ ರಸೆಲ್ಲರ ಲೇಖನಿಯಿಂದ ಬಂದದ್ದನ್ನು ನಾವು ಇಲ್ಲಿ ಉಲ್ಲೇಖಿಸುವೆವು.

ಪರಿಶುದ್ಧ ಸ್ಥಳದಲ್ಲಿನ ಸಮರ್ಪಣೆಯ ರೊಟ್ಟಿಗಳನ್ನು ಹೊತ್ತಿರುವ ಚಿನ್ನದ ಮೇಜು ಸಭೆಯನ್ನು ಒಟ್ಟಾಗಿ ಪ್ರತಿನಿಧಿಸುತ್ತದೆ. ಇದು ಯೇಸು ಆತನ ಅಪೋಸ್ತಲರನ್ನು ಹಾಗೂ "ಜೀವದಾಯಕ ವಾಕ್ಯವನ್ನು ತೋರಿಸಿಕೊಡುವ" (ಫಿಲಿಪ್ಪ 2:16) ಸೇವೆಯಲ್ಲಿರುವ ಕ್ರಿಸ್ತನಲ್ಲಿ ಪ್ರತಿಷ್ಠಿತರೆಲ್ಲರನ್ನು ಒಳಗೊಂಡಿರುತ್ತದೆ. ಈ (ಸುವಾರ್ತಾ) ಯುಗದಲ್ಲಿ ಸತ್ಯ ಸಭೆಯ ದೊಡ್ಡ ಕೆಲಸವು – ಒಡಂಬಡಿಕೆಯ ಮೂಲಕ ಆತ್ಮೀಕಭಾವದ ಸ್ಥಿತಿಗೆ ಸೇರುವವರೆಲ್ಲರನ್ನೂ ಪೋಷಿಸಿ, ಬಲಪಡಿಸಿ, ಅವರಿಗೆ ಜ್ಞಾನದ ಬೆಳಕನ್ನು ನೀಡುವುದು. ಕ್ರಿಸ್ತನ ಮದಲಗಿತ್ತಿಯು ತನ್ನನ್ನು ಸಿದ್ಧ ಮಾಡಿಕೊಳ್ಳಬೇಕಾಗುವುದು. (ಪ್ರಕಟಣೆ 19:7) ಈ ಕಾಲದಲ್ಲಿ ಲೋಕದವರಿಗೆ ಸಾಕ್ಷಿ ನೀಡುವುದು (ಆಕೆಗೆ) ಮುಖ್ಯವಲ್ಲದ ಎರಡನೆಯ ಕಾರ್ಯವಾಗಿದ್ದು ಈ ಸಂಬಂಧದಲ್ಲಿ ಇದು ಆಕೆಗೆ ಸಾಂದರ್ಭಿಕವಾಗಿ ಬಂದುದು. (ನಿಜರೂಪದ ದೋಷಪರಿಹಾರ ದಿನದ ದೋಷಪರಿಹಾರಕ ಯಜ್ಞಾರ್ಪಣೆಯನ್ನು ಒಳಗೊಂಡ) ಸುವಾರ್ತಾಯುಗ ಮುಗಿದ ತರುವಾಯ ದೇವರ ನಿಗಧಿತ ವೇಳೆಯಲ್ಲಿ ಪೂರ್ಣವಾದ ಆಶೀರ್ವಾದವು ಲೋಕಕ್ಕೆ ಆಶೀರ್ವಾದ ಉಂಟಾಗುವುದು.

ಪರಿಶುದ್ಧ ಸ್ಥಳದಲ್ಲಿರುವವರೆಲ್ಲರಿಗೆ ಬೆಳಕನ್ನು ಕೊಡುವ ಚಿನ್ನದ ದೀಪಸ್ತಂಭ ಚಿನ್ನದ ಮೇಜಿನ ಎದುರಿನಲ್ಲಿದ್ದು. ಅದು ಒಂದೇ ಚಿನ್ನದ ತಗಡಿನಿಂದ ತಟ್ಟಿ ಮಾಡಿದ್ದಾಗಿತ್ತು. ಅದಕ್ಕೆ ಏಳು ಕೊಂಬೆಗಳಿದ್ದು ಪ್ರತಿಯೊಂದರ ಮೇಲೆ ಒಂದೊಂದು ದೀಪಗಳಿದ್ದು ಒಟ್ಟಾಗಿ ಅವು ಪರಿಪೂರ್ಣತೆಯುಳ್ಳ ಸಂಪೂರ್ಣವಾದ ಸಂಖ್ಯೆಯಾದ ಏಳು ದೀಪಗಳಿಂದ ಕೂಡಿದ್ದವು. ಇದು ಶಿರಸ್ಸಾಗಿರುವ ಯೇಸುವಿನಿಂದ ಮೊದಲುಗೊಂಡು, ಮನುಷ್ಯರಿಂದ ಆಯಲ್ಪಟ್ಟು ದೈವ (ಚಿನ್ನದ) ಸ್ವಭಾವದಲ್ಲಿ ಪಾಲು ಹೊಂದಲಿರುವ "ಚಿಕ್ಕ ಹಿಂಡಿನ" ಕೊನೆಯ ಸದಸ್ಯನನ್ನು ಒಳಗೊಂಡ ಪೂರ್ಣ ಸಭೆಯನ್ನು ಪ್ರತಿನಿಧಿಸುತ್ತದೆ. "ನೀನು ನೋಡಿದ ಆ ಏಳು ದೀಪಸ್ತಂಭ ಗಳು ಅಂದರೆ ಆ ಏಳು ಸಭೆಗಳು" (ಪ್ರಕಟಣೆ 1:20) ಏಳು ಹಂತಗಳಲ್ಲಿ ಬೆಳೆದು ವೃದ್ಧಿಯಾ ಗುವ ಆ ಒಂದೇ ಸಭೆಗೆ ಅಸ್ಯ ಸೀಮೆಯ ಏಳು ಸಭೆಗಳು ಸಂಕೇತವಾಗಿರುವವು (ಪ್ರಕಟಣೆ 1:11). ಹೌದು, ಈ ದೀಪಸ್ತಂಭವು ನಿಜವಾದ ಬೆಳಕನ್ನು ನೀಡುತ್ತಿದ್ದು, ರಾಜವಂಶದ ಯಾಜಕತ್ವ ಹೊಂದಿ, ಪರಲೋಕದಲ್ಲಿ ಹೆಸರು ಬರೆಸಿಕೊಂಡ ಚೊಚ್ಚಲು ಮಕ್ಕಳ ಇಡೀ ಸತ್ಯಸಭೆಯನ್ನು ಸೂಚಿಸುತ್ತದೆ ಆದರೆ ಹೆಸರಿನ ಕ್ರೈಸ್ತ ಸಭೆಯನ್ನು ಸೂಚಿಸುವುದಿಲ್ಲ (T-115).

ಪರಿಶುದ್ಧ ಸ್ಥಳದಲ್ಲಿರುವ ಚಿನ್ನದ ದೂಪವೇದಿಯು ಈಗ ತಮ್ಮನ್ನು ಯಜ್ಞವನ್ನಾಗಿ ಅರ್ಪಿಸಿಕೊಳ್ಳುತ್ತಿರುವ ಪ್ರತಿಷ್ಠಿತ ಸಭೆಯಾದ ಭಕ್ತ ಹಿಂಡನ್ನು ಪ್ರತಿನಿಧಿಸುವುದಾಗಿ

ತೋರುತ್ತದೆ. ಈ ವೇದಿಯಿಂದ ಸುಗಂಧ ವಾಸನೆಯಂತಿರುವ ಅವರ ದೇವಸ್ತೋತ್ರಗಳು, ಪೂರ್ಣ ವಿಧೇಯತೆಗಳಿಂದ ಕೂಡಿ ಯೇಸುಕ್ರಿಸ್ತನ ಮೂಲಕ ದೇವರಿಗೆ ಮೆಚ್ಚಿಗೆಯಾದ ಯಾಜಕರುಗಳ ಮನಃಪೂರ್ವಕವಾದ ಸೇವೆಗಳು ಏರುತ್ತವೆ. ಅವರು ಮಾಡುವ ಈ ಎಲ್ಲವುಗಳನ್ನು ದೇವರ ಮಹಿಮೆಗಾಗಿ ಮಾಡುವರು.

ದೇವದರ್ಶನದ ಗುಡಾರದ ಮೇಲೆ ಹೊದಿಸಿರುವ ಕಡಲು ಹಂದಿಯ ತೊಗಲು ಕ್ರಿಸ್ತನ ಶರೀರಭಾವ ಅಥವಾ ಆತನ ಮನುಷ್ಯತ್ವವನ್ನು ಪ್ರತಿನಿಧಿಸುತ್ತದೆಂದು ಈ ಹಿಂದೆ ಮಾಡಿದ ಅಧ್ಯಯನದಲ್ಲಿ ಸೂಚಿಸಿದ್ದನ್ನು ಒಬ್ಬರು ಜ್ಞಾಪಿಸಿಕೊಳ್ಳಬಹುದು. ದೇವದರ್ಶನ ಗುಡಾರದ ಉಪಕರಣಗಳ ಮೇಲೆ ಹೊದಿಸುವ ಕಡಲು ಹಂದಿಯ ತೊಗಲು, ತಮ್ಮ ಶರೀರಭಾವ ಅಥವಾ ಮನುಷ್ಯತ್ವವನ್ನೂ ಸಹ ಒಳಗೊಂಡಿರಬಹುದೇ ಎಂಬ ಪ್ರಶ್ನೆ ಕೆಲವರ ಮನಸ್ಸಿನಲ್ಲಿ ಉದ್ಭವಿಸಲು ಸಾಧ್ಯ. ಸಭೆಯು ಕ್ರಿಸ್ತನ ದೇಹವಾಗಿದ್ದು ದೋಷಪರಿಹಾರ ಯಜ್ಞಾರ್ಪಣೆಯಲ್ಲಿ ಅತನೊಡನೆ ಬಾಧೆಯನ್ನು ಅನುಭವಿಸುವುದು ಎಂಬ ಕೇವಲ ಈ ಒಂದೇ ಅಂಶವನ್ನು ಸತ್ಯವೇದವು ಕೊಡುವ ಇತರ ಎಲ್ಲಾ ಸಾಕ್ಷಿಗಳು ಇದನ್ನು ಪ್ರಮಾಣೀಕರಿಸಿ, ಒಂದು ಒಳ್ಳೆಯ ಚಿತ್ರವತ್ತಾದ ವಿವರಣೆಯನ್ನು ಇದು ನೀಡಿ ಪ್ರತಿಪಾದಿಸುತ್ತದೆ. ಯೇಸು ಕ್ರಿಸ್ತನು ಈಡುಬಲಿಯಾಗಿ ತನ್ನ ಪ್ರಾಣವನ್ನು ಅರ್ಪಿಸಿದನು. ಅದರೆ ಪಾಪ ಪರಿಹಾರದ ಯಜ್ಞವಾಗಿ ಶ್ರಮ ಸಂಕಟಗಳನ್ನು ಅನುಭವಿಸಿದನು. ಮೊದಲಿನದರಲ್ಲಿ ಸಭೆ ಪಾಲು ತೆಗೆದುಕೊಳ್ಳುವುದಿಲ್ಲ; ಆದರೆ ಎರಡನೆಯದರಲ್ಲಿ ಪಾಲು ಹೊಂದಲು ಸಭೆಯನ್ನು ಕೃಪಾ ಪೂರ್ವಕವಾಗಿ ಆಹ್ವಾನಿಸಲಾಗಿದೆ. ಅಲ್ಲದೆ ಕ್ರಿಸ್ತನ ಮರಣದಲ್ಲಿ ಪಾಲುದಾರಳಾಗಲು ಆಕೆ ದೀಕ್ಷಾಸ್ನಾನ ಹೊಂದಲಿಲ್ಲವೇ? ಅತನೊಡನೆ ಆಳ್ವಿಕೆ ಮಾಡಲು ಆತನೊಡನೆ ಭಾದೆಯನ್ನು ಅನುಭವಿಸುವಳಲ್ಲವೇ? ಆಕೆ ತನ್ನ ಒಡೆಯನ ಜೊತೆಯಲ್ಲಿ ಸೇರಿ ಆತನೊಂದಿಗೆ ತನ್ನನ್ನೂ ಯಜ್ಞಾರ್ಪಣೆ ಮಾಡಿ ಕೊಳ್ಳುವವಳಲ್ಲವೇ? (ರೋಮಾ. 6:3–5; ಗಲಾತ್ಯ. 3:27; ರೋಮಾ. 8:17; 2 ತಿಮೋಥೆ. 2:11, 12) ದೋಷ ಪರಿಹಾರಕ ಯಜ್ಞಾರ್ಪಣೆಯಲ್ಲಿ ಪಾಲುಗಾರಿಕೆ ಎಂಬ ಈ ಬೋಧನೆಯ ತತ್ವವೇ ದೇವದರ್ಶನದ ಗುಡಾರ ಮತ್ತು ಅದರ ಯಜ್ಞಾಚರಣೆಗಳಲ್ಲಿ ವಿಶೇಷವಾಗಿ ಛಾಯಾ ರೂಪದ ಸೂಚನೆಯಾಗಿರುವುದು. ದೋಷಪರಿಹಾರಕ ದಿನದ ಯಜ್ಞಾಚರಣೆಯಲ್ಲಿ ಎರಡು ಪ್ರಾಣಿಗಳು ಒಳಗೊಂಡಿರುತ್ತಿದ್ದವು. ಅದು ಒಂದು ಹೋರಿ ಮತ್ತು ಒಂದು ಹೋತ. ಈ ಎರಡು ಪ್ರಾಣಿಗಳೂ ಕೇವಲ ಒಂದೇ ಯಜ್ಞವೇದಿಯ ಮೇಲೆ ಒಬ್ಬನೇ ಯಾಜಕನ ಮೂಲಕವಾಗಿ ಅರ್ಪಣೆಯಾಗುತ್ತಿದ್ದವು. ಹಾಗೂ ಅವುಗಳ ರಕ್ತವನ್ನು ಒಂದೇ ರೀತಿಯಲ್ಲಿ ಪರಿಶುದ್ಧ ಸ್ಥಳದ ಮೂಲಕವಾಗಿ ಮಹಾ ಪರಿಶುದ್ಧ ಸ್ಥಳಕ್ಕೆ ಕೊಂಡು ಹೋಗಿ ಅಲ್ಲಿ ದೋಷಪರಿಹಾರಕ ಕಾರ್ಯ ನೆರವೇರಲು (ಸಂಧಾನವಾಗಲು) ಕೃಪಾಸನದ ಎದುರಾಗಿ ಚಿಮುಕಿಸಲ್ಪಡುತ್ತಿತ್ತು. ಹೋರಿಯು ಕ್ರಿಸ್ತನನ್ನೂ, ಹೋತವು (ಅಂದರೆ ಯೆಹೋವನಿಗಾಗಿ ಚೀಟು ಹಾಕಲ್ಪಟ್ಟ ಹೋತ) ಆತನ ದೇಹವಾಗಿರುವ ಸಭೆಯನ್ನು ಪ್ರತಿನಿಧಿಸುತ್ತಿದ್ದವು. ಆ ಎರಡು ಪ್ರಾಣಿಗಳೂ ನಿಜವಾಗಿ ಒಳಗೊಂಡಿರುತಿದ್ದುದು ಒಂದೇ ದೋಷಪರಿಹಾರ

ಯಜ್ಞದಲ್ಲಿ. ಶರೀರದಲ್ಲಿರುವ ಸಭೆ ತನ್ನನ್ನು ಹೀಗೆ ಕ್ರಿಸ್ತನಲ್ಲಿ ಗುರುತಿಸಿಕೊಂಡಿದ್ದಾಳೆ. ಸಭೆ ಆತನ ಶರೀರವಾಗಿರುವುದು ಎಷ್ಟು ಸತ್ಯವೋ, ಕ್ರಿಸ್ತನು ಅದರ ಶಿರಸ್ಸೆಂಬುದು ಅಷ್ಟೇ ಸತ್ಯ. ದಮಸ್ಕದಲ್ಲಿರುವ ಸಭೆಯನ್ನು ಹಿಂಸೆ ಪಡಿಸಲು ತಾರ್ಸ ಪಟ್ಟಣದ ಸೌಲನು ಅಲ್ಲಿಗೆ ಹೋಗುತ್ತಿರುವಾಗ ಕ್ರಿಸ್ತನು ಆತನಿಗೆ "ಸೌಲನೇ, ಸೌಲನೇ, ನನ್ನನ್ನು ಯಾಕೆ ಹಿಂಸೆಪಡಿಸುತ್ತೀ" ಎಂದು ಹೇಳಲಿಲ್ಲವೇ, ಹೀಗೆ ನಿಜವಾಗಿ ಕ್ರಿಸ್ತ ಯೇಸುವಿನಲ್ಲಿ ನಾವು ಒಂದಾಗಿದ್ದಲ್ಲಿ, ಈಗಾಗಲೇ ಸ್ಪಷ್ಟವಾಗಿರುವಂತೆ, ನಾವು ದೇವದರ್ಶನದ ಗುಡಾರದ ಮೇಲ್ಹೊದಿಕೆಯಾದ ಕಡಲು ಹಂದಿಯ ತೊಗಲಿನಲ್ಲಿ ಪ್ರತಿನಿಧಿಸಲ್ಪಡದಿದ್ದರೂ, ದೇವದರ್ಶನದ ಗುಡಾರದ ಪೀಠೋಪಕರಣಗಳನ್ನು ಮುಚ್ಚುವ ಕಡಲು ಹಂದಿಯ ತೊಗಲಿನಲ್ಲಾದರೂ ಪ್ರತಿನಿಧಿಸಲ್ಪಟ್ಟಿರಲೇಬೇಕು. ಆದರೂ ನೀತಿಯುಳ್ಳದ್ದೆಂದು ನಿರ್ಣಯಿಸಲಾದ ಮತ್ತು ಪ್ರತಿಷ್ಠಿತವಾದ ಶರೀರದಲ್ಲಿ ಸೂಚಿತವಾದ ನಮ್ಮ ಮನುಷ್ಯತ್ವವು ಕ್ರಿಸ್ತನಲ್ಲಿ ಒಂದಾಗಿರುವುದನ್ನು ಲೋಕವು ಗುರುತಿಸಲಾರದು. ಮತ್ತು ಅದಕ್ಕೆ ಸಾಧ್ಯವೂ ಆಗಲಾರದು. ಕ್ರಿಸ್ತನು ಶರೀರದಲ್ಲಿ ಬಾಧೆಪಟ್ಟದ್ದನ್ನು ಲೋಕವು ನೋಡಿರುವುದಾದರೂ ಅದನ್ನು ಈ ರೀತಿಯಲ್ಲಿ (ದೋಷಪರಿಹಾರ ಯಜ್ಞವಾಗಿ) ಗುರುತು ಹಿಡಿಯಲು ಆಗಲಿಲ್ಲ. ಪಾಸ್ಟರ್ ರಸಲ್ಲರು ಹೇಳಿರುವುದೇನೆಂದರೆ:

"ಲೋಕವು ನೋಡಿರುವುದು, ಶಿರಸ್ಸು ದೇಹಗಳನ್ನೊಳಗೊಂಡ ಆ ಯಾಜಕನು (ಕ್ರಿಸ್ತನು) ಪಾಪ ಪರಿಹಾರಕ ಯಜ್ಞವಾಗಿ ಈ (ಸುವಾರ್ತಾ) ಯುಗದಲ್ಲಿ ಬಾಧೆಯನ್ನು ಅನುಭವಿಸಿದ್ದನ್ನು, ಯೇಸುವು ಯೆಹೂದ್ಯರಿಗೆ ಶರೀರ ಸಂಬಂಧದಲ್ಲಿ (ದೋಷ ಪರಿಹಾರದ ಯಜ್ಞಾರ್ಪಿತನಾಗಿ) ತೋರ್ಪಡಿಸಿಕೊಂಡಿದ್ದನು. ಮತ್ತು ಈ ಕಾರಣದಿಂದಾಗಿ ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯುತ್ತಿರುವ ತನ್ನ ಶಿಷ್ಯರು – ಯೇಸುವಿನ ಜೀವವು ನಮ್ಮ ಮರ್ತ್ಯ ಶರೀರದಲ್ಲಿ ಉಂಟೆಂದು (2ಕೊರಿಂಥ 4:11) ಹೇಳಬಹುದೆಂದು ಪೌಲನು ಹೇಳಿದ್ದಾನೆ. (ಶಿರಸ್ಸು ಮತ್ತು ದೇಹಗಳಿಂದ ಕೂಡಿದ) ಸಂಪೂರ್ಣವಾದ ಕ್ರಿಸ್ತನು ಹೀಗೆ ತನ್ನನ್ನು ತೋರ್ಪಡಿಸಿಕೊಂಡು ಶರೀರದಲ್ಲಿ ಬಾಧೆಪಟ್ಟ ಹಾಗೆಯೇ ಅವನು ಲೋಕದವರ ಮುಂದೆ ಒಟ್ಟಾಗಿ ಮಹಿಮೆ ಹೊಂದುವನು. ((T-84)

ತಾಮ್ರದ ಯಜ್ಞವೇದಿಯನ್ನುಳಿದು ದೇವದರ್ಶನದ ಗುಡಾರದ ಇತರ ಎಲ್ಲಾ ಉಪಕರಣಗಳನ್ನು ಮುಚ್ಚುವಾಗ ನಂಬಿಗಸ್ತಿಕೆಗೆ ಸಂಕೇತವಾಗಿರುವ ನೀಲಿಬಟ್ಟೆಯು ಇರುತ್ತಿತ್ತು. ನಂಬಿಕೆ (ನಂಬಿಗಸ್ತಿಕೆ) ಇಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ ಎಂಬುದನ್ನು ಇದು ಹೇಳುವಂತೆ ತೋರುತ್ತದೆ. (ಇಬ್ರಿಯ 11:6) ಮತ್ತು ನಾವು ಆತನಿಗೆ ಮೆಚ್ಚಿಗೆಯಾಗಿಲ್ಲದಿದ್ದಲ್ಲಿ ದೇವದರ್ಶನ ಗುಡಾರದ ಏರ್ಪಾಟಿನಲ್ಲಿ ನಮಗೆ ಯಾವ ಸ್ಥಳವೂ ಇರಲು ಖಂಡಿತವಾಗಿ ಸಾಧ್ಯವಿರುತ್ತಿರಲಿಲ್ಲ. ಕಡಲು ಹಂದಿಯ ತೊಗಲು ತನ್ನ ಮೇಲೆ ಹೊದಿಕೆಯಾಗಿರುವಲ್ಲಿ ಈ ನೀಲಿಬಟ್ಟೆಯು ಗೋಚರವಾಗುತ್ತಿರಲಿಲ್ಲ. ಇದರಂತೆಯೇ, ಭಕ್ತರ ನಂಬಿಗಸ್ತಿಕೆಯು ಸಹ ದೇವರಿಂದ ಗುರುತಿಸಲ್ಪಟ್ಟಿದ್ದರೂ ನಮ್ಮ ಶರೀರ ಭಾವವನ್ನು ಮಾತ್ರ ನೋಡುವವರೆಲ್ಲರಿಗೂ ಇದು ಕೇವಲ ಮರೆಯಾಗಿರುತ್ತದೆ.

ಸಮರ್ಪಣ ರೊಟ್ಟಿಗಳನ್ನಿಡುವ ಮೇಜನ್ನು ನೀಲಿ ಬಟ್ಟೆ ಹಾಗೂ ಕೆಂಪು ಬಟ್ಟೆಗಳಿಂದ ಹೊದಿಸಿ ಮುಚ್ಚಲಾಗುತ್ತಿತ್ತು. ಮರಣದ ಪರ್ಯಂತರ ನಂಬಿಗಸ್ತರಾಗಿ ಕಡೆಯಲ್ಲಿ ಉನ್ನತ ಸ್ಥಾನಕ್ಕೆ ಏರಿಸಲ್ಪಡುವವರ ರಾಜಮನೆತನ ಹಾಗೂ ಅರಸುತನದ ಮರ್ಯಾದೆ ಗೌರವಗಳನ್ನು ಸೂಚಿಸುವ ನೇರಳೆ ಬಣ್ಣದ ಒಂದು ಬಟ್ಟೆಯಾದರೂ (ಅಂಗಳದಲ್ಲಿರುವ ಯಜ್ಞವೇದಿಯನ್ನು ಮುಚ್ಚುವ ಹಾಗೆ) ನಾವು ಇಲ್ಲಿ ಕಾಣುವುದಿಲ್ಲ. ಈ ಮೇಜನ್ನು ಪ್ರತಿನಿಧಿಸುವವರೆಲ್ಲರೂ ಇನ್ನೂ ಅಂಗಳದಲ್ಲಿರುವುದಿಲ್ಲ. ಬದಲಾಗಿ ತಮ್ಮ ಮಣ್ಣಿನ ಘಟಗಳಲ್ಲಿ ಈ ವರೆಗೂ ವಾಸಿಸುವವರಾದರೂ ಪರಲೋಕದ ನಿಧಿಯನ್ನು ಪಡೆದವರಾಗಿ ಅವರು ಪರಿಶುದ್ಧ ಸ್ಥಳದಲ್ಲಿರುವರು. ದೈವ ಸ್ವಭಾವವನ್ನು ಸೂಚಿಸುವ ಈ ನಿಧಿಯು ಚಿನ್ನದಿಂದ ಮಾಡಿದ ಮೇಜನ್ನು ಪ್ರತಿನಿಧಿಸುತ್ತದೆ. ಹೀಗಾಗಿ ಈ ಮೇಜನ್ನು ಮುಚ್ಚಲು ಒಂದು ನೀಲಿ ಬಟ್ಟೆ ಹಾಗೂ ಒಂದು ಕೆಂಪು ಬಟ್ಟೆ ಉಪಯೋಗಿಸಲ್ಪಡುತ್ತಿದ್ದವು ಎಂಬ ಅಂಶದಲ್ಲಿ ಒಂದು ಮಹತ್ವವಿದೆ. ಸರ್ವಾಂಗ ಹೋಮದ ಯಜ್ಞವೇದಿಯಲ್ಲಿ ಅಂಗಳವನ್ನು ಸೂಚಿಸುವ ಲೋಕದವರೆಲ್ಲರ ಸಲುವಾಗಿರುವ ಮರಣ ಪರ್ಯಂತರವಾದ (ಸಭೆಯ) ನಂಬಿಗಸ್ತಿಕೆಯು ಚಿತ್ರಿತವಾಗಿದ್ದಂತೆ ಇಲ್ಲಿ ಇರದ, ಮರಣ ಪರ್ಯಂತರವಾದ ನಂಬಿಗಸ್ತಿಕೆಯು ಎಂದರೆ ಪರಿಶುದ್ಧ ಸ್ಥಳದಲ್ಲಿ ದೇವರ ಯಾಜಕರಾಗಿ ಸೇವೆ ಮಾಡುತ್ತಿರುವ ತಮ್ಮ ಸಹೋದರ ಪರವಾಗಿ ತಮ್ಮ ಪ್ರಾಣವನ್ನು ಕೊಡಬೇಕು ಎಂಬುದು ಇಲ್ಲಿ ಚಿತ್ರಿಸಲಾಗಿದೆ. ಇಂತಹ ಯಾಜಕರುಗಳು ಕ್ರಿಸ್ತನ ದೇಹವಾಗಿರುವರು. ಯೇಸುವು ತನ್ನ ಪ್ರಾಣವನ್ನು (ಲೋಕದವರ ಪರವಾಗಿ ಮಾತ್ರವಲ್ಲದೆ) ತನ್ನ ದೇಹದ (ಸಭೆಯ) ಸಲುವಾಗಿ ಕೊಟ್ಟನು. ಈ ವಿಧದಲ್ಲಿ ಜೀವವನ್ನು ಪಡೆದ ಸಭೆಯೂ ಅದನ್ನು ತಮ್ಮ ಸಹೋದರರ ಪರವಾಗಿ ಕೊಡಬೇಕಾದ ಹಂಗಿನಲ್ಲಿರುವುದು. (1ಯೋಹಾನ 3:16) ಅಪೋಸ್ತಲನಾದ ಪೌಲನು ಈ ವಿಷಯವನ್ನು ನೆರವೇರಿಸಲು ಉಲ್ಲಾಸಗೊಂಡಿದ್ದನು. ಯಾಕೆಂದರೆ ಆತನು ಹೇಳುವುದು; "ಪೌಲನೆಂಬ ನಾನು ಈ ಸುವಾರ್ತೆಗೆ ಸೇವಕನಾದೆನು. ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷಪಟ್ಟು ಕ್ರಿಸ್ತನ ಸಂಕಟಗಳಲ್ಲಿ ಉಳಿದದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ. (ಕೊಲೊಸ್ಸೆ. 1:24) ತಮ್ಮ ಸಹೋದರರ ಪರವಾಗಿರುವ ಈ ವಿಧವಾದ ನಂಬಿಗಸ್ತಿಕೆಯು ಅವರ ಆತ್ಮಗಳಿಗೆ ಆಹಾರದಂತಿರುವುದು. ನಿಸ್ಸಂಶಯವಾಗಿ ಈ ಕಾರಣದಿಂದಲೇ ಒಂದು ನೀಲಿ ಬಟ್ಟೆ ಒಂದು ಕೆಂಪು ಬಟ್ಟೆಗಳು ಮಾತ್ರ ಈ ಮೇಜನ್ನು ಮುಚ್ಚುವುದನ್ನು ತೋರಿಸಲಾಗಿದ್ದು, ಪರಿಶುದ್ಧ ಸ್ಥಳದಲ್ಲಿರುವ ಉಳಿದ ಇತರ ಉಪಕರಣಗಳಿಗೆ ಈ ರೀತಿಯಲ್ಲಿ ಮಾಡುತ್ತಿರಲಿಲ್ಲ. ಆದರೂ, ಈಗಾಗಲೇ ಹಲವು ಸಮಯಗಳಲ್ಲಿ ಹೇಳಿರುವಂತೆ, ಈ ಬಗೆಯ ಮರಣ ಪರ್ಯಂತರವಾದ ನಂಬಿಗಸ್ತಿಕೆಯನ್ನು ಲೋಕವು ಪ್ರಶಂಶಿಸುವುದಿಲ್ಲ; ಯಾಕೆಂದರೆ ಅದು ನೋಡುವುದು ಕೇವಲ ನಮ್ಮ ಶರೀರವನ್ನು, ಅಂದರೆ ನಮ್ಮ ಮನುಷ್ಯತ್ವವನ್ನು ಸೂಚಿಸುವ ಕಡಲು ಹಂದಿಯ ತೊಗಲನ್ನು ಮಾತ್ರ.

ದೇವದರ್ಶನದ ಗುಡಾರದ ಮಹಾ ಪರಿಶುದ್ಧ ಸ್ಥಳದಲ್ಲಿ ನಿಲ್ಲಿಸಲಾಗಿರುವ ಒಂದೇ ಒಂದು ಉಪಕರಣದ ವಿಷಯವಾಗಿ ನಾವು ಓದುವುದೇನೆಂದರೆ;

"ದಂಡು ಹೊರಡುವಾಗ ಆರೋನನೂ ಅವನ ಮಕ್ಕಳೂ ಒಳಗೆ ಬಂದು (ಮಹಾ ಪವಿತ್ರಸ್ಥಾನವನ್ನು) ಮರೆ ಮಾಡುವ ತೆರೆಯನ್ನು ಇಳಿಸಿ ಅದರಿಂದ ಆಜ್ಞಾ ಶಾಸನಗಳ ಮಂಜೂಷವನ್ನು ಮುಚ್ಚಿಬಿಟ್ಟು ಅದರ ಮೇಲೆ ಕಡಲು ಹಂದಿಯ ತೊಗಲನ್ನು ನೀಲಿಬಟ್ಟೆಯನ್ನು ಹೊದಿಸಿ (ಮಂಜೂಷದ ಬಳೆಗಳಲ್ಲಿ) ಹೊರುವ ಕೋಲನ್ನು ಸೇರಿಸಬೇಕು" (ಅರಣ್ಯ. 4:5, 6)

ದೇವದರ್ಶನದ ಗುಡಾರದ ಇತರ ಉಪಕರಣಗಳ ವಿಷಯದಲ್ಲಿ ಇರದ ಹಾಗೆ, ಒಡಂಬಡಿಕೆಯ ಮಂಜೂಷಕ್ಕೆ ಹೊರಗೆ ಹೊದಿಸುವ ಬಟ್ಟೆಯು ಪೂರ್ಣವಾಗಿ ನೀಲಿ ಬಣ್ಣದ್ದಾಗಿದ್ದು, ಕಡಲು ಹಂದಿಯ ತೊಗಲು ಅಲ್ಲಿ ಇನ್ನು ಕಾಣಿಸದ ಹಾಗೆ ಇರುತ್ತಿತ್ತು. ಮಂಜೂಷದಲ್ಲಿ ಸೂಚಿಸಲಾದ ತೆರೆಯ ಆಚೆಯಲ್ಲಿರುವ ಮಹಿಮಾ ಪದವಿಗೆ ಸೇರಿದವರು – ಅಂದರೆ ಕ್ರಿಸ್ತನ ಸ್ಥಾನಕ್ಕೆ ಸೇರಿದವರು – ಒಮ್ಮೆ ಶರೀರ ಭಾವದಲ್ಲಿದ್ದುದ್ದನ್ನು ನೋಡಿ, ಇವರು ಕೇವಲ ಶರೀರ ಸಂಬಂದದಲ್ಲಿರುವ ಮಾನವ ಸೃಷ್ಟಿಗಳು ಎಂದು ತಿಳಿದವರು, ಇನ್ನು ಯಾವಾಗಲೂ ಅವರನ್ನು ಹಾಗೆ ಕಾಣಲಾಗದು ಎನ್ನುವುದು ಸತ್ಯವಲ್ಲವೇ? ಅವರು ತಮ್ಮ ನಂಬಿಕೆಯ ಫಲವಾದ ಬಹುಮಾನವನ್ನು ಅಂದರೆ ನಂಬಿಕೆಯ ಮೂಲಕವಾದ ವಿಜಯವನ್ನು ಪಡೆಯುವರು. ಆದರೆ ಗಮನಿಸಿ, ಅದು ತೆರೆಯ ಆಚೆಯ ಕಡೆಯಲ್ಲಿ; ತೆರೆ ಅಂದರೆ ಮರಣ. ಛಾಯಾ ರೂಪದಲ್ಲಿ ಕಡಲು ಹಂದಿಯ ಹೊದಿಕೆಯು ನೀಲಿಬಟ್ಟೆಯ ಕೆಳಗೆ ಇರುತ್ತಿತ್ತು. ಆದರೆ ಅದು ಮಂಜೂಷವನ್ನು ಮೊದಲೇ ನೇರವಾಗಿ ಮುಚ್ಚಿರುವ (ಗುಡಾರದ ಎರಡನೆಯ ತೆರೆಯ ಮೇಲೆ ಎಂಬುದು ಗಮನಿಸಲ್ಪಡುತ್ತದೆ. ಇದು ಎಷ್ಟು ಸುಂದರವಾಗಿದೆ! ಈ ನೂತನ ಸೃಷ್ಟಿಗಳು ಇನ್ನು ಶಾರೀರಿಕ ರೀತಿಯಲ್ಲಿ ಕಾಣಲಾರದವರಾದರೂ, ಅಂದರೆ ಒಂದು ಪೂರ್ಣವಾದ ಅರ್ಥದಲ್ಲಿ ಇವರು ದೇವ ಸ್ವಭಾವದಲ್ಲಿ ಪಾಲುಗಾರರಾಗಿದ್ದರೂ, ಅವರ ಶರೀರವು ಇನ್ನೂ ತೆರೆಯ ಆಚೆಕಡೆಗೆ ದಾಟಿಲ್ಲವೆಂಬುದನ್ನು ಹೇಳುವಂತೆ ತೋರುತ್ತದೆ. ಯಾಕೆಂದರೆ "ರಕ್ತ ಮಾಂಸವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು". (1 ಕೊರಿಂಥ 15:50) ನಂಬಿಗಸ್ತಿಕೆಯ ಮಹತ್ವವನ್ನು ಸೂಚಿಸುವ ನೀಲಿ ಬಟ್ಟೆಯು ಮಂಜೂಷದ ಹೊರಗಿನ ಹೊದಿಕೆಯಾಗಿದ್ದು ಅದು "ಈ ವರ್ಗವು ನಂಬಿಗಸ್ತಿಕೆಯುಳ್ಳದ್ದಾಗಿತ್ತು" ಎಂದು ಹೇಳುವಂತಿದೆ. ಇಂದಲ್ಲಾ ಮುಂದೆ ಲೋಕದ ಜನರು ಈ ವಿಷಯವನ್ನು ಗುರುತಿಸಿ ಇದನ್ನು ಮನ್ನಣೆ ಮಾಡುವಂತೆ ಮಾಡಲಾಗುವುದು. ದೇವರಿಗೆ ಆಲಯವಾಗಿರುವ ಈ ವರ್ಗವು ತೆರೆಯ ಆಚೆಕಡೆಯಲ್ಲಿ ತನ್ನ ಶಿರಸ್ಸಾಗಿರುವ ಕ್ರಿಸ್ತನೊಂದಿಗೆ ಮಹಿಮಾ ಪದವಿಗೆ ಸೇರಲಿರುವರು.

"ಆಹಾ ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಅಗಾಧ! ಅತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! ಆತನ ಮಾರ್ಗಗಳು ಕಂಡುಹಿಡಿಯುವುದಕ್ಕೆ ಎಷ್ಟೋ ಅಸಾಧ್ಯ! ಕರ್ತನ ಮನಸ್ಸನ್ನು ತಿಳುಕೊಂಡವರಾರು? ಆತನಿಗೆ ಆಲೋಚನಾ ಕರ್ತನು ಯಾರು? ಮೊದಲು ಆತನಿಗೆ ಕೊಟ್ಟು ಪ್ರತಿಫಲವನ್ನು ತೆಗೆದುಕೊಳ್ಳುವವನು ಯಾರು? ಸಮಸ್ತವೂ ಆತನಿಂದ ಉತ್ಪತ್ತಿಯಾಗಿ ಆತನಿಂದ ನಡೆಯುತ್ತಾ ಆತನಿಗಾಗಿ ಇರುತ್ತದೆ; ಆತನಿಗೇ ಸದಾಕಾಲವೂ ಸ್ತೋತ್ರ. ಆಮೇನ್ (ರೋಮಾ. 11:33–36).



# Scripure Index


### Genesis

1:28 45
2:2, 3 43
3:17-19 43
6:3 13
36:1, 2 5
36:12 51

### Exodus

1:11 6
1:13, 14 7
1:15-19 7
1:22 7
2:11, 12 55
2:13, 14 55
2:15 56
3:7, 8 33
3:11, 12 74
3:18 26
3:22 74
4:10-17 69, 74
9:12 9
12:37-39 15
13:17-22 15
13:20-21 19
14:1-31 15
14:2 21
14:10-12 32
14:13 21
14:29, 30 33
15:1 32
15:1, 2 24
15:1-27 23
15:22 26
15:22-24 26
15:23-25 33
15:24 32
15:25 28
15:27 29
16:1 32
16:1-35 32
16:2, 3 32
16:3 33
16:4 42, 46
16:8 38
16:12 36
16:12-14 37
16:14, 15 39
16:16, 19 42
16:20 42
16:26 46
17:1 47, 49
17:1-16 42
17:2, 3 47
17:3 47
17:4 47
17:5, 6 48
17:8 50
17:11 52
17:16 53
18:2-12 55
19:1, 2 56
19:1-8 55
19:4 60, 61
19:5, 6 57
19:8 60, 69
20: 67
20:1-17 69
20:2 60
20:2-5 72
20:4 71, 76
20:4, 5 125
20:23-26 69
21:1-36 69
22:1-31 69
23:1-33 69
24:4 69
24:5-8 69
24:7 69, 70
24:8 69
25 : 1 69
26:1 95, 107
26:1-12 95, 96
26:9 96, 104
26:11 96, 105
26:14 96
28:2 114
28:2-4 113
28:36 113
28:40 114
28:40-42 114
28:42 113
29:1-37 109
30:1-11 69
30:25-33 116
30:38 116
31:1-4 91
31:1-6 90
31:4, 5 91, 93
31:6 93
31:18 69
32:1 70
32:2-4 74

32:5 67, 75
32:7, 8 80
32:7-29 80
32:9, 10 80, 85
32:11,13 81
32:19 85
32:20, 21 86
32:26 86, 130
32:27 87, 130
32:28 130
32:28, 29 87
32:31, 32 88
32:32 80
32:34 90
33:1-7 90
33:3 90
33:7 90
36:1-19 90

### Leviticus

6:9-11 114
8:1, 2 109
8:1-36 109
8:6 112
8:14 118
8:15 120
8:19 120
8:20, 21 119
8:23 120
8:26 121
8:30 117
8:31-35 123
10:1, 2 132
10:1-11 133
10:7 116
10:10 133
16:3, 4 114
16:23, 24 114

### Numbers

3:11, 12 131
3:25, 26 131
3:31 132
3:31, 32 125
3:36, 37 132
4:1 136
4:4 136
4:5, 6 142
4:5-14 135
4:7-12 137
4:13, 14 136
4:15 132
4:16 132
4:24-26 131
4:28 132
14:31, 32 132
4:33 132
7:7 131
7:8 132
7:9 132
8:21, 22 131
9:15, 16 125
9:15-23 125
9:17-23 127
10:1-28 125
10:2 128
10:8 128
10:11, 12, 13 130
10:17 130
10:21 130
11:9 39
11:31 37
11:33 37
14:1-3 48
14:4 48
14:26-45 13
4:30, 32 48
21:5 41
33:5-8 15
33:6 19
33:7 21
33:8 26
33:8, 9 23
33:10, 11 32
33:12-14 42, 46
33:15 55

### Deuteronomy

1:19-26 13
5:6 60
7:2 13
9:9 69, 70
18:15 82
26:17-19 51
32:10-12 29

### 1 Samuel

15: 51

### Psalms

7:11 85
19:12, 13 13
50:5 111
51:1-3 122
51:5 6, 112
90:12 8-9
91:1 123
91:7, 8 88
91:10, 11 88
91:15 88
107:21, 22 27
107:22 35
116:12, 14 58
119:165 31

**Proverbs**

14: 12 20

**Isaiah**

11:1, 2 91
42:8 72, 76
51:5, 9 54
52:10 54
53:1 54
53:1-6 98
53:7-9 101
53:10, 11 105
53:12 107
59:15-20 54
65:24 36

**Jeremiah**

17:9 70
31:29 6

**Obadiah**

21 83

**Matthew**

3:16 111
6:8 47
6:9 47
7:11 47
10:32 87
10:34-38 87
22:37 60

**Mark**

1:10 111

**Luke**

9:23 111
14:26-33 62
24:21 40

**John**

1:9 92
1:11 56, 97
1:14 97
4:24 72
5:28, 29 49
6:32, 33, 35, 38 40
6:41, 48 40
6:50 40
6:51 40
8:12 92
8:37-40 57
8:39 34
12:38 54
14:26, 27 128
15:5 52, 94
16:8 126
16:13 128

**Acts**

3:22 82
7:39 33

**Romans**

4:3 66
4:23-25 44, 66
5:1 44
5:12 6
5:20 58
6:3-5 139
7:7-13 58, 59
7:10 61
7:13 59
7:24 10
8:4 65
8:16, 17 115
8:17 108, 139
11:33-36 143
13:10 65

**1 Corinthians**

2:9 10
3:16 94
4:6-11 12
6:2 94
9:27 45
10:4 48
10:5 12, 24, 50
10:6 5, 80
10:6-10 50
10:6-11 109
10:11-1, 2, 4, 9, 19,22,31
Pg. 5, 9, 17, 34, 69, 80
10:12 13
10:15 80
10:16 105
13:4 47
13:10 135
15:39 37
15:50 142

**2 Corinthians**

4:7 116
4:10 45
4:11 140
4:16 45
7:1 94
12:9, 10 51, 51

**Galatians**

1:4 10
3:6 62
3:19 57
3:27 139
3:29 103
5:17 38

### Ephesians

1:3-6 113
1:6 117, 118
1:12-14 115
1:13, 14 115
1:23 118
2:8 11
2:8, 9 22, 44
3:11 97
4:1 50
4:26 85, 85
6:10 50

### Philippians

2:5-11 107
2:9, 10 136
2:12 13
2:16 138
4:7 31

### Colossians

1:12 28
1:12-14 113
1:18 111
1:23, 24 141
1:24 104, 118, 141

### 1 Timothy

2:5, 6 100

### 2 Timothy

2:11, 12 139

### Hebrews

1:1-3 92
1:9 52, 112
2:10 33
3:7, 8 33, 100, 104
3:10 24
3:10, 11 33
3:10-19 12
3:12 25, 48
3:16-19 80
3:17-19 24
3:19 44
4:2 80
4:3, 4 44
4:6 80
4:8 25
4:9, 10 44
5:4 110
7:19 59
7:26 112
8:5 70
9:19 69
10:5 118
10:7, 9 62
10:9 111
10:22 10
11:1 11, 67, 71, 133
11:6 17, 140
11:38 63
11:39 63
12:1, 2 64
12:2 62

### 1 Peter

1:11 11

### 2 Peter

1:3, 4 123
1:4-8 11
1:21 97

### 1 John

3:3 11, 45, 123
3:16 141
4:16 47

### Revelation

1:5, 6 108
1:11 138
1:20 138
2:10 115
7:9 134
13:8 102
19:7 138
21:3 108
22:17 49